ಬುಧವಾರ, ಆಗಸ್ಟ್ 11, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಣೇಶ ಬಂದ

ಮಂಗಳೂರಿನಲ್ಲಿ ಮಂಗಳವಾರ ೯೦ರ ಹರೆಯದ ಕಲಾವಿದ ಪ್ರಭಾಕರ್ ರಾವ್ ಅವರು ಗಣೇಶನ ವಿಗ್ರಹ ತಯಾರಿಯಲ್ಲಿ ತೊಡಗಿದ್ದ ದೃಶ್ಯ ಕಂಡು ಬಂತು

JGI JAIN DEEMED-TO-BE UNIVERSITY | ONLINE

Marking 30 Years of Educational Excellence of JAIN Group

SUPPORTING YOUR ASPIRATIONS TO LEARN

Apply for Independence Day Scholarship valid till 31st August.

FREEDOM TO LEARN

EDUCATION FOR EVERYONE

WHY JAIN ONLINE?

70+ SPECIALIZATIONS

ACCREDITED BY GLOBAL PROFESSIONAL BODIES

LIVE ONLINE SESSIONS

ONLINE PROCTORED EXAMS

2000+ HIRING COMPANIES

AWARDS AND RECOGNITIONS

Accredited with Grade - A+ by NAAC - National Assessment & Accreditation Council

Awarded Graded Autonomy Status by University Grants Commission

nirf Ranked amongst the Top 100 Universities in India

QS WORLD UNIVERSITY RANKINGS Ranked 91-95 among the top Indian Universities

UGC Entitled Online Degree Programs

MBA | BBA | M.Com | B.Com | MCA | MA

online.jainuniversity.ac.in

+91 88733 73316

ಅರ್ಜಿಗಾಗಿ ವಿದ್ಯಾರ್ಥಿಗಳ ಸರದಿ ಸಾಲು • ಡಿಪ್ಲೊಮಾ, ಐಟಿಐ ಪ್ರವೇಶಕ್ಕೂ ಪೈಪೋಟಿ

ಪಿಯು ಕಾಲೇಜುಗಳಲ್ಲಿ ದಾಖಲಾತಿ ಚುರುಕು

• ಗುರು ಪಿ. ಎಸ್

ಜಯನಗರದ ಎನ್‌.ಎಂ.ಕೆ.ಆರ್‌.ವಿ. ಪಿಯು ಕಾಲೇಜಿನಲ್ಲಿ ಪ್ರವೇಶಕ್ಕಾಗಿ ಅರ್ಜಿಗಳನ್ನು ಪಡೆಯಲು ಮಂಗಳವಾರ ಸರದಿಯಲ್ಲಿ ನಿಂತಿರುವ ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ನಗರದ ಪದವಿಪೂರ್ವ ಕಾಲೇಜುಗಳಲ್ಲಿ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಪ್ರವೇಶಕ್ಕಾಗಿ ಅರ್ಜಿ ಪಡೆಯಲು ರಾಜ್ಯದ ಎಲ್ಲೆಡೆ ಕಾಲೇಜುಗಳ ಮುಂದೆ ವಿದ್ಯಾರ್ಥಿಗಳ ಉದ್ದನೆಯ ಸಾಲು ಸಾಮಾನ್ಯವಾಗಿದೆ.

ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮದ ಕೆಲವು ಕಾಲೇಜುಗಳಲ್ಲಿ ಈಗಾಗಲೇ ಪ್ರಥಮ ಪಿಯು ತರಗತಿಯ ದಾಖಲಾತಿ ಪೂರ್ಣಗೊಂಡಿದ್ದು, ತರಗತಿಗಳೂ ಪ್ರಾರಂಭವಾಗಿವೆ. ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ಅರ್ಜಿ ವಿತರಣೆ ನಡೆಯುತ್ತಿದೆ.

ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗ ಮಾತ್ರವಲ್ಲದೆ, ಡಿಪ್ಲೊಮಾ, ಐಟಿಐನಂತಹ ವೃತ್ತಿಪರ ಕೋರ್ಸ್‌ಗಳಿಗೂ ಬೇಡಿಕೆ ಹೆಚ್ಚಾಗಿದೆ. ಕೆಲವು ಪ್ರತಿಷ್ಠಿತ ಖಾಸಗಿ ಕಾಲೇಜುಗಳು, ಪಿಯು ಮತ್ತು ಪದವಿ ದಾಖಲಾತಿಗೆ ಪ್ರವೇಶ ಪರೀಕ್ಷೆಯನ್ನೂ ನಡೆಸುತ್ತಿವೆ. ಹೊಸ ವಿಭಾಗ, ಹೊಸ ಕೋರ್ಸ್‌ಗಳೂ ಪ್ರಾರಂಭವಾಗಿವೆ. ಕಲಾ ವಿಭಾಗಕ್ಕೆ ದಾಖಲಾಗಲು ಬಯಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿದೆ.

ಕಲಾ ವಿಭಾಗಕ್ಕೂ ಬೇಡಿಕೆ: 'ಕಲಾ ವಿಭಾಗ ಆಯ್ಕೆಮಾಡಿಕೊಳ್ಳುತ್ತಿರುವವರ ಸಂಖ್ಯೆಯೂ ಕಳೆದ ಬಾರಿಗಿಂತ ಈ ಸಲ ಹೆಚ್ಚಾಗಿದೆ. ಪದವಿ ನಂತರ ಕೇಂದ್ರ ಮತ್ತು ರಾಜ್ಯಲೋಕಸೇವಾ ಆಯೋಗಗಳನ್ನು ನಡೆಸುವ ಪರೀಕ್ಷೆ ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ಈ ವಿಭಾಗವನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಸರ್ಕಾರಿ ಕಲಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ಟಿ. ಶಶಿಕಲಾ ಹೇಳಿದರು.

'ವಿಜ್ಞಾನ ಮತ್ತು ಗಣಿತದಲ್ಲಿ ಹೆಚ್ಚು ಅಂಕಗಳು ಬಂದಿದ್ದರೂ, ಕಲಾ ವಿಭಾಗದಲ್ಲಿ ನನಗೆ ಆಸಕ್ತಿ ಇದೆ. ಇದೇ ವಿಭಾಗದಲ್ಲಿನ ಸಂಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳುತ್ತೇನೆ' ಎಂದು ವಿದ್ಯಾರ್ಥಿ ರಮೇಶ್‌ಕುಮಾರ್ ಹೇಳಿದರು.

'ನಾನು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚು ಅಂಕಗಳು ಬಂದಿವೆ. ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಳ್ಳಬೇಕೆಂದಿದ್ದೇನೆ' ಎಂದು ನಗರದ ಖಾಸಗಿ ಕಾಲೇಜಿಗೆ ಅರ್ಜಿ ತೆಗೆದುಕೊಳ್ಳಲು ಬಂದಿದ್ದ ವಿದ್ಯಾರ್ಥಿನಿಯೊಬ್ಬರು ಹೇಳಿದರು.

ದುಪ್ಪಟ್ಟು ಅರ್ಜಿ ವಿತರಣೆ: 'ನಿರೀಕ್ಷೆಗಿಂತ ಹೆಚ್ಚು ವಿದ್ಯಾರ್ಥಿಗಳು ಕಾಲೇಜಿಗೆ ಬಂದು ಅರ್ಜಿ ತೆಗೆದುಕೊಂಡು ಹೋಗುತ್ತಿದ್ದಾರೆ. ನಮ್ಮದು ಸರ್ಕಾರಿ ಕಾಲೇಜು ಆಗಿರುವುದರಿಂದ ಎಲ್ಲರಿಗೂ ಪ್ರವೇಶಾವಕಾಶ ನೀಡಲೇಬೇಕು. ಆದರೆ, ಗರಿಷ್ಠ 1,300 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಮಾತ್ರ ಅವಕಾಶವಿದೆ. ಈಗಾಗಲೇ 3,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ತೆಗೆದುಕೊಂಡು ಹೋಗಿದ್ದಾರೆ. ಸರ್ಕಾರ ಮುಂದೆ ಯಾವ ರೀತಿ ವ್ಯವಸ್ಥೆ ಮಾಡುತ್ತದೆಯೋ ಕಾದುನೋಡಬೇಕು' ಎಂದು ನಗರದ ರಾಮ್‌ನಾರಾಯಣ ಚೆಲ್ಲಂ ವಾಣಿಜ್ಯ ಕಾಲೇಜಿನ ವ್ಯವಸ್ಥಾಪಕಿ ತಹಸಿಲ್ ಸುಲ್ತಾನಾ ಹೇಳಿದರು.

ಸೀಟುಗಳ ಕೊರತೆ ಉದ್ಭವಿಸಿದಲ್ಲಿ, ಪದವಿಪೂರ್ವ ಶಿಕ್ಷಣ ಇಲಾಖೆಯ ನಿಯಮಗಳ ಅನುಸಾರ ಕಾಲೇಜುಗಳಲ್ಲಿ ಸೀಟುಗಳ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು

ಬಿ.ಸಿ. ನಾಗೇಶ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

ಪದವಿಪೂರ್ವ ಕಾಲೇಜುಗಳಲ್ಲಿಯೇ 12 ಲಕ್ಷಕ್ಕೂ ಹೆಚ್ಚು ಸೀಟುಗಳು ಲಭ್ಯ ಇವೆ. ಸೀಟುಗಳ ಕೊರತೆ ಉದ್ಭವಿಸುವ ಸಾಧ್ಯತೆ ಕಡಿಮೆ ಇದೆ

ಎಸ್‌.ಆರ್. ಉಮಾಶಂಕರ್, ಪ್ರಧಾನ ಕಾರ್ಯದರ್ಶಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ

ಅಂಕಿ-ಅಂಶಗಳು

18 ಲಕ್ಷ
ಈ ವರ್ಷ ಎಸ್ಸೆಸ್ಸೆಲ್ಸಿ– ಪಿಯುಸಿ ಉತ್ತೀರ್ಣರಾದ ವಿದ್ಯಾರ್ಥಿಗಳು

12 ಲಕ್ಷ
ರಾಜ್ಯದ ಪಿಯು–ಪದವಿ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳು

6 ಲಕ್ಷ
ಪಿಯು–ಪದವಿ ಕಾಲೇಜುಗಳಲ್ಲಿ ಕೊರತೆಯಾಗಲಿರುವ ಸೀಟುಗಳು

1.25 ಲಕ್ಷ
ಸರ್ಕಾರಿ ಪದವಿ ಕಾಲೇಜುಗಳಲ್ಲಿ ಹೆಚ್ಚಿಸಿರುವ ಸೀಟುಗಳು

ಉಪನ್ಯಾಸಕರ ನೇಮಕ ಅವಶ್ಯ: 'ಈ ಬಾರಿ ಎಂಟು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾಗಿದ್ದು, ಬೇರೆ ಬೇರೆ ಕೋರ್ಸ್‌ಗಳಿಗೆ ಹೋಗುವ ವಿದ್ಯಾರ್ಥಿಗಳನ್ನು ಹೊರತು ಪಡಿಸಿದರೆ ಶೇ 70ರಷ್ಟು ವಿದ್ಯಾರ್ಥಿಗಳು ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗಕ್ಕೆ ಸೇರಬಹುದು. ಸುಮಾರು 20ರಿಂದ 25 ದಿನಗಳಲ್ಲಿ ದಾಖಲಾತಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಯಾವ ವಿಭಾಗಕ್ಕೆ ಎಷ್ಟು ವಿದ್ಯಾರ್ಥಿಗಳು ದಾಖಲಾಗಿದ್ದಾರೆ ಎಂಬುದರ ಆಧಾರದ ಮೇಲೆ ಮುಂದಿನ ವ್ಯವಸ್ಥೆ ಮಾಡಬೇಕಾಗುತ್ತದೆ' ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ತಿಳಿಸಿದರು.

'ರಾಜ್ಯದಲ್ಲಿ 1,253 ಹಾಗೂ ಬೆಂಗಳೂರಿನಲ್ಲಿ 23 ಸರ್ಕಾರಿ ಪದವಿಪೂರ್ವ ಕಾಲೇಜುಗಳಿದ್ದು, ಎಲ್ಲ ಕಡೆಗೂ ದಾಖಲಾತಿಗಾಗಿ ಹೆಚ್ಚು ವಿದ್ಯಾರ್ಥಿಗಳು ಬರುತ್ತಿದ್ದಾರೆ. 1,320 ಅತಿಥಿ ಉಪನ್ಯಾಸಕರನ್ನೂ ಸರ್ಕಾರ ನಿಯೋಜನೆ ಮಾಡಿಕೊಂಡಿದ್ದು, ಅಗತ್ಯಬಿದ್ದರೆ ಮತ್ತಷ್ಟು ಉಪನ್ಯಾಸಕರನ್ನು ತೆಗೆದುಕೊಳ್ಳಬಹುದು' ಎಂದು ಹೇಳಿದರು.

'ಕೇಂದ್ರೀಕೃತ ವ್ಯವಸ್ಥೆ ರೂಪಿಸಿ'

'ಈ ಬಾರಿ ಪಿಯು ಹಾಗೂ ಪದವಿಯ ಕಾಲೇಜುಗಳಲ್ಲಿ ಸುಮಾರು 6 ಲಕ್ಷದಷ್ಟು ಸೀಟುಗಳ ಕೊರತೆ ಉದ್ಭವಿಸುವುದರಿಂದ ಕೊನೆಯ ಕ್ಷಣದಲ್ಲಿ ವಿದ್ಯಾರ್ಥಿಗಳು ತೊಂದರೆ ಎದುರಿಸುವ ಸಾಧ್ಯತೆ ಇದೆ. ಇದಕ್ಕಾಗಿ, ಕೇಂದ್ರೀಕೃತ ದಾಖಲಾತಿ ವ್ಯವಸ್ಥೆಯನ್ನು ಸರ್ಕಾರ ರೂಪಿಸಬೇಕಾಗಿದೆ' ಎಂದು ಉಲ್ಲಾಳು ಆಕ್ಸ್‌ಫರ್ಡ್ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಆರ್. ಸುಪ್ರೀತ್ ಸಲಹೆ ನೀಡಿದರು.

'ಖಾಸಗಿ ಕಾಲೇಜುಗಳಲ್ಲದೆ, ಸರ್ಕಾರಿ ಕಾಲೇಜುಗಳಲ್ಲಿ ಪ್ರವೇಶ ಸಿಗುವುದೂ ಕಷ್ಟವಾಗುತ್ತದೆ. ಹೆಚ್ಚು ದುಡ್ಡು ಕೊಟ್ಟವರಿಗೆ ಮಾತ್ರ ಪ್ರವೇಶ ಸಿಗುವ ಸಾಧ್ಯತೆ ಇರುತ್ತದೆ' ಎಂದು ಹೇಳಿದರು.

'ಪಿಯು ಕಾಲೇಜುಗಳಲ್ಲಿ ಪದವಿಪೂರ್ವ ಶಿಕ್ಷಣ ಮಂಡಳಿಯೇ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡಬೇಕು. ಆಯಾ ಪಿನ್‌ಕೋಡ್‌ಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸೀಟು ಹಂಚಿಕೆ ಮಾಡುವ ವ್ಯವಸ್ಥೆ ರೂಪಿಸಿದರೆ, ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೂ ಪ್ರತಿಷ್ಠಿತ ಕಾಲೇಜುಗಳಲ್ಲಿ ಪ್ರವೇಶ ಸಿಗುತ್ತದೆ. ಸಾಮಾಜಿಕ ನ್ಯಾಯವನ್ನೂ ಪಾಲಿಸಿದಂತಾಗುತ್ತದೆ' ಎಂದು ಹೇಳಿದರು.

'ಸೀಟು ಸಾಮರ್ಥ್ಯ ಹೆಚ್ಚಳ'

'ರಾಜ್ಯದ 435 ಸರ್ಕಾರಿ ಪದವಿ ಕಾಲೇಜುಗಳಲ್ಲಿ 2 ಲಕ್ಷದವರೆಗೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲು ಅವಕಾಶವಿತ್ತು. ಈ ಬಾರಿ ಈ ಸಂಖ್ಯೆಯನ್ನು 3.25 ಲಕ್ಷಕ್ಕೆ ಏರಿಸಲಾಗಿದೆ' ಎಂದು ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಟಿ.ಎಂ.ಮಂಜುನಾಥ ಹೇಳಿದರು.

'ಪ್ರತಿ ಕಾಲೇಜಿನಲ್ಲಿ 60 ಸೀಟುಗಳಿದ್ದ ಕಡೆಗೆ, 80 ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಅವಕಾಶ ನೀಡಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಈ ಬಾರಿ ಬಹುಶಿಸ್ತೀಯ ಕೋರ್ಸ್‌ಗಳ ಆಯ್ಕೆಗೂ ಅವಕಾಶ ಇರುವುದರಿಂದ ಹೊಸ ಕೋರ್ಸ್‌ಗಳೂ ಪ್ರಾರಂಭವಾಗುತ್ತಿವೆ' ಎಂದು ಅವರು ತಿಳಿಸಿದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 11ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾರಕ್ಕಿ, ಜೆ.ಪಿ. ನಗರ, ಶಾಕಾಂಬರಿ ನಗರ, ಐಜಿ ವೃತ್ತ, ಸಾರಕ್ಕಿ ಮಾರುಕಟ್ಟೆ, ಕೆಟಿ ಅಪಾರ್ಟ್‌ಮೆಂಟ್, ಸಿ.ಆರ್. ಬಡಾವಣೆ, ವಿ.ಆರ್. ಬಡಾವಣೆ, ಜೆಎನ್‌ಆರ್ ಬಡಾವಣೆ, ಬನಶಂಕರಿ ಪೆಟ್ರೋಲ್ ಬಂಕ್, ಸಿ.ಎಸ್. ಬಡಾವಣೆ, ರೋಸ್ ಗಾರ್ಡನ್, ಬಸವರಾಜು ಬಡಾವಣೆ, ಅಯ್ಯಪ್ಪ ದೇಗುಲ, ಶೋಭಾ ಅಪಾರ್ಟ್‌ಮೆಂಟ್ ಸಮುಚ್ಚಯ, ಸಾರಕ್ಕಿ ಗ್ರಾಮ, ಎಸ್‌ಬಿಐ ಕಾಲೊನಿ, ನಾಗಾರ್ಜುನ ಎನ್‌ಕ್ಲೇವ್, ಸಿಂಧೂರ ಕಲ್ಯಾಣಮಂಟಪ, ಜರಗನಹಳ್ಳಿ, ವೀವರ್ಸ್ ಕಾಲೊನಿ, ಡಾಲರ್ಸ್ ಕಾಲೊನಿ, ಡಿ.ಎಸ್. ಪಾಳ್ಯ, ಎನ್.ಎಸ್. ಪಾಳ್ಯ, ವೆಂಕಟಾದ್ರಿ ಬಡಾವಣೆ, ಬನ್ನೇರುಘಟ್ಟ ರಸ್ತೆ, ಮಂತ್ರಿ ಎಲೈಟ್ ಅಪಾರ್ಟ್‌ಮೆಂಟ್, ಪ್ರೈಡ್ ಅಪಾರ್ಟ್‌ಮೆಂಟ್, ಬಿಟಿಎಂ ಮೊದಲನೇ ಹಂತ, ನೊಬೆಲ್ ನರ್ಸಿಂಗ್ ಹೋಮ್, ಬಿಟಿಎಂ ಎರಡನೇ ಹಂತ.

ಹೈಕೋರ್ಟ್ ಏಕಸದಸ್ಯ ಪೀಠದ ಆದೇಶ: ಶುಲ್ಕ ಮರುಪಾವತಿಗೆ ಸೂಚನೆ

ಬಿಬಿಎಂಪಿ ಕಟ್ಟಡ ಸಂಬಂಧಿ ಶುಲ್ಕಗಳು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ನಿರ್ಮಾಣ ಮಾಡುವ ಸಾರ್ಜನಿಕರಿಂದ ನೆಲ ಬಾಡಿಗೆ, ಪರವಾನಗಿ ಶುಲ್ಕ, ಕಟ್ಟಡ ನಿರ್ಮಾಣ ಪರವಾನಗಿ ಶುಲ್ಕ, ಪರಿಶೀಲನಾ ಶುಲ್ಕ ಮತ್ತು ಭದ್ರತಾ ಠೇವಣಿಗಳನ್ನು ಪಡೆಯುವ ಅಧಿಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಇಲ್ಲ ಎಂದು ಹೈಕೋರ್ಟ್ ಹೇಳಿದೆ. ಈ ಎಲ್ಲ ಶುಲ್ಕಗಳನ್ನೂ ರದ್ದುಮಾಡಿ ನ್ಯಾಯಾಲಯ ಆದೇಶ ಹೊರಡಿಸಿದೆ.

ಬಿಬಿಎಂಪಿಯ ಶುಲ್ಕ ಮತ್ತು ತೆರಿಗೆ ನೀತಿಯನ್ನು ಪ್ರಶ್ನಿಸಿದ್ದ ಸುಂದರ ಶೆಟ್ಟಿ ಮತ್ತು ಇತರರು ಸಲ್ಲಿಸಿದ್ದ ನೂರಕ್ಕೂ ಹೆಚ್ಚು ಅರ್ಜಿಗಳ ವಿಚಾರಣೆ ನಡೆಸಿ ತೀರ್ಪು ನೀಡಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ, 'ಬಿಬಿಎಂಪಿ ಕಟ್ಟಡ ಬೈಲಾ ಪ್ರಕಾರ ವಿಧಿಸುತ್ತಿರುವ ಶುಲ್ಕಗಳು ಕರ್ನಾಟಕ ನಗರಾಡಳಿತ ಕಾಯ್ದೆಗೆ (ಕೆಎಂಸಿ) ವಿರುದ್ಧವಾಗಿವೆ. ಕಾನೂನಿನ

ಅನುಮತಿ ಇಲ್ಲದೇ ನಾಗರಿಕರಿಂದ ಒಂದು ರೂಪಾಯಿ ಸಂಗ್ರಹಿಸುವುದಕ್ಕೂ ಅವಕಾಶ ಇಲ್ಲ' ಎಂದು ಹೇಳಿದ್ದಾರೆ.

ನಾಗರಿಕರಿಗೆ ಯಾವುದಾದರೂ ಸೇವೆ ನೀಡಿದಲ್ಲಿ ಮಾತ್ರವೇ ಅವರಿಂದ ಶುಲ್ಕ ಸಂಗ್ರಹಿಸಬಹುದು. ಇಲ್ಲವಾದರೆ, ನಾಗರಿಕರಿಂದ ಪಡೆಯುವ ಮೊತ್ತವು ತೆರಿಗೆಯ ವ್ಯಾಪ್ತಿಗೆ ಸೇರುತ್ತದೆ. ಈಗ ಕಟ್ಟಡ ಬೈಲಾ ಅಡಿಯಲ್ಲಿ ವಿಧಿಸುತ್ತಿರುವ ಶುಲ್ಕವನ್ನು ರಾಜ್ಯ ಸರ್ಕಾರ ಅಥವಾ ಬಿಬಿಎಂಪಿ ಆಡಳಿತವು, ಸೂಕ್ತ ತಿದ್ದುಪಡಿಗಳೊಂದಿಗೆ ಕಾಯ್ದೆ ಮತ್ತು ನಿಯಮಗಳಿಗೆ ಅಡಿಯಲ್ಲಿ ತಂದರೆ ಮಾತ್ರ ಮುಂದುವರಿಸಬಹುದು ಎಂದು ನ್ಯಾಯಪೀಠ ಹೇಳಿದೆ.

ಬಿಬಿಎಂಪಿ ಆಡಳಿತವು ಕಟ್ಟಡ ಬೈಲಾ ಅಡಿಯಲ್ಲಿ ಹಲವು ಬಗೆಯ ಶುಲ್ಕ ವಿಧಿಸುತ್ತಿರುವುದನ್ನು ಅರ್ಜಿದಾರರು ಪ್ರಶ್ನಿಸಿದ್ದರು. ಕಟ್ಟಡ ನಿರ್ಮಿಸುವವರಿಂದ ಅಭಿವೃದ್ಧಿ ಶುಲ್ಕ ಮತ್ತು ಕಾಂಪೌಂಡ್ ಶುಲ್ಕ ಮಾತ್ರ ಪಡೆಯಲು ಕಾನೂನಿನಲ್ಲಿ ಅವಕಾಶವಿದೆ ಎಂದು ವಾದಿಸಿದ್ದರು. ಆದರೆ, ಕಟ್ಟಡಗಳ ಬೈಲಾ ಅಡಿಯಲ್ಲಿ ಹಲವು ಬಗೆಯ ಶುಲ್ಕಗಳನ್ನು ವಿಧಿಸಲು ತನಗೆ ಅಧಿಕಾರವಿದೆ ಎಂದು ಬಿಬಿಎಂಪಿ ವಾದಿಸಿತ್ತು.

'ಕೆಎಂಸಿ ಕಾಯ್ದೆಯ ಅಡಿಯಲ್ಲಿ ಅವಕಾಶವಿರುವ ಶುಲ್ಕಗಳನ್ನು ಮಾತ್ರ ಪಡೆಯಲು ಬಿಬಿಎಂಪಿಗೆ ಅವಕಾಶವಿದೆ. ಕೆಎಂಸಿ ಕಾಯ್ದೆಯ ಸೆಕ್ಷನ್ 295 ಮತ್ತು 423ರ ಅಡಿಯಲ್ಲಿ ಕಟ್ಟಡ ಬೈಲಾ ರಚಿಸಲು ಅವಕಾಶವಿದೆ. ಈ ಎರಡೂ ಸೆಕ್ಷನ್‌ಗಳು ಜನರ ಮೇಲೆ ಹೊಸ ಬಗೆಯ ಶುಲ್ಕ ಹೇರುವ ಅಧಿಕಾರವನ್ನು ಪಾಲಿಕೆಗೆ ನೀಡಿಲ್ಲ' ಎಂದು ಹೈಕೋರ್ಟ್ ತೀರ್ಪಿನಲ್ಲಿ ತಿಳಿಸಿದೆ.

'ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಆಧರಿಸಿ ಶುಲ್ಕ ವಿಧಿಸುವ ಪದ್ಧತಿಯು ಸ್ವೇಚ್ಛಾಚಾರದ ತೀರ್ಮಾನವಾಗುತ್ತದೆ. ಅದು ಸಂವಿಧಾನದ 14ನೇ ವಿಧಿಗೆ ವಿರುದ್ಧವಾದುದು. ಮಾರ್ಗಸೂಚಿ ದರದ ಆಧಾರದಲ್ಲಿ ಶುಲ್ಕ ವಿಧಿಸುವ ವ್ಯವಸ್ಥೆಯು ಸಾರ್ವಜನಿಕರ ರಕ್ತ ಹೀರುವುದಕ್ಕೆ ಎಡೆಮಾಡುತ್ತದೆ' ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಕಾರ್ಮಿಕ ಕಲ್ಯಾಣ ಸೆಸ್ ಸಂಗ್ರಹವನ್ನು ಊರ್ಜಿತಗೊಳಿಸಿರುವ ನ್ಯಾಯಾಲಯ, ಈ ಮೊತ್ತವನ್ನು ಮುಂಗಡವಾಗಿ ಪಾವತಿಸುವಂತೆ 2007ರ ಜನವರಿ 18 ಮತ್ತು ಫೆಬ್ರುವರಿ 28ರಂದು ಹೊರಡಿಸಿದ್ದ ಆದೇಶಗಳನ್ನು ರದ್ದುಮಾಡಿದೆ.

ಕೆರೆ ಪುನರುಜ್ಜೀವನ ಶುಲ್ಕ ವಿಧಿಸಲು 2017ರ ಜನವರಿ 27 ಮತ್ತು ಮಾರ್ಚ್ 30ರಂದು ಬಿಬಿಎಂಪಿ ಹೊರಡಿಸಿದ್ದ ಸುತ್ತೋಲೆಗಳನ್ನೂ ನ್ಯಾಯಾಲಯ ರದ್ದುಗೊಳಿಸಿದೆ. ನಗರ ಯೋಜನಾ ಕಾಯ್ದೆಯ ಪ್ರಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಂತಹ ಯೋಜನಾ ಪ್ರಾಧಿಕಾರಗಳಿಗೆ ಮಾತ್ರ ಅಂತಹ ಶುಲ್ಕ ಸಂಗ್ರಹಿಸುವ ಅವಕಾಶವಿದೆ ಎಂದು ನ್ಯಾಯಾಲಯ ಹೇಳಿದೆ.

ಶುಲ್ಕ ಮರುಪಾವತಿಗೆ ಆದೇಶ

ನ್ಯಾಯಾಲಯದ ಮಧ್ಯಂತರದ ಆದೇಶದ ಅನುಸಾರ, ಶುಲ್ಕ ಪಾವತಿಸಿರುವ ಎಲ್ಲ ಅರ್ಜಿದಾರರಿಗೂ ಬಿಬಿಎಂಪಿ ಆ ಮೊತ್ತವನ್ನು ಮರುಪಾವತಿ ಮಾಡಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

ಶುಲ್ಕ ಮರುಪಾವತಿಗೆ ಅರ್ಜಿದಾರರು ಮನವಿ ಸಲ್ಲಿಸಿದರೆ, 12 ವಾರಗಳಲ್ಲಿ ಅಗತ್ಯ ಆದೇಶಗಳನ್ನು ಹೊರಡಿಸಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದೆ.

ಬಿಕ್ಕಟ್ಟು ಶಮನಕ್ಕೆ ದೆಹಲಿ ಯಾತ್ರೆಗೆ ಬೊಮ್ಮಾಯಿ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿದ ಕೆಲವೇ ದಿನಗಳಲ್ಲಿ ಉದ್ಭವಿಸಿರುವ ಖಾತೆ ಹಂಚಿಕೆಯ ಅಸಮಾಧಾನ ಶಮನಗೊಳಿಸುವುದಕ್ಕಾಗಿ ವರಿಷ್ಠರ ನೆರವು ಪಡೆಯಲು ಮತ್ತೊಮ್ಮೆ ದೆಹಲಿ ಯಾತ್ರೆ ಕೈಗೊಳ್ಳಬೇಕಾದ ಇಕ್ಕಟ್ಟಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಿಲುಕಿದ್ದಾರೆ.

ಕೆಲವು ಸಚಿವರು ತಮಗೆ ಹಂಚಿಕೆ ಮಾಡಿರುವ ಖಾತೆಗಳನ್ನು ಬದಲಿಸುವಂತೆ ಪಟ್ಟು ಹಿಡಿದಿದ್ದಾರೆ. ಮಂತ್ರಿಮಂಡಲ ರಚನೆಯ ಬಗ್ಗೆಯೇ ತಕರಾರು ಎತ್ತಿರುವ ಹಲವು ಶಾಸಕರು, ತಮಗೆ ಅವಕಾಶ ಕೈತಪ್ಪಿರುವುದಕ್ಕೆ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕುತ್ತಿದ್ದಾರೆ. ಈ ಎರಡೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮುಂದಿನ ವಾರ ದೆಹಲಿಗೆ ತೆರಳಿ ವರಿಷ್ಠರ ಜತೆ ಚರ್ಚಿಸಿ, ನಿರ್ಧಾರಕ್ಕೆ ಬರಲು ಮುಖ್ಯಮಂತ್ರಿ ತೀರ್ಮಾನಿಸಿದ್ದಾರೆ ಎಂದು ಗೊತ್ತಾಗಿದೆ.

ಸಂಪುಟದಲ್ಲಿ ನಾಲ್ಕು ಸ್ಥಾನಗಳನ್ನು ಉಳಿಸಿಕೊಳ್ಳಲಾಗಿದೆ. ಅವುಗಳನ್ನು ಭರ್ತಿ ಮಾಡುವ ಮೂಲಕ ಶಾಸಕರ ಕೋಪ ತಣಿಸಲು ಬಿಜೆಪಿ ವರಿಷ್ಠರು ಯೋಚಿಸುತ್ತಿದ್ದಾರೆ. ಅದರ ಜತೆಯಲ್ಲೇ, ಕೆಲವು ಸಚಿವರ ಖಾತೆಗಳನ್ನು ಅದಲು–ಬದಲು ಮಾಡಿ ಸಂಪುಟ ಸದಸ್ಯರ ಅಸಮಾಧಾನಕ್ಕೂ ತೆರೆ ಎಳೆಯುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕಾಂಗ್ರೆಸ್, ಜೆಡಿಎಸ್ ತೊರೆದು ಬಂದು ಸಚಿವರಾಗಿರುವವರು ಈಗ ಖಾತೆ ವಿಚಾರದಲ್ಲಿ ಪಕ್ಷದ ವರಿಷ್ಠರ

ಮೇಲೆ ಒತ್ತಡ ತರುವ ಬದಲಿಗೆ ತಮ್ಮ ನಡುವೆಯೇ ಖಾತೆಗಳನ್ನು ಬದಲಾವಣೆ ಮಾಡಿಕೊಳ್ಳುವ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಬೇಕು ಎಂಬ ಸಲಹೆಯನ್ನು ಸಚಿವ ಮುನಿರತ್ನ ಮುಂದಿಟ್ಟಿದ್ದಾರೆ. ಈ ಅವಕಾಶವನ್ನೂ ಸಮಸ್ಯೆ ಪರಿಹಾರಕ್ಕೆ ಬಳಸಿಕೊಳ್ಳುವ ಸಾಧ್ಯತೆ ಇದೆ.

'ವಲಸಿಗ'ರಿಗೆ ಉತ್ತಮ ಖಾತೆಗಳನ್ನು ನೀಡಿದ್ದು, ಪಕ್ಷದ ಮೂಲದವರನ್ನು ಕಡೆಗಣಿಸಲಾಗಿದೆ ಎಂಬ ಅಸಮಾಧಾನ ಬಿಜೆಪಿಯ ಒಂದು ಗುಂಪಿನಲ್ಲಿದೆ. ಕಾಂಗ್ರೆಸ್ ತೊರೆದು ಬಿಜೆಪಿ ಸೇರುವ ಸಂದರ್ಭದಲ್ಲಿ ಕೊಟ್ಟ ಭರವಸೆಯಂತೆ ತಮ್ಮನ್ನು 'ಗೌರವ'ಯುತವಾಗಿ ನಡೆಸಿಕೊಳ್ಳುತ್ತಿಲ್ಲ ಎಂದು ಸಚಿವರಾದ ಆನಂದ್ ಸಿಂಗ್ ಮತ್ತು ಎಂ.ಟಿ.ಬಿ. ನಾಗರಾಜ್ ತಕರಾರು ಎತ್ತಿದ್ದಾರೆ. ಇಬ್ಬರ ಜತೆಗೂ ಬಸವರಾಜ ಬೊಮ್ಮಾಯಿ ಚರ್ಚೆ ನಡೆಸಿದ್ದಾರೆ. ತಮಗೆ ನೀಡಿರುವ ಖಾತೆ ಸಮಾಧಾನ ತಂದಿಲ್ಲ ಎಂಬ ಅಸಮಾಧಾನವನ್ನು ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಕೂಡ ಹೊರಹಾಕಿದ್ದಾರೆ.

ಮುಗಿಯದ ಮುನಿಸು: ಸಂಪುಟದಲ್ಲಿ ಸ್ಥಾನ ದೊರಕದೇ ಇರುವುದಕ್ಕಾಗಿ ಮುನಿಸಿಕೊಂಡಿರುವ ಶಾಸಕರ ಸಂಖ್ಯೆಯೂ ಹೆಚ್ಚುತ್ತಲೇ ಇದೆ. ಶಾಸಕ ರಮೇಶ ಜಾರಕಿಹೊಳಿ ಅತ್ಯಾಚಾರ ಆರೋಪದ ಪ್ರಕರಣದಿಂದ ಸಂಪುಟ ಸೇರಲು ಆಗಿಲ್ಲ.ಸಹೋದರ ಬಾಲಚಂದ್ರ ಜಾರಕಿಹೊಳಿ ಅವರನ್ನು ಸಂಪುಟಕ್ಕೆ ಸೇರಿಸಲು ಅವರು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ.

ಏಕಾಏಕಿ ನಾಮಫಲಕ ತೆರವು: ಸಚಿವ ಆನಂದ್ ಸಿಂಗ್ ಕಚೇರಿ ಬಂದ್

ಹೊಸಪೇಟೆ (ವಿಜಯನಗರ): ರಾಣಿಪೇಟೆಯಲ್ಲಿನ ಸಚಿವ ಆನಂದ್ ಸಿಂಗ್ ಅವರ ಕಚೇರಿಯನ್ನು ಮಂಗಳವಾರ ರಾತ್ರಿ ದಿಢೀರ್ ಬಂದ್ ಮಾಡಿ, ಅದರ ನಾಮಫಲಕ ತೆರವುಗೊಳಿಸಲಾಗಿದೆ.

ಬುಧವಾರದಿಂದ ಕಚೇರಿಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸದಿರಲು ನಿರ್ಧರಿಸಲಾಗಿದೆ ಎಂದು ಗೊತ್ತಾಗಿದೆ.

ಕಚೇರಿ ಬಂದ್ ಮಾಡಿರುವ ಕುರಿತು ಆನಂದ್ ಸಿಂಗ್ ಅವರನ್ನು 'ಪ್ರಜಾವಾಣಿ' ಸಂಪರ್ಕಿಸಿದಾಗ, 'ಈ ಬಗ್ಗೆ ನಾನೇನೂ ಪ್ರತಿಕ್ರಿಯಿಸಲಾರೆ. ಏನು ಹೇಳಬೇಕಿತ್ತೋ ಅದನ್ನು ಮುಖ್ಯಮಂತ್ರಿಯವರಿಗೆ ಹೇಳಿರುವೆ' ಎಂದಷ್ಟೇ ಹೇಳಿದರು.

'ಯಾವುದೇ ಕಾರಣಕ್ಕೂ ನನ್ನ ನಿಲುವಿನಿಂದ ಹಿಂದೆ ಸರಿಯಲಾರೆ. ಅಗತ್ಯಬಿದ್ದರೆ, ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡುವೆ. ಮುಂದೆನಾಗುತ್ತೋ ನೋಡಿಯೋ ಬಿಡುತ್ತೇನೆ' ಎಂದು ಆನಂದ್ ಸಿಂಗ್ ಅವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಬೇಡಿಕೆ ಈಡೇರದಿದ್ದರೆ, ಆ. 15ರಂದು ಧ್ವಜಾರೋಹಣ ಕೂಡ ಮಾಡದಿರಲು ತೀರ್ಮಾನಿಸಿದ್ದಾರೆ ಎಂದು ಗೊತ್ತಾಗಿದೆ.

ಹೊಸಪೇಟೆಯ ರಾಣಿಪೇಟೆಯಲ್ಲಿನ ಸಚಿವ ಆನಂದ್ ಸಿಂಗ್ ಅವರ ಕಚೇರಿಯ ನಾಮಫಲಕ ಬುಧವಾರ ಕ್ರೇನ್‌ನಿಂದ ತೆರವುಗೊಳಿಸಲಾಯಿತು

ಆನಂದ್ ಸಿಂಗ್ ಅವರಿಗೆ ಪ್ರವಾಸೋದ್ಯಮ ಮತ್ತು ಪರಿಸರ, ಜೀವಿಶಾಸ್ತ್ರ ಖಾತೆ ನೀಡಲಾಗಿದೆ. ಆ ಖಾತೆ ಬದಲಿಸಬೇಕೆನ್ನುವುದು ಅವರ ಬೇಡಿಕೆ. ಈ ಬೇಡಿಕೆ ಈಡೇರುವವರೆಗೆ ಯಾವುದೇ ಕಾರಣಕ್ಕೂ ಖಾತೆಗಳ ಜವಾಬ್ದಾರಿ ವಹಿಸಿಕೊಳ್ಳದಿರಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎಸ್‌.ಎಸ್‌. ಮಲ್ಲಿಕಾರ್ಜುನ ರಾವ್ ಅವರು ಬ್ಯಾಂಕ್‌ನ 'ಡಿಜಿಟಲ್ ಬ್ಯಾಂಕಿಂಗ್ ಕೇಂದ್ರ'ವನ್ನು ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿ ಉದ್ಘಾಟಿಸಿದರು

ನೀರಿನ ಅದಾಲತ್ ನಾಳೆ

ಬೆಂಗಳೂರು: ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಗುರುವಾರ (ಆ.12) ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್ ಮತ್ತಿತರ ಸಮಸ್ಯೆಗಳನ್ನು ಅದಾಲತ್‌ನಲ್ಲಿ ಪರಹರಿಸಲಾಗುವುದು.ಬಳಕೆದಾರರು ಸಂಬಂಧಪಟ್ಟ ಉಪವಿಭಾಗದ ಕಚೇರಿಗೆ ತೆರಳಿ ಅದಾಲತ್‌ನಲ್ಲಿಪಾಲ್ಗೊಳ್ಳಬಹುದು.ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ದಿನದ 24 ಗಂಟೆ ಕಾರ್ಯಾಚರಿಸುವ ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ: 080– 22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆ್ಯಪ್ ಸಂಖ್ಯೆ: 8762228888 ಸಂಪರ್ಕಿಸಬಹುದು.

'ಜನರ ಜೀವನದ ಜೊತೆ ಸರ್ಕಾರದ ಚೆಲ್ಲಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಎರಡನೇ ಅಲೆಯಲ್ಲಿ ಆಗಿರುವ ನಷ್ಟಕ್ಕೆ ರೈತರಿಗೆ ಸರ್ಕಾರದಿಂದ ಈವರೆಗೂ ಪರಿಹಾರ ಸಿಕ್ಕಿಲ್ಲ. ಬೆಳೆಗೆ ಬೆಲೆ ಇಲ್ಲದೆ ರೈತರು ಪರದಾಡುತ್ತಿದ್ದಾರೆ. ಸರ್ಕಾರ ಇದ್ಯಾವುದರ ಬಗ್ಗೆಯೂ ಚಿಂತಿಸದೆ, ಜನರ ಜೀವನದ ಜತೆ ಚೆಲ್ಲಾಟವಾಡುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸದಾಶಿವನಗರ ನಿವಾಸದಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗಾರರ ಜೊತೆ ಮಂಗಳವಾರ ಮಾತಾಡಿದ ಅವರು, 'ಹೊಸ ಸರ್ಕಾರ ಬಂದಿದೆ. ಜನರ ರಕ್ಷಣೆ ಮಾಡುತ್ತದೆ ಎಂದು ಎಲ್ಲರೂ ಕಾದು ನೋಡುತ್ತಿದ್ದಾರೆ' ಎಂದರು.

'ಹಾರ, ತುರಾಯಿ ಹಾಕಿಸಿಕೊಳ್ಳುವವರಿಗೆ ನಾನು ಬೇಡ ಎನ್ನುವುದಿಲ್ಲ. ಕೋವಿಡ್ ಸೋಂಕು ನಿಯಂತ್ರಿಸಬೇಕು. ಎಲ್ಲರೂ ತಮ್ಮ ಕ್ಷೇತ್ರಗಳಿಗೆ ಹೋಗಿ ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ. ಬೆಳೆದ ಟೊಮೊಟೊ, ತರಕಾರಿಗಳಿಗೆ ಬೆಲೆ ಸಿಗದೆ ಅವುಗಳನ್ನು ರೈತರು ಬಿಸಾಕುತ್ತಿದ್ದಾರೆ. ನೂತನ ಮುಖ್ಯಮಂತ್ರಿ ರೈತರು, ಸಾಂಪ್ರದಾಯಿಕ ವೃತ್ತಿ ಅವಲಂಬಿಸಿರುವವರನ್ನು ಉಳಿಸುತ್ತಾರಾ ನೋಡಬೇಕು' ಎಂದರು.

ಖಾಸಗಿಯಾಗಿ ಹಂಚಿಕೊಳ್ಳಲು ಸಿದ್ಧ: 'ಪಕ್ಷದ ಶಾಸಕ (ಜಮೀರ್) ಮನೆ ಮೇಲೆ ನಡೆದ ಜಾರಿ ನಿರ್ದೇಶನಾಲಯದ ದಾಳಿ ಬಗ್ಗೆ ವೈಯಕ್ತಿವಾಗಿ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ನನ್ನ ಅನುಭವವನ್ನು ಅವರೊಂದಿಗೆ ಖಾಸಗಿಯಾಗಿ ಹಂಚಿಕೊಳ್ಳುತ್ತೇನೆ. ಈ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವುದಿಲ್ಲ. ಎಚ್‌.ಡಿ. ಕುಮಾರಸ್ವಾಮಿ ಕುರಿತು ಜಮೀರ್ ಅಹಮದ್ ಮಾಡಿರುವ ಆರೋಪಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ' ಎಂದೂ ಅವರು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

'ಪ್ರಯಾಣಿಕ ವಾಹನಗಳಿಗೆ ತೆರಿಗೆ ವಿನಾಯಿತಿ ಘೋಷಿಸಿ'

ಬೆಂಗಳೂರು: 'ಸುಮಾರು ಒಂದೂವರೆ ವರ್ಷದಿಂದ ಜನತಾ ಕರ್ಫ್ಯೂ, ಲಾಕ್‌ಡೌನ್ ಸೇರಿದಂತೆ ಅನೇಕ ನಿರ್ಬಂಧಗಳನ್ನು ಹೇರುತ್ತಿರುವ ಪರಿಣಾಮ ಪ್ರವಾಸಿ ವಾಹನ ಉದ್ಯಮ ಸಂಕಷ್ಟದಲ್ಲಿ ಸಿಲುಕಿದೆ. ಈ ಉದ್ಯಮದ ಆರ್ಥಿಕ ಸ್ವಾವಲಂಬನೆಗೆ ಸರ್ಕಾರ ನೆರವು ನೀಡಬೇಕು' ಎಂದು ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘ ಒತ್ತಾಯಿಸಿದೆ.

ಈ ಕುರಿತು ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಕೆ. ರಾಧಾಕೃಷ್ಣ ಹೊಳ್ಳ, 'ಪ್ರಯಾಣಿಕ ವಾಹನಗಳ ಸಾರಿಗೆ ವ್ಯವಸ್ಥೆ ನಡೆಸುತ್ತಿರುವವರು ಕೋವಿಡ್ ಬಿಕ್ಕಟ್ಟಿನಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸೋಂಕು ಹರಡುವ ಭಯದಿಂದ ಪ್ರವಾಸಕ್ಕೆ ತೆರಳುವವರ ಸಂಖ್ಯೆಯೂ ಕಡಿಮೆಯಾಗಿದೆ' ಎಂದು ಹೇಳಿದ್ದಾರೆ.

'ಈ ಸಂಕಷ್ಟದ ಸಂದರ್ಭದಲ್ಲಿ ರಾಜ್ಯ ಸರ್ಕಾರವು, ಆಗಸ್ಟ್‌ನಿಂದ ಆರು ತಿಂಗಳ ತೆರಿಗೆ ವಿನಾಯಿತಿಯನ್ನು ಮತ್ತು ಡಿಸೆಂಬರ್ ವರೆಗಿನ ವಾಹನ ತೆರಿಗೆಯಲ್ಲಿ ವಿನಾಯಿತಿಯನ್ನು ಘೋಷಣೆ ಮಾಡಬೇಕು' ಎಂದು ಅವರು ಕೋರಿದ್ದಾರೆ.

'ಇತ್ತೀಚೆಗೆ ಕೇಂದ್ರ ಸಾರಿಗೆ ಸಚಿವಾಲಯದ ಆದೇಶದಂತೆ ಎಂಟು ವರ್ಷಗಳ ವಾಹನಗಳಿಗೆ ಹಸಿರು ತೆರಿಗೆ ವಿಧಿಸುವ ಮತ್ತು 15 ವರ್ಷಗಳ ವಾಹನಗಳನ್ನು ಗುಜರಿಗೆ ಹಾಕುವ ಆದೇಶ ಅನುಷ್ಠಾನಗೊಳಿಸುವುದನ್ನು ರಾಜ್ಯ ಸರ್ಕಾರ ಮುಂದೂಡಬೇಕು' ಎಂದೂ ಅವರು ಮನವಿ ಮಾಡಿದ್ದಾರೆ.

ಮಲಬಾರ್: ವಿವಾಹ ಗೀತೆಯ ವಿಡಿಯೊ ಬಿಡುಗಡೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ 'ದಿ ಬ್ರೈಡ್ಸ್ ಆಫ್ ಇಂಡಿಯಾ' (ಭಾರತದ ವಧುಗಳು) ಅಭಿಯಾನದ ಭಾಗವಾಗಿ ವಧುವಿನ ಪ್ರವೇಶದ ವಿಡಿಯೊವನ್ನು ಬಿಡುಗಡೆ ಮಾಡಿದೆ.

ಈ ವಿವಾಹಗೀತೆಯ ವಿಡಿಯೊವನ್ನು'ದಿ ಬಿಗ್ ಬುಲ್' ಬಾಲಿವುಡ್ ಸಿನಿಮಾದ ನಿರ್ದೇಶಕ ಕೂಕಿ ಗುಲಾಟಿ ನಿರ್ದೇಶಿಸಿದ್ದಾರೆ. ವಿವಾಹ ವೇಳೆ ವಧುವಿನ ಅದ್ದೂರಿ ಪ್ರವೇಶವನ್ನು ಚಿತ್ರಿಸಲಾಗಿದೆ. 3 ನಿಮಿಷಗಳ ಈ ವಿವಾಹ ಗೀತೆಯ ವಿಡಿಯೊ ಬಿಡುಗಡೆಯಾದ 48 ಗಂಟೆಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ 20 ಲಕ್ಷ ಮಂದಿ ವೀಕ್ಷಿಸಿದಾರೆ. ಇದರಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಸಂಸ್ಥೆಯ ರಾಯಭಾರಿಗಳಾದ ಅನಿಲ್ ಕಪೂರ್ ಮತ್ತು ಕರೀನಾ ಕಪೂರ್ ಕಾಣಿಸಿಕೊಂಡಿದ್ದಾರೆ.

'ಈ ವಿವಾಹ ಗೀತೆಯ ಕಿರು ಆವೃತ್ತಿಯನ್ನು ದೃಶ್ಯ ಮಾಧ್ಯಮಗಳು ಸೇರಿದಂತೆ ವಿವಿಧೆಡೆ ಪ್ರಸಾರ ಮಾಡಲಾಗುವುದು. ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಪಂಜಾಬ್, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ವಧುಗಳು ಸಾಂಪ್ರದಾಯಿಕವಾಗಿ ವಿವಾಹ ಮಂಟಪ ಪ್ರವೇಶಿಸುವುದನ್ನು ತೋರಿಸಲಾಗಿದೆ' ಎಂದು ಸಂಸ್ಥೆ ತಿಳಿಸಿದೆ.

ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮ್ಮದ್, 'ಬ್ರೈಡ್ಸ್ ಆಫ್ ಇಂಡಿಯಾ ಅಭಿಯಾನವು ಹೊಸ ಯುಗದ ವಧುಗಳಿಗೆ ಮತ್ತು ಅವರ ವಿಸ್ಮಯಕಾರಿ ವ್ಯಕ್ತಿತ್ವಕ್ಕೆ ನಾವು ನೀಡುವ ಗೌರವ. ದೇಶದ ವಿವಿಧ ಭಾಗಗಳಿಂದ 13 ವಧುಗಳನ್ನು ಎರಡು ವಿಶಿಷ್ಟ ನೋಟಗಳಲ್ಲಿ ತೋರಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾಹೀರಾತು ನಿಯಮ ಮರುಪರಿಶೀಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಜಾಹೀರಾತು ಹೋರ್ಡಿಂಗ್‌ಗಳನ್ನು ಅಳವಡಿಸಲು ಅವಕಾಶ ಕಲ್ಪಿಸುವ 'ಬಿಬಿಎಂಪಿ ಜಾಹೀರಾತು ನಿಯಮಗಳು–2019'ರ ಜಾರಿ ಕುರಿತು ಮರು ಪರಿಶೀಲನೆ ನಡೆಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಮಂಗಳವಾರ ನಡೆದ ಉನ್ನತಮಟ್ಟದ ಸಭೆಯಲ್ಲಿ ಮುಖ್ಯಮಂತ್ರಿಯವರು ಈ ನಿರ್ದೇಶನ ನೀಡಿದ್ದಾರೆ. ತರಾತುರಿಯಲ್ಲಿ ಹೋರ್ಡಿಂಗ್‌ಗಳನ್ನು ಅಳವಡಿಸಲು ಅವಕಾಶ ನೀಡದಂತೆ ತಾಕೀತು ಮಾಡಿದ್ದು, ಹೊಸ ನಿಯಮಗಳ ಅನುಷ್ಠಾನದ ಕುರಿತು ಮರು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಹೈಕೋರ್ಟ್ ಸೂಚನೆಯಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಹೋರ್ಡಿಂಗ್ ಅಳವಡಿಕೆ ನಿಷೇಧಿಸಿ 2018ರಲ್ಲಿ ಆದೇಶ ಹೊರಡಿಸಲಾಗಿತ್ತು. ನಿರ್ಬಂಧ ತೆರವುಗೊಳಿಸಿ, ಹೋರ್ಡಿಂಗ್ ಅಳವಡಿಸಲು ಅವಕಾಶ ನೀಡುವಂತೆ ಜಾಹೀರಾತು ಏಜೆನ್ಸಿಗಳು ಪಾಲಿಕೆ ಮತ್ತು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿದ್ದವು.

ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವ ಮುನ್ನ ತರಾತುರಿಯಲ್ಲಿ 'ಬಿಬಿಎಂಪಿ ಜಾಹೀರಾತು ನಿಯಮ'ಗಳ ಅನುಷ್ಠಾನಕ್ಕೆ ಒಪ್ಪಿಗೆ ನೀಡುವ ಕಡತಕ್ಕೆ ಸಹಿ ಮಾಡಿದ್ದರು. ವರ್ಷಗಳಿಂದ ಬಾಕಿ ಇದ್ದ ಕಡತಕ್ಕೆ ಅಧಿಕಾರದಿಂದ ನಿರ್ಗಮಿಸುವ ಮುನ್ನ ಅನುಮೋದನೆ ನೀಡಿದ್ದ ಅವರು, ನಗರದಲ್ಲಿ ಮತ್ತೆ ಹೋರ್ಡಿಂಗ್‌ಗಳನ್ನು ಅಳವಡಿಸಲು ಅವಕಾಶ ಕಲ್ಪಿಸಿದ್ದರು.

ಹೋರ್ಡಿಂಗ್‌ಗಳನ್ನು ಅಳವಡಿಸಲು ಇದ್ದ ನಿರ್ಬಂಧ ತೆರವಿನ ಹಿಂದಿನ ಲೆಕ್ಕಾಚಾರ, ಅದರಿಂದ ಆಗುವ ತೊಂದರೆ, ಜಾಹೀರಾತು ಏಜೆನ್ಸಿಗಳ ಒತ್ತಡ ಕುರಿತಂತೆ 'ಪ್ರಜಾವಾಣಿ' ಸರದಿ ವರದಿಗಳನ್ನು ಪ್ರಕಟಿಸಿತ್ತು. ಈ ಕುರಿತು ಮಂಗಳವಾರದ ಸಭೆಯಲ್ಲಿ ಪ್ರಸ್ತಾಪವಾಗಿದ್ದು, ಚರ್ಚೆ ನಡೆದಿದೆ. ಆ ಬಳಿಕ, ಜಾಹೀರಾತು ನಿಯಮ ಜಾರಿಗೆ ಸಂಬಂಧಿಸಿದಂತೆ ಮರುಪರುಶೀಲನೆಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ ಎಂಬ ಮಾಹಿತಿ ಲಭಿಸಿದೆ.

'ಸಭೆಯಲ್ಲಿ ಪಾಲ್ಗೊಂಡಿದ್ದ ಏಳು ಸಚಿವರು ಜಾಹೀರಾತು ನಿಯಮಗಳ ಜಾರಿಯನ್ನು ವಿರೋಧಿಸಿದರು. ಯಡಿಯೂರಪ್ಪ ಅವರು ಅಧಿಕಾರದಿಂದ ಕೆಳಗಿಳಿಯುವ ಮುನ್ನ ತರಾತುರಿಯಲ್ಲಿ ಈ ನಿರ್ಧಾರ ಕೈಗೊಂಡಿದ್ದು, ಅದರ ಅನುಷ್ಠಾನಕ್ಕೆ ಅವಕಾಶ ನೀಡಕೂಡದು ಎಂದು ಸಚಿವರು ಆಗ್ರಹಿಸಿದರು' ಎಂದು ಮೂಲಗಳು ತಿಳಿಸಿವೆ.

ಹೋರ್ಡಿಂಗ್ ಅಳವಡಿಸಲು ಅವಕಾಶ ಕಲ್ಪಿಸುವುದನ್ನು ಬಿಜೆಪಿ ಪಾಲಿಕೆಯ ವಿರೋಧ ಪಕ್ಷದಲ್ಲಿದ್ದಾಗ ವಿರೋಧಿಸಿತ್ತು. ಈಗ ಜಾಹೀರಾತು ಏಜೆನ್ಸಿಗಳ ಪರವಾಗಿ ತೀರ್ಮಾನ ಕೈಗೊಂಡರೆ ಕೆಟ್ಟ ಸಂದೇಶ ರವಾನೆಯಾಗುತ್ತದೆ ಎಂದು ಕೆಲವು ಸಚಿವರು ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಆಗಸ್ಟ್ 7 ರಾಷ್ಟ್ರೀಯ ಜಾವೆಲಿನ್ ದಿನ

ನವದೆಹಲಿ (ಪಿಟಿಐ): ನೀರಜ್ ಚೋಪ್ರಾ ಅವರು ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದು ಇತಿಹಾಸ ಬರೆದ ದಿನ ಆಗಸ್ಟ್ 7. ಇನ್ನು ಮುಂದೆ ಪ್ರತಿ ವರ್ಷ ಆ ದಿನವನ್ನು 'ರಾಷ್ಟ್ರೀಯ ಜಾವೆಲಿನ್ ದಿನ'ವನ್ನಾಗಿ ಆಚರಿಸಲು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ತೀರ್ಮಾನಿಸಿದೆ.

'ಜಾವೆಲಿನ್ ಥ್ರೊ ಸ್ಪರ್ಧೆಯತ್ತ ಯುವ ಸಮುದಾಯವನ್ನು ಆಕರ್ಷಿಸುವ ಸಲುವಾಗಿ ಮುಂದಿನ ವರ್ಷದಿಂದ ಆಗಸ್ಟ್ 7ನ್ನು ರಾಷ್ಟ್ರೀಯ ಜಾವೆಲಿನ್ ದಿನವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ. ಆ ದಿನದಂದು ನಮ್ಮ ಅಧೀನಕ್ಕೊಳಪಡುವ ಎಲ್ಲಾ ಫೆಡರೇಷನ್‌ಗಳು ಜಾವೆಲಿನ್ ಥ್ರೊ ಸ್ಪರ್ಧೆ ಏರ್ಪಡಿಸಲಿವೆ' ಎಂದು ಎಎಫ್‌ಐನ ಯೋಜನಾ ಆಯೋಗದ ಮುಖ್ಯಸ್ಥ ಲಲಿತ್ ಭಾನೋಟ್ ಮಂಗಳವಾರ ನಡೆದ ಅಭಿನಂದನಾ ಸಮಾರಂಭದ ವೇಳೆ ತಿಳಿಸಿದರು.

ನೀರಜ್ ಚೋಪ್ರಾ

'ಜಿಲ್ಲಾ ಮಟ್ಟದಲ್ಲೂ ಜಾವೆಲಿನ್ ಸ್ಪರ್ಧೆ ಹಮ್ಮಿಕೊಳ್ಳಲಾಗುತ್ತದೆ. ಎಲ್ಲಾ ಫೆಡರೇಷನ್‌ಗಳಿಗೂ ಅಗತ್ಯವಿರುವ ಜಾವೆಲಿನ್‌ಗಳನ್ನು ನಾವೇ ಪೂರೈಸಲಿದ್ದೇವೆ' ಎಂದು ಹೇಳಿದರು.

ಎಎಫ್‌ಐ 2018ರಲ್ಲಿ ರಾಷ್ಟ್ರೀಯ ಜಾವೆಲಿನ್ ಥ್ರೋ ಚಾಂಪಿಯನ್‌ಷಿಪ್ ಶುರುಮಾಡಿತ್ತು. ಇದರ ಮೂರನೇ ಆವೃತ್ತಿ ಅಕ್ಟೋಬರ್‌ನಲ್ಲಿ ನಡೆಯಲಿದೆ.

ಬುಧವಾರ, ಆಗಸ್ಟ್ 11, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 223 | ಪುಟ 18
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಸ್ಮಾರ್ಟ್‌ವಾಚ್‌ನಲ್ಲಿನ ವಿಷಕಾರಿ ಅಂಶಗಳ ವಿಲೇವಾರಿ ತಪ್ಪಿಸುವ ಸಲುವಾಗಿ ಹೊಸ ಬಗೆಯ ಸ್ಮಾರ್ಟ್‌ವಾಚ್ ಒಂದು ಬರಲಿದೆ. ಇದು ನೀರಿನಲ್ಲಿ ಕರಗುವ ಸ್ಮಾರ್ಟ್‌ವಾಚ್!

ಆಳ–ಅಗಲ
ಒಲಿಂಪಿಕ್ ವರ್ಷದಲ್ಲೇ ಕ್ರೀಡಾ ಬಜೆಟ್ ಕಡಿತ

ಈಶ್ವರಪ್ಪ ಅವಾಚ್ಯ ಪದ ಬಳಕೆ: ತಿರುಗಿಬಿದ್ದ ಕಾಂಗ್ರೆಸ್ 5
ಸಾಮಾಜಿಕ ಮಾಧ್ಯಮಗಳಲ್ಲಿನ ಚರ್ಚೆಗೆ 'ಸುಪ್ರೀಂ' ಕಿಡಿ 6

ಸೆನ್ಸೆಕ್ಸ್	ನಿಫ್ಟಿ	₹/$
54,554 ▲	16,280 ▲	74.43 ▼

ಅಪರಾಧ ದಾಖಲೆ ಬಹಿರಂಗ ಪಡಿಸದೇ ಆದೇಶ ಉಲ್ಲಂಘನೆ: ನ್ಯಾಯಪೀಠ ಚಾಟಿ

ರಾಜಕೀಯ ಪಕ್ಷಗಳಿಗೆ 'ಸುಪ್ರೀಂ' ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ತಮ್ಮ ಪಕ್ಷದ ಚುನಾವಣಾ ಅಭ್ಯರ್ಥಿಗಳ ಅಪರಾಧ ಹಿನ್ನೆಲೆಯನ್ನು ಬಹಿರಂಗಪಡಿಸದ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳಿಗೆ, ಸುಪ್ರೀಂ ಕೋರ್ಟ್ ಮಂಗಳವಾರ ದಂಡ ವಿಧಿಸಿದೆ.

'ಅಭ್ಯರ್ಥಿಗಳ ಅಪರಾಧ ಹಿನ್ನೆಲೆಯನ್ನು ಹಾಗೂ ಅವರನ್ನು ಆಯ್ಕೆ ಮಾಡಿದ್ದಕ್ಕೆ ಕಾರಣವನ್ನು ಬಹಿರಂಗಪಡಿಸದೇ, ಈ ಪಕ್ಷಗಳು ನ್ಯಾಯಾಂಗ ನಿಂದನೆ ಎಸಗಿವೆ' ಎಂದು ನ್ಯಾಯಮೂರ್ತಿಗಳಾದ ಆರ್.ಎಫ್. ನರೀಮನ್ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ನ್ಯಾಯಪೀಠ ಹೇಳಿದೆ.

ರಾಜಕೀಯ ಅಪರಾಧೀಕರಣವನ್ನು ತಡೆಯುವ ನಿಟ್ಟಿನಲ್ಲಿ, ಅಪರಾಧಿಗಳು ರಾಜಕಾರಣಕ್ಕೆ ಪ್ರವೇಶಿಸದಂತೆ ತಡೆಯಲು ಕಾನೂನಿಗೆ ತಿದ್ದುಪಡಿ ಆಗುವ ಅಗತ್ಯವಿದೆ ಎಂಬುದನ್ನು ಒತ್ತಿ ಹೇಳಿದ ನ್ಯಾಯಪೀಠ, ರಾಜಕೀಯದಲ್ಲಿನ ಅಪರಾಧೀಕರಣ ಎಂಬ ಕ್ಯಾನ್ಸರ್ ಅನ್ನು ಕಿತ್ತು ಹಾಕಬೇಕಿದೆ ಎಂದು ಕಟು ಮಾತುಗಳಲ್ಲಿ ಹೇಳಿತು.

ಈ ಬಗೆಗಿನ ಅರ್ಜಿಯೊಂದರ ವಿಚಾರಣೆ ನಡೆಸಿದ ನ್ಯಾಯಪೀಠ, ಅಭ್ಯರ್ಥಿಗಳ ಮಾಹಿತಿ ಬಹಿರಂಗಕ್ಕೆ ಸಂಬಂಧಿಸಿದಂತೆ 2020ರ ಫೆ.13ರಂದು ಸುಪ್ರೀಂ ಕೋರ್ಟ್ ಹೊರಡಿಸಿದ ಆದೇಶವನ್ನು ಕಾಂಗ್ರೆಸ್, ಬಿಜೆಪಿ ಸೇರಿದಂತೆ ಪ್ರಮುಖ ರಾಜಕೀಯ ಪಕ್ಷಗಳು ಉಲ್ಲಂಘಿಸಿದ್ದಾಗಿ ಹೇಳಿತು. ಜೆಡಿಯು, ಆರ್‌ಜೆಡಿ, ಲೋಕಜನಶಕ್ತಿ, ಕಾಂಗ್ರೆಸ್, ಬಿಜೆಪಿ ಹಾಗೂ ಸಿಪಿಐ ಪಕ್ಷಗಳಿಗೆ ತಲಾ ₹1 ಲಕ್ಷ ರೂಪಾಯಿಯನ್ನು ಹಾಗೂ ಸಿಪಿಎಂ ಮತ್ತು ಎನ್‌ಸಿಪಿ ಪಕ್ಷಗಳಿಗೆ ತಲಾ ₹ 5 ಲಕ್ಷ ದಂಡ ವಿಧಿಸಿತು.

6ನೇ ಪುಟ ನೋಡಿ

ದೇಶದ ಸಹನೆ ಮೀರುತ್ತಿದೆ

ರಾಜಕೀಯ ಕ್ಷೇತ್ರವು ದಿನದಿಂದ ದಿನಕ್ಕೆ ಕಲುಷಿತವಾಗುತ್ತಿರುವುದನ್ನು ನೋಡುತ್ತಿದ್ದೇವೆ. ಆದರೆ, ಇದನ್ನು ಸ್ವಚ್ಛಗೊಳಿಸುವುದು ಶಾಸಕಾಂಗದ ಆದ್ಯತೆಯಾಗದೇ ಇರುವುದರಿಂದ ದೇಶವು ಅದನ್ನು ಸುಮ್ಮನೇ ನೋಡುತ್ತಲೇ ಇದ್ದು, ಸಹನೆ ಕಳೆದುಕೊಳ್ಳುತ್ತಿದೆ ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿತು.

ಅಪರಾಧ ಹಿನ್ನೆಲೆಯ ವ್ಯಕ್ತಿಗಳು ಕಾನೂನು ರೂಪಿಸುವ ಸ್ಥಾನದಲ್ಲಿ ಇರಲು ಅವಕಾಶ ನೀಡಬಾರದು. ಆದರೆ, ಅಪರಾಧಿಗಳು ರಾಜಕೀಯಕ್ಕೆ ಬರುವುದನ್ನು ತಡೆಯುವ ನಿಟ್ಟಿನಲ್ಲಿ ಸೂಕ್ತ ತಿದ್ದುಪಡಿ ತರುವಂತೆ ನ್ಯಾಯಾಲಯವು ಪದೇ ಪದೇ ಮನವಿ ಮಾಡಿದರೂ ಅದನ್ನು ಕೇಳಿಸಿಕೊಳ್ಳಬೇಕಾದ ಕಿವಿ ಕಿವುಡಾಗಿವೆ. ರಾಜಕೀಯ ಪಕ್ಷಗಳೂ ಗಾಢ ನಿದ್ದೆಯಿಂದ ಏಳಲು ಬಯಸುತ್ತಿಲ್ಲ ಎಂದು ಚಾಟಿ ಬೀಸಿತು. ಇದನ್ನು ತಡೆಯಲು ತುರ್ತಾಗಿ ಏನಾದರೂ ಮಾಡಬೇಕೆಂದು ನ್ಯಾಯಾಲಯವು ಇಚ್ಛಿಸಿದರೂ, ಅದರ ಕೈಗಳನ್ನು ಕಟ್ಟಿಹಾಕಲಾಗಿದೆ. ನ್ಯಾಯಾಲಯವು, ಕಾನೂನು ಮಾಡುವಂತೆ ಹೇಳಬಹುದೇ ಹೊರತು, ಶಾಸಕಾಂಗದ ಕರ್ತವ್ಯಕ್ಕೆ ಮೀಸಲಾದ ಕ್ಷೇತ್ರವನ್ನು ಅತಿಕ್ರಮಿಸಲಾಗದು ಎಂದು ಅಭಿಪ್ರಾಯಪಟ್ಟಿತು.

ಪ್ರಕರಣ ಹಿಂಪಡೆಯಲು ಹೈಕೋರ್ಟ್ ಅನುಮತಿ ಕಡ್ಡಾಯ

ಹಾಲಿ/ ಮಾಜಿ ಸಂಸದರು ಹಾಗೂ ಶಾಸಕರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳನ್ನು ಆಯಾ ರಾಜ್ಯಗಳ ಹೈಕೋರ್ಟ್‌ಗಳ ಅನುಮತಿ ಇಲ್ಲದೆಯೇ ಹಿಂಪಡೆಯುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ಆದೇಶ ನೀಡಿದೆ. ಅಲ್ಲದೇ, ಸಂಸದರು ಮತ್ತು ಶಾಸಕರ ವಿರುದ್ಧದ ಪ್ರಕರಣಗಳ ವಿಚಾರಣೆ ಮುಗಿಯುವವರೆಗೆ, ಅವರ ವಿರುದ್ಧದ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಲಯಗಳ ನ್ಯಾಯಮೂರ್ತಿಗಳನ್ನು ವರ್ಗಾವಣೆ ಮಾಡಬಾರದು ಎಂದೂ ಸುಪ್ರೀಂಕೋರ್ಟ್ ಹೇಳಿದೆ.

ಬಿಜೆಪಿ ಮುಖಂಡ ಹಾಗೂ ವಕೀಲ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿದ್ದ ಪಿಐಎಲ್ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ವಿನೀತ್ ಶರಣ್ ಹಾಗೂ ಸೂರ್ಯಕಾಂತ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ವಿಶೇಷ ಪೀಠಕ್ಕೆ ಚಿಂತನೆ: ರಾಜಕಾರಣಿಗಳ ವಿರುದ್ಧದ ಪ್ರಕರಣಗಳ ಮೇಲ್ವಿಚಾರಣೆಗಾಗಿ ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ಪೀಠ ಸ್ಥಾಪಿಸುವ ಚಿಂತನೆ ನಡೆದಿದೆ ಎಂದೂ ನ್ಯಾಯಪೀಠ ಹೇಳಿದೆ

6ನೇ ಪುಟ ನೋಡಿ

ಪಕ್ಷಭೇದ ಮರೆತು ಧ್ವನಿಮತದ ಮೂಲಕ ಲೋಕಸಭೆ ಅನುಮೋದನೆ

ಪ್ರತ್ಯೇಕ ಒಬಿಸಿ ಪಟ್ಟಿ: ಮಸೂದೆಗೆ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಗಳಿಗೆ ಪ್ರತ್ಯೇಕವಾಗಿ ತಮ್ಮದೇ ಆದ ಇತರೆ ಹಿಂದುಳಿದ ವರ್ಗಗಳ ಪಟ್ಟಿಯನ್ನು (ಒಬಿಸಿ) ಸಿದ್ಧಪಡಿಸಿಕೊಳ್ಳಲು ಅಧಿಕಾರ ನೀಡುವ, ಸಾಂವಿಧಾನಿಕ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಪಕ್ಷಭೇದ ಮರೆತು ಧ್ವನಿಮತದ ಮೂಲಕ ಅಂಗೀಕಾರ ನೀಡಲಾಯಿತು. ಉಳಿದಂತೆ ಪೆಗಾಸಸ್ ವಿಚಾರವಾಗಿ, ದಿನದ ಕಲಾಪ ಕಳೆದುಹೋಯಿತು.

385 ಸದಸ್ಯರ ಒಪ್ಪಿಗೆ ಸಿಕ್ಕಿತು. ಯಾರೂ ಆಕ್ಷೇಪ ಎತ್ತಲಿಲ್ಲ. ಆದರೆ ವಿರೋಧ ಪಕ್ಷದ ಸದಸ್ಯರು ಮಂಡಿಸಿದ ಕೆಲವು ತಿದ್ದುಪಡಿಗಳನ್ನು ಸದನ ತಿರಸ್ಕರಿಸಿತು. ಸಾಂವಿಧಾನಿಕ ತಿದ್ದುಪಡಿ ಮಸೂದೆ ಅಂಗೀಕಾರಕ್ಕೆ ಸಂಸತ್ತಿನ ಉಭಯ ಸದನಗಳಲ್ಲಿ ಬಹುಮತದ ಅಗತ್ಯವಿದೆ.

> **ಈ ಸಂವಿಧಾನ ತಿದ್ದುಪಡಿ ಮಸೂದೆಯನ್ನು ತರದಿದ್ದರೆ, ದೇಶದ 671 ಒಬಿಸಿ ಸಮುದಾಯಗಳಿಗೆ ಮೀಸಲಾತಿ ಸಿಗುತ್ತಿರಲಿಲ್ಲ**
> **ವೀರೇಂದ್ರ ಕುಮಾರ್,** ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ

> **ನಾವು ಮಸೂದೆ ಬೆಂಬಲಿಸುತ್ತೇವೆ. ಆದರೆ ಮೀಸಲಾತಿಯ ಮೇಲಿರುವ ಶೇ 50ರ ಮಿತಿ ತೆಗೆದು ಹಾಕಿ, ಅದನ್ನು ಕಾನೂನು ಬದ್ಧಗೊಳಿಸಬೇಕು.**
> **ಅಧೀರ್ ರಂಜನ್ ಚೌಧರಿ**
> ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ

'ಸಂವಿಧಾನ (127ನೇ ತಿದ್ದುಪಡಿ) ಮಸೂದೆ–2021' ಚರ್ಚೆಯ ಸಂದರ್ಭದಲ್ಲಿ, ಕಾಂಗ್ರೆಸ್ ಸೇರಿದಂತೆ ಹಲವು ವಿರೋಧ ಪಕ್ಷಗಳು ಮೀಸಲಾತಿಯ ಮೇಲಿನ ಶೇ 50ರ ಮಿತಿಯನ್ನು ತೆಗೆದುಹಾಕಬೇಕೆಂದು ಒತ್ತಾಯಿಸಿದವು. ಆದರೆ ಸರ್ಕಾರವು, ಸಾಮಾಜಿಕ ನ್ಯಾಯದ ಬಗೆಗಿನ ತನ್ನ ಬದ್ಧತೆಯನ್ನು ಒತ್ತಿಹೇಳಿತು.

ಜುಲೈ 19ರಂದು ಸಂಸತ್ತಿನ ಮುಂಗಾರು ಅಧಿವೇಶನ ಆರಂಭವಾದ ನಂತರ ಮೊದಲ ಬಾರಿಗೆ ಕಲಾಪವು ಕ್ರಮಬದ್ಧ ಚರ್ಚೆಗೆ ಸಾಕ್ಷಿಯಾಯಿತು. ಪೆಗಾಸಸ್ ಗೂಢಚರ್ಯೆ ಬಗ್ಗೆ ಚರ್ಚೆಗೆ ಪಟ್ಟು ಹಿಡಿದಿರುವ ಪ್ರತಿಪಕ್ಷಗಳು, ಮಸೂದೆಗೆ ಅಂಗೀಕಾರ ನೀಡುವ ಸಂದರ್ಭದಲ್ಲಿ ಪ್ರತಿಭಟನೆ ಸ್ಥಗಿತಗೊಳಿಸಿದ್ದವು.

6ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

29,21,049 ▲	ಒಟ್ಟು ಸೋಂಕಿತರು (29,03,137 ನಿನ್ನೆಯ ವಿವರ)
22,676 ▼	ಸಕ್ರಿಯ ಪ್ರಕರಣಗಳು
28,61,499 ▲	ಗುಣಮುಖರಾದವರು
36,848 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,338 ▲
ಗುಣಮುಖ	1,947 ▲
ಸಾವು	31 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

₹ 80 ಕೋಟಿ ಮೌಲ್ಯದ 'ತಿಮಿಂಗಿಲ ವಾಂತಿ' ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುರಾತನ ವಸ್ತುಗಳನ್ನು ಸಂಗ್ರಹಿಸಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದ ಐವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಅವರಿಂದ ₹ 80 ಕೋಟಿ ಮೌಲ್ಯದ ತಿಮಿಂಗಿಲ ವಾಂತಿ (ಅಂಬೆರ್ಗ್ರಿಸ್) ಜಪ್ತಿ ಮಾಡಿದ್ದಾರೆ.

ಬೆಂಗಳೂರಿನ ಮಜೀಬ್ ಪಾಷಾ (48), ಮಹಮ್ಮದ್ ಮುನ್ನಾ (45), ಗುಲಾಬ್ ಚಂದ್ ಅಲಿಯಾಸ್ ಗುಡ್ಡು (40), ಎಂ. ಸಂತೋಷ್ (31) ಹಾಗೂ ರಾಯಚೂರಿನ ಜಗನ್ನಾಥಾಚಾರ್ (52) ಬಂಧಿತರು. ಅವರಿಂದ ತಿಮಿಂಗಿಲದ 80 ಕೆ.ಜಿ ವಾಂತಿ ಗಟ್ಟಿಗಳು, ಈಸ್ಟ್ ಇಂಡಿಯಾ ಕಂಪನಿಯ ಎರಡು ತಾಮ್ರದ ಬಾಟಲಿಗಳು ಹಾಗೂ 1818ರಲ್ಲಿ ಬಳಕೆಯಲ್ಲಿದ್ದ ಸ್ಟೀಮ್ ಫ್ಯಾನ್ ಜಪ್ತಿ ಮಾಡಲಾಗಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

3A ಪುಟ ನೋಡಿ

ಸಿಸಿಬಿ ಜಪ್ತಿ ಮಾಡಿರುವ ತಿಮಿಂಗಿಲ ವಾಂತಿ

ಲಸಿಕೆ ಬೇಡಿಕೆ: ಕೇಂದ್ರದ ಪ್ರತಿಕ್ರಿಯೆ ಕೇಳಿದ ಹೈಕೋರ್ಟ್

ಬೆಂಗಳೂರು: ಪ್ರತಿ ವಾರ 35 ಲಕ್ಷ ಡೋಸ್ ಕೋವಿಡ್ ಲಸಿಕೆ ಪೂರೈಸುವಂತೆ ರಾಜ್ಯ ಸರ್ಕಾರ ಸಲ್ಲಿಸಿರುವ ಬೇಡಿಕೆ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ. 3

ಒಳ ಪುಟಗಳು

ಸಾಹಸ ಕಲಾವಿದ ಸಾವು: ಮೂವರಿಗೆ ನ್ಯಾಯಾಂಗ ಬಂಧನ 5
ರಾಜ್ಯಸಭೆ: ಮತ ಹಾಕುವ ವೇಳೆ ಗೈರಾದವರ ವಿವರ ಕೇಳಿದ ಮೋದಿ 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಾವಿರಾರು ರೂಪಾಯಿ ಪಾವತಿಸಿ ಲಸಿಕೆ ಪಡೆಯಲು ಜನತೆ ಹಿಂದೇಟು

ಖಾಸಗಿ ಆಸ್ಪತ್ರೆ: ಕೇಳುವವರಿಲ್ಲ ಲಸಿಕೆ !

• ವರುಣ ಹೆಗಡೆ

ಬೆಂಗಳೂರು: ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆಯ ದಾಸ್ತಾನು ಇದ್ದರೂ ಕೇಳುವವರಿಲ್ಲದಂತಾಗಿದೆ. ಸಾವಿರಾರು ರೂಪಾಯಿ ಪಾವತಿಸಬೇಕೆಂಬ ಕಾರಣಕ್ಕೆ ಜನರು ಹಿಂದೇಟು ಹಾಕಲಾರಂಭಿಸಿದ್ದಾರೆ. ಹೀಗಾಗಿ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳಲ್ಲಿ ಲಸಿಕೆಗೆ ಬೇಡಿಕೆ ಹೆಚ್ಚತೊಡಗಿದೆ.

ಸದ್ಯ ನಗರದಲ್ಲಿ ಪ್ರತಿನಿತ್ಯ ಸರಾಸರಿ 60 ಸಾವಿರದಿಂದ 70 ಸಾವಿರ ಡೋಸ್ ಲಸಿಕೆ ನೀಡಲಾಗುತ್ತಿದೆ. ಕೋವಿಡ್ ಮೂರನೇ ಅಲೆಯ ಬಗ್ಗೆ ತಜ್ಞರು ಮುನ್ಸೂಚನೆ ನೀಡಿರುವುದರಿಂದ ಸರ್ಕಾರಿ ಲಸಿಕಾ ಕೇಂದ್ರಗಳ ಆವರಣದಲ್ಲಿ ಜನರ ಸಾಲು ಬೆಳೆಯತೊಡಗಿದೆ. 392 ಸರ್ಕಾರಿ ಆರೋಗ್ಯ ಕೇಂದ್ರಗಳು ಹಾಗೂ 294 ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ವಿತರಿಸಲಾಗುತ್ತಿದೆ. ಕೆಲ ಕಂಪನಿಗಳು ಹಾಗೂ ಕಾರ್ಖಾನೆಗಳು ಬಿಬಿಎಂಪಿ ಸಹಯೋಗದಲ್ಲಿ ಸಿಬ್ಬಂದಿಗೆ ಲಸಿಕೆ ಒದಗಿಸಲು ಪ್ರತ್ಯೇಕ ಶಿಬಿರವನ್ನೂ ಏರ್ಪಡಿಸುತ್ತಿವೆ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆಗೆ ಬೇಡಿಕೆ ಇಲ್ಲದಂತಾಗಿದೆ.

ಪ್ರಾರಂಭಿಕ ದಿನಗಳಲ್ಲಿ ಲಸಿಕೆಯನ್ನು ಖಾಸಗಿ ಕೇಂದ್ರಗಳಿಗೆ ಹಂಚಿಕೆ ಮಾಡಿದ ಸರ್ಕಾರ, ಪ್ರತಿ ಡೋಸ್‌ಗೆ ಸೇವಾ ಶುಲ್ಕ ₹ 100 ಪಡೆಯಲು ಅವಕಾಶ ನೀಡಿತ್ತು. ನಂತರ ಕಂಪನಿಗಳಿಂದ ನೇರವಾಗಿ ಖರೀದಿಸಿ, ವಿತರಿಸಲು ಸೂಚಿಸಲಾಗಿತ್ತು. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಲಸಿಕೆಗೆ ದಿಢೀರ್ ಬೇಡಿಕೆ ಹೆಚ್ಚಿ, ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು. ಇದರಿಂದಾಗಿ ಕೆಲ ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಮಾತ್ರ ಲಸಿಕೆ ಲಭ್ಯವಾಗುತ್ತಿತ್ತು. ಕೋವಿನ್ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿ, ಹಣ ಪಾವತಿಸಲು ಮುಂದಾದರೂ ಕಾಯಬೇಕಾದ ಪರಿಸ್ಥಿತಿಯಿತ್ತು.

ಲಸಿಕೆ ಹಂಚಿಕೆಯಲ್ಲಿನ ಸಮಸ್ಯೆಗೆ ಈಗ ಪರಿಹಾರ ಒದಗಿಸಿರುವ ಕೇಂದ್ರ ಸರ್ಕಾರ, ಕೋವಿನ್ ಪೋರ್ಟಲ್ ಮೂಲಕ ಉತ್ಪಾದನಾ ಕಂಪನಿಗಳಿಗೆ ಬೇಡಿಕೆ ಸಲ್ಲಿಸುವ ವ್ಯವಸ್ಥೆ ಕಲ್ಪಿಸಿದೆ. ಇದರಿಂದಾಗಿ ಖಾಸಗಿ ಕೇಂದ್ರಗಳಿಗೆ ಹಣ ಪಾವತಿಸಿದ ಬಳಿಕ ಲಸಿಕೆ ಪೂರೈಕೆಯಾಗುತ್ತಿದೆ. ಆದರೆ, ಲಸಿಕೆ ಪಡೆಯಲು ಬರುವವರ ಸಂಖ್ಯೆ ಗಣನೀಯವಾಗಿ ಇಳಿಕೆ ಕಂಡಿರುವುದರಿಂದ ಕೆಲ ಆಸ್ಪತ್ರೆಗಳು ಲಸಿಕೆ ಖರೀದಿಗೆ ಹಿಂದೇಟು ಹಾಕಲಾರಂಭಿಸಿವೆ.

ಬಾರದ ಜನತೆ: ಖಾಸಗಿ ಆಸ್ಪತ್ರೆಗಳು ಸದ್ಯ 'ಕೋವಿಶೀಲ್ಡ್' ಲಸಿಕೆಯ ಪ್ರತಿ ಡೋಸ್‌ಗೆ ₹ 750 ನಿಗದಿಪಡಿಸಿವೆ. 'ಕೋವ್ಯಾಕ್ಸಿನ್' ಲಸಿಕೆಗೆ ₹ 1,410 ಹಾಗೂ 'ಸ್ಪುಟ್ನಿಕ್' ಲಸಿಕೆಗೆ ₹ 1,145 ಗೊತ್ತುಪಡಿಸಿವೆ. ಇದರ ಜತೆಗೆ ಪ್ರತಿ ಡೋಸ್ ಲಸಿಕೆಗೆ ಸೇವಾ ಶುಲ್ಕ ₹ 200 ಪಾವತಿಸಬೇಕಾಗುತ್ತದೆ. ಹಾಗಾಗಿ, ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆಗೆ ಬೇಡಿಕೆ ಇಲ್ಲದಂತಾಗಿದೆ.

'ಹಣಕೊಟ್ಟು ಲಸಿಕೆ ಪಡೆಯಲು ಜನರು ಮುಂದೆ ಬರುತ್ತಿಲ್ಲ. ಹಾಗಾಗಿ, ಸರ್ಕಾರವೇ ನಮ್ಮ ಕೇಂದ್ರಗಳಿಗೆ ಲಸಿಕೆಯನ್ನು ಈ ಮೊದಲಿನಂತೆ ಒದಗಿಸಿದಲ್ಲಿ ಸೇವಾ ಶುಲ್ಕವನ್ನು ಮಾತ್ರ ಪಡೆದು, ಲಸಿಕೆ ನೀಡಲು ಸಿದ್ಧವಿದ್ದೇವೆ. ಇದರಿಂದ ಲಸಿಕಾ ಅಭಿಯಾನಕ್ಕೆ ಕೂಡ ವೇಗ ದೊರೆಯಲಿದೆ. ಸರ್ಕಾರಿ ಕೇಂದ್ರಗಳ ಮುಂದೆ ದಿನವಿಡೀ ಕಾಯುವುದು ಕೂಡ ತಪ್ಪುತ್ತದೆ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

ಅರ್ಧದಷ್ಟು ಲಸಿಕೆ ಖರೀದಿ

ಕೇಂದ್ರ ಸರ್ಕಾರವು ಜುಲೈ ತಿಂಗಳಲ್ಲಿ ರಾಜ್ಯಕ್ಕೆ ಹಂಚಿಕೆ ಮಾಡಿದ್ದ 60 ಲಕ್ಷ ಡೋಸ್‌ಗಳಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಶೇ 25ರಷ್ಟು ನಿಗದಿಪಡಿಸಲಾಗಿತ್ತು. ಖರೀದಿಸಬೇಕಾದ 15 ಲಕ್ಷ ಡೋಸ್‌ಗಳಲ್ಲಿ 7.20 ಲಕ್ಷ ಡೋಸ್‌ಗಳನ್ನು ಮಾತ್ರ ಖರೀದಿಸಿವೆ. ಹಣ ಪಾವತಿಸಿದ ಬಳಿಕ ಪೂರೈಕೆಯಲ್ಲಿ ವಿಳಂಬ, ಜನರ ನಿರಾಸಕ್ತಿಯಿಂದಾಗಿ ಉಳಿದ ಡೋಸ್‌ಗಳನ್ನು ಖಾಸಗಿ ಆಸ್ಪತ್ರೆಗಳು ಖರೀದಿಸಿಲ್ಲ.

ಪ್ರಜಾವಾಣಿ ವಿಶೇಷ

ಲಸಿಕೆಗೆ ಬೇಡಿಕೆ ಇದ್ದಾಗ ನಮಗೆ ಸಮರ್ಪಕವಾಗಿ ಪೂರೈಕೆಯಾಗಲಿಲ್ಲ. ಈಗ ಲಸಿಕೆಯ ದಾಸ್ತಾನು ತಕ್ಕಮಟ್ಟಿಗೆ ಇದ್ದರೂ ಜನ ಬರುತ್ತಿಲ್ಲ

ಡಾ. ಪ್ರಸನ್ನ ಎಚ್.ಎಂ., ಫನಾ ಅಧ್ಯಕ್ಷ

ಅಂಕಿ-ಅಂಶಗಳು

71.20 ಲಕ್ಷ ಈವರೆಗೆ ಮೊದಲ ಡೋಸ್ ಪಡೆದವರು

19.59 ಲಕ್ಷ ಎರಡೂ ಡೋಸ್ ಪೂರ್ಣಗೊಳಿಸಿದವರು

'ಕೋವಿಡ್ ತಡೆಗೆ ಕಟ್ಟುನಿಟ್ಟಿನ ಕ್ರಮ'

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ಸಂಭವನೀಯ ಮೂರನೇ ಅಲೆ ತಡೆಗೆ ಅನೇಕ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಬೆಂಗಳೂರಿನ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಮಕ್ಕಳ ಆಸ್ಪತ್ರೆ ತೆರೆಯಲು ಸೂಚನೆ ನೀಡಲಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಅಮೆರಿಕದಲ್ಲಿ ಕೋವಿಡ್ ಮೂರನೇ ಅಲೆಯಿಂದ ಆಸ್ಪತ್ರೆಗಳು ತುಂಬಿ ತುಳುಕುತ್ತಿವೆ. ನೆರೆಯ ಕೇರಳದಲ್ಲಿಯೂ ಪ್ರಕರಣಗಳು ಹೆಚ್ಚಿದೆ. ರಾಜ್ಯದಲ್ಲಿ ಕಾಣಿಸದಂತೆ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಬುಧವಾರದಿಂದ ಮಂಗಳೂರು, ಉಡುಪಿ ಪ್ರವಾಸ ಕೈಗೊಳ್ಳಲಿರುವ ಮುಖ್ಯಮಂತ್ರಿ, ಅಲ್ಲಿನ ಕೋವಿಡ್ ಸ್ಥಿತಿಗತಿಯನ್ನು ಪರಿಶೀಲಿಸಲಿದ್ದಾರೆ. ಬೆಂಗಳೂರಿನಲ್ಲಿ ಖಾಸಗಿ ಆಸ್ಪತ್ರೆಗಳಿಗೆ ತಾತ್ಕಾಲಿಕವಾಗಿ ಹಾಸಿಗೆಗಳನ್ನು ವಾಪಸು ನೀಡಲಾಗಿದೆ. ಅಗತ್ಯಬಿದ್ದರೆ ಮತ್ತೆ ಪಡೆಯುತ್ತೇವೆ' ಎಂದರು.

ಹೆಸರು ಬದಲು ಚರ್ಚೆ ಆಗಿಲ್ಲ: 'ಇಂದಿರಾ ಕ್ಯಾಂಟೀನ್ ಹೆಸರು ಬದಲಾಯಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿಲ್ಲ' ಎಂದರು.

ಕೋವಿಡ್ ಅಂಕಿ-ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.44 ಕೋಟಿ ▲	3.20 ಕೋಟಿ ▲
ಸಕ್ರಿಯ ಪ್ರಕರಣ	1.65 ಕೋಟಿ ▲	3.80 ಲಕ್ಷ ▼
ಗುಣಮುಖ	18.36 ಕೋಟಿ ▲	3.12 ಕೋಟಿ ▲
ಸಾವು	43.22 ಲಕ್ಷ ▲	4.29 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.27 ಲಕ್ಷ ▲	36,309 ▲
ಗುಣಮುಖ	5.11 ಲಕ್ಷ ▲	37,237 ▲
ಸಾವು	8,047 ▲	468 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

1.02 ಲಕ್ಷ ಅಮೆರಿಕ; 40,808 ▲ ಇರಾನ್; 25,090 ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

62.23 ▼ ಅಮೆರಿಕ; 6.75 ▼ ಬ್ರೆಜಿಲ್; 12.95 ▼ ಬ್ರಿಟನ್

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.34 ಲಕ್ಷ ಮಹಾರಾಷ್ಟ್ರ; 34,367 ▲ ತಮಿಳುನಾಡು; 25,068 ▲ ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

63.63 ಮಹಾರಾಷ್ಟ್ರ ▲; 35.86 ಕೇರಳ ▲; 25.79 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

'ಕನ್ನಡ ಪುಸ್ತಕೋದ್ಯಮ ಚೇತರಿಕೆ ನಿರೀಕ್ಷೆ'

ಬೆಂಗಳೂರು: 'ಸರ್ಕಾರದ ಸಭೆ ಮತ್ತು ಸಮಾರಂಭಗಳಲ್ಲಿ ಹೂಗುಚ್ಛ, ಹಾರ ಹಾಗೂ ಶಾಲಿನ ಬದಲು ಕನ್ನಡ ಪುಸ್ತಕಗಳನ್ನು ನೀಡಲು ಸರ್ಕಾರ ಆದೇಶಿಸಿರುವುದರಿಂದ ಕನ್ನಡ ಪುಸ್ತಕೋದ್ಯಮ ಚೇತರಿಕೆ ಕಾಣುವ ನಿರೀಕ್ಷೆಯಿದೆ' ಎಂದು ಕರ್ನಾಟಕ ಪ್ರಕಾಶಕರ ಸಂಘ ಸಂತಸ ವ್ಯಕ್ತಪಡಿಸಿದೆ.

'ಪುಸ್ತಕೋದ್ಯಮದ ಹಿತದೃಷ್ಟಿಯಿಂದ ಸರ್ಕಾರದ ಈ ನಡೆ ಶ್ಲಾಘನೀಯ. ಈ ಹಿಂದೆ ಹಲವಾರು ಬಾರಿ ಈ ಬಗ್ಗೆ ಮನವಿ ಸಲ್ಲಿಸಿದ್ದರೂ ಕಾರ್ಯಗತವಾಗಿರಲಿಲ್ಲ. ಈಗ ಲಿಖಿತ ರೂಪದಲ್ಲಿ ಆದೇಶ ಮಾಡಿರುವುದು ಪುಸ್ತಕೋದ್ಯಮದಲ್ಲಿ ಹರುಷವನ್ನು ತಂದಿದೆ. ಈ ಆದೇಶವನ್ನು ರಾಜಕೀಯ ವಲಯ ಹಾಗೂ ಆಡಳಿತ ವರ್ಗದವರು ಎಷ್ಟರ ಮಟ್ಟಿಗೆ ಅನುಷ್ಠಾನ ಮಾಡುತ್ತಾರೆ ಎನ್ನುವುದನ್ನು ಕಾದು ನೋಡಬೇಕಿದೆ' ಎಂದು ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ ತಿಳಿಸಿದ್ದಾರೆ.

ಕೋವಿಡ್: 309 ಕ್ಷಯ ರೋಗಿಗಳಿಗೆ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಲ್ಲಿನ 40,159 ಕ್ಷಯ ರೋಗಿಗಳಲ್ಲಿ ಈ ವರ್ಷ 309 ಮಂದಿ ಕೋವಿಡ್ ಪೀಡಿತರಾಗಿರುವುದನ್ನು ಪತ್ತೆ ಮಾಡಿದೆ.

ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಲ್ಲಿ ಕೂಡ ಕ್ಷಯ ರೋಗ ಕಾಣಿಸಿಕೊಳ್ಳುತ್ತಿರುವುದು ಪರೀಕ್ಷೆಗಳಿಂದ ದೃಢಪಟ್ಟಿದೆ. ಮೂರು ಜಿಲ್ಲೆಗಳಲ್ಲಿ 24 ಪ್ರಕರಣಗಳು ಈಗಾಗಲೇ ಖಚಿತಪಟ್ಟಿವೆ. ಇಲಾಖೆಯು ಕೋವಿಡ್‌ನಿಂದ ಚೇತರಿಸಿಕೊಂಡವರನ್ನು ಪರೀಕ್ಷಿಸಲು ಇದೇ 16ರಿಂದ 31ರವರೆಗೆ ರಾಜ್ಯದಾದ್ಯಂತ 15 ದಿನಗಳ ಕ್ಷಯ ರೋಗ ಪತ್ತೆ ಅಭಿಯಾನವನ್ನು ಹಮ್ಮಿಕೊಂಡಿದೆ.

ಮೈಸೂರಿನಲ್ಲಿ 12 ಮಂದಿ, ಕೊಡಗಿನಲ್ಲಿ 7 ಮಂದಿ ಹಾಗೂ ಚಾಮರಾಜನಗರದಲ್ಲಿ 5 ಮಂದಿಗೆ ಕೋವಿಡ್‌ನಿಂದ ಚೇತರಿಸಿಕೊಂಡ ಬಳಿಕ ಕ್ಷಯ ರೋಗ ಕಾಣಿಸಿಕೊಂಡಿದೆ. ಕೊಪ್ಪಳದಲ್ಲಿ 6 ಶಂಕಿತ ಪ್ರಕರಣಗಳು ವರದಿಯಾಗಿವೆ.

'ಕೊರೊನಾ ಮತ್ತು ಕ್ಷಯ ರೋಗಿಗಳಲ್ಲಿ ಕಾಣಿಸಿಕೊಳ್ಳುವ ಲಕ್ಷಣಗಳಲ್ಲಿ ಸಾಮ್ಯತೆಯಿದೆ. ಆದ್ದರಿಂದ ಕೋವಿಡ್‌ನಿಂದ ಚೇತರಿಸಿಕೊಂಡವರಿಗೆ ಪರೀಕ್ಷೆ ಮಾಡಲಾಗುತ್ತದೆ. ಕ್ಷಯ ರೋಗ ತಗಲಿರುವುದು ಖಚಿತಪಟ್ಟಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು. ಈ ತಪಾಸಣೆ ಕಾರ್ಯಕ್ಕೆ ಆರೋಗ್ಯ ಕಾರ್ಯಕರ್ತರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಳ್ಳಲಾಗುತ್ತದೆ' ಆರೋಗ್ಯ ಇಲಾಖೆ (ಟಿಬಿ ವಿಭಾಗ) ಜಂಟಿ ನಿರ್ದೇಶಕ ಡಾ. ರಮೇಶ್ ರೆಡ್ಡಿ ತಿಳಿಸಿದ್ದಾರೆ.

ನಗರದ ಕೋವಿಡ್ ಅಂಕಿ-ಅಂಶ

12,31,097 ▲ ಒಟ್ಟು ಪ್ರಕರಣಗಳು (12,30,782 ನಿನ್ನೆಯ ವಿವರ)

8,198 ▼ ಸಕ್ರಿಯ ಪ್ರಕರಣಗಳು

12,06,980 ▲ ಗುಣಮುಖರಾದವರು

15,918 ▲ ಒಟ್ಟು ಸಾವು

ಮಂಗಳವಾರದ ಏರಿಕೆ

ಹೊಸ ಪ್ರಕರಣ	315	▲
ಗುಣಮುಖ	492	▲
ಸಾವು	03	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

'ಕೋವಿಡ್ ತಡೆಗೆ ಲಾಕ್‌ಡೌನ್ ಪರಿಹಾರವಲ್ಲ'

ಬೆಂಗಳೂರು: 'ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿ ಮಾಡುವುದೇ ಪರಿಹಾರ ಅಲ್ಲ. ಅಗತ್ಯ ಮುಂಜಾಗ್ರತೆಗಳನ್ನು ಸರ್ಕಾರ ತೆಗೆದುಕೊಂಡರೆ, ಸೋಂಕು ಹರಡುವಿಕೆ ತಪ್ಪಿಸಬಹುದು' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

'ಸರ್ಕಾರ ಹೋಟೆಲ್ ಮಾಲೀಕರೊಂದಿಗೆ ಚರ್ಚಿಸದೆ, ರಾತ್ರಿ ಕರ್ಫ್ಯೂ, ವಾರಾಂತ್ಯ ಕರ್ಫ್ಯೂ ಹಾಗೂ ಲಾಕ್‌ಡೌನ್‌ನಂತಹ ತರಾತುರಿ ನಿರ್ಣಯಗಳನ್ನು ತೆಗೆದುಕೊಳ್ಳುವುದು ಸರಿಯಲ್ಲ. ವ್ಯಾಪಾರಿ ಸಮೂಹಕ್ಕೆ ಯಾವುದೇ ಅಡಚಣೆಯಾಗದಂತೆ ನೋಡಿಕೊಳ್ಳಲು ಆದ್ಯತೆ ನೀಡಬೇಕು' ಎಂದು ಸಲಹೆ ನೀಡಿದ್ದಾರೆ.

'ಗಡಿ ಪ್ರದೇಶಗಳಲ್ಲಿ ಇರುವ ಲೋಪದೋಷಗಳನ್ನು ಮೊದಲು ಸರಿಪಡಿಸಿ. ಆಸ್ಪತ್ರೆಗಳಲ್ಲಿ ಎಲ್ಲ ರೀತಿಯ ಸಿದ್ಧತೆಗಳನ್ನು ಚುರುಕುಗೊಳಿಸಬೇಕು. ಜನಸಾಮಾನ್ಯರು, ಕಾರ್ಮಿಕರು, ಗ್ರಾಹಕರು ಹಾಗೂ ಮಾಲೀಕರಿಗೆ ತೊಂದರೆಯಾಗದಂತೆ ನೋಡಿಕೊಂಡು, ಆತಿಥ್ಯ ಕ್ಷೇತ್ರ ಕುಸಿಯದಂತೆ ರಕ್ಷಿಸಬೇಕು' ಎಂದೂ ಹೇಳಿದ್ದಾರೆ.

ಲಸಿಕೆ ಬೇಡಿಕೆ: ಕೇಂದ್ರದ ಪ್ರತಿಕ್ರಿಯೆ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ವಾರ 35 ಲಕ್ಷ ಡೋಸ್ ಕೋವಿಡ್ ಲಸಿಕೆ ಪೂರೈಸುವಂತೆ ರಾಜ್ಯ ಸರ್ಕಾರ ಸಲ್ಲಿಸಿರುವ ಬೇಡಿಕೆ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಕೋವಿಡ್‌ಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಮತ್ತು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರನ್ನೊಳಗೊಂಡ ವಿಶೇಷ ಪೀಠದಲ್ಲಿ ಮಂಗಳವಾರ ನಡೆಯಿತು. ಲಸಿಕೆ ಪೂರೈಕೆಯಲ್ಲಿ ವ್ಯತ್ಯಯ ಆಗಿರುವುದರಿಂದ ಮೊದಲ ಡೋಸ್ ಪಡೆದವರಲ್ಲಿ 34.48 ಲಕ್ಷ ಜನರು ಗಡುವು ಮೀರಿದ ಬಳಿಕವೂ ಎರಡನೇ ಡೋಸ್ ಪಡೆಯಲು ಸಾಧ್ಯವಾಗಿಲ್ಲ ಎಂದು ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತು.

ಪ್ರತಿ ವಾರ 35 ಲಕ್ಷ ಡೋಸ್ ಲಸಿಕೆ ಪೂರೈಕೆಯಾದರೆ ಎಲ್ಲ ಅರ್ಹ ವ್ಯಕ್ತಿಗಳಿಗೂ ಮೂರು ತಿಂಗಳೊಳಗೆ ಲಸಿಕೆ ನೀಡಲು ತೀರ್ಮಾನಿಸಲಾಗಿದೆ. ಆದರೆ, ಕೋವಿಶೀಲ್ಡ್ ಮೊದಲ ಡೋಸ್ ಪಡೆದವರಲ್ಲಿ 27.22 ಲಕ್ಷ ಜನರು 12 ವಾರಗಳ ನಂತರವೂ ಎರಡನೇ ಡೋಸ್ ಪಡೆಯಲು ಸಾಧ್ಯವಾಗಿಲ್ಲ. ಕೋವ್ಯಾಕ್ಸಿನ್ ಮೊದಲ ಡೋಸ್ ಪಡೆದಿರುವ 7.26 ಲಕ್ಷ ಜನರು ನಾಲ್ಕು ವಾರಗಳ ಬಳಿಕವೂ ಎರಡನೇ ಡೋಸ್ ಪಡೆದಿಲ್ಲ ಎಂದು ಸರ್ಕಾರ ಲಿಖಿತ ಮಾಹಿತಿಯಲ್ಲಿ ತಿಳಿಸಿದೆ.

'ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗಳನ್ನು ಮೊದಲ ಡೋಸ್ ಪಡೆದ ನಂತರ ನಿರ್ದಿಷ್ಟ ಕಾಲಮಿತಿಯೊಳಗೆ ಎರಡನೇ ಡೋಸ್ ಪಡೆದರೆ ಮಾತ್ರವೇ ಪರಿಣಾಮಕಾರಿಯಾಗಿರುತ್ತವೆ. ಆದ್ದರಿಂದ, ಬಾಕಿ ಇರುವ ಎಲ್ಲರಿಗೂ ತ್ವರಿತವಾಗಿ ಎರಡನೇ ಡೋಸ್ ಲಸಿಕೆ ನೀಡಲು ಕ್ರಿಯಾಯೋಜನೆ ರೂಪಿಸಿ, ಕಾರ್ಯತತ್ಪರವಾಗಲೇಬೇಕು' ಎಂದು ನ್ಯಾಯಪೀಠ ಸೂಚಿಸಿತು.

ಶಾಲಾ, ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಪೈಕಿ ಶೇಕಡ 84.1ರಷ್ಟು ಜನರಿಗೆ ಕೋವಿಡ್ ಲಸಿಕೆ ನೀಡಲಾಗಿದೆ ಎಂದು ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿದೆ.

200 ಹಾಸಿಗೆಗಳ ಕೇಂದ್ರ ನಿರ್ಮಾಣ

ಬೆಂಗಳೂರು: ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ 200 ಹಾಸಿಗೆಗಳ ಕೋವಿಡ್ ಚಿಕಿತ್ಸಾ ನಿರ್ಧಾರ ಕೇಂದ್ರವನ್ನು (ಟ್ರಯಾಜ್ ಸೆಂಟರ್) ನಿರ್ಮಿಸಲಾಗಿದ್ದು, ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿದೆ.

ಎರಡನೇ ಅಲೆ ಕಾಣಿಸಿಕೊಂಡ ಬಳಿಕ ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೆ.ಸಿ.ಜನರಲ್ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನು ನಿರ್ಮಿಸಲಾಗಿತ್ತು. ಮೂರನೇ ಅಲೆಯಲ್ಲಿ ಚಿಕಿತ್ಸೆಗೆ ಸಮಸ್ಯೆಯಾಗಬಾರದೆಂದು ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಕೂಡ ಈ ಕೇಂದ್ರವನ್ನು ನಿರ್ಮಿಸಲಾಗಿದ್ದು, ಅಂತಿಮ ಹಂತದ ಕೆಲಸಗಳು ನಡೆಯುತ್ತಿವೆ.

ಈ ಕೇಂದ್ರವು 36 ಐಸಿಯು ಹಾಸಿಗೆಗಳನ್ನು ಒಳಗೊಂಡಿದೆ. ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳು, ಟ್ರಯಾಜ್ ಘಟಕ, ಸಿಬ್ಬಂದಿ ಕೊಠಡಿ, ಮಕ್ಕಳ ಚಿಕಿತ್ಸೆಗೆಗಾಗಿ ಪ್ರತ್ಯೇಕ ವಿಭಾಗ ಸಹ ಹೊಂದಿದೆ.

'ಈ ಕೇಂದ್ರವು ಸೇವೆಗೆ ಬಹುತೇಕ ಸಿದ್ಧಗೊಂಡಿದೆ. ತೀವ್ರ ಉಸಿರಾಟದ ಸಮಸ್ಯೆ (ಸಾರಿ), ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಮತ್ತು ಕೊರೊನಾ ಸೋಂಕಿತರಿಗೆ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಕೇಂದ್ರವನ್ನು ಕ್ಷಯ ರೋಗಿಗಳ ಚಿಕಿತ್ಸೆಗೆ ಕೂಡ ಬಳಸಿಕೊಳ್ಳುವ ಯೋಜನೆಯಿದೆ' ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಇನ್‌ಸ್ಪೆಕ್ಟರ್ ಅಮಾನತು

ಮೈಸೂರು: ಪ್ರಶಿಕ್ಷಣಾರ್ಥಿಗಳಿಂದ ಹಣ ವಸೂಲು ಮಾಡಿದ ಆರೋಪದ ಮೇರೆಗೆ ಇಲ್ಲಿನ ಪೊಲೀಸ್ ತರಬೇತಿ ಶಾಲೆಯ ಇನ್‌ಸ್ಪೆಕ್ಟರ್ ಸುಬ್ರಹ್ಮಣ್ಯ ಅವರನ್ನು ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಶಾಲೆಯಲ್ಲಿ ಬುನಾದಿ ತರಬೇತಿ ಪಡೆಯುತ್ತಿರುವ 8 ತುಕಡಿಯ ಪ್ರಶಿಕ್ಷಣಾರ್ಥಿಗಳಲ್ಲಿ ತುಕಡಿಯಿಂದ ಒಬ್ಬರು ಅಥವಾ ಇಬ್ಬರು ಪ್ರಶಿಕ್ಷಣಾರ್ಥಿಗಳ ಮೂಲಕ ಉಳಿದ ಪ್ರಶಿಕ್ಷಣಾರ್ಥಿಗಳಿಂದ ತಲಾ ₹ 2,500ನ್ನು ಗೂಗಲ್‌ಪೇ, ಫೋನ್‌ಪೇ ಮೂಲಕ ತುಕಡಿಯ ಒಬ್ಬರ ಬ್ಯಾಂಕ್ ಖಾತೆಗೆ ಒಟ್ಟು ₹ 5.90 ಲಕ್ಷ ಹಣ ಸಂದಾಯ ಮಾಡಿಸಿಕೊಂಡಿರುವ ಆರೋಪದ ಮೇರೆಗೆ ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ.73/1, ಗಾಂಧಿ ಬಜಾರ್ ಮುಖ್ಯ ರಸ್ತೆ, ಬೆಂಗಳೂರು–560 004.
ದೂ: 26618093, 22421998

Application are invited for the post of Managing Director / CEO

Refer to RBI circular DOR.GOV.REC.25/12.10.000/2021-22 dated June 25, 2021 regarding appointment of **Managing Director/CEO** in UCBs.

Eligibility: The person shall be a graduate from a Recognized University in India, must have knowledge of Kannada language (both reading and writing): preferably with:

a) CAIIB/DBF/Diploma in Co-Operative Business Management: or
b) Post graduate in any discipline preferably Finance and Economics.
c) Must have knowledge of Computer and Software Application.
d) Minimum 8 years of experience in Banking at the middle / senior level management in the Banking sector.
e) Preference will be given to candidates who have exposure in Credit, Investment/ Recovery / ALM Risk Management / Internal control and Audit IS Audit)

The person must not be less than 35 years of age and not more than 60 years of age as on 31.07.2021.

Pay scale: Commensurate with qualification and experience.

Selection Process: By Interview and subject to meeting the "Fit & Proper" criterion prescribed by Reserve Bank of India as detailed in Appendix II of the above mentioned circular.

Interested and eligible candidates may submit application along with testimonials, passport size photograph and aadhaar copy on or before **18.08.2021,** to the undersigned by post/by, hand/by, courier/by e-mail (If sent by e-mail hard copy to be sent separately). **Email Id: krishna.hc@ncbl.org.in**

Date: 09.08.2021
Place: Bangalore

Sd/-
H C Krishna
Chairman

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂ.ಎಸ್.ಬಿ. 1, 6 ಮತ್ತು 7ನೇ ಮಹಡಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು–560052.
ದೂರವಾಣಿ: 080–22283366, 22265755, 22204466, 22207722.
ಇ–ಮೇಲ್: ed.kreis@ka.gov.in ವೆಬ್‌ಸೈಟ್ : https://kreis.karnataka.gov.in

ಪ್ರಕಟಣೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಏಕಲವ್ಯ ಮಾದರಿ /ಅಟಲ್ ಬಿಹಾರಿ ವಾಜಪೇಯಿ ಹೆಸರಿನ 79 ಆಂಗ್ಲ ಮಾಧ್ಯಮದ ವಸತಿಯುತ ಪದವಿ ಪೂರ್ವ ವಿಜ್ಞಾನ ಕಾಲೇಜುಗಳ

2021-22ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿ.ಯು.ಸಿ.ಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಅರ್ಜಿ ಸಲ್ಲಿಸುವ ದಿನಾಂಕ : 10.08.2021 ರಿಂದ 23.08.2021ರ ಸಂಜೆ 5.30 ಗಂಟೆಯವರೆಗೆ

ವಸತಿ ಕಾಲೇಜುಗಳ ವೈಶಿಷ್ಟ್ಯಗಳು

- ಆಂಗ್ಲ ಮಾಧ್ಯಮದಲ್ಲಿ ಗುಣಮಟ್ಟದ ವಸತಿಯುತ ಉಚಿತ ಶಿಕ್ಷಣ, ಆಹಾರ, ಸಮವಸ್ತ್ರ, ಶುಚಿ ಸಂಭ್ರಮ ಕಿಟ್‌ಗಳು, ಲೇಖನ ಸಾಮಗ್ರಿ, ಪಠ್ಯಪುಸ್ತಕ ಸೇರಿದಂತೆ ಇತರೆ ಸೌಲಭ್ಯಗಳನ್ನು ಒದಗಿಸಲಾಗುವುದು.
- ತಾಂತ್ರಿಕ ಮತ್ತು ವೈದ್ಯಕೀಯ ಇತ್ಯಾದಿ ವೃತ್ತಿಪರ ಶಿಕ್ಷಣಕ್ಕೆ ಅನುಕೂಲವಾಗಲು ವಿಜ್ಞಾನ ವಿಷಯಗಳ PCMB ಮತ್ತು PCMC ಸಂಯೋಜನೆಗಳ ತರಗತಿಗಳನ್ನು ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುವುದು.
- ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ಸಂಕೀರ್ಣಗಳು
- ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗೆ ವಿಶೇಷ ತರಬೇತಿಯನ್ನು ಉಚಿತವಾಗಿ ನೀಡಲಾಗುವುದು.
- ವಸತಿ ಕಾಲೇಜುಗಳಲ್ಲಿ ಪ್ರತಿ ಕಾಲೇಜಿಗೆ 50% ಹೆಣ್ಣು ಮಕ್ಕಳು ಮತ್ತು 50% ಗಂಡು ಮಕ್ಕಳುಗಳಿಗೆ ಅವಕಾಶ ಇರುತ್ತದೆ.

- ಮೀಸಲಾತಿ ಬಯಸುವ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯದ ಮಿತಿ: ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ಹಿಂದುಳಿದ ವರ್ಗದ ಪ್ರವರ್ಗ 1ರ ಅಭ್ಯರ್ಥಿಗಳಿಗೆ ರೂ. 2,50,000 ಹಾಗೂ ಹಿಂದುಳಿದ ವರ್ಗ 2ಎ, 2ಬಿ, 3ಎ ಮತ್ತು 3ಬಿ ಇವರಿಗೆ ರೂ. 1,00,000 (ನಿಗದಿತ ನಮೂನೆಯಲ್ಲಿ ಚಾಲ್ತಿಯಲ್ಲಿರುವ ಜಾತಿ ಮತ್ತು ವಾರ್ಷಿಕ ಆದಾಯ ಪ್ರಮಾಣ ಪತ್ರ ಹೊಂದಿರಬೇಕು).
- ವಿಶೇಷ ವರ್ಗದಡಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಇರಬೇಕು.

ಅರ್ಜಿ ಸಲ್ಲಿಸಲು ಅರ್ಹತೆಗಳು

- KREIS ನ ಯಾವುದೇ ವಸತಿ ಶಾಲೆ/ಸರ್ಕಾರಿ/ಸರ್ಕಾರದಿಂದ ಅನುಮೋದಿಸಲ್ಪಟ್ಟ ಶಾಲೆಯಲ್ಲಿ 10ನೇ ತರಗತಿ ಅಧ್ಯಯನ ಮಾಡಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು.
- ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

ಅರ್ಜಿ ಸಲ್ಲಿಸುವ ವಿಧಾನ

- ಅಭ್ಯರ್ಥಿಗಳು ಸಂಬಂಧಿಸಿದ ಶಾಲೆಯಿಂದ SATS ಸಂಖ್ಯೆಯನ್ನು ಪಡೆದು ಮತ್ತು ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳ ಸಹಿತ ತಮಗೆ ಹತ್ತಿರವಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಯಾವುದೇ ವಸತಿ ಶಾಲೆ/ಕಾಲೇಜಿನ ಪ್ರಾಂಶುಪಾಲರ ಮೂಲಕ ಉಚಿತವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ನೇರವಾಗಿ ಅಭ್ಯರ್ಥಿಯೇ ಯಾವುದಾದರೂ ಸ್ಥಳದಿಂದ ಅರ್ಜಿ ಸಲ್ಲಿಸಲು ಅವಕಾಶವಿಲ್ಲ.

ಅರ್ಜಿ ಸಲ್ಲಿಸುವಾಗ ಇರಬೇಕಾದ ದಾಖಲೆಗಳು

- Student Achievement Tracking System (SATS) ಸಂಖ್ಯೆ
- ಮೀಸಲಾತಿಯ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
- ವಿಶೇಷ ಪ್ರವರ್ಗಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು.

ದಾಖಲಾತಿ ಬಯಸುವ ಅಭ್ಯರ್ಥಿಗಳು ಅರ್ಜಿಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕೃತ ವೆಬ್‌ಸೈಟ್ https://kreis.karnataka.gov.in ನಲ್ಲಿ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ವಸತಿ ಶಾಲೆ/ಕಾಲೇಜಿನ ಪ್ರಾಂಶುಪಾಲರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ/ ಜಿಲ್ಲಾ ಪರಿಶಿಷ್ಟ ವರ್ಗಗಳ / ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿ ಇವರನ್ನು ಸಂಪರ್ಕಿಸುವುದು.

ವಿಶೇಷ ಸೂಚನೆ: ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ತೆಲಗರಹಳ್ಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. ಈ ವಸತಿ ಶಾಲೆಯಲ್ಲಿ 6 ರಿಂದ 12ನೇ ತರಗತಿಯವರೆಗೆ ಪೂರ್ಣ ಪ್ರಮಾಣದಲ್ಲಿ ಹೆಣ್ಣು ಮಕ್ಕಳಿಗೆ ಮಾತ್ರ ಪ್ರವೇಶಾವಕಾಶವಿದೆ.

ಎಲ್ಲಾ ವಿದ್ಯಾರ್ಥಿಗಳು ಹಾಗೂ ಪೋಷಕರು ಈ ಸದಾವಕಾಶವನ್ನು ಉಪಯೋಗಿಸಿಕೊಳ್ಳಲು ಕೋರಿದೆ.

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಸಹಿ/– ಸಿದ್ದೇಶ್ವರ ಎನ್. ಕ.ಆ.ಸೇ. (ಹಿರಿಯ ಶ್ರೇಣಿ)
ಕಾರ್ಯನಿರ್ವಾಹಕ ನಿರ್ದೇಶಕರು, ಕ.ವ.ಶಿ.ಸ.ಸಂಘ, ಬೆಂಗಳೂರು.

ವಾವಾಸಂಇ/ಕ.ವ.ಶಿ.ಸಂಘ/51/ಯಕ್ಕಿ/2021-22

ಹಣ್ಣುಗಳು, ತರಕಾರಿಗಳು ಹಾಗೂ ದಿನಸಿ ಸಾಮಗ್ರಿಗಳು
ಪ್ರತಿ ದಿನ
@OTP123
OTP123 ಆಫರ್‌ಗಾಗಿ ಪ್ರತಿ ದಿನ ನಿಮ್ಮ OTP ಅಪ್ಲಿಕೇಷನ್ ಅನ್ನು ಪರಿಶೀಲಿಸಿ

OTP123
ಮ್ಯಾಗಿ 140g MRP ₹ 24 ₹1

ಪೆಪ್ಸಿ 750ml MRP ₹ 40 ₹2

ಇಂಡಿಯಾ ಗೇಟ್ ಬಾಸ್ಮತಿ ಅಕ್ಕಿ 1kg MRP ₹ 120 ₹3

+ 50% ಕ್ಯಾಶ್ ಬ್ಯಾಕ್ ಪ್ರತಿ ಖರೀದಿಗೆ

60 ಸ್ಟೋರ್‌ಗಳು | 100+ ಡೆಲಿವರಿ ಪಾಯಿಂಟ್‌ಗಳು ಬೆಂಗಳೂರಿನಲ್ಲಿ | ಡೆಲಿವರಿ ಸ್ಲಾಟ್‌ಗಳು ಬೆಳಗ್ಗೆ 6:00 ರಿಂದ ರಾತ್ರಿ 10:00 ರವರೆಗೆ

ಕನಿಷ್ಠ ಬಿಲ್ಲಿಂಗ್ ಇಲ್ಲ ಉಚಿತ ಹೋಮ್ ಡೆಲಿವರಿ
24x7 ಗ್ರಾಹಕ ಸೇವೆ
100% ಆರ್ಡರ್ ಪೂರೈಕೆ
ಬೆಂಗಳೂರಿನ ಎಲ್ಲೆಡೆ ಲಭ್ಯ

*T&C Apply, Buy Fruits, Veggies & Groceries worth ₹299 to avail OTP123 Offer & Quantity Restricted to Maggie 140g 1 pc, Pepsi 750ml 1 Bottle and India Gate Super Rozana Basmati Rice 1kg
*Shop in multiples of Rs 100 and Get 50% Cashback Coupon.

Offer Applicable at all 60 OTPxpress Stores and on App

Just OTP It! Call us 080-69208888 | www.otpxpress.in
Download OTPxpress App — GET IT ON Google Play | Download on the App Store

ATTIGUPPE, BABUSABPALYA, BANASWADI, BASAVESHWARANAGAR, BELLANDUR, BELLANDUR, BILEKKEHALLI, BTM 1ST STAGE, BTM LAYOUT, CHIKBANAVARA, DEVARA CHIKKANAHALLI, ELETRANIC CITY, HENNUR MAIN ROAD, HONGASANDRA, HSR LAYOUT, HULIMAVU, IMMADIHALLI , WHITEFIELD, INDIRANAGAR, JALAHALLI CROSS, JAYANAGAR 4TH T BLOCK, JAYANAGAR 9TH BLOCK, KODIGEHALLI, KOGILU, KAMAKYA, KR PURAM, KUMARASWAMY LAYOUT, KUDLU, LAGGERE, MAHALAKSHMI LAYOUT, MATTIKERE, MS PALYA, MUNNEKOLLAL, MARATHAHALLI, NAGANATHPURA, HOSA ROAD, NAGARABHAVI, NAGARBHAVI 2ND STAGE, NAGARBHAVI 3, NRI LAYOUT, PRASHANT NAGAR, RACHENAHALLI, RAJAJI NAGAR, RAJAJINAGAR, RAMAMURTHY NAGAR, RR NAGAR, SARJAPUR ROAD, SANJAYNAGAR, SHASTRI NAGAR, SUDAMANAGAR, SULTAN PALYA, TAVAREKERE MAIN ROAD, T. DASARAHALLI, VARTHUR, VIDYAPEETHA, VIDYARANYAPURA, YELAHANKA NEW TOWN

‘ಎಸ್‌ಸಿಪಿ–ಟಿಎಸ್‌ಪಿ ಹಣ ವಾಪಸ್ ಪಡೆಯಿರಿ’

ಬೆಂಗಳೂರು: ‘ವಿವಿಧ ಇಲಾಖೆಗಳಲ್ಲಿರುವ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗಳ (ಟಿಎಸ್‌ಪಿ) ಕೋಟ್ಯಂತರ ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆ ವಾಪಸ್ ಪಡೆಯಬೇಕು. ಆ ಹಣದಿಂದ ಸಮುದಾಯದ ಜನರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು’ ಎಂದು ಕಾಂಗ್ರೆಸ್ ಮುಖಂಡ ಎಚ್.ಆಂಜನೇಯ ಒತ್ತಾಯಿಸಿದ್ದಾರೆ.

‘ರಾಜ್ಯದ ಬಹುತೇಕ ಸಚಿವರು ದಕ್ಷವಾಗಿ ಕಾರ್ಯನಿರ್ವಹಿಸದ ಕಾರಣ ವಿವಿಧ ಇಲಾಖೆಗಳಲ್ಲಿನ ಪರಿಶಿಷ್ಟ ಸಮುದಾಯಗಳಿಗೆ ಮೀಸಲಾದ ಹಣ ಸದ್ಬಳಕೆ ಆಗಿಲ್ಲ. ಇದಕ್ಕೆ ಅನುದಾನದ ಕೊರತೆ, ಲಾಕ್‌ಡೌನ್ ಎಂಬ ಉತ್ತರ ನೀಡುವುದು ಸಮಂಜಸವಲ್ಲ’ ಎಂದು ಹೇಳಿದ್ದಾರೆ.

‘ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನೀರಾವರಿ ಸೇರಿದಂತೆ ವಿವಿಧ ಇಲಾಖೆಗಳಲ್ಲಿರುವ ಎಸ್‌ಸಿಪಿ, ಟಿಎಸ್‌ಪಿ ಯೋಜನೆಗಳ ಹಣವನ್ನು ಸಮಾಜ ಕಲ್ಯಾಣ ಇಲಾಖೆ ವಾಪಸ್ ಪಡೆಯಬೇಕು. ಇದರಿಂದ ಪರಿಶಿಷ್ಟ ಸಮುದಾಯದ ಜನರಿಗೆ ರಸ್ತೆ, ವಸತಿ, ವಿದ್ಯಾರ್ಥಿಗಳಿಗೆ ಗುಣಮಟ್ಟ ಶಿಕ್ಷಣ, ಹಾಸ್ಟೆಲ್ ಮತ್ತು ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ, ಸಹಾಯಧನ ಸೌಲಭ್ಯ ಕಲ್ಪಿಸಬಹುದು’ ಎಂದು ಸಲಹೆ ನೀಡಿದ್ದಾರೆ.

‘ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಪರಿಶಿಷ್ಟ ಜಾತಿಯ ಜನರು ವಸತಿ ನಿರ್ಮಿಸಿಕೊಳ್ಳಲು ₹5 ಲಕ್ಷ ನೆರವು ನೀಡುವ ಯೋಜನೆ ಘೋಷಿಸಿರುವುದು ಸ್ವಾಗತಾರ್ಹ. ಇದನ್ನು ಇತರ ವರ್ಗದ ಜನರಿಗೂ ವಿಸ್ತರಿಸಬೇಕು’ ಎಂದು ಹೇಳಿದ್ದಾರೆ.

AstraZeneca

ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್

CIN: L24231KA1979PLC003563

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ ಔಟರ್ ರಿಂಗ್ ರೋಡ್, ಬೆಂಗಳೂರು – 560045

ದೂ.: +91 80 6774 8000. ವೆಬ್: www.astrazeneca.com/india

30ನೇ ಜೂನ್, 2021ಕ್ಕೆ ಕೊನೆಗೊಂಡ ತ್ರೈಮಾಸಿಕಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಲಕ್ಷಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	30/06/2021ಕ್ಕೆ ಕೊನೆಗೊಂಡ 3 ತಿಂಗಳಿಗೆ	30/06/2020ಕ್ಕೆ ಕೊನೆಗೊಂಡ 3 ತಿಂಗಳಿಗೆ ಹಿಂದಿನ ಅವಧಿಯ ವರ್ಷದಲ್ಲಿನ ಅಂಕಿಅಂಶಗಳು	31/03/2021ಕ್ಕೆ ಕೊನೆಗೊಂಡ ವರ್ಷಕ್ಕೆ
		ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	17,830.18	19,622.56	82,640.52
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	1,350.40	2,638.44	12,709.38
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	1,024.33	1,863.47	9,330.35
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	1,015.11	1,936.93	9,673.05
5	ಈಕ್ವಿಟಿ ಷೇರು ಬಂಡವಾಳ	500.00	500.00	500.00
6	ಮೀಸಲುಗಳು (ಬ್ಯಾಲೆನ್ಸ್ ಷೀಟ್‌ನಲ್ಲಿ ತೋರಿಸಿರುವ ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)	–	–	45,117.28
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	4.10	7.45	37.32

ಟಿಪ್ಪಣಿ:

1. ಇಲ್ಲಿ ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಬಂಧನೆಗಳು, 2015 ನಿಬಂಧನೆ 33ರ ಅನ್ವಯ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಸವಿವರವಾದ ವರದಿಯ ಉದ್ಧೃತ ಭಾಗ. ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ವರದಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟುಗಳಲ್ಲಿ (www.nseindia.com, www.bseindia.com) ಮತ್ತು ಕಂಪನಿಯ ವೆಬ್‌ಸೈಟಿನಲ್ಲಿ (www.astrazeneca.com/india) ಲಭ್ಯವಿದೆ.
2. ಈ ಹೇಳಿಕೆಯನ್ನು ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 133ರಲ್ಲಿ ಹೇಳಲಾಗಿರುವ ಕಂಪನಿಗಳ (ಭಾರತೀಯ ಅಕೌಂಟಿಂಗ್ ಮಾನಗಳು) ನಿಯಮಗಳು, 2015 (Ind AS) ಹಾಗೂ ಅನ್ವಯಿಸುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಅಕೌಂಟಿಂಗ್ ಅಭ್ಯಾಸಗಳು ಮತ್ತು ಪಾಲಿಸಿಗಳ ಅನುಸಾರ ಸಿದ್ಧಪಡಿಸಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ

ಸ್ಥಳ: ಬೆಂಗಳೂರು
ದಿನಾಂಕ: 09 ಆಗಸ್ಟ್, 2021

ಗಗನ್‌ದೀಪ್ ಸಿಂಗ್ ಬೇಡಿ
ಮ್ಯಾನೇಜಿಂಗ್ ಡೈರೆಕ್ಟರ್

HSSC

ಹೈಡ್ರೋಕಾರ್ಬನ್ ಸೆಕ್ಟರ್ ಸ್ಕಿಲ್ ಕೌನ್ಸಿಲ್

9ನೇ ಮಹಡಿ, ಹಿಂದೂಸ್ತಾನ್ ಟೈಮ್ಸ್ ಹೌಸ್, 18–20 ಕೆಜಿ ಮಾರ್ಗ, ನವದೆಹಲಿ–110001

ಹೈಡ್ರೋಕಾರ್ಬನ್ ಸೆಕ್ಟರ್ ಸ್ಕಿಲ್ ಕೌನ್ಸಿಲ್ (ಹೆಚ್‌ಎಸ್‌ಎಸ್‌ಸಿ) ಎಂಬ ಸಂಸ್ಥೆಯು, ಸೊಸೈಟಿಗಳ ನೊಂದಣಿ ಕಾಯ್ದೆ, 1860ರ ಅಡಿಯಲ್ಲಿ ನೊಂದಾಯಿತ ಒಂದು ಸಂಸ್ಥೆಯಾಗಿದ್ದು, ಇದೀಗ ಸದರಿ ಸಂಸ್ಥೆಯು ಕೆಳಕಂಡ ಹುದ್ದೆಗಳಿಗಾಗಿ ಆಸಕ್ತಿಯುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ:

1.	ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ)				
	ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ವಿದ್ಯಾರ್ಹತೆ, ವಯಸ್ಸು, ಅನುಭವ ಇತ್ಯಾದಿ ದಾಖಲಾತಿಗಳ ಸ್ವಯಂ ದೃಢೀಕೃತ ಪ್ರತಿಗಳ ಲಗತ್ತಿಸಿರುವ ವಿವರವಾದ ಅರ್ಜಿಯನ್ನು ಸದರಿ ಜಾಹೀರಾತು ದಿನಾಂಕದಿಂದ 15 ದಿನಗಳೊಳಗೆ ತಲುಪುವಂತೆ ಇವರಿಗೆ ಸಲ್ಲಿಸುವುದು hr@hsscindia.in				
2.	ಕಾರ್ಯಗಳು/ಹುದ್ದೆ	ಮ್ಯಾನೇಜರ್	ಸಹಾಯಕ ಮ್ಯಾನೇಜರ್	ಎಕ್ಸಿಕ್ಯೂಟಿವ್	ಒಟ್ಟು
2.1	ಸ್ಟಾಂಡರ್ಡ್ಸ್ ಮತ್ತು ಕ್ಯುಎ	01	01	01	03
2.2	ಟ್ರೈನರ್ಸ್ ಮತ್ತು ಅಸೆಸರ್‌ಗಳ ಟ್ರೈನಿಂಗ್	-	01	-	01
2.3	ಕರಿಕ್ಯುಲಮ್/ಕಂಟೆಂಟ್ ಡೆವಲಪ್‌ಮೆಂಟ್	01	01	01	03
2.4	ಅಫಿಲಿಯೇಶನ್ ಮತ್ತು ಟ್ರೈನಿಂಗ್ ಡೆಲಿವರಿ	-	-	01	01
2.5	ಮಾಹಿತಿ ತಂತ್ರಜ್ಞಾನ (ಐಟಿ)	-	-	01	01
2.6	ಬಿಡಿ–ಸ್ಟೇಟ್/ಇಂಡಸ್ಟ್ರಿ ಇಂಟರ್‌ಫೇಸ್	01	01	01	03
2.7	ಹಣಕಾಸು ಮತ್ತು ಖಾತೆಗಳು	01	-	-	01
2.8	ಹೆಚ್‌ಆರ್ ಮತ್ತು ಆಡಳಿತ	-	01	-	01
2.9	ಅಪ್ರೆಂಟೈಸ್‌ಶಿಪ್	01	-	01	02
	ಒಟ್ಟು	05	05	06	16
	ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು, ಸದರಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 15 ದಿನಗಳೊಳಗೆ ಹೆಚ್‌ಎಸ್‌ಎಸ್‌ಸಿ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.				

ಮೇಲ್ಕಾಣಿಸಿದ ಎಲ್ಲಾ ಹುದ್ದೆಗಳ ವಿಸ್ತೃತವಾದ ಉದ್ಯೋಗ ವಿವರ, ಅರ್ಹತಾ ಮಾನಂದಡ ಹಾಗೂ ಇನ್ನಿತರ ವಿವರಗಳನ್ನು ಸದರಿ ಹೆಚ್‌ಎಸ್‌ಎಸ್‌ಸಿ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು: www.hsscindia.in

ಸಹಿ/–
ಸಿಇಒ, ಹೆಚ್‌ಎಸ್‌ಎಸ್‌ಸಿ

davp33115/11/0001/2122

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100
ದೂರವಾಣಿ : 080 41362000 ಫ್ಯಾಕ್ಸ್ : 080 41362010 ಇ-ಮೇಲ್ : tilinvestor@timken.com
ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಜೂನ್ 30, 2021ಕ್ಕೆ ಕೊನೆಗೊಂಡ ತ್ರೈಮಾಸಿಕ ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	30/06/2021 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	30/06/2020 ಕ್ಕೆ ಕೊನೆಗೊಂಡ ಕಳೆದ ವರ್ಷದ ತ್ರೈಮಾಸಿಕಕ್ಕೆ ಅನುಗುಣವಾಗಿ (ಪರಿಶೋಧಿತವಲ್ಲದ)	31/03/2021 ಕ್ಕೆ ಕೊನೆಗೊಂಡ ವಾರ್ಷಿಕ (ಪರಿಶೋಧಿತವಾದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	47,073	16,796	1,43,012
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	7,536	363	19,506
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	7,536	363	19,506
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	5,672	315	14,318
5.	ಈ ಅವಧಿಯ ಒಟ್ಟು ಸಮಸ್ತ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಸ್ತ ಆದಾಯ (ತೆರಿಗೆ ನಂತರ)}	5,536	234	14,287
6.	ಈಕ್ವಿಟಿ ಷೇರು ಬಂಡವಾಳ	7,522	7,521	7,522
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಹಾಗೂ ಮುಂದುವರಿಸದ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ	7.54*	0.42*	19.03*

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

ಬೆಂಗಳೂರು
9 ಆಗಸ್ಟ್, 2021

ಪ್ರೀತಂಗೆ ಮುಖ್ಯಮಂತ್ರಿ ಕಿವಿಮಾತು

ಪ್ರಜಾವಾಣಿ ವಾರ್ತೆ

ಪ್ರೀತಂ ಜೆ.ಗೌಡ

ಬೆಂಗಳೂರು: ತಮ್ಮನ್ನು ಮಂಗಳವಾರ ಭೇಟಿ ಮಾಡಿದ ಶಾಸಕ ಪ್ರೀತಂ ಗೌಡ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುದ್ಧಿವಾದ ಹೇಳಿದ್ದಾರೆ.

ಸಚಿವ ಆರ್. ಅಶೋಕ ಅವರ ಸಲಹೆಯಂತೆ ವಿಧಾನಸೌಧಕ್ಕೆ ಬಂದ ಪ್ರೀತಂ ಗೌಡ, ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಅಶೋಕ ಮುಂದೆ ಖಾರವಾಗಿ ಮಾತನಾಡಿದ ಮುಖ್ಯಮಂತ್ರಿ, ‘ಮಾಜಿ ಪ್ರಧಾನಿ ಎಂಬ ಕಾರಣಕ್ಕೆ ದೇವೇಗೌಡ ಅವರನ್ನು ಭೇಟಿಯಾಗಿದ್ದೆ. ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಅಪಾರ್ಥ ಕಲ್ಪಿಸುವುದು ಸರಿಯಲ್ಲ. ನನ್ನ ನಡೆ ಬಗ್ಗೆಯೇ ಅನುಮಾನ ಪಡುತ್ತೀರಾ? ನಿಮಗೆ ಅನುಮಾನಗಳಿದ್ದರೆ ನೇರವಾಗಿ ನನ್ನ ಬಳಿಗೆ ಬನ್ನಿ. ಮೊದಲು ಮಾಧ್ಯಮಗಳ ಮುಂದೆ ಹೋಗುವುದನ್ನು ನಿಲ್ಲಿಸಿ. ದೇವೇಗೌಡರ ಬಗ್ಗೆ ಗೊಂದಲ ಮೂಡಿಸಬೇಡಿ ಎಂದು ಹೇಳಿದ್ದಾರೆ’ ಎಂದು ಗೊತ್ತಾಗಿದೆ.

‘ನೀವು ಇನ್ನೂ ಮೊದಲ ಬಾರಿ ಶಾಸಕರಾಗಿದ್ದೀರಿ. ನಿಮ್ಮ ಮುಂದಿನ ರಾಜಕೀಯ ಭವಿಷ್ಯದ ಬಗ್ಗೆ ಯೋಚಿಸಿ. ನಿಮ್ಮ ಕ್ಷೇತ್ರದಲ್ಲಿ ಸಮಸ್ಯೆಗಳಿದ್ದರೆ ನನ್ನ ಬಳಿ ತನ್ನಿ. ಕ್ಷೇತ್ರದ ಕೆಲಸಗಳನ್ನು ಮಾಡಿಕೊಡೋಣ. ಇನ್ನು ಮುಂದೆ ಈ ರೀತಿ ಮಾತುಗಳನ್ನು ಆಡಬೇಡಿ’ ಎಂದೂ ಕಿವಿಮಾತು ಹೇಳಿದ್ದಾರೆ ಎಂದು ತಿಳಿದುಬಂದಿದೆ.

ಬಳಿಕ ಮಾತನಾಡಿದ ಪ್ರೀತಂ ಗೌಡ, ‘ಮುಖ್ಯಮಂತ್ರಿ ಆಗಿ 24 ಗಂಟೆಯೊಳಗೆ ದೇವೇಗೌಡ ಅವರನ್ನು ಭೇಟಿ ಮಾಡಲು ಹೋಗಿದ್ದು ಸರಿಯೇ? ಎಂದು ನಮ್ಮ ಕಾರ್ಯಕರ್ತರು ಕೇಳುತ್ತಿದ್ದಾರೆ. ಕಾರ್ಯಕರ್ತರ ಮಾತನ್ನು ನಾನು ಹೇಳಿದ್ದೇನೆ ಅಷ್ಟೆ. ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಕಾರ್ಯಕರ್ತರ ನೋವನ್ನು ಮುಖ್ಯಮಂತ್ರಿಗೆ ತಿಳಿಸಿದ್ದೇನೆ’ ಎಂದರು.

‘ಪಕ್ಷವನ್ನು ಇಲ್ಲಿವರೆಗೆ ಅಭಿವೃದ್ಧಿ ಮಾಡಿದ್ದೇನೆ. ಸಂಘಟನೆ ಮುಂದುವರಿಸಿಕೊಂಡು ಹೋಗುತ್ತೇನೆ. ಕ್ಷೇತ್ರದ ಸಮಸ್ಯೆಗಳ ಬಗ್ಗೆ ನನ್ನ ಜೊತೆ ಮುಖ್ಯಮಂತ್ರಿ ಚರ್ಚೆ ಮಾಡಿದ್ದಾರೆ. ಕಾರ್ಯಕರ್ತರಿಗೆ ನೋವಾಗದಂತೆ ನೋಡಿಕೊಳ್ಳುತ್ತೇನೆ ಎಂದಿದ್ದಾರೆ. ಹಿರಿಯರ ಮಾತಿಗೆ ನಾನು ಒಪ್ಪುತ್ತೇನೆ. ಪಕ್ಷದ ಎಲ್ಲ 120 ಶಾಸಕರು ಮುಖ್ಯಮಂತ್ರಿಯ ಬೆನ್ನಿಗಿದ್ದೇವೆ’ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ನಾನು ರಾಜಕಾರಣ ಮಾಡಲು ಬಂದವನು. ಕಬ್ಬನ್ ಪಾರ್ಕ್, ಲಾಲ್ ಬಾಗ್ ನೋಡಲು ಬಂದಿಲ್ಲ’ ಎಂದೂ ಹೇಳಿದರು.

ಜಮೀರ್ ಅಹಮದ್ ಭೇಟಿಯಾದ ಡಿ.ಕೆ. ಶಿವಕುಮಾರ್

ಡಿ.ಕೆ. ಶಿವಕುಮಾರ್

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಅವರನ್ನು ಮಂಗಳವಾರ ರಾತ್ರಿ ಭೇಟಿ ಮಾಡಿ ಚರ್ಚೆ ನಡೆಸಿದರು.

ಕಂಟೋನ್ಮೆಂಟ್ ಸಮೀಪವಿರುವ ಜಮೀರ್ ಅವರ ನಿವಾಸದಲ್ಲಿ ಇಬ್ಬರೂ ಕೆಲಹೊತ್ತು ಸಮಾಲೋಚನೆ ನಡೆಸಿದರು. ಈ ವೇಳೆ, ಇತ್ತೀಚೆಗೆ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ತಮ್ಮ ಮನೆಯ ಮೇಲೆ ನಡೆಸಿದ ದಾಳಿಗೆ ಸಂಬಂಧಿಸಿದಂತೆ ಶಿವಕುಮಾರ್ ಅವರಿಗೆ ಜಮೀರ್ ಮಾಹಿತಿ ನೀಡಿದರು.

‘ಜಮೀರ್ ಅಹ್ಮದ್ ನಮ್ಮ ಪಕ್ಷದ ನಾಯಕ. ಅವರಿಗೆ ಏನು ಹೇಳಬೇಕೋ ಅದನ್ನು ಹೇಳಿದ್ದೇನೆ. ಕಾನೂನು ವಿಚಾರದ ಬಗ್ಗೆಯೂ ಹೇಳಿದ್ದೇನೆ. ನನಗೆ ಆದ ಅನುಭವಗಳನ್ನೂ ಹಂಚಿಕೊಂಡಿದ್ದೇನೆ’ ಎಂದು ಶಿವಕುಮಾರ್ ತಿಳಿಸಿದರು.

‘ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ’ ಎನ್ನುವ ಮೂಲಕ ಜಮೀರ್ ಅವರು ಇತ್ತೀಚೆಗೆ ಕಾಂಗ್ರೆಸ್ಸಿನಲ್ಲಿ ಹಲವರ ವಿರೋಧ ಕಟ್ಟಿಕೊಂಡಿದ್ದರು. ಇದೇ ಕಾರಣಕ್ಕೆ ಅವರಿಗೆ ಪಕ್ಷದ ಉಸ್ತುವಾರಿಯಿಂದಲೂ ಎಚ್ಚರಿಕೆ ಬಂದಿತ್ತು. ಹೀಗಾಗಿ, ಡಿ.ಕೆ. ಶಿವಕುಮಾರ್ ಕೂಡಾ ಅವರಿಂದ ಅಂತರ ಕಾಯ್ದುಕೊಂಡಿದ್ದರು. ಇಡಿ ಅಧಿಕಾರಿಗಳ ದಾಳಿಯ ಬಳಿಕ ಸಿದ್ದರಾಮಯ್ಯ ಅವರನ್ನು ಜಮೀರ್ ಭೇಟಿ ಆಗಿಲ್ಲ.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ವಿದ್ಯುತ್ ವಲಯದ ಖಾಸಗೀಕರಣ ವಿರೋಧಿಸಿ ರಾಜ್ಯ ರೈತಸಂಘ ಮತ್ತು ಹಸಿರು ಸೇನೆಯ ಕಾರ್ಯಕರ್ತರು ಯಲಹಂಕದ ತಹಶೀಲ್ದಾರ್ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು

ಯಲಹಂಕ: ವಿದ್ಯುತ್ ವಲಯವನ್ನು ಖಾಸಗೀರಣ ಮಾಡುವುದನ್ನು ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲು ಮುಂದಾಗಿರುವ ಸರ್ಕಾರದ ಕ್ರಮವನ್ನು ವಿರೋಧಿಸಿ, ಪ್ರೊ.ನಂಜುಂಡಸ್ವಾಮಿ ಸ್ಥಾಪಿತ ರಾಜ್ಯ ರೈತಸಂಘ ಮತ್ತು ಹಸಿರು ಸೇನೆಯ ಕಾರ್ಯಕರ್ತರು ತಹಶೀಲ್ದಾರ್ ಕಚೇರಿ ಮುಂಭಾಗದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ವಿ.ಆರ್.ನಾರಾಯಣರೆಡ್ಡಿ, ‘ರೈತರು ಬೆಳೆದ ಬೆಳಗಳಿಗೆ ಸರಿಯಾದ ಮಾರುಕಟ್ಟೆ ಮತ್ತು ಬೆಂಬಲ ಬೆಲೆ ಸಿಗದೆ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ವಿದ್ಯುತ್ ಖಾಸಗೀಕರಣ ನೀತಿಯನ್ನು ಜಾರಿಗೊಳಿಸುವುದರಿಂದ ಕೃಷಿ ಚಟುವಟಿಕೆಗಳ ಮೇಲೆ ಮಾತ್ರ ಪರಿಣಾಮ ಬೀರದೆ, ಗೃಹಬಳಕೆ ವಿದ್ಯುತ್ ಉಪಯೋಗಕ್ಕೂ ಸಮಸ್ಯೆಯಾಗಲಿದೆ. ಬಡವರು ಮತ್ತು ದುರ್ಬಲ ವರ್ಗದವರಿಗೆ ಹೆಚ್ಚಿನ ತೊಂದರೆಯಾಗಲಿದೆ’ ಎಂದರು.

‘ಈಗ ತಿಂಗಳ ವಿದ್ಯುತ್ ಬಿಲ್ ಪಾವತಿಸಲು ಸಮಯಾವಕಾಶವಿರುತ್ತದೆ. ಆದರೆ ಖಾಸಗೀಕರಣ ನೀತಿಯಡಿ ‘ಪ್ರಿಪೇಯ್ಡ್’ ಮೀಟರ್ ಅಳವಡಿಸುವುದರಿಂದ ಮೊಬೈಲ್‌ಗೆ ಕರೆನ್ಸಿ ಹಾಕಿದಂತೆ ಹಣ ಪಾವತಿಸಿ ವಿದ್ಯುತ್ ಬಳಸಬೇಕಾಗುತ್ತದೆ. ಅಲ್ಲದೆ ಬಡವರು ಮತ್ತು ದುರ್ಬಲ ವರ್ಗದವರಿಗೆ ಉಚಿತವಾಗಿ ಮತ್ತು ರಿಯಾಯಿತಿ ದರದಲ್ಲಿ ದೊರೆಯುತ್ತಿರುವ ಕೆಲವು ವಿದ್ಯುತ್ ಯೋಜನೆಗಳು ರದ್ದಾಗಲಿವೆ’ ಎಂದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಹರೀಶ್ ಅದ್ದೆ, ‘ಕೃಷಿ ಉತ್ಪಾದನೆಯ ವೆಚ್ಚ ಭರಿಸಲಾಗದೆ ರೈತರು ನಷ್ಟ ಅನುಭವಿಸುತ್ತಿದ್ದಾರೆ. ವಿದ್ಯುತ್ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವುದರಿಂದ ಬೆಳೆಗಳ ಮಾರಾಟದಿಂದ ಬಂದ ಹಣವನ್ನೆಲ್ಲ ವಿದ್ಯುತ್ ಬಿಲ್ ಪಾವತಿಸು ವುದಕ್ಕೇ ವ್ಯಯಿಸಬೇಕಾಗುತ್ತದೆ’ ಎಂದರು.

ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಬಿ. ಮಂಜುನಾಥ್, ಮಹಿಳಾ ಘಟಕದ ಅಧ್ಯಕ್ಷರಾದ ಶಿವಮ್ಮ ಇತರರು ಪಾಲ್ಗೊಂಡಿದ್ದರು.

ಪ್ರಬಂಧ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮೀ ಬಡಾವಣೆಯ ಶ್ರೀಮಂಜುನಾಥ ಟ್ರಸ್ಟ್ ವತಿಯಿಂದ ‘75ನೇ ಸ್ವಾತಂತ್ರ ದಿನಾಚರಣೆಯ ಅಮೃತ ಮಹೋತ್ಸವದ ಹೊಸ್ತಿಲಿನಲ್ಲಿ ಏಕರೂಪ ನಾಗರಿಕ ನೀತಿಸಂಹಿತೆ’ ಕುರಿತು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ.

18 ವರ್ಷ ಮೇಲ್ಪಟ್ಟವರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ವಿಜೇತರಿಗೆ ₹10 ಸಾವಿರ (ಪ್ರಥಮ), ₹5 ಸಾವಿರ (ದ್ವಿತೀಯ) ಹಾಗೂ ₹1 ಸಾವಿರ ಸಮಾಧಾನಕರ ಬಹುಮಾನ ನೀಡಲಾಗುವುದು.

ಪ್ರಬಂಧ ಕನ್ನಡ ಭಾಷೆಯಲ್ಲಿ ಗರಿಷ್ಠ ಮೂರು ಪುಟಗಳ ಮಿತಿಯಲ್ಲಿರಬೇಕು. ಆಸಕ್ತರು ಪ್ರಬಂಧ ಗಳನ್ನsrimanjunathatrustbangalore@gmail.com ಅಥವಾ ಸಂಸ್ಥೆಯ ವಿಳಾಸಕ್ಕೆ ಆಗಸ್ಟ್ 25ರೊಳಗೆ ತಲುಪಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ: ಶ್ರೀಮಂಜುನಾಥ ಟ್ರಸ್ಟ್, ಪೈಪ್‌ಲೈನ್ ರಸ್ತೆ, ಜೆ.ಸಿ.ನಗರ, ಕುರುಬರಹಳ್ಳಿ

ಸಂಪರ್ಕ: 9964740140, 9845451196

ಮೂರು ಮಕ್ಕಳ ಮೇಲೆ ಬೀದಿನಾಯಿ ದಾಳಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಇಂದಿರಾ ಕಾಟೇಜ್‌ನಲ್ಲಿ ಮಂಗಳವಾರ ಬೀದಿನಾಯಿಯೊಂದು ಇಬ್ಬರು ಬಾಲಕರು, ಒಬ್ಬಳು ಬಾಲಕಿ ಮೇಲೆ ದಾಳಿ ನಡೆಸಿ, ಗಂಭೀರವಾಗಿ ಗಾಯಗೊಳಿಸಿದೆ.

ತಸೀರ್ (5), ನಗೀನಾ (12), ಮತ್ತೊಬ್ಬ ಬಾಲಕ ಗಾಯಗೊಂಡವರು.

ತಸೀರ್ ತನ್ನ ಮನೆಯ ಬಳಿ ಆಟವಾಡುತ್ತಿದ್ದ ವೇಳೆ ಬೀದಿನಾಯಿ ದಾಳಿ ನಡೆಸಿದೆ. ಈತನ ತೊಡೆಯಲ್ಲಿ ಗಾಯಗಳಾಗಿವೆ.

ನಂತರ ಪಕ್ಕದ ಮನೆಯ ಬಾಲಕಿ ನಗೀನಾ ಮೇಲೆ ದಾಳಿ ನಡೆಸಿರುವ ನಾಯಿ ಆಕೆಯ ಹೊಟ್ಟೆಯ ಭಾಗವನ್ನು ಕಚ್ಚಿದೆ.

ನಂತರ ಅದೇ ನಾಯಿ ಅದೇ ಬೀದಿಯ ಮತ್ತೊಂದು ಬಾಲಕನೊಬ್ಬನ ಮೇಲೆ ದಾಳಿ ನಡೆಸಿದ್ದು, ಆತನ ತಲೆಯ ಭಾಗದಲ್ಲಿ ಗಾಯಗಳಾಗಿವೆ.

ಗಾಯಗೊಂಡ ಮೂರು ಮಂದಿಯನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗಿದೆ.

ಇಂದಿರಾ ಕಾಟೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೀದಿ ನಾಯಿಗಳ ಕಾಟ ವಿಪರೀತವಾಗಿದ್ದು, ನಗರಸಭೆ ಆಡಳಿತ ಇತ್ತ ಕಡೆ ಗಮನ ಹರಿಸಿ ಬೀದಿನಾಯಿಗಳನ್ನು ನಿಯಂತ್ರಣ ಮಾಡಬೇಕು ಎಂದು ಇಲ್ಲಿನ ನಿವಾಸಿಗಳು ಒತ್ತಾಯಿಸಿದ್ದಾರೆ.

ಸ್ವಾತಂತ್ರ್ಯೋತ್ಸವದ ದಿನದಂದು ಕಲಾ ಪ್ರದರ್ಶನ ನೀಡಲು ನಗರದ ವಿವಿಧ ಶಾಲೆಗಳ ಮಕ್ಕಳು ಚಿತ್ರಕಲಾಕೃತಿಗಳನ್ನು ರಚಿಸಿದ್ದು, ಅವುಗಳನ್ನು ಪ್ರದರ್ಶಿಸಿದರು. ಕಲಾ ಸಂಯೋಜಕ ಬಿ.ಎಂ.ಶಿವಬೋಧ ಇದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

I, P.MADHAVA RAO resident of No.169, LIG 11th B Cross B Sector, Near Ganesha Temple, Yelahanka NewTown, Bangalore-560064 have changed my name to PERAM MADHAV GOVINDAA vide affidavit dated 16/07/2021 sworn before notary H.Sridhar Rao, Bangalore

I, INU BLESSY JOSEPH R/a #1195 ELBETHEL Nirman Layout, Koppa Village, Jigani, Bengaluru-105 have changed name INU JOHN ABRAHAM vide affidavit 10.8.2021 before Notary, Hemalatha, Bangalore.

I, K. RAJESHWARI W/o. Govindaswamy Ambethkar R/a #63, Lepakshi Layout, near Banjara Orchids Layout, Garden Phase-II, Horamavu, Kalkere, Bangalore- 560043 declare that in the service records of my husband bearing service No. J.C.-165231Y, Rank: EX-SUB. MAJ and HONY CAPT, Name: Govindaswamy Ambethkar my name was given as K. RAJESWARI instead of K. RAJESHWARI vide affidavit dated: 10.08.2021 sworn before Notary K. Venkateshan, Bangalore-33.

I, M Tamilarasan aged 47 Years S/o Muniswamy, R/at 208, 6th Cross, 2nd Main, Ashwath Nagar, Marathahalli Post, Bangalore-37 have changed my name to ARASAN M vide affidavit dated 10.08.2021 before notary L. Gopalakrishna, Bangalore

I, VARALAKSHMI T W/o Jagan. S residing/at No.149, 4th cross, Royal Shelters Layout, Devarachikkanahalli, Bangalore- 560076, have changed my minor Daughter's name from Swethashree J to ADVIKA vide affidavit dated 09/08/2021 before notary B.G. Sriram., Bangalore

I, S Alaghammai, D/o C. Subramaniam, presently residing at 202, Vasthav Residency, No: 14, 4th ‘A’ Main, 6th Cross, N.S.Palya, Bilekhahalli, Bangalore- 560076 have changed my name as S.P Akhila, vide affidavit dtd: 09.01.2017 sworn before Notary Anand Kumar J, Bangalore.

I, LOKESHA @ LOKESHA S, S/O. Sunchappa, Residing at #159, Kariyamanna Agrahara, Bellandur, Bengaluru 560103 Have Changed my name to LOKESH S Vide affidavit dated 10/08/2021 Sworn Before Notary Gangaraju. B.N, Bengaluru

I, ROOPA FELIX THOMAS R/a #C307, SAMHITA SAROVAR SIR M. VISHVESHVARAIAH Street, Horamavu AGARA, BENGALURU-43 have changed name ROOPA PETERS vide affidavit 10.8.2021 before Notary Hemalatha, Bangalore.

I, PREM PETERS SHEKAR R/a #C307, SAMHITA SAROVAR SIR M.VISHVESHVARAIAH Street, Horamavu Agara, Bengaluru-43 have changed name PREM PETERS vide affidavit 10.8.2021 before Notary Hemalatha, Bangalore.

I, ESMINA TAJ, Residing at #32, 1st main, 4th-Cross, Chamundeshwarinagar, Laggere,Bengaluru-58 have changed my name as YASMIN TAJ, vide affidavit dated 9/8/2021 before Notary H.Janardhan, Bengaluru

I, GULAM AMEER AHMED R/a #174, 9th F 1st Cross, Opposite Water Tank, BTM 1st Stage, Bengaluru-29 have changed minor daughter name to ZAINAB AMEER (NEW NAME) and (OLD NAME) NUHA ZAINAB AMEER vide affidavit 10.8.2021 before Notary Hemalatha, P. Bangalore.

DH DECCAN HERALD ಪ್ರಜಾವಾಣಿ ಕ್ಲಾಸಿಫೈಡ್ಸ್

NAME CHANGE

BOOK YOUR NAME CHANGE AD IN DECCAN HERALD ALL KARNATAKA+ PRAJAVANI BENGALURU ALL DAY

CHANGE OF NAME @40/-* Per Words

Condition Apply*

For More Details Contact:
9880856233 | 9731810277
9901641752 | 9845114560 | 9886213331
080- 45557163 | 164

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

REPUTED PREMIUM Beverages Brand Require Financially Sound Parties For Exclusive Bottling Units/ Contracts. Call: 9845013347.

URGENT LOAN Avail. @ 3.5% p.a. Personal, Business, Projects. all types loan in 5 days. Small Finace Ltd, Call & whatsApp :8130883900.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸಾಹಿತಿ, ಕಲಾವಿದರ ಜತೆ ಕಾಫಿಯೊಂದಿಗೆ ಸುನಿಲ್ ಚರ್ಚೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಬುಧವಾರ 2019–20 ನೇ ಸಾಲಿನ ವಿವಿಧ ವಾರ್ಷಿಕ ಗೌರವ ಪ್ರಶಸ್ತಿ ಪಡೆದ ಇಬ್ಬರು ಗಣ್ಯರಿಗೆ ಪ್ರಶಸ್ತಿ ಪ್ರದಾನ ಮಾಡುವ ಮೂಲಕ ಇಲಾಖಾ ಸಚಿವರಾಗಿ ಕಾರ್ಯಾರಂಭ ಮಾಡಲಿದ್ದಾರೆ.

ಈ ಕಾರ್ಯಕ್ರಮ ಬುಧವಾರ ಬೆಳಿಗ್ಗೆ 9 ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ. ಆವರಣದಲ್ಲಿರುವ ಸಿರಿಗನ್ನಡ ಪುಸ್ತಕ ಮಳಿಗೆಗೆ ಭೇಟಿ ನೀಡಿ ಪುಸ್ತಕಗಳನ್ನು ಖರೀದಿಸಿ, ಬಳಿಕ ಕಲಾಕ್ಷೇತ್ರದ ಕ್ಯಾಂಟೀನ್‌ನಲ್ಲಿ ಸಾಹಿತಿಗಳು ಮತ್ತು ಕಲಾವಿದರೊಂದಿಗೆ ಕಾಫಿ ಸೇವಿಸುತ್ತಲೇ ಚರ್ಚೆ ನಡೆಸಲಿದ್ದಾರೆ. ಆ ಬಳಿಕ ಡಾ.ರಾಜ್‌ಕುಮಾರ್ ಸಮಾಧಿಗೆ ತೆರಳಿ ಗೌರವ ನಮನ ಸಲ್ಲಿಸಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಇಂಧನ ಇಲಾಖೆ ಅಧಿಕಾರ ವಹಿಸಿಕೊಳ್ಳುವುದಾಗಿ ಸುನಿಲ್ ತಿಳಿಸಿದ್ದಾರೆ.

ಮಂಗಳವಾರ ಎರಡೂ ಇಲಾಖೆಗಳ ಅಧಿಕಾರಿಗಳಿಂದ ಅವರು ಮಾಹಿತಿ ಪಡೆದರು.

₹ 80 ಕೋಟಿ ಮೌಲ್ಯದ ‘ತಿಮಿಂಗಿಲ ವಾಂತಿ’ ಜಪ್ತಿ

ಒಂದನೇ ಪುಟದಿಂದ

‘ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿರುವ ಮಳಿಗೆಯೊಂದರಲ್ಲಿ ಸೇರಿದ್ದ ಆರೋಪಿಗಳು, ಅಂಬರ್ಗ್ರಿಸ್ ಹಾಗೂ ಪುರಾತನ ವಸ್ತುಗಳನ್ನು ಇಟ್ಟುಕೊಂಡಿದ್ದರು. ಅವುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇರುವುದಾಗಿ ಸಾರ್ವಜನಿಕರಿಗೆ ಹೇಳಿ ಕೋಟ್ಯಂತರ ರೂಪಾಯಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

‘ತೇಲಾಡುವ ಚಿನ್ನ ಎಂದೇ ಹೇಳಲಾಗುವ ತಿಮಿಂಗಿಲ ವಾಂತಿಯನ್ನು ಸುಗಂಧ ದ್ರವ್ಯ ಹಾಗೂ ಮಾದಕವಸ್ತು ತಯಾರಿಕೆಯಲ್ಲಿ ಬಳಸುತ್ತಾರೆ. ಇದಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದ್ದು, ಕೆ.ಜಿ.ಗೆ ₹ 1 ಕೋಟಿ ಬೆಲೆ ಇದೆ. ಇದನ್ನು ತಿಳಿದುಕೊಂಡ ಆರೋಪಿಗಳು, ವ್ಯಕ್ತಿಯೊಬ್ಬರ ಸಹಾಯದಿಂದ ‘ತಿಮಿಂಗಿಲ ವಾಂತಿ’ ಪಡೆದುಕೊಂಡಿದ್ದರು ಎಂದರು.

ಸೀಮೆಎಣ್ಣೆಯಿಂದ ತಿರುಗುವ ಫ್ಯಾನ್

‘ಆರೋಪಿಗಳಿಂದ ಜಪ್ತಿ ಮಾಡಲಾಗಿರುವ ಸ್ಟೀಮ್ ಫ್ಯಾನ್, ಸೀಮೆಎಣ್ಣೆಯಿಂದ ತಿರುಗುತ್ತದೆ. ಬ್ರಿಟಿಷ್‌ರ ಆಳ್ವಿಕೆ ಕಾಲದಲ್ಲಿ ಇದನ್ನು ಬಳಸಲಾಗುತ್ತಿತ್ತು. ಯಾರದ್ದೂ ಮನೆಯಲ್ಲಿದ್ದ ಈ ಫ್ಯಾನ್‌ನ್ನು ಆರೋಪಿಗಳು ಕದ್ದುಕೊಂಡು ಬಂದು ಮಾರಲು ಯತ್ನಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಫ್ಯಾನ್ ಮೇಲೆ ಈಸ್ಟ್ ಇಂಡಿಯಾ ಕಂಪನಿ–1818 ಎಂದು ಬರೆಯಲಾಗಿದೆ. ಉಷ್ಣಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುವ ಸಾಮರ್ಥ್ಯ ಈ ಫ್ಯಾನ್‌ಗೆ ಇದೆ. ಈ ಬಗ್ಗೆ ಪರಿಣಿತರಿಂದ ಮತ್ತಷ್ಟು ಮಾಹಿತಿ ಪಡೆಯಬೇಕಿದೆ’ ಎಂದೂ ತಿಳಿಸಿದರು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಆರು ಸಾಧಕರಿಗೆ 'ಭಾಗ್ಯವಿಧಾತ ಸಿದ್ದರಾಮಯ್ಯ' ಪ್ರಶಸ್ತಿ

ಮೈಸೂರು: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯು ಪ್ರಸಕ್ತ ಸಾಲಿನಿಂದ ನೀಡುವ 'ಭಾಗ್ಯವಿಧಾತ ಸಿದ್ದರಾಮಯ್ಯ' ರಾಜ್ಯ ಪ್ರಶಸ್ತಿಗೆ ಹುಣಸೂರು ನಾಗಪುರ ಹಾಡಿಯ ಬುಡಕಟ್ಟು ಮಹಿಳಾ ಹೋರಾಟಗಾರ್ತಿ ವೀಣಾಪ್ರಭು ಸೇರಿದಂತೆ ರಾಜ್ಯ ವಿವಿಧ ಕ್ಷೇತ್ರಗಳ ಆರು ಮಂದಿ ಆಯ್ಕೆಯಾಗಿದ್ದಾರೆ.

ಅಂತರರಾಷ್ಟ್ರೀಯ ಚಿತ್ರ ಕಲಾವಿದ ಡಾ. ಬಾಬೂರಾವ್ ನಡೋನಿ, ಬೆಳಗಾವಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕ ಎಂ.ರಾಮಯ್ಯ, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ರಾಜ್ಯ ಘಟಕದ ಅಧ್ಯಕ್ಷ ಡಾ. ಸಿ. ವೆಂಕಟೇಶ್, ಅಖಿಲ ಭಾರತ ಕ್ರೈಸ್ತ ಮಹಾಸಭಾದ ಉಪಾಧ್ಯಕ್ಷೆ ರೀನಾ ಪ್ಯಾಟ್ರಿಕ್ ಶಿವಮೊಗ್ಗ, ಸುಜೀವ್ ಸಂಸ್ಥೆಯ ಮುಖ್ಯಸ್ಥ ಎಸ್. ರಾಜಾರಾಂ ಪ್ರಶಸ್ತಿಗೆ ಆಯ್ಕೆಯಾದವರು.

ಪುರಸ್ಕೃತರಿಗೆ 12ರಂದು ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಪ್ರಶಸ್ತಿ ಫಲಕ, ಸ್ಮರಣಿಕೆ ನೀಡಿ ಸನ್ಮಾನಿಸಲಾಗುವುದು. ಮುಂದಿನ ವರ್ಷದಿಂದ ನಗದು ಬಹುಮಾನವನ್ನು ನೀಡಲಾಗುವುದು ಎಂದು ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉಸ್ತುವಾರಿ ಸಚಿವರಿಂದ ಧ್ವಜಾರೋಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 15ರಂದು ರಾಜ್ಯದ 28 ಜಿಲ್ಲಾ ಕೇಂದ್ರಗಳಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳಲ್ಲಿ ಆಯಾ ಜಿಲ್ಲಾ ಉಸ್ತುವಾರಿ ಸಚಿವರೇ ಧ್ವಜಾರೋಹಣ ನೆರವೇರಿಸಲಿದ್ದಾರೆ.

ಈ ಸಂಬಂಧ ಮಂಗಳವಾರ ಆದೇಶ ಹೊರಡಿಸಿರುವ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಚಾಮರಾಜನಗರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಆಯಾ ಜಿಲ್ಲಾಧಿಕಾರಿಗಳು ಧ್ವಜಾರೋಹಣ ನೆರವೇರಿಸಬೇಕು ಎಂದು ಸೂಚಿಸಿದ್ದಾರೆ. 28 ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರು ಧ್ವಜಾರೋಹಣ ನೆರವೇರಿಸಲಿದ್ದಾರೆ ಎಂದು ಪಟ್ಟಿ ಪ್ರಕಟಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿನ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ನಡೆಯುವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸುವರು.

ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಆರ್. ಅಶೋಕ ಮಾತ್ರ ಯಾವುದೇ ಜಿಲ್ಲೆಯಲ್ಲಿ ಧ್ವಜಾರೋಹಣ ನೆರವೇರಿಸುತ್ತಿಲ್ಲ.

ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಿದರೆ ಪ್ರತಿಭಟನೆ:ಕಾಂಗ್ರೆಸ್

ಬೆಂಗಳೂರು: 'ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಿದರೆ, ಹಲವು ರಸ್ತೆ, ಸೇತುವೆಗಳಿಗಿರುವ ಬಿಜೆಪಿ ನಾಯಕರ ಹೆಸರುಗಳನ್ನು ಮುಂದಿನ ದಿನಗಳಲ್ಲಿ ಬದಲಿಸಬೇಕಾಗುತ್ತದೆ' ಎಂದು ಶಾಸಕರೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಿಜೆಪಿಯವರು ದ್ವೇಷದ ರಾಜಕಾರಣ ಬಿಟ್ಟು ಪ್ರಜಾಸತ್ತಾತ್ಮಕವಾಗಿ ನಡೆದುಕೊಳ್ಳಬೇಕು. ಕಾಂಗ್ರೆಸ್ ತನ್ನ ಅಧಿಕಾರವಧಿಯಲ್ಲಿ ಎಂದಿಗೂ ಈ ರೀತಿಯ ರಾಜಕಾರಣ ಮಾಡಿಲ್ಲ' ಎಂದರು. 'ಹೆಸರು ಬದಲಾವಣೆ ಷಡ್ಯಂತ್ರವನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಉಗ್ರ ಪ್ರತಿಭಟನೆ ನಡೆಸಲಿದೆ' ಎಂದರು.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ. ದೂರವಾಣಿ: 08539-220054

email: eemidnkst@rediffmail.com

ಸಂ.: ಕಾನಿಇಂ/ಸನೀ&ಅ.ಆ.ವಿ/ಕೊಪ್ಪಳ/ತಾಶಾ/2021-22/1819 ದಿನಾಂಕ: 06.08.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ರಾಯಚೂರು ಜಿಲ್ಲೆ 04 ಕಾಮಗಾರಿಗಳಿಗೆ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ. 57.18 ಹಾಗೂ ಗರಿಷ್ಟ ಮೊತ್ತ ರೂ. 306.89 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 17-08-2021 ರಿಂದ ದಿನಾಂಕ: 04-09-2021 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ 25-08-2021 ರಂದು ಬೆಳ್ಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ಜರುಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 06-09-2021 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 08-09-2021 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಇ-ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ http:// eproc. karntaka.gov.in/ e-portal/index.seam ನಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/200/ಎಂಸಿಎ/2021-22

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ,ಇ ವಿಶೇಷ ವಿಭಾಗ, ಶಿವಮೊಗ್ಗ

ಫೋನ್ ನಂ : 08182-222942, ಇ-ಮೇಲ್: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್.ಟಿ ಸಂಖ್ಯೆ: 20/2021-22 ದಿನಾಂಕ : 09.08.2021

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ-4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ **1ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ 5054-03-337-0-17-154- ರಾ.ಹೆ ರಸ್ತೆ ಕಾಮಗಾರಿ ಸುಧಾರಣೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಶಿವಮೊಗ್ಗ ತಾಲ್ಲೂಕಿನಲ್ಲಿ ಅನುಮೋದನೆಯಾದ Improvements to Road From Shimoga to join SH-57 near chinnikatte via gejjenahalli, Yadavala, Hitturu, Narayanapura from Chainage 0.85 to 22.95 Km. (Indent No.137655) ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಗೆ ಟೆಂಡರ್‌ಗಿಟ್ಟ ಮೊತ್ತ ರೂ. 867.54 ಲಕ್ಷ ಹಾಗೂ ಇ.ಎಂ.ಡಿ, ಮೊತ್ತ ರೂ. 13.01 ಲಕ್ಷ ಸದರಿ ಕಾಮಗಾರಿಗಳ ಟೆಂಡರ್ ಅವಧಿ 11 ತಿಂಗಳು ಮಳೆಗಾಲ ಸೇರಿ. ಸದರಿ ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿರುತ್ತಾರೆ.** ಅರ್ಹ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ -2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ **ದಿನಾಂಕ: 09-08-2021 ರಿಂದ 13-09-2021 ರ 17.00 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು **ದಿನಾಂಕ: 13-09-2021 ರ ಸಂಜೆ 5:00 ಗಂಟೆಯೊಳಗೆ** ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ **ದಿನಾಂಕ: 14-09-2021 ರಂದು ಸಂಜೆ 17.30ಕ್ಕೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 15-09-2021ರಂದು ಬೆಳಿಗ್ಗೆ 11.00ರ ನಂತರ** ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾಸಾಸಂಇ/ಶಿ/ನಂ.32-08/ಝೇಂಕಾರ್/2021-22

ಮಂಗಳೂರು ಮಹಾನಗರ ಪಾಲಿಕೆ

DMA/2021-22/WORK INDENT NO. 114854, 118028 ದಿನಾಂಕ: 09.08.2021

ಟೆಂಡರ್ ಪ್ರಕಟಣೆ
E-PROCUREMENT OF KARNATAKA

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಇ-ಪ್ರೊಕ್ರೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು **2020-21ನೇ ಸಾಲಿನ 15ನೇ ಹಣಕಾಸು ಯೋಜನೆ ಅನುದಾನದಲ್ಲಿ** ನಿರ್ವಹಿಸುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 24.08.2021 ಅಪರಾಹ್ನ 4.00 ಗಂಟೆ.** ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮುಖಾಂತರ ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ ಸಂ	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ(ಲಕ್ಷಗಳಲ್ಲಿ)
1	ವಿ.ನಂ.32ನೇ ಕದ್ರಿ ಉತ್ತರ ವಾರ್ಡಿನ ಯೆಯ್ಯಾಡಿ ಗುಂಡಳಿಕೆ ಕೈಗಾರಿಕಾ ಪ್ರದೇಶದವರೆಗೆ ಒಳಚರಂಡಿ ಕಾಮಗಾರಿ (2ನೇ ಕರೆ) **(Indent No.114854)**	52.48
2	ಮಂಗಳೂರು ಮಹಾನಗರಪಾಲಿಕೆ ಅಧೀನದ ತುಂಬೆ ಹೆಚ್.ಎಲ್.ಪಿ.ಎಸ್-2 ರೇಚಕ ಸ್ಥಾವರದ ಫಿಲ್ಟರ್ ಬೆಡ್ ನವೀಕರಣ ಕಾಮಗಾರಿ(ಫಿಲ್ಟರ್ ಬೆಡ್ ನಂ.1,2,3) **(Indent No.118028)**	89.28

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಮಹದೇವಪುರ ವಿಭಾಗ, ಬೆಂಗಳೂರು-560 048.

ಸಂ. ಕಾಪಾಅ/ಮಹಾದೇವಪುರ/ಟೆಂಡರ್/06/2021-22 ದಿನಾಂಕ: 09-08-2021

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ದ್ವಿ-ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು ಮಹದೇವಪುರ ವಿಭಾಗ ಬೃಬೆಂಮಪಾಲಿಕೆ ಪರವಾಗಿ, ಬಿಬಿಎಂಪಿ ಅಥವಾ ಸಿ.ಪಿ.ಡಬ್ಲ್ಯೂ.ಡಿ/ ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ ಎಂಇಎಸ್ ಅಥವಾ ಯಾವುದಾದರು ರಾಜ್ಯ ಮತ್ತು ಕೇಂದ್ರ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕೆಲಸದ ಹೆಸರು	ಟೆಂಡರ್‌ನ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1.	ವಾರ್ಡ್ ನಂ. 84ರ ಹಗದೂರುನಲ್ಲಿ 2020-21 ಬಿಬಿಎಂಪಿ ಅನುದಾನದಡಿ ಬರುವ ಸುಧಾರಣಾ ಕಾಮಗಾರಿಗಳು **(ಪ್ಯಾಕೇಜ್-1) 9 ಕಾಮಗಾರಿಗಳು.**	750.10
2.	ವಾರ್ಡ್ ನಂ. 54, 83, 84, 149 ಮತ್ತು 150 ರ ಮಹದೇವಪುರ ವಿಭಾಗದಲ್ಲಿ ಬಿಬಿಎಂಪಿ ಅನುದಾನದಡಿ ಬರುವ ಸುಧಾರಣಾ ಕಾಮಗಾರಿಗಳು **(ಪ್ಯಾಕೇಜ್-02) 7 ಕಾಮಗಾರಿಗಳು.**	699.93
3.	ವಾರ್ಡ್ ನಂ. 83 ಮತ್ತು 85 ರ ಮಹದೇವಪುರ ವಿಭಾಗದಲ್ಲಿ ಬಿಬಿಎಂಪಿ ಅನುದಾನದಡಿ ಬರುವ ಸುಧಾರಣಾ ಕಾಮಗಾರಿಗಳು **(ಪ್ಯಾಕೇಜ್-03) 5 ಕಾಮಗಾರಿಗಳು.**	302.00

ಇಎಂಡಿ (ರೂ.) ಇಎಂಡಿ **ಘೋಷಣೆ ಪತ್ರ ಸಲ್ಲಿಸಿ. ಟೆಂಡರ್ ಕಾರ್ಯ ಸೂಚಿ :** (1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **13-08-2021 ರ ಸಂಜೆ 4:00 ಗಂಟೆಯಿಂದ.** (2) ದಾಖಲಾತಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 16-08-2021 ರ ಸಂಜೆ 3:00 ಗಂಟೆಯೊಳಗೆ** (3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **23-08-2021 ರ ಸಂಜೆ: 4:00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **24-08-2021 ರ ಸಂಜೆ 4:30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್ ಮಾಡಿ ಪಡೆಯಬಹುದು.

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಬಿಬಿಎಂಪಿ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ-3/ಟೆಂಡರ್.ಅಧಿಸೂಚನೆ/2021-22/2516 ದಿನಾಂಕ: 07.08.2021

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಲೆಕ್ಕ ಶೀರ್ಷಿಕೆ 5054 ಅಪೆಂಡಿಕ್ಸ್- ಇ ಯೋಜನೆಯಡಿಯಲ್ಲಿ (03) ಕಾಮಗಾರಿಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ರೂ. ಕನಿಷ್ಠ 356.96 ಲಕ್ಷಗಳು ಗರಿಷ್ಠ ರೂ. 446.29 ಲಕ್ಷಗಳು. 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ನೊಂದಾಯಿತ ಗುತ್ತಿಗೆದಾರರಾಗಿರಬೇಕು. 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಡಿಕ್ಲೆರೇಶನ ಸರಕಾರ ಆದೇಶದಂತೆ, 5) ಪ್ರೀ ಬಿಡ್ ಮಿಟಿಂಗ : 23.08.2021 (11.00 ಗಂಟೆ). 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 25.08.2021 (17.30 ಗಂಟೆ). 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 27.08.2021 (16.00 ಗಂಟೆ). 8) ತಾಂತ್ರಿಕ ಬಿಡ್ ತೆರವುಗೊಳಿಸಿದ ದಿನಾಂಕ : 30.08.2021 (16.30 ಗಂಟೆ). 9) ಆರ್ಥಿಕ ಬಿಡ್ ತೆರೆವುಗೊಳಿಸುವ ದಿನಾಂಕ : 02.09.2021 (16.30 ಗಂಟೆ). 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ವಾ.ಸಾ.ಸಂ.ಇ/ಕಲಬುರಗಿ/519/ಎಂ.ಸಿ&ಎ/2021-22 ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ಟೆ.ಪ್ರ.ಸಂ: ಕಾಇಂ/ಗ್ರಾಕುನೀ&ನೈವಿಉ/ಟೆಂಡರ್ ನಂ.08/2021-22/ಎಇಂ-2/776 ದಿನಾಂಕ: 09.08.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ "ಜಲ್ ಜೀವನ್ ಮಿಷನ್" ಯೋಜನೆಯಡಿಯಲ್ಲಿ ಮನೆ ಮನೆಗೆ ನಳ್ಳಿ ಸಂಪರ್ಕದ ಮೂಲಕ ನೀರು ಸರಬರಾಜು ಮಾಡುವ ಅಂದಾಜು ಮೊತ್ತ ರೂ. 17.00 ಲಕ್ಷಗಳಿಂದ ರೂ. 327.00 ಲಕ್ಷಗಳವರೆಗಿನ ಕಾರ್ಕಳ ತಾಲ್ಲೂಕಿನ 2 ಪ್ಯಾಕೇಜ್ ಕಾಮಗಾರಿಗಳಿಗೆ, ಕುಂದಾಪುರ ತಾಲ್ಲೂಕಿನ 5 ಪ್ಯಾಕೇಜ್ ಕಾಮಗಾರಿಗಳಿಗೆ ಮತ್ತು ಉಡುಪಿ ತಾಲ್ಲೂಕಿನ 1 ಕಾಮಗಾರಿಗಳಿಗೆ ಇ-ಪೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರನ್ನು (Standard Tender Documents for Procurement of Works) ನ ನಿಬಂಧನೆಗೊಳಪಟ್ಟಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಎನ್ರೋಲ್ಮೆಂಟ್ ದಾಖಲಾತಿಗಳೊಂದಿಗೆ ನೋಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಇ-ಪೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal website **https://www.eproc.karnataka.gov.in** ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.

(1) ಇ-ಟೆಂಡರ್ ಡಾಕ್ಯುಮೆಂಟ್‌ಗಳನ್ನು ಪಡೆದುಕೊಳ್ಳುವ **ದಿನಾಂಕ: 10.08.2021 ರಿಂದ.** (2) ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 18.08.2021 ರ 4.00 (PM) ಗಂಟೆಯವರೆಗೆ.** (3) ಸ್ವೀಕರಿಸಿದ ಟೆಂಡರುಗಳನ್ನು ತೆರೆಯುವ **ದಿನಾಂಕ: 19.08.2021 ರ 4.30 (PM) ಗಂಟೆಯ ನಂತರ.** ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ಅಂತರ್ಜಾಲದ ವೆಬ್‌ಸೈಟ್: https://www.eproc.karnataka.gov.in ನಲ್ಲಿ ಪಡೆಯುಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ನವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ವಾಸಾಇ/ಸನಿಉ/ಎಂಸಿಎ/280/21-22 ದಿ: 10.8.2021

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ. ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಬೆಂಗಳೂರು - 560 024.
ದೂರವಾಣಿ: 080-23412767 e-mail: commissionerahvs@gmail.com

ಸಂಖ್ಯೆ: CAH/VMS/DEV/Equipments/2021-22 ದಿನಾಂಕ: 09-08-2021

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2021-22 ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಫಲಾನುಭವಿಗಳಿಗೆ **ಹಾಲು ಕರೆಯುವ ಯಂತ್ರ ಮತ್ತು ರಬ್ಬರ್ ನೆಲದ ಹಾಸುಗಳನ್ನು** ಖರೀದಿಸುವುದಕ್ಕೆ ಸಂಬಂಧಿಸಿದಂತೆ ಅರ್ಹ ಟೆಂಡರುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ https://eproc.karnataka.gov.in ಮೂಲಕ ಒಂದು ವರ್ಷದ ಅವಧಿಗೆ, ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ಇಟ್ಟ ಮೊತ್ತ: **ರೂ.179.51 ಲಕ್ಷಗಳು.**

ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: **09-08-2021** ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು e-Procurement Platform ನಲ್ಲಿ ದಿನಾಂಕ: **09-08-2021 ರಿಂದ 24-08-2021 ರವರೆಗೆ ಸಾಯಂಕಾಲ 5:30 ಗಂಟೆಯೊಳಗೆ** ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ e-Procurement Platform ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/-
ಉಪ ನಿರ್ದೇಶಕರು
ಪಶುವೈದ್ಯಕೀಯ ಔಷಧಿ ಭಂಢಾರ,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ವಾಸಾಸಂಇ/ಬೆಂ.ನ/1119/MAA Comm/21-22

ಪ್ರಜಾವಾಣಿ

EXAM ಪರಿಚಯಿಸುತ್ತಿದ್ದೇವೆ MASTERMIND

DH DECCAN HERALD

ಯು.ಪಿ.ಎಸ್.ಸಿ, ಕೆ.ಪಿ.ಎಸ್.ಸಿ, ಪಿ.ಎಸ್.ಐ, ಎಫ್.ಡಿ.ಎ, ಬ್ಯಾಂಕಿಂಗ್ ಪಿ.ಓ ಇತ್ಯಾದಿ

ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಗಾಗಿ ನಿಮ್ಮ ಇ-ಮಿತ್ರ

ವಿಶೇಷ ಆರಂಭಿಕ ಕೊಡುಗೆ*
~~₹599/-~~
₹399/-
ಒಂದು ವರ್ಷದ ಅವಧಿಗೆ

*ಸೆಪ್ಟೆಂಬರ್, 2021 ರಿಂದ ಪ್ರಾರಂಭ

● ದ್ವಿಭಾಷಿ ಇ-ಪೇಪರ್ (ಇಂಗ್ಲಿಷ್ ಮತ್ತು ಕನ್ನಡದಲ್ಲಿ), ವಾರದ 5 ದಿನ ಲಭ್ಯ ● ಪರೀಕ್ಷಾ ಸಹಾಯಕ ಟಿಪ್ಸ್, ಅಪ್‌ಡೇಟ್ಸ್, ಅಭ್ಯಾಸ ಪ್ರಶ್ನೆ ಪತ್ರಿಕೆಗಳನ್ನು ಪಡೆಯಿರಿ ಹಾಗೂ ಆರ್ಕೈವ್ ಮಾಡಿದ ವಿಷಯಗಳನ್ನು ವೀಕ್ಷಿಸಿ ● ಆಯ್ದ ವಿಷಯಗಳನ್ನು ವೀಡಿಯೊ ಸ್ವರೂಪದಲ್ಲಿ ವೀಕ್ಷಿಸಬಹುದು ● ನಿಮ್ಮ ಆಯ್ಕೆಯ ಆರ್ಟಿಕಲ್ಸ್ ಡೌನ್‌ಲೋಡ್ ಮಾಡಬಹುದು

ನಿಮ್ಮ ಪರೀಕ್ಷಾ ಸಿದ್ಧತೆಗೆ ಸಮಗ್ರ ವಿಷಯಗಳನ್ನು ಒಳಗೊಂಡಿದೆ

ವಸ್ತುನಿಷ್ಠ ವಿಷಯಗಳು
ಪ್ರಚಲಿತ ವಿದ್ಯಮಾನ । ಸ್ಥಿರ ವಿಷಯಗಳು । ಸಾಮಾನ್ಯ ಜ್ಞಾನ ಮಾನಸಿಕ ಸಾಮರ್ಥ್ಯ

ವಿವರಣಾತ್ಮಕ ವಿಷಯಗಳು
ಭಾಷೆಯ ಅತ್ಯುನ್ನತ ಬಳಕೆ । ವಿಶ್ಲೇಷಣೆ ಮತ್ತು ಅಭಿಪ್ರಾಯ । ಸಂಪಾದಕೀಯಗಳು । ಪ್ರಬಂಧ ಮತ್ತು ಅನುವಾದ

ಸಂದರ್ಶನ
ವ್ಯಕ್ತಿತ್ವ ವಿಕಸನ । ಸಂವಹನ ಕಲೆ । ಉಪಯುಕ್ತ ಸಲಹೆಗಳು

ಚಂದಾದಾರರಾಗಲು bit.ly/emmstudent ಭೇಟಿ ಕೊಡಿ ಅಥವಾ QR code ಸ್ಕ್ಯಾನ್ ಮಾಡಿ

ಚಂದಾದಾರರಾಗಿ ಆಕರ್ಷಕ ಬಹುಮಾನಗಳನ್ನು ಗೆಲ್ಲಿ*



1 ಎಲೆಕ್ಟ್ರಿಕ್ ಸ್ಕೂಟರ್ | 20 ಸ್ಮಾರ್ಟ್ ವಾಚುಗಳು | 3 ಸ್ಮಾರ್ಟ್ ಫೋನ್‌ಗಳು | 3 ಟ್ಯಾಬ್ಲೆಟ್‌ಗಳು

*ಷರತ್ತುಗಳು ಅನ್ವಯ.

ಚಂದಾದಾರರಾಗಲು ಸಂಪರ್ಕಿಸಿ | ಬೆಂಗಳೂರು ಜಿಲ್ಲೆ: 98454 42703 ಬೆಂಗಳೂರು ಗ್ರಾಮಾಂತರ: 96069 12160 | ಮೈಸೂರು: 98450 70167 ಮಂಗಳೂರು: 98808 42842 | ದಾವಣಗೆರೆ: 94489 14995 ಉತ್ತರ ಕರ್ನಾಟಕ: 96069 31753 | ಹೆಚ್ಚಿನ ಮಾಹಿತಿಗಾಗಿ subscribe.mastermind@printersmysore.co.in ಗೆ ಇ-ಮೇಲ್ ಮಾಡಿ

ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಸಂದರ್ಶನ • ನಿಯಮ ಉಲ್ಲಂಘನೆ ಬಗ್ಗೆ ಮೊಬೈಲ್‌ಗೆ ಎಸ್‌ಎಂಎಸ್ • ನೋಂದಣಿ ಫಲಕ ಗುರುತಿಸುವ ಕ್ಯಾಮೆರಾ ಅಳವಡಿಕೆ

‘ಕಿರಿಕಿರಿ ಆರೋಪ ಮುಕ್ತಿಗೆ ಹೊಸ ವ್ಯವಸ್ಥೆ’

• ಸಂತೋಷ ಜಿಗಳಿಕೊಪ್ಪ

ನಿತ್ಯ ಸಂಚಾರ ಸದಾ ಕಿರಿಕಿರಿ 6

ಬೆಂಗಳೂರು: ‘ಸಂಚಾರ ಪೊಲೀಸರು ವಾಹನಗಳನ್ನು ವಿನಾಕಾರಣ ಅಡ್ಡಗಟ್ಟಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿರುವ ಆರೋಪಗಳು ಹಲವು ದಿನಗಳಿಂದಲೂ ಕೇಳಿಬರುತ್ತಿವೆ. ಇಂಥ ಆರೋಪಗಳಿಂದ ಮುಕ್ತಿ ಪಡೆಯಲು ಹೊಸ ವ್ಯವಸ್ಥೆಯನ್ನು ನಗರದಲ್ಲಿ ಜಾರಿಗೆ ತರಲು ಸಿದ್ಧತೆ ನಡೆದಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದರು.

‘ಪ್ರಜಾವಾಣಿ’ಯಲ್ಲಿ ಪ್ರಕಟಗೊಂಡ ‘ನಿತ್ಯ ಸಂಚಾರ – ಸದಾ ಕಿರಿಕಿರಿ’ ಸರಣಿ ವರದಿಗಳಿಗೆ ಪ್ರತಿಕ್ರಿಯಿಸಿರುವ ಅವರು, ವಿಶೇಷ ಸಂದರ್ಶನ ನೀಡಿದ್ದಾರೆ. ಅದರ ವಿವರ ಇಲ್ಲಿದೆ.

● ಪೊಲೀಸರು ವಿನಾಕಾರಣ ಕಿರುಕುಳ ನೀಡುತ್ತಿರುವ ಬಗ್ಗೆ ಆರೋಪವಿದೆ. ಈ ಬಗ್ಗೆ ಕ್ರಮವೇನು?

ರವಿಕಾಂತೇಗೌಡ; ಕಣ್ಣಿಗೆ ಕಾಣುವ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಮಾತ್ರ ವಾಹನ ನಿಲ್ಲಿಸಿ ತಪಾಸಣೆ ನಡೆಸುವಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ದಟ್ಟಣೆ ಇರುವ ಸಮಯದಲ್ಲಿ ವಾಹನ ತಡೆಯದಂತೆಯೂ ಎಚ್ಚರಿಸಲಾಗಿದೆ. ಆಕಸ್ಮಾತ್, ಯಾರಾದರೂ ಪೊಲೀಸರು ವಿನಾಕಾರಣ ವಾಹನ ತಡೆದರೆ ನನಗೆ ದೂರು ನೀಡಬಹುದು. ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

● ವರ್ಷಗಟ್ಟಲೇ ಕಾದು ಪೊಲೀಸರು ದಂಡ ಸಂಗ್ರಹಿಸುತ್ತಿದ್ದಾರೆ. ಮೊದಲ ಬಾರಿಯೇ ಉಲ್ಲಂಘನೆ ಪ್ರಕರಣ ಗಮನಕ್ಕೆ ತಂದರೆ ಸಾರ್ವಜನಿಕರು ಮತ್ತೊಮ್ಮೆ ತಪ್ಪು ಮಾಡುವುದಿಲ್ಲ. ದಂಡ ಸಂಗ್ರಹ ಪ್ರಕ್ರಿಯೆ ಇಷ್ಟು ನಿಧಾನ ಏಕೆ?

ರವಿಕಾಂತೇಗೌಡ: ಪೊಲೀಸರು ಏಕಾಏಕಿ ವಾಹನ ಅಡ್ಡಗಟ್ಟಿ ಹಳೇ ಪ್ರಕರಣಗಳ ದಂಡ ಕೇಳುತ್ತಾರೆಂಬ ದೂರುಗಳು ಇವೆ. ತಮ್ಮ ವಾಹನದ ಮೇಲೆ ದಂಡ ಇರುವ ಮಾಹಿತಿಯೇ ತಮಗೆ ಗೊತ್ತಿರುವುದಿಲ್ಲವೆಂದು ಕೆಲವರು ತಿಳಿಸುತ್ತಿದ್ದಾರೆ. ಇದಕ್ಕೆ ಒಂದೇ ಪರಿಹಾರ, ನಿಯಮ ಉಲ್ಲಂಘನೆ ಹಳೇ ಪ್ರಕರಣಗಳನ್ನು ವಾರಕ್ಕೊಮ್ಮೆ ಪರಿಶೀಲಿಸಿಕೊಳ್ಳುವುದು. ನಮ್ಮ ಜಾಲತಾಣದಲ್ಲಿ (http://bangaloretrafficpolice.gov.in) ಸಾಕ್ಷ್ಯ ಸಮೇತ ದಂಡ ಮಾಹಿತಿ ದೊರೆಯುತ್ತದೆ. ಜಾಲತಾಣದಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಪ್ರಕರಣ ಪರಿಶೀಲಿಸಬಹುದು. ತಪ್ಪು ಮಾಹಿತಿ ದಾಖಲಾಗಿದ್ದರೆ ದೂರು ನೀಡಬಹುದು.

● ಕಮಿಷನರ್ ಹಾಗೂ ನೀವು ಸೂಚನೆ ನೀಡಿದರೂ ಸಂಚಾರ ಪೊಲೀಸರ ಕಿರಿಕಿರಿ ಮುಂದುವರಿದಿದೆ. ಇದಕ್ಕೆ ಪರಿಹಾರವಿಲ್ಲವೇ?

ರವಿಕಾಂತೇಗೌಡ: ಖಂಡಿತ ಇದೆ. ಇದಕ್ಕೊಂದು ಹೊಸ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ. ನಿಯಮ ಉಲ್ಲಂಘಿಸುವ ಸಾರ್ವಜನಿಕರ ಮೊಬೈಲ್‌ಗೆ ತ್ವರಿತವಾಗಿ ಎಸ್‌ಎಂಎಸ್ ಕಳುಹಿಸಲು ತಯಾರಿ ನಡೆದಿದೆ. ಮುಖ್ಯಮಂತ್ರಿಯವರ ಬೆಂಗಳೂರು ವಿಷನ್–2022 ಅಡಿ ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ) ಹಾಗೂ ಹೆಚ್ಚು ದಟ್ಟಣೆಯ 12 ರಸ್ತೆಗಳಲ್ಲಿ ನಿಯಮ ಉಲ್ಲಂಘನೆಗಳನ್ನು ಸಂಪರ್ಕರಹಿತವಾಗಿ ಪತ್ತೆ ಮಾಡುವುದು ಹಾಗೂ ಸಂಪರ್ಕರಹಿತವಾಗಿ ದಂಡ ಸಂಗ್ರಹಿಸುವ ವ್ಯವಸ್ಥೆಯು ಸದ್ಯದಲ್ಲೇ ಜಾರಿಗೆ ಬರಲಿದೆ.

●ದಂಡ ಸಂಗ್ರಹಿಸಲು ಪೊಲೀಸರಿಗೆ ಗುರಿ ನೀಡಲಾಗಿದೆಯಾ?

ರವಿಕಾಂತೇಗೌಡ; ದಂಡ ಸಂಗ್ರಹಿಸಲು ನಮಗೆ ಆಸಕ್ತಿ ಇಲ್ಲ. ದಂಡ ಹಾಕದ ರೀತಿಯಲ್ಲಿ ವಾಹನ ಸವಾರರು ರಸ್ತೆ ಮೇಲೆ ನಡೆದುಕೊಂಡರೆ ಅದಕ್ಕಿಂತ ಖುಷಿ ಸಂಗತಿ ಮತ್ತೊಂದಿಲ್ಲ. ಎಲ್ಲರೂ ನಿಯಮ ಪಾಲನೆ ಮಾಡಿದರೆ, ಅಪಘಾತಗಳು ಕಡಿಮೆಯಾಗಿ ಸಾವು ನೋವುಗಳು ತಪ್ಪುತ್ತವೆ.

●ಸಿಗ್ನಲ್‌ಗಳು ಹಾಗೂ ಸಂಚಾರ ಸೂಚನಾ ಗುರುತುಗಳ ಎಡವಟ್ಟಿನಿಂದ ತಪ್ಪು ಮಾಡದವರಿಗೂ ದಂಡ ಬೀಳುತ್ತಿದೆಯಲ್ಲ?

ರವಿಕಾಂತೇಗೌಡ: ನಗರದ ಬಹುತೇಕ ಕಡೆ ಸಿಗ್ನಲ್‌ಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಕ್ಯಾಮೆರಾಗಳು ಉತ್ತಮವಾಗಿವೆ. ಯಾವುದಾದರೂ ನಿರ್ದಿಷ್ಟ ಪ್ರಕರಣವಿದ್ದರೆ ನನಗೆ ದೂರು ನೀಡಬೇಕು. ತಪ್ಪು ಮಾಡದಿದ್ದರೆ ದಂಡ ಪಾವತಿಸುವ ಅಗತ್ಯವೂ ಇರುವುದಿಲ್ಲ.

●ದಂಡ ಸಂಗ್ರಹಿಸುವ ಪೊಲೀಸರ ಮೇಲೆ ‘ಕ್ಯಾಮೆರಾ’ ಕಣ್ಣು ಏಕಿಲ್ಲ?

ರವಿಕಾಂತೇಗೌಡ: ದಂಡ ಸಂಗ್ರಹ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಪ್ರಯತ್ನಿಸಲಾಗುತ್ತಿದೆ. ಪ್ರತಿಯೊಬ್ಬ ಸಿಬ್ಬಂದಿಗೂ ಬಾಡಿವೋರ್ನ್ ಕ್ಯಾಮೆರಾ ನೀಡಲು ತೀರ್ಮಾನಿಸಲಾಗಿದೆ. ಮೂರು ತಿಂಗಳಿನೊಳಗೆ ಎಲ್ಲರಿಗೂ ಕ್ಯಾಮೆರಾ ವಿತರಿಸಲಾಗುವುದು. ದಂಡ ಸಂಗ್ರಹ ಪ್ರಕ್ರಿಯೆ ಕ್ಯಾಮೆರಾದಲ್ಲಿ ಸೆರೆಯಾಗಲಿದ್ದು, ಅದನ್ನು ಪರಿಶೀಲಿಸಿ ತಪ್ಪಿತಸ್ಥ ಪೊಲೀಸರ ವಿರುದ್ಧವೂ ಕ್ರಮ ಜರುಗಿಸಲಾಗುವುದು.

●ತಂತ್ರಜ್ಞಾನ ಬಹಳ ಬೆಳೆದಿದೆ. ದಂಡ ಪಾವತಿಸಿದ ರಶೀದಿ ಆನ್‌ಲೈನ್‌ನಲ್ಲಿ ಏಕೆ ಸಿಗುವುದಿಲ್ಲ?

ರವಿಕಾಂತೇಗೌಡ: ಈ ಬಗ್ಗೆ ಪರಿಶೀಲಿಸಲಾಗುವುದು.

● ಟೋಯಿಂಗ್ ಸಿಬ್ಬಂದಿ ದುರ್ವರ್ತನೆ ಹೆಚ್ಚುತ್ತಿದ್ದು, ಅದಕ್ಕೆ ಕೊನೆ ಇಲ್ಲವೇ?

ರವಿಕಾಂತೇಗೌಡ: ವಾಹನಗಳ ಟೋಯಿಂಗ್ ಜವಾಬ್ದಾರಿಯನ್ನು ಖಾಸಗಿ ಏಜೆನ್ಸಿಗಳಿಗೆ ನೀಡಲಾಗಿದೆ. ದುರ್ವರ್ತನೆ ಬಗ್ಗೆ ದೂರುಗಳು ಬಂದಾಗ, ಅಂಥ ಏಜೆನ್ಸಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಸಿಬ್ಬಂದಿ ಮೇಲೂ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಬಿ.ಆರ್. ರವಿಕಾಂತೇಗೌಡ

‘ಲಂಚ ಕೊಡುವುದನ್ನು ನಿಲ್ಲಿಸಿ’

‘ಸಂಚಾರ ನಿಯಮ ಉಲ್ಲಂಘನೆ ಮಾಡುವುದಲ್ಲದೇ, ಪೊಲೀಸರಿಗೆ ಲಂಚ ಕೊಟ್ಟು ವಾಹನ ಬಿಡಿಸಿಕೊಂಡು ಹೋಗುವವರು ತಮ್ಮ ಮನಸ್ಥಿತಿ ಬದಲಾಯಿಸಿಕೊಳ್ಳಬೇಕಿದೆ. ಯಾರಿಗೂ ಲಂಚ ಕೊಡುವ ಅಗತ್ಯವಿಲ್ಲ. ಮೊದಲು ಲಂಚ ಕೊಡುವುದನ್ನು ನಿಲ್ಲಿಸಿ. ಒತ್ತಾಯದಿಂದ ಯಾರಾದರೂ ಪೊಲೀಸರು ಲಂಚ ಕೇಳಿದರೆ ನೇರವಾಗಿ ನನಗೆ ದೂರು ನೀಡಿ’ ಎಂದು ರವಿಕಾಂತೇಗೌಡ ಹೇಳಿದರು.

‘ದಂಡದ ಮೊತ್ತ ಹೆಚ್ಚಳವಾದಾಗಿನಿಂದ ಪೊಲೀಸರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ‘ಇದ್ದಷ್ಟು ಕೊಟ್ಟು ಹೋಗಿ’ ಎನ್ನುತ್ತಿದ್ದಾರಲ್ಲ’ ಎಂದು ಪ್ರಶ್ನೆಗೆ ಉತ್ತರಿಸಿದ ಅವರು, ‘ಜಾಲತಾಣ ಹಾಗೂ ಇ–ಮೇಲ್ ಮೂಲಕವೂ ದೂರು ನೀಡಬಹುದು. ಹೆಸರು ಗೋಪ್ಯವಾಗಿರಿಸಿ ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ. ನಿಯಮ ಉಲ್ಲಂಘನೆ ಮಾಡುವ ಜನರು ಯಾರಿಗೂ ಲಂಚ ನೀಡಬಾರದು.

ದಂಡವನ್ನು ಪಾವತಿಸಿ ರಶೀದಿ ಪಡೆಯಬೇಕು‘ ಎಂದರು.

ಸುದ್ದಿ 2 ನಿಮಿಷ

ರೈತರು, ಕನ್ನಡ ಕಾರ್ಯಕರ್ತರ ಮೇಲಿನ ಕೇಸ್ ರದ್ದು: ಆರಗ

ಬೆಂಗಳೂರು: 'ರೈತರು, ಕನ್ನಡ ಪರ ಸಂಘಟನೆಗಳ ಮೇಲೆ ಕಾರಣ ಇಲ್ಲದೆ ಹಿಂದಿನ ಸರ್ಕಾರ ಕೇಸ್‌ಗಳನ್ನು ಹಾಕಿದೆ. ಅದನ್ನು ಹಿಂಪಡೆಯುವಂತೆ ಆದೇಶ ಹೊರಡಿಸಲಾಗುವುದು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಕೇಸ್ ವಾಪಸು ಪಡೆಯುವಂತೆ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ ಬರೆದ ಪತ್ರಕ್ಕೆ ಪ್ರತಿಕ್ರಿಯಿಸಿದ ಅವರು, ‘ಈ ಪತ್ರದ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸುತ್ತೇನೆ. ಪ್ರಕರಣ ವಾಪಸ್ ಪಡೆಯಲು ಆದೇಶ ನೀಡಲಾಗುವುದು’ ಎಂದು ತಿಳಿಸಿದರು.



ಅಪ್ಪಚ್ಚು ರಂಜನ್ ಸಚಿವ ಸ್ಥಾನ ಬೇಡಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ‘ಗೊಂದಲ ಏನೂ ಇಲ್ಲ. ಸಂಪುಟದಲ್ಲಿ ಸ್ಥಾನ ಖಾಲಿ ಇದೆ. ಅದಕ್ಕೆ ಬೇಡಿಕೆ ಇಟ್ಟಿದ್ದಾರೆ. ಅವರು ಕೂಡ ಪಕ್ಷದಲ್ಲಿ ಹಿರಿಯರು’ ಎಂದರು.

ಮಾತಿನ ಮಧ್ಯೆ ಈಶ್ವರಪ್ಪ ಅವಾಚ್ಯ ಪದ ಬಳಸಿದ ಬಗ್ಗೆ, ‘ಪಕ್ಷದವರು, ಸಂಘಟನೆಯವರ ಕಗ್ಗೊಲೆಗಳು ಆಗಿವೆ. ಆ ನೋವಿನ ಹಿನ್ನೆಲೆಯಲ್ಲಿ ಅವರು ಮಾತನಾಡಿದ್ದಾರೆ. ಅದನ್ನು ಬೆಳೆಸುವುದು ಬೇಡ’ ಎಂದು ಸಮರ್ಥಿಸಿಕೊಂಡರು.

ಅಕ್ರಮ ಕಟ್ಟಡ ತೆರವಿಗೆ ಒತ್ತಾಯ

ಹೆಸರಘಟ್ಟ: ಸರ್ಕಾರಿ ಅಲೆಮನೆ ತೋಪಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ವಾಣಿಜ್ಯ ಕಟ್ಟಡಗಳನ್ನು ತೆರವುಗೊಳಿಸಿ ಎಂದು ಹೆಸರಘಟ್ಟ ಗ್ರಾಮಸಭೆಯಲ್ಲಿ ಗ್ರಾಮಸ್ಥರು ಒತ್ತಾಯಿಸಿದರು.

’ಸರ್ವೆ ನಂ 51 ರಲ್ಲಿ ಒಂಬತ್ತು ಗುಂಟೆ ಅಲೆಮನೆ ತೋಪು ಇದೆ. ಇದರಲ್ಲಿ ಐದಾರು ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಿಕೊಂಡು ಪ್ರಭಾವಿಯೊಬ್ಬರು ಬಾಡಿಗೆ ಪಡೆಯುತ್ತಿದ್ದಾರೆ. ಅಲೆಮನೆ ತೋಪಿನ ಜಾಗವನ್ನು ಅಳತೆ ಮಾಡಿ ಹದ್ದುಬಸ್ತು ಮಾಡಿ ಎಂದು ಅಧಿಕಾರಿಗಳಿಗೆ ಮನವಿ ಕೊಟ್ಟು ಸಾಕಾಗಿದೆ. ಪಂಚಾಯಿತಿ ಗಮನಕ್ಕೆ ತಂದರೂ ಯಾವ ಪ್ರಯೋಜನವು ಆಗಿಲ್ಲ‘ ಎಂದು ಗ್ರಾಮದ ನಿವಾಸಿ ನಾರಾಯಣ ಸ್ವಾಮಿ ಮನವಿ ಮಾಡಿಕೊಂಡರು.

’ರಾಗಿ ಬಿತ್ತನೆ ಮಾಡಲು ಈಗ ಒಳ್ಳೆಯ ಸಮಯ. ಬಿತ್ತನೆ ಮಾಡಲು ರಾಗಿ ಬೀಜ ನೀಡಿದ್ದೀರ. ಅದರೆ, ಗೊಬ್ಬರ ನೀಡಿಲ್ಲ. ಬಿತ್ತನೆ ಕಾಲ ಮುಗಿದ ಮೇಲೆ ಗೊಬ್ಬರ ನೀಡುತ್ತೀರ?‘ ಎಂದು ರೈತರೊಬ್ಬರು ಪ್ರಶ್ನಿಸಿದರು.

ರೈತರ ಬೇಡಿಕೆಗೆ ಸ್ಪಂದಿಸಿದ ಕೃಷಿ ಅಧಿಕಾರಿ ಈ ಕೂಡಲೇ ಗೊಬ್ಬರವನ್ನು ರೈತರಿಗೆ ನೀಡುವ ವ್ಯವಸ್ಥೆ ಮಾಡುತ್ತೇನೆ ಎಂದರು.

ಪೊಲೀಸರ ಸೋಗಿನಲ್ಲಿ ಅಪಹರಣ:ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ವ್ಯಾಪಾರಿಗಳಿಬ್ಬರನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಆರೋಪದಡಿ ಮೂವರನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನದೀಂ ಷರೀಫ್, ಸಂತೋಷ್ ಹಾಗೂ ಅಜರ್ ಬಂಧಿತರು. ಚಿನ್ನದ ವ್ಯಾಪಾರಿ ಅರವಿಂದ್ ಮೆಹ್ತಾ ಹಾಗೂ ದಿವಾಕರ್ ರೆಡ್ಡಿ ಎಂಬುವವರನ್ನು ಅಪಹರಿಸಿದ್ದ ಬಗ್ಗೆ ದೂರು ದಾಖಲಾಗಿತ್ತು. ಅದರನ್ವಯ ಆರೋಪಿಗಳನ್ನು ಬಂಧಿಸಲಾಗಿದೆ. ಸದ್ಯ ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಅರವಿಂದ್ ಮೆಹ್ತಾ ವಿರುದ್ಧ ದೆಹಲಿ ಹಾಗೂ ಹಲವು ರಾಜ್ಯಗಳಲ್ಲಿ ವಂಚನೆ ಪ್ರಕರಣಗಳು ದಾಖಲಾಗಿದ್ದವು. ಅದನ್ನು ತಿಳಿದುಕೊಂಡಿದ್ದ ಆರೋಪಿಗಳು, ಪೊಲೀಸರ ಸೋಗಿನಲ್ಲಿ ಇಬ್ಬರೂ ವ್ಯಾಪಾರಿಗಳನ್ನು ಹೋಟೆಲೊಂದರಲ್ಲಿ ಭೇಟಿಯಾಗಿದ್ದರು. ‘ನಿಮ್ಮ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಬಂಧಿಸುತ್ತೇವೆ. ಈ ರೀತಿ ಮಾಡಬಾರದೆಂದರೆ ಹಣ ನೀಡಬೇಕು’ ಎಂದು ಬೆದರಿಸಿದ್ದರು.’

’ಕಾರಿನಲ್ಲಿ ಇಬ್ಬರನ್ನೂ ಅಪಹರಿಸಿ ಕೋರಮಂಗಲ ಬಳಿಯ ಹೋಟೆಲೊಂದಕ್ಕೆ ಕರೆದೊಯ್ದು ಅಕ್ರಮ ಬಂಧನದಲ್ಲಿಟ್ಟಿದ್ದರು. ₹ 10 ಲಕ್ಷ ನೀಡುವಂತೆ ಬೇಡಿಕೆಯಿಟ್ಟಿದ್ದರು. ಈ ಬಗ್ಗೆ ವ್ಯಾಪಾರಿಗಳ ಸ್ನೇಹಿತರೊಬ್ಬರು ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿ ವ್ಯಾಪಾರಿಗಳನ್ನು ರಕ್ಷಿಸಲಾಗಿದೆ’ ಎಂದೂ ತಿಳಿಸಿದರು.

ಪಾರಿವಾಳ ಹಿಡಿಯಲು ಹೋಗಿ ಯುವಕ ಸಾವು

ಬೆಂಗಳೂರು: ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ಪಾರಿವಾಳ ಹಿಡಿಯಲು ಹೋಗಿ ಕಟ್ಟಡದಿಂದ ಬಿದ್ದು ಉಮರ್ ಫಾರೂಕ್ (19) ಎಂಬುವವರು ಮೃತಪಟ್ಟಿದ್ದಾರೆ.

'ಭೂಪಸಂದ್ರದ ನಿವಾಸಿ ಉಮರ್ ಫಾರೂಕ್ ಅವರು ಸೋಮವಾರ ರಾತ್ರಿ ಪಾರಿವಾಳ ಹಿಡಿಯಲು ಹೋಗಿದ್ದಾಗ ಈ ಅವಘಡ ಸಂಭವಿಸಿದೆ. ಈ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪಾರಿವಾಳ ಹಿಡಿಯುವುದನ್ನು ಹವ್ಯಾಸ ಮಾಡಿಕೊಂಡಿದ್ದ ಉಮರ್, ಹಲವು ಕಟ್ಟಡಗಳನ್ನು ಏರಿ ಪಾರಿವಾಳ ಹಿಡಿಯುತ್ತಿದ್ದರು. ಅವುಗಳನ್ನು ಮನೆಗೆ ತಂದು ಸಾಕುತ್ತಿದ್ದರು. ಸೋಮವಾರ ರಾತ್ರಿಯೂ ನಾಲ್ಕು ಅಂತಸ್ತಿನ ಕಟ್ಟಡ ಏರಿದ್ದರು. 4ನೇ ಮಹಡಿಯಲ್ಲಿ ನಿಂತು ಪಾರಿವಾಳ ಹಿಡಿಯುತ್ತಿದ್ದರು. ಅದೇ ಸಂದರ್ಭದಲ್ಲೇ ಆಯತಪ್ಪಿ ಮಹಡಿಯಿಂದ ಬಿದ್ದು ಮೃತಪಟ್ಟಿದ್ದಾರೆ’ ಎಂದೂ ತಿಳಿಸಿದರು.

‘ಘಟನೆ ಬಗ್ಗೆ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದೂ ಪೊಲೀಸರು ಹೇಳಿದರು.

ಸಂಚಾರ ನಿರ್ವಹಣಾ ಕೇಂದ್ರಕ್ಕೆ ಗೃಹ ಸಚಿವ ಭೇಟಿ

ಬೆಂಗಳೂರು: ನೂತನ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಬೆಂಗಳೂರಿನ ಸಂಚಾರ ನಿರ್ವಹಣಾ ಕೇಂದ್ರಕ್ಕೆ (ಟಿಎಂಸಿ) ಮಂಗಳವಾರ ಭೇಟಿ ನೀಡಿ, ವ್ಯವಸ್ಥೆ ಬಗ್ಗೆ ತಿಳಿದುಕೊಂಡರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಜೊತೆಯಲ್ಲಿ ಕೇಂದ್ರಕ್ಕೆ ಬಂದಿದ್ದ ಸಚಿವ, ಕೇಂದ್ರದ ಕೆಲಸಗಳ ಬಗ್ಗೆ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರಿಂದ ಮಾಹಿತಿ ಪಡೆದುಕೊಂಡರು.

ನಗರದ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಅಳವಡಿಸಿರುವ ಕ್ಯಾಮೆರಾಗಳು, ಅವುಗಳಲ್ಲಿ ಸೆರೆಯಾಗುವ ದೃಶ್ಯಗಳು ಹಾಗೂ ದಂಡ ವಿಧಿಸುವ ಪ್ರಕ್ರಿಯೆಯನ್ನು ವೀಕ್ಷಿಸಿದರು. ಕೇಂದ್ರದ ಕಾರ್ಯಾಚರಣೆ ಬಗ್ಗೆಯೂ ಸಿಬ್ಬಂದಿ ಅಭಿಪ್ರಾಯ ಪಡೆದರು.

ಇದೇ ವೇಳೆಯೇ ಅಧಿಕಾರಿಗಳ ಸಭೆ ನಡೆಸಿದ ಸಚಿವ ಜ್ಞಾನೇಂದ್ರ, ನಗರದ ಸಂಚಾರ ವ್ಯವಸ್ಥೆ ಬಗ್ಗೆ ವಿಚಾರಿಸಿದರು ಎಂದು ಗೊತ್ತಾಗಿದೆ.

‘ಮನಸ್ಸು ಸ್ಥಿರವಾದರೆ ಮೋಕ್ಷಕ್ಕೆ ಮಾರ್ಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನಸ್ಸು ಒಂದೇ ಕಡೆ ಸ್ಥಿರವಾದರೆ ಮೋಕ್ಷಕ್ಕೆ ಮಾರ್ಗ ದೊರೆಯಲಿದೆ. ಅದೇ ಚರವಾದರೆ ಅದು ಸಂಸಾರವಾಗುತ್ತದೆ’ ಎಂದು ರಾಮ ಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ತಿಳಿಸಿದರು. ಗಿರಿನಗರದ ರಾಮಾಶ್ರಮದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ವೇದಮೂರ್ತಿ ವಿಷ್ಣು ಡೋಂಗ್ರೆ ಅವರ ‘ಶ್ರೀ ವಿಷ್ಣು ಸಹಸ್ರನಾಮ ವಿಷ್ಣು ವ್ಯಾಖ್ಯಾ’ ಪುಸ್ತಕ ಬಿಡುಗಡೆಮಾಡಿ ಮಾತನಾಡಿದರು.

ಇಂಡೇನ್ ಎಲ್‌ಪಿಜಿ ಸಂಪರ್ಕಕ್ಕಾಗಿ ಮಿಸ್ಡ್ ಕಾಲ್ ಮಾಡಿ!

ಬೆಂಗಳೂರು: ಇಂಡೇನ್ ಅಡುಗೆ ಅನಿಲ ಸಂಪರ್ಕ ಪಡೆಯಲು ಮಿಸ್ಡ್ ಕಾಲ್ (ತಪ್ಪಿದ ಕರೆ) ಮಾಡಿದರೂ ಸಾಕು, ಸೇವೆ ಒದಗಿಸುವ ನೂತನ ಸೌಲಭ್ಯವನ್ನು ಇಂಡಿಯನ್ ಆಯಿಲ್ ಕಂಪನಿಯು ದೇಶದಾದ್ಯಂತ ಪ್ರಾರಂಭಿಸಿದೆ.

ಹೊಸ ಸಂಪರ್ಕಕ್ಕಾಗಿ 8454955555 ಮಿಸ್ಡ್ ಕಾಲ್ ಮಾಡಿದರೆ ಇಂಡೇನ್ ಎಲ್‌ಪಿಜಿ ಸಂಸ್ಥೆಯ ಸಿಬ್ಬಂದಿ ಗ್ರಾಹಕರನ್ನು ಸಂಪರ್ಕಿಸಲಿದ್ದಾರೆ. ಕಂಪನಿಯ ಮುಖ್ಯಸ್ಥ ಎಸ್.ಎಂ. ವೈದ್ಯ ಅವರು ಈ ಸೌಲಭ್ಯಕ್ಕೆ ಸೋಮವಾರ ಚಾಲನೆ ನೀಡಿದರು.

ಈಗಾಗಲೇ ಅಡುಗೆ ಅನಿಲದ ಸಂಪರ್ಕ ಪಡೆದಿರುವ ಗ್ರಾಹಕರು, ಸಿಲಿಂಡರ್ ಮರುಭರ್ತಿ ಸೇವೆ ಪಡೆಯಲೂ, ಈ ಸಂಖ್ಯೆಗೆ ಕರೆ ಮಾಡಬಹುದು.

ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ಕಂಪನಿಯು ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದೆ. ಎಲ್‌ಪಿಜಿ ಸಿಲಿಂಡರ್‌ಗೆ ಮತ್ತು ಭರ್ತಿಗೆ , ಕಂಪನಿಯ ‘ಇಂಡಿಯನ್ ಆಯಿಲ್ ಒನ್ ಆ್ಯಪ್’, https://cx. indianoil. in.ಪೋರ್ಟಲ್ ಅನ್ನು ಸಂಪರ್ಕಿಸಬಹುದು. ಅಲ್ಲದೆ, ವಾಟ್ಸ್‌ಆ್ಯಪ್ ಸಂಖ್ಯೆ 7588888824 ಸಂಪರ್ಕಿಸುವ ಮೂಲಕ ಅಥವಾ 7718955555ಗೆ ಸಂದೇಶ ಕಳುಹಿಸುವ ಮೂಲಕ ಎಲ್‌ಪಿಜಿ ಸಿಲಿಂಡರ್ ಆರ್ಡರ್ ಮಾಡಬಹುದು ಎಂದು ಕಂಪನಿ ಪ್ರಕಟಣೆ ತಿಳಿಸಿದೆ.

ಧ್ವಜ ಪಥ ಸಂಚಲನ ಜಾಥಾ

ಬೆಂಗಳೂರು: ಕ್ವಿಟ್ ಇಂಡಿಯಾ ಚಳವಳಿ ಅಂಗವಾಗಿ ಕಾಂಗ್ರೆಸ್ ಭವನದಿಂದ ಕ್ವೀನ್ಸ್ ರಸ್ತೆಯಲ್ಲಿನ ಕೆಪಿಸಿಸಿ ಕಚೇರಿವರೆಗೆ ಸೇವಾದಳ ಸೋಮವಾರ ಹಮ್ಮಿಕೊಂಡಿದ್ದ ಧ್ವಜ ಪಥ ಸಂಚಲನ ಜಾಥಾಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ‘ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ತಿರುವು ನೀಡಿದ ಈ ಚಳವಳಿ ಆರಂಭವಾಗಿದ್ದು, ಆಗಸ್ಟ್ 9ರಂದು. ಮಹಾತ್ಮಾಗಾಂಧಿ ಅವರು ಈ ಚಳವಳಿಯನ್ನು ಮುಂಬೈಯಲ್ಲಿ ತಮ್ಮ ಬೆಂಬಲಿಗರೊಂದಿಗೆ ಆರಂಭಿಸಿದ್ದರು. ಇದರ ಉದ್ದೇಶ ಸ್ವಾತಂತ್ರ್ಯ ಪಡೆಯುವುದಾಗಿತ್ತು’ ಎಂದರು.

‘ಇಂದು ಅಧಿಕಾರದಲ್ಲಿರುವ ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳು ಜನರ ಹಿತ ಕಾಪಾಡುವಲ್ಲಿ ವಿಫಲವಾಗಿದೆ. ಅಲ್ಲದೆ, ಭ್ರಷ್ಟಾಚಾರದಿಂದ ಮುಳುಗಿ ಹೋಗಿವೆ. ಜನವಿರೋಧಿ ಹಾಗೂ ಸಂವಿಧಾನ ವಿರೋಧಿ ನೀತಿಯಿಂದ ಜನರು ಭ್ರಮನಿರಸನಗೊಂಡಿದ್ದಾರೆ. ಅಂದು ಬ್ರಿಟಿಷರ ವಿರುದ್ಧ ಹೋರಾಡಿದಂತೆ ಇಂದು ಬಿಜೆಪಿ ಸರ್ಕಾರದ ಸಂವಿಧಾನ ವಿರೋಧಿ ನೀತಿ ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕಿದೆ’ ಎಂದರು

ರಾಜ್ಯ ಸೇವಾದಳದ ಅಧ್ಯಕ್ಷೆ ಪ್ಯಾರಿಜಾನ್, ಕರ್ನಾಟಕ ಉಸ್ತುವಾರಿಗಳಾದ ಬಲರಾಂ ಸಿಂಗ್ ಬದೋರಿಯಾ, ದಕ್ಷಿಣ ಉಸ್ತುವಾರಿ ರೇಣುಕಾ ಪ್ರಸಾದ್, ಕಾರ್ಯಾಧ್ಯಕ್ಷರಾದ ಕಿರಣ್ ಮೊರಾಸ್, ತುಳಸಿಗಿರಿ, ಕೆಪಿಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿ ವಿ.ಎಸ್. ಆರಾಧ್ಯ, ಸೇವಾದಳದ ಯುವ ಬ್ರಿಗೇಡ್ ಅಧ್ಯಕ್ಷ ಜುನೈದ್ ಪಿ.ಕೆ, ರಾಜ್ಯ ಎನ್‌ಎಸ್‌ಯುಐ ಅಧ್ಯಕ್ಷ ಕೀರ್ತಿ ಗಣೇಶ್ ಇದ್ದರು.

ಚಿತ್ರಾವಳಿ

ಕ್ವಿಟ್ ಇಂಡಿಯಾ ಸ್ಮರಣಾ ದಿನದ ಅಂಗವಾಗಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ(ಸಿಪಿಐ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸಿ’ ಪುಸ್ತಕವನ್ನು ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಟಿ.ವಿ. ಲೋಕೇಶ್ ಬಿಡುಗಡೆ ಮಾಡಿದರು. ಸಿಪಿಐ ಕಾರ್ಯದರ್ಶಿ ಜೆ. ಬಾಬು ಹಾಗೂ ಎಐಟಿಯುಸಿ ಅಧ್ಯಕ್ಷ ದೀಪಕ್ ಇದ್ದರು –ಪ್ರಜಾವಾಣಿ ಚಿತ್ರ

ಲಯನ್ಸ್ ಕ್ಲಬ್, ಲಿಯೊ ಕ್ಲಬ್ ಆದಿತ್ಯನಗರ ಹಾಗೂ ಆರೋಗ್ಯ ಭಾರತಿ ಸಂಸ್ಥೆಗಳ ಸಹಯೋಗದಲ್ಲಿ ಸಂಜಯನಗರದಲ್ಲಿ ಹಮ್ಮಿಕೊಂಡಿದ್ದ ಶಿಬಿರದಲ್ಲಿ 12 ವರ್ಷದೊಳಗಿನ ಮಕ್ಕಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಮದ್ದು ನೀಡಲಾಯಿತು.

ಆರೋಗ್ಯ ತರಬೇತಿ: ಕೌಶಲಾಭಿವೃದ್ಧಿಗೆ ಸಮಿತಿ

ಬೆಂಗಳೂರು: ಆರೋಗ್ಯ ಇಲಾಖೆಯ ಅಧೀನದಲ್ಲಿರುವ 19 ಜಿಲ್ಲಾ ಆರೋಗ್ಯ ತರಬೇತಿ ಕೇಂದ್ರಗಳು ಮತ್ತು ನಾಲ್ಕು ಪ್ರಾದೇಶಿಕ ಆರೋಗ್ಯ ತರಬೇತಿ ಕೇಂದ್ರಗಳಲ್ಲಿ ಕೋವಿಡ್ ನಿರ್ವಹಣೆಗೆ ಸಂಬಂಧಿಸಿದ ಅಲ್ಪಾವಧಿಯ ಕೌಶಲಾಭಿವೃದ್ಧಿ ತರಬೇತಿ ಆರಂಭಿಸಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮೇಲುಸ್ತುವಾರಿ ಸಮಿತಿ ರಚಿಸಲಾಗಿದೆ.

ಸರ್ಕಾರಿ ವೈದ್ಯಕೀಯ ಕಾಲೇಜಿನ ಮುಖ್ಯಸ್ಥರು ಅಥವಾ ಸರ್ಕಾರಿ ಆಸ್ಪತ್ರೆಯ ನಿರ್ದೇಶಕರು, ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಪ್ರಾದೇಶಿಕ ಆರೋಗ್ಯ ತರಬೇತಿ ಕೇಂದ್ರ ಅಥವಾ ಜಿಲ್ಲಾ ಆರೋಗ್ಯ ತರಬೇತಿ ಕೇಂದ್ರದ ಪ್ರಾಂಶುಪಾಲರು ಸಮಿತಿಯ ಸದಸ್ಯರಾಗಿರುತ್ತಾರೆ. ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಸಮಿತಿಯ ನೋಡಲ್ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ ಎಂದು ಆರೋಗ್ಯ ಇಲಾಖೆ ಸೋಮವಾರ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಬೇಬಿಬೆಟ್ಟಕ್ಕೆ ಪಂಕಜ್‌ಕುಮಾರ್ ಭೇಟಿ

ಪ್ರಜಾವಾಣಿ ವಾರ್ತೆ

ಪಾಂಡವಪುರ: ವಿವಾದಕ್ಕೆ ಕಾರಣವಾಗಿರುವ ತಾಲ್ಲೂಕಿನ ಬೇಬಿಬೆಟ್ಟದ ಗಣಿಗಾರಿಕೆ ಪ್ರದೇಶಕ್ಕೆ ರಾಜ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಪಂಕಜ್‌ಕುಮಾರ್ ಪಾಂಡೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು.

ಕೆಆರ್‌ಎಸ್ ಅಣೆಕಟ್ಟೆಯ ಸಂರಕ್ಷಣೆ ದೃಷ್ಟಿಯಿಂದ ಜಿಲ್ಲಾಡಳಿತವು ಬೇಬಿಬೆಟ್ಟದಲ್ಲಿ ತಾತ್ಕಾಲಿಕವಾಗಿ ಗಣಿಗಾರಿಕೆ ನಿಷೇಧಿಸಿದ್ದರೂ ಅಕ್ರಮ ಗಣಿಗಾರಿಕೆ ಹಾಗೂ ಅಕ್ರಮ ಸ್ಫೋಟಕ ವಸ್ತುಗಳ ಬಳಕೆ ಎಗ್ಗಿಲ್ಲದೆ ನಡೆಯುತ್ತಿದ್ದುದರಿಂದ ಜಿಲ್ಲಾಡಳಿತವು ಗಣಿಗಾರಿಕೆಯನ್ನು ಸ್ಥಗಿತಗೊಳಿಸಲು ಕ್ರಮ ಕೈಗೊಂಡಿತ್ತು. ಅಲ್ಲದೇ ಸ್ಫೋಟಕ ವಸ್ತುಗಳ ಬಳಕೆಗೆ ಕೂಡ ತಡೆಯೊಡ್ಡಿತ್ತು.

ಬೇಬಿಬೆಟ್ಟದ ಗಣಿಗಾರಿಕೆ ಪ್ರದೇಶದಲ್ಲಿ ಕುರಿಗಾಹಿಗಳಿಗೆ ಸ್ಫೋಟಕ ವಸ್ತುಗಳು ಪತ್ತೆಯಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಹಾಗಾಗಿ ಸ್ಫೋಟಕಗಳ ಪತ್ತೆಗಾಗಿ ಸ್ಫೋಟಕ ಮತ್ತು ಬಾಂಬ್ ನಿಷ್ಕ್ರಿಯ ದಳವು 3 ದಿನಗಳ ಕಾಲ ಕಾರ್ಯಾಚರಣೆ ನಡೆಸಿತ್ತು. ಈ ವೇಳೆ ಮತ್ತಷ್ಟು ಸ್ಫೋಟಕಗಳು ಪತ್ತೆಯಾಗಿದ್ದವು. ಹೀಗಾಗಿ, ಪಂಕಜ್‌ಕುಮಾರ್ ಪಾಂಡೆ ಬೇಬಿಬೆಟ್ಟದ ಗಣಿಗಾರಿಕೆ ಪ್ರದೇಶಕ್ಕೆ ಭೇಟಿ ನೀಡಿದರು.

’ಗಣಿಗಾರಿಕೆ, ಕ್ರಷರ್ ನಡೆಸಲು ಅನುಮತಿ ಪಡೆಯಲಾಗಿದೆ. ಗಣಿಗಾರಿಕೆಯಿಂದ ಕೆಆರ್‌ಎಸ್ ಅಣೆಕಟ್ಟೆಗೆ ಅಪಾಯವಿದೆ ಎಂದು ತಜ್ಞರು ವರದಿ ನೀಡಿಲ್ಲ. ಹೀಗಿದ್ದರೂ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದೆ. ಗಣಿಗಾರಿಕೆ ನಡೆಸಲು ಅವಕಾಶ ಮಾಡಿಕೊಡಬೇಕು’ ಎಂದು ಗಣಿ ಮಾಲೀಕರು ಪಂಕಜ್‌ಕುಮಾರ್ ಪಾಂಡೆ ಅವರಿಗೆ ಮನವಿ ಮಾಡಿದರು.

‘ಕೈಕುಳಿಗೆ ಅವಕಾಶ ಕೊಡಿ’

‘ಬೇಬಿಬೆಟ್ಟದಲ್ಲಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿರುವುದರಿಂದ ನಮ್ಮ ಜೀವನಕ್ಕೆ ತೊಂದರೆಯಾಗಿದೆ. ನಮಗೆ ಕೈಕುಳಿ ಕ್ವಾರಿ ಮಾಡಲು ಅವಕಾಶ ಮಾಡಿಕೊಡಬೇಕು’ ಎಂದು ಕೂಲಿ ಕಾರ್ಮಿಕರು ಮನವಿ ಮಾಡಿದರು.

‘ರಾಷ್ಟ್ರೀಯ ಶಿಕ್ಷಣ ನೀತಿ’: ಆ.16ಕ್ಕೆ ಕಾರ್ಯಾಗಾರ

ಬೆಂಗಳೂರು: ಜಯನಗರದ ನ್ಯಾಷನಲ್ ಕಾಲೇಜು ವತಿಯಿಂದ ‘ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನುಷ್ಠಾನ’ ಕುರಿತು ಕಾರ್ಯಾಗಾರವನ್ನು ಇದೇ 16 ಮತ್ತು 17ರಂದು ಬೆಳಿಗ್ಗೆ 10 ಗಂಟೆಗೆ ಬಿವಿಜೆ ವಿಜ್ಞಾನ ಕೇಂದ್ರದ ಮಲ್ಟಿಮೀಡಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ನ್ಯಾಷನಲ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಎ.ಎಚ್.ರಾಮರಾವ್ ಅವರು ಕಾರ್ಯಾಗಾರ ಉದ್ಘಾಟಿಸಲಿದ್ದು, ಅತಿಥಿಗಳಾಗಿ ಕಾರ್ಯದರ್ಶಿಗಳಾದ ಎಸ್.ಎನ್.ನಾಗರಾಜ ರೆಡ್ಡಿ ಹಾಗೂ ಪಿ.ಸದಾನಂದ ಮಯ್ಯ ಭಾಗವಹಿಸಲಿದ್ದಾರೆ.

‘ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ನರಸಿಂಹ ಆಯಚಿತ್, ಶಿಕ್ಷಣ ತಜ್ಞರಾದ ಎಸ್.ಎಂ.ಶಿವಪ್ರಸಾದ್, ಪ್ರೊ.ಗೌರೀಶ, ಬಿ.ಪಿ. ವೀರಭದ್ರಪ್ಪ, ಡಿ.ಬಿ.ನಾಯಕ್ ಮಾತನಾಡಲಿದ್ದಾರೆ. ಕಾರ್ಯಕ್ರಮ ಆನ್‌ಲೈನ್ ಮೂಲಕವೂ ಪ್ರಸಾರವಾಗಲಿದೆ’ ಎಂದು ಕಾಲೇಜಿನ ಪ್ರಾಂಶುಪಾಲರಾದ ವೈ.ಸಿ. ಕಮಲಾ ತಿಳಿಸಿದ್ದಾರೆ.

ವಿಮರ್ಶಕ ಎಸ್‌.ಆರ್‌.ವಿಜಯಶಂಕರ್

‘ಜಾತಿ–ಧರ್ಮಗಳ ತಾರತಮ್ಯ ಜೀವಂತ’

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಜಾತಿ ಮತ್ತು ಧರ್ಮಗಳ ತಾರತಮ್ಯ ಈಗಲೂ ಜೀವಂತವಾಗಿದ್ದು, ಮಾನವನ ಬದುಕನ್ನೇ ಅಂಧಕಾರಗೊಳಿಸಿದೆ’ ಎಂದು ವಿಮರ್ಶಕ ಎಸ್.ಆರ್. ವಿಜಯಶಂಕರ್ ಬೇಸರ ವ್ಯಕ್ತಪಡಿಸಿದರು.

ಸ್ವಾಭಿಮಾನಿ ಕರ್ನಾಟಕ ವೇದಿಕೆಯು ಶೇಷಾದ್ರಿಪುರದಲ್ಲಿ ಆಯೋಜಿಸಿದ್ದ ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವೇದಿಕೆಯ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ,‘ಹಿಂದಿನ ವರ್ಷಗಳಲ್ಲಿ ವೇದಿಕೆ ಸದಸ್ಯರು ಪ್ರಕಟಿಸಿದ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮ ನಡೆಯುತ್ತಿದ್ದವು. ಮೊದಲ ಬಾರಿಗೆ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ನಡೆದಿದೆ’ ಎಂದರು.

ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ,‘ಆದಿಪುರಾಣ ಕಾವ್ಯ ರಚನೆಗೊಂಡು ಸಾವಿರಾರು ವರ್ಷಗಳು ಕಳೆದರೂ ಜನಮನದಲ್ಲಿ ಉಳಿದಿದೆ. ಅದರಲ್ಲಿರುವ ಸತ್ವ ಮುಂದಿನ ಸಾವಿರಾರು ವರ್ಷಗಳವರೆಗೆ ಉಳಿಯಲಿದೆ’ ಎಂದು ಹೇಳಿದರು.

ಪ್ರಶಸ್ತಿ ಪ್ರದಾನ: ಲೇಖಕರಾದ ಮಿರ್ಜಾ ಬಷೀರ್, ಮಂಜುಳಾ ಹಿರೇಮಠ, ಸ್ಮಿತಾ ಅಮೃತರಾಜ್ ಸಂಪಾಜೆ, ಜಾಣಗೆರೆ ವೆಂಕಟರಾಮಯ್ಯ, ಕಾ.ತ.ಚಿಕ್ಕಣ್ಣ ಅವರ ಕೃತಿಗಳಿಗೆ ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ ಸಹಿತ ₹5 ಸಾವಿರ ನಗದು ನೀಡಿ ಪುರಸ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ಜಾಣಗೆರೆ ವೆಂಕಟರಾಮಯ್ಯ, ಮಿರ್ಜಾ ಬಷೀರ್, ಮಂಜುಳಾ ಹಿರೇಮಠ ಹಾಗೂ ಸ್ಮಿತಾ ಅಮೃತರಾಜ್ ಅವರಿಗೆ ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಎಸ್‌.ಆರ್‌.ವಿಜಯಶಂಕರ್, ಸುಧಾ ವಾರಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ, ದ್ವಾರನಕುಂಟೆ ಪಾತಣ್ಣ, ಶೇಖರಗೌಡ ಪಾಟೀಲ, ಎಂ.ತಿಮ್ಮಯ್ಯ ಇದ್ದರು.

ಎಸ್ಸೆಸ್ಸೆಲ್ಸಿ ಸಾಧಕರು

ಸೌಂದರ್ಯ ಶಾಲೆ, ಹೆಸರಘಟ್ಟ ಮುಖ್ಯರಸ್ತೆ

ಸಮನ್ವಯ್ ಅಂಕ–621 (ಶೇ 99)

ಕೆ.ಎಂ.ವರ್ಷಿತಾ ಅಂಕ–623 (ಶೇ 99)

ವಿವೇಕಾನಂದ ವಿದ್ಯಾವರ್ಧಕ ಶಾಲೆ, ವಿವೇಕಾನಂದ ನಗರ, ಹೆಸರಘಟ್ಟ

ಧೀರಜ್ (ಶೇ 99)

ಅಮರವಾಣಿ ಪ್ರೌಢಶಾಲೆ, ಬಸವೇಶ್ವರ ನಗರ

ವರ್ಷಾ ಎಸ್‌. (ಶೇ 100)

ಸುನಾದ ಶ್ರವಣದೋಷವುಳ್ಳ ಮಕ್ಕಳ ಶಾಲೆ, ಹೆಣ್ಣೂರು ಮುಖ್ಯ ರಸ್ತೆ, ಲಿಂಗರಾಜಪುರ



ಸೌಮ್ಯಾ (ಶೇ 85) · ನಿಖಾತ್ ತಾಜ್ (ಶೇ 82) · ಮನೋಜ್ (ಶೇ 81)

ಮಾರಿಮುತ್ತು (ಶೇ 85) · ವಿಘ್ನೇಶ್ (ಶೇ 83) · ಲಿಖಿತ್ (ಶೇ 82)

ಚೈತ್ರಾ (ಶೇ 84) · ಕಾಶಿಫ್ ಖುರೇಶಿ (ಶೇ 83) · ಮರಿಯಂ ಫಾತಿಮಾ (ಶೇ 87)

ಆ.15ಕ್ಕೆ ರಕ್ತದಾನ ಶಿಬಿರ

ಬೆಂಗಳೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) ರಕ್ತದಾನಿಗಳ ವೇದಿಕೆಯು ಇದೇ 15ರ ಸ್ವಾತಂತ್ರ್ಯ ದಿನದ ಅಂಗವಾಗಿ ರಾಜ್ಯದಾದ್ಯಂತ 75ಕ್ಕೂ ಹೆಚ್ಚು ರಕ್ತದಾನ ಶಿಬಿರಗಳನ್ನು ಹಮ್ಮಿಕೊಂಡಿದೆ ಎಂದು ಪಿಎಫ್‌ಐ ರಾಜ್ಯ ಕಾರ್ಯದರ್ಶಿ ಎ.ಕೆ.ಅಶ್ರಫ್ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಇತ್ತೀಚಿನ ದಿನಗಳಲ್ಲಿ ಸಕಾಲದಲ್ಲಿ ರಕ್ತ ಲಭ್ಯವಾಗದೆ ಹಲವು ರೋಗಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ವಾರ್ಷಿಕ 11.5 ಲಕ್ಷ ಯುನಿಟ್‌ಗಳಷ್ಟು ರಕ್ತದ ಕೊರತೆ ಇದೆ’ ಎಂದರು.

‘ಸಾರ್ವಜನಿಕರನ್ನು ರಕ್ತದಾನಕ್ಕೆ ಪ್ರೇರೇಪಿಸುವುದು ಹಾಗೂ ರಕ್ತ ಸಂಗ್ರಹಣೆ ಹೆಚ್ಚಿಸುವ ಸಲುವಾಗಿ ಪಿಎಫ್‌ಐ ರಕ್ತದಾನಿಗಳ ವೇದಿಕೆ ವತಿಯಿಂದ ಜು.15ರಿಂದ ರಕ್ತದಾನ ಅಭಿಯಾನಗಳನ್ನು ರಾಜ್ಯದಾದ್ಯಂತ ನಡೆಸಿದೆ. ಸ್ವಾತಂತ್ರ್ಯ ದಿನದಂದು 75 ಸ್ಥಳಗಳಲ್ಲಿ ರಕ್ತದಾನ ಶಿಬಿರಗಳನ್ನು ಹಮ್ಮಿಕೊಂಡಿದ್ದೇವೆ.’ ಎಂದರು. ಸಂಪರ್ಕ: 9886105995

ಕೆ.ಆರ್.ಪುರ ಶ್ರೀಕೃಷ್ಣನಗರದ ಪೂರ್ಣಪ್ರಜ್ಞ ಪ್ರೌಢಶಾಲೆ

ಪ್ರಭಾಂಜನ್ (ಶೇ 100)

ಮೋನಿಷಾ ಜೆ. 625

ಬಸವನಪುರ ಕೆರೆ ಅಂಗಳ ಐದು ಗುಂಟೆ ಜಮೀನಿನಲ್ಲಿ ನಿರ್ಮಿಸಿಕೊಂಡಿದ್ದ ದೇವಸ್ಥಾನದ ಕಾಂಪೌಂಡ್ ತೆರವುಗೊಳಿಸಲಾಯಿತು (ಎಡಚಿತ್ರ), ತೆರವು ಕಾರ್ಯಾಚರಣೆ ವೇಳೆ ಸ್ಥಳೀಯರು ಪೊಲೀಸರ ಜೊತೆ ವಾಗ್ವಾದ ನಡೆಸಿದರು.

ಬಸವನಪುರ: 1 ಎಕರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯ ಬಸವನಪುರದ ಸ್ವಾತಂತ್ರ್ಯನಗರದಲ್ಲಿ ಸುಮಾರು ₹15 ಕೋಟಿ ಮೌಲ್ಯದ ಒಂದು ಎಕರೆ ಜಾಗದ ಒತ್ತುವರಿಯನ್ನು ತಹಶೀಲ್ದಾರ್ ಅಜಿತ್ ಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ತೆರವುಗೊಳಿಸಲಾಯಿತು.

ಬಸವನಪುರ ಗ್ರಾಮದ ಸರ್ವೆ ನಂಬರ್ 14 ರಲ್ಲಿರುವ ಬಸವನಪುರ ಕೆರೆ ಅಂಗಳ ಐದು ಗುಂಟೆ ಜಮೀನಿನಲ್ಲಿ ನಿರ್ಮಿಸಿಕೊಂಡಿದ್ದ ದೇವಸ್ಥಾನದ ಕಾಂಪೌಂಡ್ ತೆರವು ಹಾಗೂ ಸ್ವಾತಂತ್ರ್ಯನಗರದಲ್ಲಿರುವ ಹಿಡುವಳಿಯ 30 ಗುಂಟೆ ಎಸ್ ಇ.ಎ.ಕಾಲೇಜು ಒತ್ತುವರಿ ಮಾಡಿಕೊಂಡಿದ್ದ 5ಗುಂಟೆ ಜಾಗ ತೆರವುಗೊಳಿಸಿ ಬಿಬಿಎಂಪಿಗೆ ಹಸ್ತಾಂತರ ಮಾಡಲಾಯಿತು.

ತಹಶೀಲ್ದಾರ್ ಮಾತನಾಡಿ, 'ಹೈಕೋರ್ಟ್ ನಿರ್ದೇಶನದಂತೆ ಐದು ಗುಂಟೆ ತಡೆಗೋಡೆ ಸ್ಥಳವನ್ನು ತೆರವು ಮಾಡಲಾಗಿದೆ ಒಟ್ಟಾರೆ 14 ಎಕರೆ ಸ್ಥಳಕ್ಕೆ ತಂತಿಬೇಲಿ ಅಳವಡಿಸಲಾಗುವುದು. ದೇವಾಲಯಕ್ಕೆ ಯಾವುದೇ ಹಾನಿಯಾಗದಂತೆ ತೆರವು ಕಾರ್ಯ ಮಾಡಲಾಗಿದ್ದು, ಸ್ಥಳೀಯರ ಆಗ್ರಹದ ಮೇರೆಗೆ ದೇವಾಲಯಕ್ಕೆ ರಸ್ತೆಯನ್ನು ಕಾನೂನಿನ ಪ್ರಕಾರ ಮಾಡಿಕೊಡಲಾಗುವುದು' ಎಂದು ಹೇಳಿದರು.

ತೆರವು ಕಾರ್ಯ ವೇಳೆ ಜೆಸಿಬಿ ತಡೆದು ಸ್ಥಳೀಯ ನಿವಾಸಿಗಳು ವಿರೋಧ ವ್ಯಕ್ತಪಡಿಸಿ ಪೊಲೀಸರ ಜೊತೆ ವಾಗ್ವಾದ ನಡೆಸಿದರು.

ತೆರವು ಕಾರ್ಯದ ಸಂದರ್ಭದಲ್ಲಿ ಉಪತಹಶೀಲ್ದಾರ್ ಮಂಜುನಾಥ್, ರಾಜಸ್ವ ನಿರೀಕ್ಷಕ ಅನಿಲ್, ಸರ್ವೇಯರ್ ಯದುನಂದನ್ ಮತ್ತಿತರರು ಇದ್ದರು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ನಗರ ರಸ್ತೆ ಅಭಿವೃದ್ಧಿಗೆ ಪ್ರತ್ಯೇಕ ಪ್ರಾಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ 860 ಕಿ.ಮೀ. ಉದ್ದದ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಪ್ರತ್ಯೇಕ ಪ್ರಾಧಿಕಾರ ರಚಿಸುವ ಚಿಂತನೆ ನಡೆದಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಸಚಿವರು ಮತ್ತು ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ಮಳೆಯಿಂದ ಕೊಚ್ಚಿ ಹೋಗಿರುವ ಮತ್ತು ಹಾಳಾಗಿರುವ ರಸ್ತೆಗಳನ್ನು ತುರ್ತಾಗಿ ದುರಸ್ತಿ ಮಾಡುವಂತೆ ಸೂಚನೆ ನೀಡಲಾಗಿದೆ. ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಪ್ರತ್ಯೇಕವಾದ ವ್ಯವಸ್ಥೆಯೊಂದನ್ನು ರೂಪಿಸುವ ಕುರಿತು ಚಿಂತನೆ ನಡೆಸಲಾಗಿದೆ' ಎಂದರು.

ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಎಂಟು ಮೇಲ್ಸೇತುವೆಗಳ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ. ಮುಖ್ಯಮಂತ್ರಿಯವರ ನಗರೋತ್ಥಾನ ಯೋಜನೆ ಮತ್ತು ಸ್ಮಾರ್ಟ್ ಸಿಟಿ ಯೋಜನೆಗಳ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ನಗರೋತ್ಥಾನ ಯೋಜನೆಯ ಮೂರನೇ ಹಂತದ ಕಾಮಗಾರಿಗಳನ್ನು ಗುರುತಿಸಿ, ಅಕ್ಟೋಬರ್ ಒಳಗಾಗಿ ಪ್ರಸ್ತಾವ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಎಲ್‌ಇಡಿ ದೀಪಕ್ಕೆ ಗಡುವು: ನಗರದಲ್ಲಿನ 4.85 ಲಕ್ಷ ಬೀದಿ ದೀಪಗಳನ್ನು ಬದಲಾವಣೆ ಮಾಡಿ ಎಲ್‌ಇಡಿ ಬೀದಿ ದೀಪ ಅಳವಡಿಸುವ ಕಾಮಗಾರಿಯ ಕುರಿತು ಮುಖ್ಯಮಂತ್ರಿಯವರು ಅಧಿಕಾರಿಗಳಿಂದ ಮಾಹಿತಿ ಪಡೆದರು. ಬೀದಿ ದೀಪಗಳ ಬದಲಾವಣೆ ವಿಳಂಬವಾಗಿರುವ ಕುರಿತು ಅಧಿಕಾರಿಗಳು ಮಾಹಿತಿ ನೀಡಿದರು.

'ಈ ವರ್ಷದ ಅಂತ್ಯದೊಳಗೆ ಮೂರು ಲಕ್ಷ ಬೀದಿ ದೀಪಗಳನ್ನು ಬದಲಾವಣೆ ಮಾಡಿ ಎಲ್‌ಇಡಿ ದೀಪಗಳನ್ನು ಅಳವಡಿಸುವಂತೆ ಗಡುವು ನೀಡಲಾಗಿದೆ' ಎಂದು ಬೊಮ್ಮಾಯಿ ತಿಳಿಸಿದರು.

ಕೊಳವೆ ಬಾವಿ ದುರಸ್ತಿ: ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರಿರುವ 110 ಗ್ರಾಮಗಳಲ್ಲಿ 8,000 ಕೊಳವೆ ಬಾವಿಗಳಿವೆ. ಅವುಗಳಲ್ಲಿ ಸುಸ್ಥಿತಿಯಲ್ಲಿರುವ ಕೊಳವೆ ಬಾವಿಗಳನ್ನು ಗುರುತಿಸಿ, ದುರಸ್ತಿ ಮತ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವಂತೆ ಬೆಂಗಳೂರು ಜಲ ಮಂಡಳಿಗೆ ಸೂಚಿಸಲಾಗಿದೆ ಎಂದರು.

'ನಗರದಲ್ಲಿ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ವೇಗ ತುಂಬಬೇಕಿದೆ. ಎಲ್ಲ ಕಾಮಗಾರಿಗಳನ್ನೂ ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಭ್ರಷ್ಟಾಚಾರಕ್ಕೆ ಆಸ್ಪದ ನೀಡದೆ ಕೆಲಸ ಮಾಡುವಂತೆಯೂ ನಿರ್ದೇಶನ ನೀಡಲಾಗಿದೆ' ಎಂದು ಮುಖ್ಯಮಂತ್ರಿ ವಿವರಿಸಿದರು.

ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅವಧಿಯಲ್ಲಿ ಆರಂಬವಾಗಿರುವ ಎಲ್ಲ ಕಾಮಗಾರಿಗಳನ್ನೂ ಮುಂದುವರಿಸಲಾಗುವುದು. ಶಾಸಕರ ಅಭಿಪ್ರಾಯಗಳಿಗೂ ಮನ್ನಣೆ ನೀಡಿ, ನಗರವನ್ನು ಪ್ರತಿನಿಧಿಸುವ ಎಲ್ಲ ಸಚಿವರ ಜತೆ ಚರ್ಚಿಸಿ ಅಭಿವೃದ್ಧಿ ಕೆಲಸಗಳಿಗೆ ವೇಗ ನೀಡಲಾಗುವುದು ಎಂದರು.

ಸಚಿವರಾದ ಆರ್. ಅಶೋಕ, ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿ. ಸೋಮಣ್ಣ, ಆರಗ ಜ್ಞಾನೇಂದ್ರ, ಎಸ್.ಟಿ. ಸೋಮಶೇಖರ್, ಬಿ.ಎ. ಬಸವರಾಜ, ಕೆ. ಗೋಪಾಲಯ್ಯ, ಮುನಿರತ್ನ, ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿದ್ದರು.

ವಿತ್ತೀಯ ಹೊಣೆಗಾರಿಕೆ ಕಾಯ್ದೆ ಅನ್ವಯ

'ಬಿಬಿಎಂಪಿಯಲ್ಲೂ ವಾಸ್ತವಿಕ ಆರ್ಥಿಕ ಸ್ಥಿತಿ ಆಧಾರದಲ್ಲಿ ಬಜೆಟ್ ರೂಪಿಸುವುದು ಮತ್ತು ಕಾಮಗಾರಿಗಳ ಅನುಷ್ಠಾನ ವ್ಯವಸ್ಥೆ ಜಾರಿಗೆ ತರುವ ಪ್ರಕ್ರಿಯೆ ಆರಂಭವಾಗಿದೆ. ಇದಕ್ಕೆ ಪೂರಕವಾಗಿ ಬಿಬಿಎಂಪಿಯನ್ನೂ ವಿತ್ತೀಯ ಹೊಣೆಗಾರಿಕೆ ಕಾಯ್ದೆಯ ಅಡಿಯಲ್ಲಿ ತರಲು ಕ್ರಮ ಕೈಗೊಳ್ಳಲಾಗುವುದು. ವಾರ್ಷಿಕ ಆದಾಯದ ಮಿತಿಯಲ್ಲೇ ಬಜೆಟ್ ರೂಪಿಸುವಂತೆ ಸೂಚಿಸಲಾಗಿದೆ' ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಎಂ.ಎನ್. ನಂದೀಶ್ ಹಂಚೆ

'ಹೊಸ ಪುಸ್ತಕ ನೀತಿ ರಚನೆಗೆ ಸಮಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಪುಸ್ತಕೋದ್ಯಮದ ಸಮಗ್ರ ಅಭಿವೃದ್ಧಿಗಾಗಿ ಆಧುನಿಕ ಮಾಧ್ಯಮಗಳ ಸವಾಲುಗಳನ್ನು ಒಳಗೊಂಡ ಹೊಸ ಪುಸ್ತಕ ನೀತಿ ಸಿದ್ಧಗೊಳಿಸಲು ನೂತನ ಸಮಿತಿಯೊಂದನ್ನು ರಚಿಸಲಾಗುತ್ತಿದೆ' ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಎಂ.ಎನ್. ನಂದೀಶ್ ಹಂಚೆ ತಿಳಿಸಿದರು.

ಕನ್ನಡ ಪುಸ್ತಕ ನೀತಿ ಕರಡು ರಚನೆಗಾಗಿ ರೂಪಿಸಲಾದ ಸಮಿತಿ ಸದಸ್ಯರ ಪ್ರಾಥಮಿಕ ಹಂತದ ಸಭೆಯನ್ನು ಮಂಗಳವಾರ ನಡೆಸಿದ ಅವರು, 'ಕನ್ನಡ ಪುಸ್ತಕೋದ್ಯಮ ಸಂಕ್ರಮಣದ ಕಾಲಘಟ್ಟದಲ್ಲಿದೆ. ಇ-ಪುಸ್ತಕ, ಆಡಿಯೊ ಪುಸ್ತಕ ಹಾಗೂ ಅಂತರ್ಜಾಲ ಪುಸ್ತಕ ಪ್ರಕಟಣೆಯು ಕನ್ನಡ ಪುಸ್ತಕೋದ್ಯಮವನ್ನು ಕಾಗದರಹಿತವನ್ನಾಗಿ ಮಾಡಿದೆ. ಈ ಉದ್ಯಮವು ಹೊಸತನದೊಂದಿಗೆ ಬೆಳೆಯಬೇಕಾದ ಅನಿವಾರ್ಯತೆ ಕೂಡ ಇದೆ. ಹಾಗಾಗಿ, ಈ ಹಿಂದೆ ಸಿದ್ಧಲಿಂಗಯ್ಯ ಅಧ್ಯಕ್ಷತೆಯಲ್ಲಿ ರೂಪುಗೊಂಡಿದ್ದ ಕನ್ನಡ ಪುಸ್ತಕ ನೀತಿಯನ್ನು ಹೊಸ ದೃಷ್ಟಿಕೋನದಿಂದ ನೋಡುವ ಅವಶ್ಯಕತೆ ಇದೆ' ಎಂದರು.

'ಆಧುನಿಕ ಮಾಧ್ಯಮಗಳ ಸವಾಲುಗಳನ್ನು ಒಳಗೊಂಡಂತೆ ಕನ್ನಡ ಪುಸ್ತಕೋದ್ಯಮದ ಸಮಗ್ರ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊಸ ರೂಪದ ನೀತಿ ರಚನೆಗೆ ಪ್ರಾಧಿಕಾರ ಮುಂದಾಗಿದೆ. ಇದರ ಮುಖ್ಯ ಸಲಹೆಗಾರರಾಗಿ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಕಾರ್ಯನಿರ್ವಹಿಸಲಿದ್ದಾರೆ. ಸಾಹಿತಿ ವಸುಧೇಂದ್ರ ಸಹ ಸಮಿತಿಯಲ್ಲಿರುತ್ತಾರೆ' ಎಂದು ತಿಳಿಸಿದರು.

ಇದಕ್ಕೂ ಮೊದಲು ಸಭೆಯಲ್ಲಿನ ತಜ್ಞರ ಜೊತೆಗೆ ಚರ್ಚಿಸಿದ ಅವರು, 'ಶೀಘ್ರದಲ್ಲೇ ಪೂರ್ಣ ಪ್ರಮಾಣದ ಸಮಿತಿ ರಚಿಸಿ, ಕನ್ನಡ ಪುಸ್ತಕ ನೀತಿ ರಚನೆ ಮಾಡಲಾಗುತ್ತದೆ' ಎಂದು ಹೇಳಿದರು.

ಕನ್ನಡ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ ಕಂಬತ್ತಳ್ಳಿ, ಕಾರ್ಯದರ್ಶಿ ನ. ರವಿಕುಮಾರ, ಕರ್ನಾಟಕ ಬರಹಗಾರರು ಮತ್ತು ಲೇಖಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶಕುಮಾರ ಎಸ್. ಹೊಸಮನಿ, ಮೈಸೂರು ವಿಶ್ವವಿದ್ಯಾಲಯದ ವಿಜಯಕುಮಾರಿ ಕರಿಕಲ್ಲು, ಹಂಪಿ ವಿಶ್ವವಿದ್ಯಾಲಯದ ಎಚ್.ಡಿ. ಪ್ರಶಾಂತ, ವೈ.ಜಿ. ಮುರಳೀಧರನ್ ಮತ್ತಿತರರು ಇದ್ದರು.

ಕನ್ನಡ ಪುಸ್ತಕ ನೀತಿ ಕರಡು ರಚನೆಗಾಗಿ ರೂಪಿಸಲಾದ ಸಮಿತಿ ಸದಸ್ಯರ ಜೊತೆಗೆ ಎಂ.ಎನ್. ನಂದೀಶ್ ಹಂಚೆ ಸಭೆ ನಡೆಸಿದರು.

ಪಂಜಾಬ್: ನೂತನ 'ಭಾರತೀಯ ಆರ್ಥಿಕ ಪಾರ್ಟಿ' ಅಸ್ತಿತ್ವಕ್ಕೆ

ಲೂಧಿಯಾನ (ಪಿಟಿಐ): ಪಂಜಾಬ್‌ನ ವರ್ತಕರ ಸಂಘಟನೆಯು ಹೊಸ ರಾಜಕೀಯ ಪಕ್ಷವೊಂದನ್ನು ರಚಿಸಿದ್ದು, ಭಾರತೀಯ ಕಿಸಾನ್ ಯೂನಿಯನ್ (ಚಡೂನಿ) ಮುಖ್ಯಸ್ಥ ಗುರ್ನಾಮ್ ಸಿಂಗ್ ಚಡೂನಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಲಾಗಿದೆ.

ನೂತನ ಪಕ್ಷಕ್ಕೆ 'ಭಾರತೀಯ ಆರ್ಥಿಕ ಪಾರ್ಟಿ' ಎಂದು ಹೆಸರಿಡಲಾಗಿದ್ದು, ರೈತರು, ವರ್ತಕರು ಹಾಗೂ ಕಾರ್ಮಿಕರ ಧ್ವನಿಯಾಗಲಿದೆ ಎಂದು ಪಕ್ಷದ ಸಂಸ್ಥಾಪಕರು ಹೇಳಿದ್ದಾರೆ.

ವರ್ತಕರ ವಿವಿಧ ಸಂಘಟನೆಗಳ ಪ್ರತಿನಿಧಿಗಳ ಸಭೆ ಚಡೂನಿ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆಯಿತು. ವರ್ತಕರ ಸಂಘದ ಅಧ್ಯಕ್ಷ ತರುಣ್ ಬಾವಾ ಅವರನ್ನು ನೂತನ ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಘೋಷಿಸಲಾಯಿತು.

ಚಡೂನಿಯವರು ನೂತನ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಿಲ್ಲ. ಆದರೆ, ತಮ್ಮನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದ ಸಭೆಯಲ್ಲಿ ಅವರು ಉಪಸ್ಥಿತರಿದ್ದರು.

ಮುಂದಿನ ವರ್ಷ ಪಂಜಾಬ್ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಇನ್ನೊಂದೆಡೆ ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಹೀಗಾಗಿ, ನೂತನ ಪಕ್ಷವೊಂದು ಅಸ್ತಿತ್ವಕ್ಕೆ ಬಂದಿರುವುದಕ್ಕೆ ಮಹತ್ವ ಬಂದಿದೆ.

ಸಭೆ ನಂತರ ಮಾತನಾಡಿದ ಚಡೂನಿ, 'ಮುಂದಿನ ವರ್ಷ ನಡೆಯುವ ಚುನಾವಣೆಯಲ್ಲಿ ಎಲ್ಲ 117 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಧರಿಸಲಾಗಿದೆ' ಎಂದರು.

'ವರ್ತಕರು, ರೈತರು ಹಾಗೂ ಕಾರ್ಮಿಕರನ್ನು ಈ ಹಿಂದಿನ ಕಾಂಗ್ರೆಸ್ ಹಾಗೂ ಬಿಜೆಪಿ ನೇತೃತ್ವ ಸರ್ಕಾರಗಳು ನಿರ್ಲಕ್ಷಿಸಿವೆ. ಇವರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ನೂತನ ಪಕ್ಷ ಶ್ರಮಿಸುವ ವಿಶ್ವಾಸವಿದೆ' ಎಂದುದರು.

'ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ವಿವಿಧ ಸಂಘಟನೆಗಳು ಒಟ್ಟಾಗಿ, ಚುನಾವಣೆ ಎದುರಿಸಬೇಕು' ಎಂದು ಚಡೂನಿ ಇತ್ತೀಚೆಗೆ ಹೇಳಿದ್ದರು.

'ಮಿಷನ್ ಪಂಜಾಬ್' ಎಂಬ ಪರಿಕಲ್ಪನೆ ಮುಂದಿಟ್ಟಿದ್ದ ಅವರು, 'ಹೊಸ ರಾಜಕೀಯ ಪಕ್ಷದ ಮೂಲಕ ವ್ಯವಸ್ಥೆಯನ್ನು ಹೇಗೆ ಬದಲಾಯಿಸಬಹುದು ಎಂಬುದಕ್ಕೆ ಈ ಪರಿಕಲ್ಪನೆ ಮಾದರಿಯಾಗಲಿದೆ' ಎಂದಿದ್ದರು.

ಸೋನಿಯಾ ಭೇಟಿ ಮಾಡಿದ ಅಮರಿಂದರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್‌ನ ಕಾಂಗ್ರೆಸ್‌ನಲ್ಲಿನ ಆಂತರಿಕ ಕಚ್ಚಾಟವು ತಾರಕಕ್ಕೇರಿದ್ದು, ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಮಂಗಳವಾರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ನವಜೋತ್ ಸಿಂಗ್ ಸಿಧು ಅವರನ್ನು ನೇಮಕ ಮಾಡಿದ ಬಳಿಕ ಅಮರಿಂದರ್ ಇದೇ ಮೊದಲ ಬಾರಿಗೆ ಸೋನಿಯಾ ಅವರನ್ನು ಭೇಟಿ ಮಾಡಿದ್ದಾರೆ.

ಅಧ್ಯಕ್ಷರಾಗಿ ನೇಮಕವಾದ ಬಳಿಕವೂ ಸಿಧು ಅವರು ಪಂಜಾಬ್ ಸರ್ಕಾರದ ವಿರುದ್ಧದ ಆರೋಪಗಳನ್ನು ಮುಂದುವರಿಸಿದ್ದು, ರಾಜ್ಯದಲ್ಲಿನ ಡ್ರಗ್ ಮಾಫಿಯಾ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸಿದ್ದಾರೆ. ಈ ಬಗ್ಗೆ ವರದಿಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವಂತೆ ವಿಧಾನಸಭೆಯಲ್ಲಿ ನಿರ್ಣಯ ತರುವ ಬಗ್ಗೆಯೂ ಬೆದರಿಕೆ ಒಡ್ಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಧು ಸರ್ಕಾರದ ಮೇಲೆ ನಿರಂತರ ವಾಗ್ದಾಳಿ ನಡೆಸುತ್ತಿರುವ ಅಮರಿಂದರ್ ಅವರಿಗೆ ಅತೃಪ್ತಿ ಇದೆ ಎಂದು ತಿಳಿದುಬಂದಿದೆ.

ಸೋನಿಯಾ ಅವರ ಜತೆಗಿನ ಸಭೆಯಲ್ಲಿ ರಾಜ್ಯ ಸಂಪುಟ ಪುನರ್ ರಚನೆ ಹಾಗೂ ಅದರಲ್ಲಿ ಸೇರಿಸಬೇಕಾದ ಸಂಭಾವ್ಯ ಅಭ್ಯರ್ಥಿಗಳ ಕುರಿತು ಹಾಗೂ ಮುಂಬರುವ ಚುನಾವಣೆಯ ಕುರಿತು ಅಮರಿಂದರ್ ಚರ್ಚಿಸಿದ್ದಾರೆ ಎನ್ನಲಾಗಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಉದ್ಯಮಶೀಲತಾ ಅಭಿವೃದ್ಧಿ ಯೋಜನೆ, ಪ್ರೇರಣಾ ಯೋಜನೆ, ಭೂ-ಒಡೆತನ ಯೋಜನೆ ಮತ್ತು ಗಂಗಾ ಕಲ್ಯಾಣ ಯೋಜನೆಗಳಡಿ ಸಾಲ ಸೌಲಭ್ಯ ನೀಡಲಾಗುವುದು. ಆಸಕ್ತರು www.adcl.karnataka.gov.in ವೆಬ್‌ಸೈಟ್ ಮೂಲಕ ಸೆಪ್ಟೆಂಬರ್ 2ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ: 080-23150079

ಅಜಂ ಖಾನ್, ಪುತ್ರನಿಗೆ ಜಾಮೀನು ನೀಡಲು 'ಸುಪ್ರೀಂ' ನಿರ್ದೇಶನ

ನವದೆಹಲಿ (ಪಿಟಿಐ): ವಂಚನೆ ಮತ್ತು ನಕಲಿ ದಾಖಲೆ ಸೃಷ್ಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಮುಖಂಡ ಅಜಂ ಖಾನ್ ಮತ್ತು ಪುತ್ರ ಮೊಹಮ್ಮದ್ ಅಬ್ದುಲ್ಲ ಅವರಿಗೆ ಜಾಮೀನು ಮಂಜೂರು ಮಾಡುವಂತೆ ಮಂಗಳವಾರ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಕೆಯಾಗಿರುವ ಕಾರಣ ವಿಚಾರಣಾ ನ್ಯಾಯಾಲಯವು ಎರಡು ವಾರಗಳೊಳಗೆ ದೂರುದಾರರ ಹೇಳಿಕೆ ಪಡೆದು, ಬಳಿಕ ಆರೋಪಿಗಳಿಗೆ ಜಾಮೀನು ಮಂಜೂರು ಮಾಡುವಂತೆ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಮತ್ತು ಸಂಜೀವ್ ಖನ್ನಾ ಅವರನ್ನೊಳಗೊಂಡ ನ್ಯಾಯಪೀಠ ಹೇಳಿದೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿ ತನ್ನ ಅಪ್ರಾಪ್ತ ವಯಸ್ಸಿನ ಪುತ್ರನಿಗೆ ಎರಡನೇ ಪ್ಯಾನ್ ಕಾರ್ಡ್ ಪಡೆಯಲು ನಕಲಿ ದಾಖಲೆ ಸೃಷ್ಟಿಸಲು ಅಜಂ ಖಾನ್ ನೆರವಾಗಿದ್ದಾರೆ ಎಂದು ಆರೋಪಿಸಲಾಗಿತ್ತು.

ಬ್ಯಾಂಡ್ ಪ್ರದರ್ಶನ ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವದ ಅಂಗವಾಗಿ ಬೆಂಗಳೂರು ಅರಮನೆ ಆವರಣದಲ್ಲಿ ಭಾರತೀಯ ವಾಯುಪಡೆ ತಂಡದ ಬ್ಯಾಂಡ್ ಪ್ರದರ್ಶನ ಮಂಗಳವಾರ ನಡೆಯಿತು -ಪ್ರಜಾವಾಣಿ ಚಿತ್ರ

ಮೀಸಲಾತಿಗೆ ಆರ್‌ಎಸ್‌ಎಸ್ ಬೆಂಬಲ: ದತ್ತಾತ್ರೇಯ ಹೊಸಬಾಳೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): 'ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಮೀಸಲಾತಿಯನ್ನು ಬಲವಾಗಿ ಬೆಂಬಲಿಸುತ್ತದೆ' ಎಂದು ಪ್ರತಿಪಾದಿಸಿದ ಸಂಘದ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ, 'ಸಮಾಜದಲ್ಲಿನ ಅಸಮಾನತೆ ಹೋಗಲಾಡಿಸುವವರೆಗೂ ಮೀಸಲಾತಿ ಮುಂದುವರಿಯಬೇಕು' ಎಂದು ಮಂಗಳವಾರ ಹೇಳಿದರು.

ಭಾರತ ಪ್ರತಿಷ್ಠಾನ ಆಯೋಜಿಸಿದ್ದ 'ಮೇಕರ್ಸ್ ಆಫ್ ಮಾಡರ್ನ್ ದಲಿತ್ ಹಿಸ್ಟರಿ' ಎಂಬ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಭಾರತದ ಇತಿಹಾಸವು ದಲಿತರ ಇತಿಹಾಸಕ್ಕಿಂತ ಭಿನ್ನವಾಗಿಲ್ಲ. ದಲಿತರ ಇತಿಹಾಸವಿಲ್ಲದೆ ಭಾರತದ ಇತಿಹಾಸವು ಅಪೂರ್ಣ. ಅವರು ಸಾಮಾಜಿಕ ಬದಲಾವಣೆಯಲ್ಲಿ ಮುಂಚೂಣಿಯಲ್ಲಿದ್ದಾರೆ' ಎಂದು ಒತ್ತಿ ಹೇಳಿದರು.

ಮೀಸಲಾತಿ ಕುರಿತು ಪ್ರಸ್ತಾಪಿಸಿದ ಅವರು, 'ಆರ್‌ಎಸ್‌ಎಸ್ ಯಾವಾಗಲೂ ಮೀಸಲಾತಿ ಬೆಂಬಲಿಸುತ್ತ ಬಂದಿದೆ. ಸಾಮಾಜಿಕ ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯ ನಮಗೆ ರಾಜಕೀಯ ತಂತ್ರಗಳಲ್ಲ. ಇವೆರಡೂ ನಮಗೆ ನಂಬಿಕೆಯ ಅಂಶಗಳಾಗಿವೆ' ಎಂದು ಹೊಸಬಾಳೆ ಹೇಳಿದರು.

'ಮೀಸಲಾತಿ ಮತ್ತು ಸಮಾಜದ ಎಲ್ಲ ವರ್ಗಗಳ ನಡುವೆ ಸಮನ್ವಯವು ಜೊತೆಯಾಗಿ ಸಾಗಬೇಕು. ಸಾಮಾಜಿಕ ಬದಲಾವಣೆಗೆ ಕಾರಣರಾದ ವ್ಯಕ್ತಿಗಳನ್ನು 'ದಲಿತ ನಾಯಕರು' ಎಂದು ಕರೆಯುವುದು ಅನ್ಯಾಯದ ಸಂಗತಿ. ಏಕೆಂದರೆ, ಅವರು ಇಡೀ ಸಮಾಜದ ನಾಯಕರಾಗಿದ್ದಾರೆ' ಎಂದರು.

ನಗರದಲ್ಲಿ ಇಂದು

'ಮಿಸೆಸ್ ಇಂಡಿಯಾ ಕರ್ನಾಟಕ' ಅಂತಿಮ ಸುತ್ತಿನ ಸ್ಪರ್ಧೆ: ಸ್ಥಳ–ರಮಡಾ ಹೋಟೆಲ್, ಯಲಹಂಕ, ಮಧ್ಯಾಹ್ನ 3

ಅಂತರರಾಷ್ಟ್ರೀಯ ಜೀವವೈವಿಧ್ಯ ದಿನ: ಉದ್ಘಾಟನೆ–ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶಿಸರ, ಅಧ್ಯಕ್ಷತೆ–ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುಳಾ, ಅತಿಥಿ–ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, ಸ್ಥಳ–ಜಿಲ್ಲಾ ಪಂಚಾಯಿತಿ ಸಭಾಂಗಣ, ಬನಶಂಕರಿ, ಮಧ್ಯಾಹ್ನ 3

ಕೋವಿಡ್ ಮೂರನೇ ಅಲೆ ತಡೆಯುವಿಕೆ ಹಾಗೂ ಹೃದಯದ ಮೇಲೆ ಕೋವಿಡ್ ಪರಿಣಾಮ' ಕುರಿತು ವೆಬಿನಾರ್: ಮಾತನಾಡುವವರು–ಹೃದ್ರೋಗ ತಜ್ಞ ಎಂ.ಎಸ್.ಕೃಷ್ಣ ಸರೀನ್, ಆಯೋಜನೆ–ನಮ್ಮ ಬೆಂಗಳೂರು ಪ್ರತಿಷ್ಠಾನ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ಸಣ್ಣ ನೀರಾವರಿ, ಕುಡಿಯುವ ನೀರಿನ ಯೋಜನೆ

ಕೇಂದ್ರದ ನೆರವಿಗೆ ರಾಜ್ಯದ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಣ್ಣ ನೀರಾವರಿ ಇಲಾಖೆ ರಾಜ್ಯದಲ್ಲಿ ಕೈಗೆತ್ತಿಕೊಂಡಿರುವ ವಿವಿಧ ಯೋಜನೆಗಳಿಗೆ ಆರ್ಥಿಕ ನೆರವು ನೀಡುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ ಸಲ್ಲಿಸಿದೆ.

ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೆಖಾವತ್ ಅವರನ್ನು ಮಂಗಳವಾರ ಭೇಟಿ ಮಾಡಿ ಈ ಕುರಿತು ಮನವಿ ಸಲ್ಲಿಸಲಾಗಿದೆ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಇಲಾಖೆಯಿಂದ ಕೈಗೆತ್ತಿಕೊಂಡಿರುವ ಎಲ್ಲ ಯೋಜನೆಗಳ ಸಮಗ್ರ ವರದಿಯನ್ನು ಈಗಾಗಲೇ ಕೇಂದ್ರಕ್ಕೆ ಸಲ್ಲಿಸಲಾಗಿದೆ. ಲಭ್ಯ ಸಂಪನ್ಮೂಲ ಬಳಸಿ ಬರಪೀಡಿತ ಪ್ರದೇಶಗಳಲ್ಲಿರುವ ಕೆರೆಗಳನ್ನು ತುಂಬಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಗಾಗಿ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಲಾಗಿದೆ ಎಂದು ಹೇಳಿದರು.

ಮಾಧುಸ್ವಾಮಿ

'ಪಶ್ಚಿಮ ಘಟ್ಟದಲ್ಲಿ ಹರಿಯುವ ನದಿಗಳ ಅಂದಾಜು 1,400 ಟಿಎಂಸಿ ಅಡಿ ಯಷ್ಟು ನೀರು ಬಳಕೆಯಾಗದೆ ಸಮುದ್ರ ಸೇರುತ್ತದೆ. ಆ ನದಿಗಳ ನೀರು ಸಂಗ್ರಹಿಸಲು ಅಣೆಕಟ್ಟೆ ನಿರ್ಮಿಸಿ ನೀರಾವರಿ, ಕುಡಿಯುವ ಉದ್ದೇಶಕ್ಕೆ ಬಳಸುವುದು ಉದ್ದೇಶವಾಗಿದೆ. ಪರಿಸರ ಮತ್ತು ಅರಣ್ಯ ಅನುಮತಿ ನೀಡಿ, ₹ 3,900 ಕೋಟಿ ಹಣಕಾಸಿನ ಸೌಲಭ್ಯ ಒದಗಿಸಲು ಕೋರಲಾಗಿದೆ' ಎಂದರು.

ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅಂತರ್ಜಲ ವೃದ್ಧಿಗಾಗಿ ಕೆ.ಸಿ ಮತ್ತು ಎಚ್.ಎನ್. ವ್ಯಾಲಿ ಯೋಜನೆಗಳಿಗೆ ನೆರವು ಕೋರಲಾಗಿದೆ. ಕೇಂದ್ರದ ಜಲಜೀವನ ಮಿಷನ್ ಅಡಿ ಮನೆಮನೆಗೆ ನೀರು ಪೂರೈಸಲು ಕೆಲವೆಡೆ ನೀರಿನ ಲಭ್ಯತೆ ಇಲ್ಲ. ಅಲ್ಲೆಲ್ಲ ಕೆರೆಗಳನ್ನು ತುಂಬಿಸಿದಲ್ಲಿ ನೀರು ಪೂರೈಸಬಹುದು. ಇದಕ್ಕೆ ಆರ್ಥಿಕ ನೆರವಿನ ಅಗತ್ಯವಿದೆ ಎಂದೂ ತಿಳಿಸಲಾಗಿದೆ ಭದ್ರಾ ಮೇಲ್ದಂಡೆ ಯೋಜನೆ ಮೂಲಕ ಚಿತ್ರದುರ್ಗ ಜಿಲ್ಲೆಯ ಬರಪೀಡಿತ ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಸಲು ಯೋಜನೆ ರೂಪಿಸಲಾಗಿದ್ದು, ನೆರವು ಕೋರಲಾಗಿದೆ. ನೆರವು ನೀಡಲು ಶೆಖಾವತ್ ಅವರು ಭರವಸೆ ನೀಡಿದ್ದಾರೆ ಎಂದು ಮಾಧುಸ್ವಾಮಿ ತಿಳಿಸಿದರು.

ರಾಮನಗರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ
ಸಂಖ್ಯೆ: 10/729–738/2021–22 ದಿನಾಂಕ: 04.08.2021
ಅಲ್ಪಾವಧಿ ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ
ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮುಖಾಂತರ ಈ ಕಛೇರಿ ವ್ಯಾಪ್ತಿಯಲ್ಲಿ ರಾಮನಗರ ಜಿಲ್ಲೆಯ **ರಾಮನಗರ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಲೆಕ್ಕ ಶೀರ್ಷಿಕೆ : 4202–01–2021–1–04–423 ಮತ್ತು 4202–01–202–01–05–386 ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.** ಗರಿಷ್ಠ ಅಂದಾಜು ಮೊತ್ತ **ರೂ. 10.60 ಲಕ್ಷ.** ಟೆಂಡರ್ ಸಲ್ಲಿಸುವ ಕಡೆಯ **ದಿನಾಂಕ: 18.08.2021ರ ಸಂಜೆ 4.00 ಗಂಟೆವರೆಗೆ.** ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ರಾಮನಗರ
ವಾಸಾಸಂಇ/ರಾನ/189/2021–22

ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
ISO 9001 COMPANY
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಅಂಚೆ ಪೆಟ್ಟಿಗೆ ಸಂಖ್ಯೆ 2221 ತುಮಕೂರು ರಸ್ತೆ, ಯಶವಂತಪುರ,
ಬೆಂಗಳೂರು–560022. ದೂ: 23376851 (6 ಲೈನ್) 23376641 (4 ಲೈನ್)
ಫ್ಯಾಕ್ಸ್: 23371811 ಇ–ಮೇಲ್: mei.matls9@gmail.com
ವೆಬ್‌ಸೈಟ್ www.mei.karnataka.gov.in
ಸಂ: ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–023 ರಿಂದ 048 ದಿ: 11.08.2021
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)
ವಿದ್ಯುತ್ ಉಪಕರಣಗಳು, ಫ್ಯಾಬ್ರಿಕೇಟೆಡ್ ಮತ್ತು ಕಚ್ಚಾವಸ್ತುಗಳ ಸರಬರಾಜು ಮಾಡುವ ಬಗ್ಗೆ ಬಿಡ್ ವಿಚಾರಣೆ ಸಂಖ್ಯೆ:
(1) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–023.
(2) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–024.
(3) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–025.
(4) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–026.
(5) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–027.
(6) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–028.
(7) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–029.
(8) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–030.
(9) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–031.
(10) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–032.
(11) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–033.
(12) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–034.
(13) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–035.
(14) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–036.
(15) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–037.
(16) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–038.
(17) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–039.
(18) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–040.
(19) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–041.
(20) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–042.
(21) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–043.
(22) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–044.
(23) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–045.
(24) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–046.
(25) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–047.
(26) ಎಂಇಐಎಲ್/ಡಿಜಿಎಂ/ಪ್ರೊಕ್ಯೂರ್‌ಮೆಂಟ್/2021–22/124–048.
ಮೇಲಿನ ಎಲ್ಲಾ ಬಿಡ್ ವಿಚಾರಣೆ ಸಂಖ್ಯೆಗಳಿಗೂ ಬಿಡ್ ವಿಚಾರಣೆ ದಿನಾಂಕ: 14.08.2021.
ವೇಳಾಪಟ್ಟಿ (1) ಇ–ಪ್ರೊಕ್ಯೂರ್‌ಮೆಂಟ್ ಸೆಲ್ ಮೂಲಕ ದಸ್ತಾವೇಜುಗಳನ್ನು ಸಲ್ಲಿಸುವ ದಿನಾಂಕ: **14.08.2021. (2)** ತಾಂತ್ರಿಕ ಮತ್ತು ಹಣಕಾಸು ಬಿಡ್ (ಲಕೋಟೆ I & II) ಸಲ್ಲಿಸಲು ಕೊನೆಯ ದಿನಾಂಕ: **26.08.2021. (3)** ಬಿಡ್‌ಗಳನ್ನು ತೆರೆಯುವ ದಿನಾಂಕ: **28.08.2021.** ಹೆಚ್ಚಿನ ವಿವರಗಳು ಮತ್ತು ಸ್ಪಷ್ಟೀಕರಣಕ್ಕೆ ದಯವಿಟ್ಟು **https://eproc.karnataka.gov.in** ಭೇಟಿ ನೀಡುವುದು. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: **080–23379506/23379507.**
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಸಂಗ್ರಹಣೆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹಾಲಕ್ಷ್ಮೀಪುರಂ ವಿಭಾಗ,
12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು.
ಸಂಖ್ಯೆ : ಕಾಪಾಅ(ಮಲಪು)/ಟೆಂಡ್/ಗೂಡ್ಸ್/06/2021–22 ದಿನಾಂಕ:06.08.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬಿಬಿಎಂಪಿ, ಇವರು ಅರ್ಹ ಗುತ್ತಿಗೆದಾರರಿಂದ **ವಾರ್ಡ್ ಸಂಖ್ಯೆ 67ರ ಸರ್ಕಾರಿ ಸೋಪ್ ಫ್ಯಾಕ್ಟರಿ ಜಂಕ್ಷನ್‌ನಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿಯವರ ಪ್ರತಿಮೆಯನ್ನು ಒದಗಿಸಿ ಸ್ಥಾಪಿಸಲು ದರ ನಿಗದಿಪಡಿಸಲು** ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ತಾಂತ್ರಿಕ ವಿವರಗಳು
1.	ಪ್ರಭಾರ ಅಭಿಯಂತರರ ನಿರ್ದೇಶನದಂತ ಕ್ಲೇ ಮೌಲ್ಡಿಂಗ್, ಬಲವರ್ಧನೆ, ಪಿಓಪಿ ನೆಗೆಟಿವ್ ಮೌಲ್ಡ್ ಬ್ರಾಂಜ್ ಮೆಲ್ಟಿಂಗ್ ಹಾಗೂ ಎಲ್ಲಾ ಸಾಮಗ್ರಿಗಳ ಸಾಗಾಣಿಕೆ ಮತ್ತು ಸಾಮಗ್ರಿಗಳ ವೆಚ್ಚ ಸೇರಿದಂತೆ 3100 ಕೆಜಿ ತೂಕದ ಶ್ರೀ ಶಿವಕುಮಾರ ಸ್ವಾಮೀಜಿಯವರ ಪ್ರತಿಮೆಯನ್ನು 9.5 feet(L) x 4.5feet(B) x 9 feet(H) ಒದಗಿಸುವುದು ಮತ್ತು ಎರಕ ಹೊಯ್ಯುವುದು.
2.	ಕ್ಲೇ ಮೌಲ್ಡಿಂಗ್, ಬಲವರ್ಧನೆ, ಪಿಓಪಿ ನೆಗೆಟಿವ್ ಮೌಲ್ಡ್ ಬ್ರಾಂಜ್ ಮೆಲ್ಟಿಂಗ್ ಹಾಗೂ ಎಲ್ಲಾ ಸಾಮಗ್ರಿಗಳ ಸಾಗಾಣಿಕೆ ಮತ್ತು ಸಾಮಗ್ರಿಗಳ ವೆಚ್ಚ ಸೇರಿದಂತೆ ಶ್ರೀ ಶಿವಕುಮಾರ ಸ್ವಾಮೀಜಿಯವರ ಪ್ರತಿಮೆಗೆ ಕಂಚಿನ ಪೀಠವನ್ನು 84 Inches x 75 Inches x 6 Inches side (LxBxD) ಒದಗಿಸುವುದು.

ಗುತ್ತಿಗೆದಾರರಿಗೆ ಅರ್ಹತಾ ಮಾನದಂಡಗಳು: ಕಳೆದ ಮೂರು ವರ್ಷಗಳ ಇದೇ ರೀತಿಯ ಕೆಲಸದ ಅನುಭವ ಮತ್ತು ಹಿಂದಿನ ಕಾರ್ಯಕ್ಷಮತೆಯ ವಿವರಗಳನ್ನು ಒದಗಿಸಬೇಕು.
ಇಎಂಡಿ ಘೋಷಣೆ: ಸರ್ಕಾರದ ಆದೇಶ ಸಂಖ್ಯೆ : ಅಇ 675 ವೆಚ್ಚ–12/ 2020 ಬೆಂಗಳೂರು ದಿನಾಂಕ: 22.12.2020ರಂತೆ. 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:/eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **21.08.2021 ರ ಸಂಜೆ 4.00 ಗಂಟೆಯವರೆಗೆ.** 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **23.08.2021 ರ ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–22441076 ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ.
"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ
ರಾಷ್ಟ್ರೀಯ ಆರೋಗ್ಯ ಅಭಿಯಾನ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಇ–ಮೇಲ್: rchobangalorerural@gmail.com
dpmbangalorerural2@gmail.com
ಸಂಖ್ಯೆ: DHS/NHM/RCH/BR/MP-OS/01/2021-22 ದಿನಾಂಕ: 10.08.2021
ಟೆಂಡರ್ ಆಹ್ವಾನ
ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿ **2021–22 ಮತ್ತು 2022–23 ನೇ** ಸಾಲಿಗೆ ಮಾನವ ಹೊರ ಸಂಪನ್ಮೂಲ ಏಜೆನ್ಸಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ (https://eproc.karnataka.gov.in) ಮುಖಾಂತರ ಟೆಂಡರ್ ಕರೆಯಲಾಗಿದೆ.
ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ಈ ಕೆಳಕಂಡಂತಿದೆ.
ವಿವರಗಳು:– 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ: **ದಿನಾಂಕ: 11.08.2021.** 2) ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 22.08.2021 ಸಮಯ ಸಂಜೆ: 4.30 ಗಂಟೆಗೆ.** 3) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ ಮತ್ತು ಸಮಯ **(ತಾಂತ್ರಿಕ ಬಿಡ್): 24.08.2021, ಬೆಳಿಗ್ಗೆ 11.00 ಗಂಟೆ.** 4) ಟೆಂಡರ್ ತೆರೆಯುವ ಸ್ಥಳ: **ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.** 5) ಟೆಂಡರ್ ತೆರೆಯುವ ಪ್ರಾಧಿಕಾರ: ಜಿಲ್ಲಾ ಆರೋಗ್ಯ ಸಂಘ, ಬೆಂಗಳೂರು ಗ್ರಾಮಾಂತರ ಜಿಲ್ಲೆ. 6) ಇ.ಎಂ.ಡಿ. ಅಂದಾಜು ಮೊತ್ತ : **ರೂ. 1.70 ಲಕ್ಷ** (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು). 7) ಟೆಂಡರ್ ಅಂದಾಜು ಮೊತ್ತ : **ರೂ. 82.00 ಲಕ್ಷ.**
ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ಕಛೇರಿಯ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.
ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ವಾಸಾಸಂಇ/ಉನಿಕ/ಬೆಂಗ್ರಾಜಿ/165/MAA Comm/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಈಶ್ವರಪ್ಪ ಅವರಿಗೆ ಹುಚ್ಚು ಹಿಡಿದಿದೆ ಎಂದ ಹರಿಪ್ರಸಾದ್ • ಸಚಿವ ಸಂಪುಟದಿಂದ ಉಚ್ಚಾಟಿಸಲು ಆಗ್ರಹ

ಈಶ್ವರಪ್ಪ ಅವಾಚ್ಯ ಪದ ಬಳಕೆ: ತಿರುಗಿಬಿದ್ದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಹರಿಪ್ರಸಾದ್

ಬೆಂಗಳೂರು: 'ಜೋಕರ್ ಎಂದು ಈಶ್ವರಪ್ಪ ಹೆಸರು ಬದಲಿಸಿಕೊಳ್ಳಬೇಕು' ಎಂದು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಹೇಳಿಕೆಗೆ ತಿರುಗೇಟು ನೀಡುವ ಭರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವಾಚ್ಯ ಪದ ಬಳಸಿದ್ದು ಕಾಂಗ್ರೆಸ್ ನಾಯಕರ ಆಕ್ರೋಶಕ್ಕೆ ಕಾರಣವಾಗಿದೆ.

ಮಾತಿನ ಭರದಲ್ಲಿ ಅವಾಚ್ಯ ಶಬ್ದ ಬಳಸಿದ ಈಶ್ವರಪ್ಪ ತಕ್ಷಣ ಎಚ್ಚೆತ್ತುಕೊಂಡು, 'ಕೋಪದಲ್ಲಿ ಈ ಮಾತು ಬಂತು. ಆ ಮಾತು ವಾಪಸ್ ಪಡೆಯುತ್ತೇನೆ. ದಯವಿಟ್ಟು ಅದನ್ನು ಮುಂದುವರೆಸುವುದು ಬೇಡ' ಎಂದು ಮಾಧ್ಯಮ ಪ್ರತಿನಿಧಿಗಳಲ್ಲಿ ಮನವಿ ಮಾಡಿದರು.

ಹರಿಪ್ರಸಾದ್ ಹೇಳಿದ್ದೇನು: 'ಸಚಿವ ಕೆ.ಎಸ್. ಈಶ್ವರಪ್ಪ ತಮ್ಮ ಹೆಸರನ್ನು ಮೇರಾ ನಾಮ್ ಜೋಕರ್ ಎಂದು ಬದಲಾಯಿಸಿಕೊಳ್ಳಲಿ. ದ್ವೇಷದ ಭಾಷಣ ಮಾಡುವುದು ಅವರ ತಪ್ಪಲ್ಲ. ಅವರು ಕಲಿತ ನಾಗಪುರ ಯುನಿವರ್ಸಿಟಿ ಹೇಳಿಕೊಟ್ಟ ಪಾಠ' ಎಂದು ಬಿ.ಕೆ. ಹರಿಪ್ರಸಾದ್ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

ಈಶ್ವರಪ್ಪಗೆ ಸಂಸ್ಕೃತಿ ಇಲ್ಲ: ಸಿದ್ದರಾಮಯ್ಯ

ಸಿದ್ದರಾಮಯ್ಯ

ಮೈಸೂರು: 'ಸಂಸ್ಕೃತಿ, ಸಂಸ್ಕಾರ ಇಲ್ಲದ್ದರಿಂದಲೇ ಸಚಿವ ಕೆ.ಎಸ್. ಈಶ್ವರಪ್ಪ ಹೊಲಸು ಪದಗಳನ್ನು ಬಳಸುತ್ತಾರೆ. ಮಂತ್ರಿಯಾಗಿದ್ದೇನೆ ಎಂಬ ಜವಾಬ್ದಾರಿಯೂ ಇಲ್ಲದೆ, ಬೇಕಾಬಿಟ್ಟಿಯಾಗಿ ಮಾತನಾಡುತ್ತಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೆಟ್ಟ ಪದಗಳನ್ನು ಯಾರು ಬೇಕಾದರೂ ಬಳಸಬಹುದು. ಆದರೆ ಸಭ್ಯ ವ್ಯಕ್ತಿಗಳು ಬಳಸಲ್ಲ. ಸಂಸ್ಕೃತಿ ಇಲ್ಲದವರು ಮಾತ್ರ ಬಳಸಬಲ್ಲರು. ನಾನು ಇಲಿಯೋ, ಹುಲಿನೋ ಅಥವಾ ಮನುಷ್ಯನೋ ಎಂಬುದನ್ನು ಜನ ತೀರ್ಮಾನಿಸುತ್ತಾರೆ. ಅವನ್ಯಾವನ್ರೀ ಹೇಳೋಕೆ. ಅವನ ಸರ್ಟಿಫಿಕೇಟ್ ಬೇಕಾ' ಎಂದು ತಿರುಗೇಟು ನೀಡಿದರು. 'ಅವರು ಬಂದಿರುವ ದಾರಿಯೇ ಅಂಥದ್ದು. ಅವರಿಂದ ಒಳ್ಳೆಯ ಮಾತುಗಳನ್ನು ನಿರೀಕ್ಷಿಸುವಂತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪರಸ್ಪರ ಟೀಕೆ, ಹೊಗಳಿಕೆ, ತೆಗಳಿಕೆ ಸಾಮಾನ್ಯ. ಅಧಿಕಾರದಲ್ಲಿ ಇರುವವರು ಅದನ್ನೆಲ್ಲಾ ಸಹಿಸಿಕೊಳ್ಳಬೇಕಾಗುತ್ತದೆ' ತಿಳಿಸಿದರು.

'ಉಪ ಮುಖ್ಯಮಂತ್ರಿ ಆಗಬೇಕೆಂದು ಈಶ್ವರಪ್ಪ ಹಲವು ಕಾರ್ಯಾಚರಣೆ ನಡೆಸಿದ್ದರು. ಉಪ ಮುಖ್ಯಮಂತ್ರಿ ಆಗದೇ ಇರುವುದರಿಂದ ಅವರಿಗೆ ಹುಚ್ಚು ಹಿಡಿದಿದೆ. ಪ್ರಚೋದನಕಾರಿ ಭಾಷಣ ಮಾಡಿದ ಈಶ್ವರಪ್ಪ ವಿರುದ್ಧ ತಕ್ಷಣ ಪೊಲೀಸರು ಸ್ವಯಂ ಪ್ರೇರಿತ ಮೊಕದ್ದಮೆ ದಾಖಲಿಸಬೇಕು. ಸಚಿವ ಸಂಪುಟದಿಂದ ಅವರನ್ನು ಉಚ್ಚಾಟಿಸಬೇಕು' ಎಂದು ಆಗ್ರಹಿಸಿದರು.

ಬಿಜೆಪಿ ಸಂಸ್ಕೃತಿಯ ಪ್ರತಿಬಿಂಬ: 'ಈಶ್ವರಪ್ಪ ಅವರ ಅವಾಚ್ಯ ನುಡಿಗಳು ಬಿಜೆಪಿಯ ನೀಚ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಅವರ ಹೇಳಿಕೆಗೆ ಮುಖ್ಯಮಂತ್ರಿಯಿಂದ ಉತ್ತರ ಎದುರು ನೋಡುತ್ತಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಈಶ್ವರಪ್ಪ ಅವರ ನಾಲಿಗೆ ಅವರ ಆಚಾರ ತೋರಿಸುತ್ತದೆ. ಬಿಜೆಪಿ ನಾಯಕರ ತಂದೆ ತಾಯಂದಿರು ಇಂಥ ಸಂಸ್ಕೃತಿ ಕಲಿಸಿದ್ದಾರೆ. ಇಂಥ ಭಾಷೆ ಬಳಸುವವರನ್ನು ಪಕ್ಷದಿಂದ ಕಿತ್ತುಹಾಕಬೇಕು. ಬಿಜೆಪಿಗೆ ನಾಚಿಕೆಗೇಡಿನ ಸಂಗತಿ, ಬಿಜೆಪಿಗೇ ಒಂದು ಕಳಂಕ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	120.84	11,273	5,382
ಹಾರಂಗಿ	2,859	2,855.51	5,564	4,220
ಕಬಿನಿ	2,284	2,281.18	700	5,000
ಹೇಮಾವತಿ	2,922	2,920.44	6,230	5,055
ಲಿಂಗನಮಕ್ಕಿ	1,819	1,811.70	12,676	-
ಸೂಪಾ (ಮೀ)	564	554.41	7,072	3,654
ಮಾಣಿ	594.36	584.62	1,800	-
ತುಂಗಭದ್ರಾ	1,633	1,631.87	76,337	79,616
ಮಲಪ್ರಭಾ	2,079.50	2,077	4,611	1,544
ಘಟಪ್ರಭಾ	2,175	2,173.20	3,294	1,381
ಭದ್ರಾ	186	184.70	10,647	7,048
ಆಲಮಟ್ಟಿ (ಮೀ)	519.60	519.13	50,089	76,918
ನಾರಾಯಣಪುರ (ಮೀ)	492.25	491.84	20,000	17,480

* ನೆಲಮಟ್ಟದಿಂದ

ಹಾರ ಬಿಡಿ: ಕನ್ನಡ ಪುಸ್ತಕ ಕೊಡಿ

ಬೆಂಗಳೂರು: ಇನ್ನು ಮುಂದೆ ಸರ್ಕಾರ ಮತ್ತು ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ಸಂಸ್ಥೆಗಳು ನಡೆಸುವ ಸಭೆ ಮತ್ತು ಸಮಾರಂಭಗಳಲ್ಲಿ ಹೂಗುಚ್ಛ, ಹಾರ, ತುರಾಯಿ, ಹಣ್ಣಿನ ಬುಟ್ಟಿ, ಶಾಲು, ನೆನಪಿನ ಕಾಣಿಕೆಗಳನ್ನು ನೀಡಬಾರದು. ಅದರ ಬದಲು ಕನ್ನಡ ಪುಸ್ತಕಗಳನ್ನು ನೀಡಬಹುದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಆದೇಶ ಹೊರಡಿಸಿದ್ದಾರೆ.

ಈ ನಿರ್ದೇಶನವನ್ನು ತಕ್ಷಣದಿಂದಲೇ ಜಾರಿಗೊಳಿಸಬೇಕು ಎಂದು ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಂಗಳವಾರ ಬೆಳಿಗ್ಗೆ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೂಗುಚ್ಛ ಸ್ವೀಕರಿಸಲು ನಿರಾಕರಿಸಿದರು. 'ಇದು ಅನಗತ್ಯ ವೆಚ್ಚ. ಸಭೆಗಳಲ್ಲಿ ಶಿಷ್ಟಾಚಾರದ ಹೆಸರಿನಲ್ಲಿ ಹೂಗುಚ್ಛ, ಹಾರ, ಶಾಲುಗಳನ್ನು ನೀಡುವ ಅಗತ್ಯವಿಲ್ಲ. ಇನ್ನು ಮುಂದೆ ಈ ಸಂಪ್ರದಾಯ ಬೇಡ' ಎಂದು ಹೇಳಿದರು. ಅದರ ಬೆನ್ನಲ್ಲೇ ಮುಖ್ಯಕಾರ್ಯದರ್ಶಿಯವರು ಆದೇಶ ಹೊರಡಿಸಿ, ಕಾಣಿಕೆಗಳ ಬದಲಿಗೆ ಕನ್ನಡ ಪುಸ್ತಕಗಳನ್ನು ಕಾಣಿಕೆಯಾಗಿ ನೀಡಬಹುದು ಎಂದು ತಿಳಿಸಿದ್ದಾರೆ.

ಬಸವರಾಜ ಬೊಮ್ಮಾಯಿ ಸರ್ಕಾರ ರಚನೆ ಆದ ಬಳಿಕ ಕನ್ನಡ ಸಂಸ್ಕೃತಿ ಮತ್ತು ಇಂಧನ ಸಚಿವ ಸುನಿಲ್ ಕುಮಾರ್ ಅವರು ಪುಸ್ತಕ ಕೊಡುಗೆ ಅಭಿಯಾನಕ್ಕೆ ಮೇಲ್ಪಂಕ್ತಿ ಹಾಕಿದ್ದರು. ತಮ್ಮನ್ನು ಭೇಟಿಯಾಗಲು ಮತ್ತು ಅಭಿನಂದಿಸಲು ಬರುವವರು ಹಾರ, ತುರಾಯಿ ಮತ್ತು ನೆನಪಿನ ಕಾಣಿಕೆ ತರುವುದು ಬೇಡ. ಏನಾದರೂ ಕೊಡಲೇಬೇಕು ಎಂದಿದ್ದರೆ ಒಂದು ಕನ್ನಡ ಪುಸ್ತಕವನ್ನು ಖರೀದಿಸಿ ತಂದು ಕೊಡಿ ಎಂದು ಮನವಿ ಮಾಡಿದ್ದರು.

ಈ ಮನವಿಯ ಬಳಿಕ ಸುಮಾರು ಎರಡು ಸಾವಿರ ಅತ್ಯುತ್ತಮ ಪುಸ್ತಕಗಳು ಬಂದಿವೆ. ಅವುಗಳನ್ನು ಕಾರ್ಕಳ ಗ್ರಂಥಾಲಯ, ಗ್ರಾಮ ಪಂಚಾಯಿತಿ ಮತ್ತು ಸರ್ಕಾರಿ ಶಾಲಾ ಗ್ರಂಥಾಲಯಗಳಿಗೆ ವಿತರಿಸಲು ವ್ಯವಸ್ಥೆ ಮಾಡಲಾಗುವುದು. ಇದರಿಂದ ಜ್ಞಾನ ದಾಹಿಗಳಿಗೆ ನೆರವಾಗುತ್ತದೆ ಎಂದು ತಿಳಿಸಿದ್ದಾರೆ.

ರಾಷ್ಟ್ರಧ್ವಜದ ಬ್ಯಾಡ್ಜ್ ಖರೀದಿ

75ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಬೆಂಗಳೂರಿನ ಬಳೇಪೇಟೆಯ ಅಂಗಡಿಯೊಂದರಲ್ಲಿ ಮಂಗಳವಾರ ಮಕ್ಕಳು ರಾಷ್ಟ್ರ ಧ್ವಜದ ಬ್ಯಾಡ್ಜ್ ಖರೀದಿಸುತ್ತಿರುವ ದೃಶ್ಯ ಕಂಡುಬಂತು

ಪ್ರಜಾವಾಣಿ ಚಿತ್ರ/ ರಂಜು ಪಿ

ಸಾರ್ವಜನಿಕ ಹಿತಾಸಕ್ತಿ ಅರ್ಜಿ: ಶುಲ್ಕ ಪಾವತಿ ವಿಳಂಬ

ಹೈಕೋರ್ಟ್ ಕ್ಷಮೆ ಯಾಚಿಸಿದ ಹಿರೇಮಠ

ಬೆಂಗಳೂರು: 2013–14 ರಲ್ಲಿ ನಡೆದ 197 ಮಂದಿ ಸಹಾಯಕ ಸರ್ಕಾರಿ ಅಭಿಯೋಜಕರ (ಎಪಿಪಿ) ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ನ್ಯಾಯಾಲಯ ಶುಲ್ಕ ಪಾವತಿಸದೇ ಇರುವುದು ಮತ್ತು ವಿಚಾರಣೆಗೆ ಸಹಕಾರ ನೀಡದೇ ಇರುವ ಕುರಿತು ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್. ಹಿರೇಮಠ ಹೈಕೋರ್ಟ್‌ನ ಕ್ಷಮೆ ಯಾಚಿಸಿದ್ದಾರೆ.

ಹಿರೇಮಠ ಹಾಗೂ ವಕೀಲೆ ಸುಧಾ ಕಾಟ್ವಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠದಲ್ಲಿ ಮಂಗಳವಾರ ನಡೆಯಿತು. ಆಗ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾದ ಹಿರೇಮಠ ಅವರು, ನ್ಯಾಯಾಲಯದ ಕ್ಷಮೆ ಯಾಚಿಸಿದರು.

ಅರ್ಜಿದಾರರಾದ ಹಿರೇಮಠ ಮತ್ತು ಸುಧಾ ಕಾಟ್ವಾ ಅವರು ವಿಚಾರಣೆಗೆ ಸಹಕಾರ ನೀಡುತ್ತಿಲ್ಲ ಹಾಗೂ ಶುಲ್ಕ ಪಾವತಿಗೂ ಹಣ ನೀಡಿಲ್ಲ ಎಂದು ಅವರ ಪರ ವಕೀಲ ಎಸ್. ಉಮಾಪತಿ ಹಿಂದಿನ ವಿಚಾರಣೆ ವೇಳೆ ದೂರಿದ್ದರು. ವಿಚಾರಣೆಗೆ ಸಹಕರಿಸದಿದ್ದರೆ ಅರ್ಜಿದಾರರಿಗೆ ದಂಡ ವಿಧಿಸಿ, ಪಿಐಎಲ್ ಸಲ್ಲಿಸದಂತೆ ನಿರ್ಬಂಧ ಹೇರುವುದಾಗಿ ವಿಭಾಗೀಯ ಪೀಠ ಎಚ್ಚರಿಕೆ ನೀಡಿತ್ತು.

'ನ್ಯಾಯಾಲಯದ ಅಭಿಪ್ರಾಯ ಆಗಸ್ಟ್ 1ರಂದು ಪತ್ರಿಕೆಗಳನ್ನು ನೋಡಿದಾಗಷ್ಟೆ ನನಗೆ ತಿಳಿಯಿತು. ಈ ಹಿಂದೆ ನಾವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಿದಾಗ ಯಾವತ್ತೂ ₹ 5,000 ದಿಂದ ₹ 10,000 ಮೀರಿರಲಿಲ್ಲ. ಇದೇ ಮೊದಲ ಬಾರಿಗೆ ಲಕ್ಷಾಂತರ ರೂಪಾಯಿ ಶುಲ್ಕ ಪಾವತಿಸಬೇಕಿದೆ. ಅಷ್ಟೊಂದು ಮೊತ್ತ ನಮ್ಮ ಸಂಸ್ಥೆಯ ಬಳಿ ಇಲ್ಲ. ದೇಣಿಗೆ ಸಂಗ್ರಹಿಸಿ ಶುಲ್ಕ ಪಾವತಿಸಲು ಅವಕಾಶ ನೀಡಬೇಕು' ಎಂದು ಹಿರೇಮಠ ಮನವಿ ಮಾಡಿದರು.

ತಮ್ಮ ಪರ ವಾದ ಮಂಡನೆಗೆ ಬೇರೆ ವಕೀಲರನ್ನು ನಿಯೋಜಿಸುವುದಾಗಿ ಹಿರೇಮಠ ತಿಳಿಸಿದರು. ಪ್ರಕರಣದಿಂದ ಹಿಂದೆ ಸರಿಯಲು ಅನುಮತಿ ನೀಡುವಂತೆ ವಕೀಲ ಉಮಾಪತಿ ಮನವಿ ಸಲ್ಲಿಸಿದರು. ಆದರೆ, ಬೇರೊಬ್ಬರನ್ನು ನಿಯೋಜಿಸುವವರೆಗೂ ವಕೀಲರು ಹಿಂದೆ ಸರಿಯಲು ಅನುಮತಿ ನೀಡುವುದಿಲ್ಲ ಎಂದು ನ್ಯಾಯಪೀಠ ಹೇಳಿತು.

ನ್ಯಾಯಾಲಯ ಶುಲ್ಕ ಪಾವತಿಗೆ ಒಂದು ತಿಂಗಳ ಕಾಲಾವಕಾಶ ನೀಡಿರುವ ಹೈಕೋರ್ಟ್, ಹಿರೇಮಠ ಅವರು ಸಲ್ಲಿಸಿದ್ದ ಪ್ರಮಾಣಪತ್ರವನ್ನು ದಾಖಲು ಮಾಡಿಕೊಂಡಿತು. ಸೆಪ್ಟೆಂಬರ್ 13ಕ್ಕೆ ಪ್ರಕರಣದ ವಿಚಾರಣೆ ಮುಂದೂಡಿತು.

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
8ನೇ ಮಹಡಿ, ಇ ಬ್ಲಾಕ್, ಕಾವೇರಿ ಭವನ, ಬೆಂಗಳೂರು–560009.
ದೂರವಾಣಿ ಸಂಖ್ಯೆ: 080–23118888, ಫ್ಯಾಕ್ಸ್: 080–22247317, ಇ–ಮೇಲ್: cerghc@gmail.com

ದಿನಾಂಕ: 10.08.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅರ್ಹ ಗುತ್ತಿಗೆದಾರರಿಂದ ಸರ್ಕಾರಿ ಜಮೀನುಗಳಲ್ಲಿ ಈ ಕೆಳಕಂಡ ಬಹುಮಹಡಿ [G+3] ಮನೆಗಳ ನಿರ್ಮಾಣದ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸರ್ಕಾರಿ ಜಮೀನುಗಳಲ್ಲಿ **"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"** ಅಡಿಯಲ್ಲಿ 4380 [G+3] ಬಹು ಮಹಡಿ ಕಟ್ಟಡಗಳನ್ನು ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವ ಕಾಮಗಾರಿ ವಿವರಗಳು ಕೆಳಕಂಡಂತಿವೆ:

1.	ಆವ್ವೇರಹಳ್ಳಿ – ಸರ್ವೆ ನಂ. 10, ಯಲಹಂಕ	912 ಮನೆಗಳು	Work_Indent No.: RGRHCL:2020-21: OW:Work_Indent 62
2.	ಮುತ್ತಗದಹಳ್ಳಿ – ಸರ್ವೆ ನಂ. 22, ಯಲಹಂಕ	928 ಮನೆಗಳು	Work_Indent No.: RGRHCL:2020-21: OW:Work_Indent 60
3.	ಕೊಡತಿ – ಸರ್ವೆ ನಂ. 82–83, ಮಹದೇವಪುರ	256 ಮನೆಗಳು	Work_Indent No.: RGRHCL:2020-21: OW:Work_Indent 65
4.	ಹೊರಮಾವು – ಸರ್ವೆ ನಂ. 82, ಕೆ.ಆರ್. ಪುರಂ	52 ಮನೆಗಳು	Work_Indent No.: RGRHCL:2020-21: OW:Work_Indent 64
5.	ಲಕ್ಷ್ಮಿಪುರ – ಸರ್ವೆ ನಂ. 69, ಯಲಹಂಕ	256 ಮನೆಗಳು	Work_Indent No.: RGRHCL:2020-21: OW:Work_Indent 66
6.	ಯಮರೆ – ಸರ್ವೆ ನಂ. 195, ಆನೇಕಲ್	448 ಮನೆಗಳು	Work_Indent No.: RGRHCL:2020-21: OW:Work_Indent 68
7.	ಯಮರೆ – ಸರ್ವೆ ನಂ. 88, ಆನೇಕಲ್	104 ಮನೆಗಳು	Work_Indent No.: RGRHCL:2020-21: OW:Work_Indent 67
8.	ಗುಡ್ಡದಹಳ್ಳಿ – ಸರ್ವೆ ನಂ. 45, ಯಲಹಂಕ	432 ಮನೆಗಳು	Work_Indent No.: RGRHCL:2020-21: OW:Work_Indent 63
9.	ಅಗ್ರಹಾರಪಾಳ್ಯ – ಸರ್ವೆ ನಂ. 29, ಯಲಹಂಕ	992 ಮನೆಗಳು	Work_Indent No.: RGRHCL:2020-21: OW:Work_Indent 71

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **13.09.2021 ಸಂಜೆ 4:00 ಘಂಟೆವರಗೆ**
ಕಾಮಗಾರಿಯ ಬಗ್ಗೆ / ಇನ್ನಿತರ ವಿವರಗಳನ್ನು **https://eproc.karnataka.gov.in** ನಲ್ಲಿ ಅಥವಾ ಮುಖ್ಯ ಇಂಜಿನೀಯರ್ ರವರ ಕಛೇರಿ, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು, ಇಲ್ಲಿ ಪಡೆಯಬಹುದಾಗಿದೆ.
ದೂರವಾಣಿ: 080–23118888.

ಸಹಿ/–
ಮುಖ್ಯ ಅಭಿಯಂತರರು
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು

ವಾಸಾಸಂಇ/ಬೆಂನ/1129/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪೊಲೀಸ್ ಅಧಿಕಾರಿಗಳ ಜತೆ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಸುಳ್ಳು ದಾವೆ ವಾಪಸು: ಕೋರ್ಟ್ ನಿರ್ದೇಶನಗಳಂತೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಮೊಕದ್ದಮೆಗಳ ವಾಪಸು ವಿಚಾರದಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನಿರ್ದೇಶನಗಳಂತೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಜೊತೆ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಬಿಜೆಪಿ ಹಾಗೂ ಹಿಂದೂ ಸಂಘಟನೆಗಳ ಕಾರ್ಯಕರ್ತರ ವಿರುದ್ಧದ ಹಳೆಯ ಸುಳ್ಳು ಕೇಸ್‌ಗಳನ್ನು ಹಿಂಪಡೆಯಲು ಸಚಿವ ಕೋಟ ಶ್ರೀನಿವಾಸ ಪೂಜಾರಿ ಕೋರಿದ್ದಾರೆ. ಯಡಿಯೂರಪ್ಪ ಆಡಳಿತಾವಧಿಯಲ್ಲಿ ನಾನು ಗೃಹ ಸಚಿವ ಆಗಿದ್ದಾಗ ರೈತರು, ಕನ್ನಡಪರ ಸಂಘಟನೆಗಳ ವಿರುದ್ಧದ ಪ್ರಕರಣಗಳನ್ನು ಕೈಬಿಡಲಾಗಿತ್ತು' ಎಂದರು.

'ಕಾನೂನು ಸುವ್ಯವಸ್ಥೆ ಕಾಪಾಡುವುದು ನಮ್ಮ ಸರ್ಕಾರದ ಆದ್ಯತೆ. ಭೂಮಾಫಿಯಾ ಜೊತೆ ಪೊಲೀಸರ ನಂಟು ಸಹಿಸುವುದಿಲ್ಲ. ಈ ಬಗ್ಗೆ ಸಭೆಯಲ್ಲಿ ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದೇನೆ' ಎಂದರು.

'ಹಿಂಸೆಗೆ ಹಿಂಸೆ ಮದ್ದಲ್ಲ. ಕಾಂಗ್ರೆಸ್ ಆಡಳಿತಾವಧಿಯಲ್ಲಿ ಹಿಂದೂಪರ ಸಂಘಟನೆಗಳ ಕಾರ್ಯಕರ್ತರ ಹತ್ಯೆ ಹಾಗೂ ದೌರ್ಜನ್ಯಗಳನ್ನು ಪ್ರಸ್ತಾಪಿಸಿದ್ದ ಸಚಿವ ಕೆ.ಎಸ್.ಈಶ್ವರಪ್ಪ, ತಮ್ಮ ನೋವು ಹಂಚಿಕೊಂಡಿದ್ದಾರೆಯೇ ಹೊರತು ಪ್ರಚೋದನಾಕಾರಿ ಹೇಳಿಕೆ ನೀಡಿಲ್ಲ. ಇದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ' ಎಂದು ಬೊಮ್ಮಾಯಿ ಸಮರ್ಥಿಸಿದರು.

'ನೂತನ ಸರ್ಕಾರದ ಧ್ಯೇಯ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಈ ಸಭೆ ಕರೆಯಲಾಗಿತ್ತು. ಪೊಲೀಸರು ಇನ್ನಷ್ಟು ಜನಪರ ಹಾಗೂ ದಕ್ಷವಾಗಿ ಕೆಲಸ ಮಾಡಬೇಕು. ಕಾನೂನು ಮತ್ತು ಸುವ್ಯವಸ್ಥೆ ಪೂರ್ಣ ಬಿಗಿಯಾಗಿರುವುದು ಮುಖ್ಯವಾಗಿದ್ದು, ಅದಕ್ಕೆ ಆದ್ಯತೆ ನೀಡಲಾಗುವುದು. ದಕ್ಷ, ಅನುಭವಿ ಮತ್ತು ಪ್ರಾಮಾಣಿಕ ಸಚಿವ ಆರಗ ಜ್ಞಾನೇಂದ್ರ ಅವರು ಇಲಾಖೆಗೆ ಇನ್ನಷ್ಟು ಚೈತನ್ಯ ತುಂಬುವ ಉತ್ಸಾಹದಲ್ಲಿದ್ದಾರೆ' ಎಂದು ಮುಖ್ಯಮಂತ್ರಿ ಹೇಳಿದರು.

'ಪೊಲೀಸ್ ಇಲಾಖೆಯಲ್ಲಿ ಹಲವು ಸುಧಾರಣೆಗಳು, ಮೂಲಸೌಕರ್ಯ ಅಭಿವೃದ್ಧಿಗೆ ಚಾಲನೆ ನೀಡಲಾಗಿದ್ದು, ಅವುಗಳು ಮುಂದುವರಿಯಲಿದೆ. ಮುಂದಿನ ದಿನಗಳಲ್ಲಿ ಕೆಲವು ಸವಾಲುಗಳನ್ನು ಎದುರಿಸಬೇಕಾಗಿದೆ. ಕೋವಿಡ್ ಸಂಭಾವ್ಯ ಮೂರನೇ ಅಲೆ ತಡೆಗಟ್ಟಲು ಕ್ರಮ ವಹಿಸಬೇಕು. ಗಡಿ ಜಿಲ್ಲೆಗಳಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕು. ಹಿರಿಯ ಅಧಿಕಾರಿಗಳು ಹೆಚ್ಚು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ಸಲಹೆ ನೀಡಿದ್ದೇನೆ' ಎಂದರು.

ಇಲಾಖೆಯಲ್ಲಿ ಸುಧಾರಣೆ ಮತ್ತು ಅತ್ಯುತ್ತಮ ಕಾರ್ಯನಿರ್ವಹಣೆಗೆ ಬೆಂಬಲ ನೀಡುವಂತೆ ಮುಖ್ಯಮಂತ್ರಿಯನ್ನು ಕೋರಿದ ಆರಗ ಜ್ಞಾನೇಂದ್ರ, 'ಅಪರಾಧ ಪ್ರಕರಣಗಳ ಶೀಘ್ರ ತನಿಖೆಗೆ ಇಲಾಖೆ ಆದ್ಯತೆ ನೀಡಬೇಕು. ಇದರಲ್ಲಿ ವಿಳಂಬ ಧೋರಣೆ ಸಲ್ಲದು' ಎಂದರು.

ಪಿಎಚ್‌ಡಿಗಾಗಿ ರವಿ–ದೇವೇಗೌಡ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಸೋಮವಾರ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರನ್ನು ಭೇಟಿ ಮಾಡಿ 'ಭಾರತದ ರಾಜಕೀಯದಲ್ಲಿ ಸಮ್ಮಿಶ್ರ ಸರ್ಕಾರಗಳು' ಎಂಬ ವಿಷಯದ ಕುರಿತು ಚರ್ಚೆ ನಡೆಸಿದರು.

ಈ ವಿಷಯದ ಕುರಿತು ರವಿ ಅವರು ಪಿಎಚ್.ಡಿ ಮಾಡುತ್ತಿದ್ದು, ಮಾಹಿತಿ ಸಂಗ್ರಹಕ್ಕಾಗಿ ದೇವೇಗೌಡರನ್ನು ಭೇಟಿ ಮಾಡಿದ್ದರು. ಈ ಭೇಟಿ ಕಳೆದ ವರ್ಷ ಕೋವಿಡ್‌ಗೆ ಮೊದಲೇ ಆಗಬೇಕಿತ್ತು. ಸೋಮವಾರ ಬಹಳ ಹೊತ್ತು ಈ ವಿಷಯವಾಗಿ ಚರ್ಚೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

2ಎ ಮೀಸಲಾತಿ ಕಲ್ಪಿಸದಿದ್ದರೆ ಅ.1ರಿಂದ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಯಡಿಯೂರಪ್ಪ ಅವರು ಮೀಸಲಾತಿ ಕಲ್ಪಿಸಲಿಲ್ಲ. ಪಂಚಮಸಾಲಿ ಸಮಾಜದವರಿಗೆ ಸಿಗಬೇಕಾಗಿದ್ದ ಮುಖ್ಯಮಂತ್ರಿ ಸ್ಥಾನವನ್ನೂ ತಪ್ಪಿಸಿದರು ಎಂಬ ಭಾವನೆ ಸಮುದಾಯದಲ್ಲಿ ಮೂಡಿದೆ

ಬಸವಜಯ ಮೃತ್ಯುಂಜಯ ಸ್ವಾಮೀಜಿ

ದಾವಣಗೆರೆ: 'ಇತರೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರವನ್ನು ಕೇಂದ್ರ ಸರ್ಕಾರವು ಮತ್ತೆ ರಾಜ್ಯ ಸರ್ಕಾರಗಳಿಗೇ ನೀಡುತ್ತಿರುವುದರಿಂದ ರಾಜ್ಯ ಸರ್ಕಾರ ಮಾತು ನೀಡಿದಂತೆ ಸೆಪ್ಟೆಂಬರ್ ಒಳಗೆ ಪಂಚಮಸಾಲಿ ಸಮಾಜಕ್ಕೆ '2 ಎ' ಮೀಸಲಾತಿಯನ್ನು ಕೊಡಬೇಕು. ಇಲ್ಲದಿದ್ದರೆ ಅಕ್ಟೋಬರ್ 1ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮತ್ತೆ ಸತ್ಯಾಗ್ರಹ ಆರಂಭಿಸಲಾಗುವುದು' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ರಾಜ್ಯ ಸರ್ಕಾರಗಳಿಗೆ ಈ ಹಿಂದೆ ಇದ್ದ ಅಧಿಕಾರವನ್ನು ಮರುಸ್ಥಾಪಿಸುವ ಸಂವಿಧಾನದ 127ನೇ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿರುವುದನ್ನು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಸ್ವಾಗತಿಸಿದ ಸ್ವಾಮೀಜಿ, 'ಕೇಂದ್ರ ಸರ್ಕಾರದ ಈ ಕ್ರಮದಿಂದ ಮೀಸಲಾತಿ ನೀಡಲು ಯೋಗಾಯೋಗ ಕೂಡಿಬಂದಿದೆ. ಕೂಡಲೇ ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ತರಿಸಿಕೊಂಡು ಮೀಸಲಾತಿ ನೀಡಬೇಕು' ಎಂದು ಒತ್ತಾಯಿಸಿದರು.

'ಮೀಸಲಾತಿಗಾಗಿ ಪಾದಯಾತ್ರೆ ನಡೆಸಿದಾಗ ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಆರು ತಿಂಗಳ ಒಳಗೆ ಮೀಸಲಾತಿ ನೀಡುವುದಾಗಿ ಅಧಿವೇಶನದಲ್ಲೇ ಮಾತು ನೀಡಿದ್ದರು. ಅಂದು ಯಡಿಯೂರಪ್ಪ ಅವರ ಮನವೊಲಿಸಿದ್ದ ಬಸವರಾಜ ಬೊಮ್ಮಾಯಿ ಅವರೇ ಈಗ ಮುಖ್ಯಮಂತ್ರಿಯಾಗಿದ್ದಾರೆ. ಮೂರು ಬಾರಿ ಶಾಸಕರಾಗಿರುವ ಬಸವರಾಜ ಬೊಮ್ಮಾಯಿ ಅವರ ಮೇಲೆ ಪಂಚಮಸಾಲಿ ಸಮಾಜದ ಋಣಭಾರ ಇದೆ. ಹೀಗಾಗಿ ಮುಂದಿನ ತಿಂಗಳ ಒಳಗೆ '2 ಎ' ಮೀಸಲಾತಿಯನ್ನು ಕಲ್ಪಿಸುವ ಮೂಲಕ ಸಮಾಜದ ಋಣವನ್ನು ತೀರಿಸಬೇಕು' ಎಂದು ಸ್ವಾಮೀಜಿ ಮನವಿ ಮಾಡಿದರು.

'ಹುಬ್ಬಳ್ಳಿಯಲ್ಲಿ ಆಗಸ್ಟ್ 12ರಂದು ಪಂಚಮಸಾಲಿ ಹೋರಾಟಗಾರರ ದುಂಡುಮೇಜಿನ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಮುಂದಿನ ಹೋರಾಟದ ರೂಪುರೇಷೆಯ ಬಗ್ಗೆ ಅಲ್ಲಿ ನಿರ್ಧಾರ ಕೈಗೊಳ್ಳಲಾಗುವುದು. ಆಗಸ್ಟ್ 26ರಿಂದ ಸೆಪ್ಟೆಂಬರ್ 30ರವರೆಗೆ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ಅಭಿಯಾನವನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಆ.26ರಂದು ಚಾಮರಾಜನಗರದ ಮಲೆಮಾದೇಶ್ವರಬೆಟ್ಟದಿಂದ ಈ ಅಭಿಯಾನ ಆರಂಭಿಸಲಾಗುವುದು' ಎಂದು ಸ್ವಾಮೀಜಿ ಮಾಹಿತಿ ನೀಡಿದರು.

'ಲವ್ ಯೂ ರಚ್ಚು' ಚಿತ್ರೀಕರಣದ ವೇಳೆ ಅವಘಡ

ಸಾಹಸ ಕಲಾವಿದ ಸಾವು: ಮೂವರಿಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಘಟನೆಯಲ್ಲಿ ಸಾವನ್ನಪ್ಪಿದ ವಿವೇಕ್

ಬಿಡದಿ (ರಾಮನಗರ): 'ಲವ್ ಯೂ ರಚ್ಚು' ಸಿನಿಮಾ ಚಿತ್ರೀಕರಣದ ವೇಳೆ ಸಾಹಸ ಕಲಾವಿದ ವಿವೇಕ್ ಅವರ ಸಾವು ಪ್ರಕರಣಕ್ಕೆ ಸಂಬಂಧಿಸಿ ಮೂವರನ್ನು ಪೊಲೀಸರು ಬಂಧಿಸಿದ್ದು, ಉಳಿದ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಚಿತ್ರದ ನಿರ್ದೇಶಕ ಶಂಕರ್ ರಾಜು, ಸಾಹಸ ನಿರ್ದೇಶಕ ವಿನೋದ್‌ಕುಮಾರ್ ಹಾಗೂ ಕ್ರೇನ್ ಚಾಲಕ ಮಹದೇವ್ ಎಂಬುವರನ್ನು ಮಂಗಳವಾರ ಪೊಲೀಸರು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ಆರೋಪಿಗಳನ್ನು ಆ. 24ರವರೆಗೆ ನ್ಯಾಯಾಂಗದ ವಶಕ್ಕೆ ಕೋರ್ಟ್ ನೀಡಿದೆ ಎಂದು ರಾಮನಗರ ಎಸ್ಪಿ ಗಿರೀಶ್ ತಿಳಿಸಿದರು. ಚಿತ್ರದ ನಿರ್ಮಾಪಕ ಗುರು ದೇಶಪಾಂಡೆ ಹಾಗೂ ಪ್ರೊಡಕ್ಷನ್ ಮ್ಯಾನೇಜರ್ ಫರ್ನಾಂಡಿಸ್ ಅವರಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಪ್ರಕರಣದಲ್ಲಿ ಬಂಧಿತರಾದ ಆರೋಪಿಗಳನ್ನು ಮಂಗಳವಾರ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದರು

ಜಮೀನಿನ ಮಾಲೀಕ ಪುಟ್ಟರಾಜು ಎಂಬುವರು ಚಿತ್ರತಂಡಕ್ಕೆ ಜಮೀನು ಬಿಟ್ಟುಕೊಟ್ಟಿದ್ದರು. ಆದರೆ ಅನುಮತಿ ಪಡೆಯಬೇಕಾದದ್ದು ಚಿತ್ರತಂಡದ ಜವಾಬ್ದಾರಿ. ಹೀಗಾಗಿ ರೈತನ ವಿರುದ್ಧ ದೂರು ದಾಖಲಿಸಿಲ್ಲ. ಘಟನೆ ಸಂದರ್ಭ ಮ್ಯಾನೇಜರ್ ಸ್ಥಳದಲ್ಲೇ ಇದ್ದರು. ನಿರ್ಮಾಪಕರು ಅಲ್ಲಿರಲಿಲ್ಲ ಎಂದು ಎಸ್ಪಿ ಮಾಹಿತಿ ನೀಡಿದರು.ಅವಘಡ ನಡೆದ ಸ್ಥಳವನ್ನು ಬೆಸ್ಕಾಂ ಅಧಿಕಾರಿಗಳು ಮಂಗಳವಾರ ಪರಿಶೀಲಿಸಿದರು.

ಗೃಹ ಸಚಿವರಿಂದ ಕ್ರಮದ ಭರವಸೆ: ಗೃಹ ಸಚಿವ ಆರಗ ಜ್ಞಾನೇಂದ್ರ ಘಟನೆ ಕುರಿತು ಪ್ರತಿಕ್ರಿಯಿಸಿ 'ಇಂತಹ ಘಟನೆ ನಡೆದಿರುವುದು ದುರದೃಷ್ಟಕರ. ಚಿತ್ರ ತಂಡ ಮುನ್ನೆಚ್ಚರಿಕೆ ಕೈಗೊಳ್ಳದ ಕಾರಣ ದುರಂತ ಸಂಭವಿಸಿದೆ. ಚಿತ್ರೀಕರಣಕ್ಕೆ ಅನುಮತಿ ಕಡ್ಡಾಯಗೊಳಿಸಿ, ಇಂತಹ ಘಟನೆ ಮರುಕಳಿಸದಂತೆ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ತದ್ವಿರುದ್ಧ ಹೇಳಿಕೆ?: ಘಟನೆಯಲ್ಲಿ ಗಾಯಗೊಂಡಿರುವ ಸಾಹಸ ಕಲಾವಿದ ರಂಜಿತ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಘಟನೆ ಕುರಿತು ಅವರ ಹಾಗೂ ಚಿತ್ರದ ನಾಯಕ ಅಜಯ್ ರಾವ್ ಹೇಳಿಕೆಗಳು ತದ್ವಿರುದ್ಧವಾಗಿವೆ.

ಘಟನೆ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ್ದ ಅಜಯ್ 'ಅವಘಡ ನಡೆದಾಗ ನಾನು ಅಲ್ಲಿಂದ ಸುಮಾರು 200 ಮೀಟರ್ ದೂರದಲ್ಲಿದ್ದೆ. ಸದ್ದು ಕೇಳಿ ಸ್ಥಳಕ್ಕೆ ಓಡಿ ಬಂದೆ. ಗಾಯಾಳುವನ್ನು ಸಾಗಿಸಲು ನೆರವಾದೆ' ಎಂದು ಹೇಳಿದ್ದರು.

ಈ ಬಗ್ಗೆ ರಂಜಿತ್ ಪ್ರತಿಕ್ರಿಯಿಸಿ 'ಚಿತ್ರೀಕರಣದಲ್ಲಿ ಅಜಯ್ ಅವರೂ ಸ್ಥಳದಲ್ಲೇ ಇದ್ದರು. ವಿವೇಕ್ ವಿದ್ಯುತ್ ಶಾಕ್‌ನಿಂದ ಕೆಳಗೆ ಬಿದ್ದಾಗ ಕೇವಲ 15 ಮೀಟರ್ ದೂರದಲ್ಲೇ ನಿಂತಿದ್ದರು. ಆದರೆ ನೆರವಿಗೆ ಧಾವಿಸಲಿಲ್ಲ' ಎಂದು ಹೇಳಿದ್ದಾರೆ.

ಕಠಿಣ ನಿಯಮ ಜಾರಿ: ಸಿಎಂ

'ಚಿತ್ರೀಕರಣದ ವೇಳೆ ಅನುಸರಿಸಬೇಕಾದ ಮುಂಜಾಗ್ರತಾ ಕ್ರಮ ಸಂಬಂಧಿಸಿ ಕಠಿಣ ನಿಯಮ ರೂಪಿಸಿ ಒಂದೆರಡು ದಿನಗಳಲ್ಲಿ ಆದೇಶ ಹೊರಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುರಕ್ಷತೆಗೆ ಆದ್ಯತೆ ನೀಡುವುದು, ಪೊಲೀಸರಿಂದ ಸ್ಥಳ ಪರಿಶೀಲನೆ ಮತ್ತು ಅನುಮತಿ, ತುರ್ತು ಸಂದರ್ಭ ನಿರ್ವಹಿಸಲು ವ್ಯವಸ್ಥೆ ಮಾಡಿಕೊಳ್ಳುವುದೂ ಸೇರಿದಂತೆ ಹಲವಾರು ನಿರ್ಬಂಧಗಳನ್ನು ಹೇರುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್ ಪ್ರತಿಕ್ರಿಯಿಸಿ, 'ಜೀವ ಪಣಕ್ಕಿಟ್ಟು ಸಾಹಸ ಪ್ರದರ್ಶಿಸುವುದನ್ನು ನಿವಾರಿಸಬೇಕು. ಇದುವರೆಗೆ ಚಿತ್ರೀಕರಣಕ್ಕೆ ಮುಕ್ತ ಅವಕಾಶ ಇತ್ತು. ಇಂಥ ಅವಘಡಗಳು ಸಹಜವಾಗಿ ಕಠಿಣ ನಿರ್ಬಂಧಗಳನ್ನು ಹೇರಿಕೊಳ್ಳಲು ದಾರಿ ಮಾಡಿಕೊಡುತ್ತವೆ. ನಿರ್ಮಾಪಕರು, ಚಿತ್ರ ತಂಡದವರ ಮೇಲೆ ಮಾನಸಿಕ ಮತ್ತು ಆರ್ಥಿಕ ಒತ್ತಡ ಹೆಚ್ಚುತ್ತದೆ' ಎಂದು ಅವರು ಘಟನೆಯ ಬಗ್ಗೆ ಬೇಸರ ವ್ಯಕ್ತಪಡಿಸಿದರು.

₹ 10 ಲಕ್ಷ ಪರಿಹಾರದ ಭರವಸೆ?

ಲವ್ ಯೂ ರಚ್ಚೂ ಸಿನಿಮಾ ಚಿತ್ರೀಕರಣದ ವೇಳೆ ಮೃತಪಟ್ಟ ಫೈಟರ್ ವಿವೇಕ್ ಅವರ ಕುಟುಂಬಕ್ಕೆ ನಿರ್ಮಾಪಕ ಗುರು ದೇಶಪಾಂಡೆ ₹ 10 ಲಕ್ಷ ಪರಿಹಾರದ ಭರವಸೆ ನೀಡಿದ್ದಾರೆ.
ಅಜ್ಞಾತ ಸ್ಥಳದಿಂದ ತಮ್ಮ ಆಪ್ತರ ಮೊಬೈಲ್ ಮೂಲಕ ಕಾನ್ಫರೆನ್ಸ್ ಕಾಲ್ ನಲ್ಲಿ ಮಾತನಾಡಿದ ಅವರು ಈ ಭರವಸೆ ನೀಡಿದ್ದಾರೆ ಎಂದು ಚಿತ್ರತಂಡದ ಮೂಲಗಳು ಹೇಳಿವೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಾರ್ಯಾಲಯ
ಜಲಮಂಡಳಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ
ಧಾರವಾಡ–580 001. E-mail : kwbcen@gmail.com
Phone No: 0836-2447090 Fax: 0836-2446890

ಸಂ.ಕೆ.ಡಬ್ಲ್ಯೂ.ಬಿ/ಸಿಇ(ಡಿ)/ಎಸ್‌ಜಿಇಇ(ಬಿಜಿಎಂ)/ಡಿಸಿಇ–1/ಟಿಎ–1/ಸ.ಅ(ಎಲೆಕ್ಟ್ರಿಕಲ್)/ ಟೆಂಡರ್/2021–22/705 ದಿನಾಂಕ: 09–08–2021.

ಟೆಂಡರ್ ಪ್ರಕಟಣೆ
(ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮುಖಾಂತರ ಮಾತ್ರ)

ಈ ಕೆಳಕಂಡ ಕಾಮಗಾರಿಗಳಿಗಾಗಿ ಕೆಳಗೆ ವಿವರಿಸಿರುವ ತಾಂತ್ರಿಕ ಮತ್ತು ಆರ್ಥಿಕ ಅರ್ಹತೆ ಅಗತ್ಯತೆಗಳನ್ನು ತೃಪ್ತಿಕರವಾಗಿ ಈಡೇರಿಸುವ ಸಂಸ್ಥೆ / ಗುತ್ತಿಗೆದಾರರುಗಳಿಂದ ಐಟಂ ದರ ಟೆಂಡರ್‌ಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.Karnataka. gov.in) ಮುಖಾಂತರ ಆಹ್ವಾನಿಸಲಾಗಿದೆ. ನೋಟಿಫಿಕೇಷನ್ ಸಂ.ಕೆ.ಡಬ್ಲ್ಯೂ.ಬಿ/ಸಿಇ(ಡಿ)/ಎಸ್‌ಜಿಇಇ(ಬಿಜಿಎಂ)/ಡಿಸಿಇ–1/ಟಿಎ–1/ಸ.ಅ(ಎಲೆಕ್ಟ್ರಿಕಲ್)/ ಟೆಂಡರ್/2021–22/705 ದಿನಾಂಕ: 09–08–2021.

ಕಾಮಗಾರಿಯ ಹೆಸರು: ಆಲಮಟ್ಟಿ ಜಲಾಶಯ ಮೂಲದಿಂದ ಬಾದಾಮಿ ಪಟ್ಟಣ ಮತ್ತು ಕೆರೂರು ಪಟ್ಟಣ ಹಾಗೂ ಮಾರ್ಗ ಮಧ್ಯದ 18 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಯೋಜನೆಯಡಿ, 1. ಮೂಲಸ್ಥಾವರ ಆಲಮಟ್ಟಿ ಜಲಾಶಯ ಜಾಕ್‌ವೆಲ್‌ನಲ್ಲಿ 700 ಅಶ್ವಶಕ್ತಿ / ಸೂಕ್ತ ಅಶ್ವಶಕ್ತಿ ಸಬ್‌ಮರ್ಜ್ಡ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು 2. ಕಮತಗಿ ಹತ್ತಿರ ಮಧ್ಯಂತರ ಪಂಪ್‌ಹೌಸ್–1 ನಲ್ಲಿ 400 ಅಶ್ವಶಕ್ತಿ / ಸೂಕ್ತ ಅಶ್ವಶಕ್ತಿ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು 3. ತುಗನಶಿ ಕ್ರಾಸ್ ಹತ್ತಿರ ಮಧ್ಯಂತರ ಪಂಪ್‌ಹೌಸ್–2 ನಲ್ಲಿ 180 ಅಶ್ವಶಕ್ತಿ / ಸೂಕ್ತ ಅಶ್ವಶಕ್ತಿ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು (ಕೆರೂರು ಪಟ್ಟಣಕ್ಕೆ ಕಚ್ಚಾ ನೀರನ್ನು ಪೂರೈಸಲು) 4. ತುಗನಶಿ ಕ್ರಾಸ್ ಹತ್ತಿರ ಜಲಶುದ್ಧೀಕರಣ ಘಟಕದಲ್ಲಿ 215 ಅಶ್ವಶಕ್ತಿ / ಸೂಕ್ತ ಅಶ್ವಶಕ್ತಿ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು (ಬಾದಾಮಿ ಪಟ್ಟಣಕ್ಕೆ ಶುದ್ಧ ನೀರನ್ನು ಪೂರೈಸಲು) 5. ಕೆರೂರು ಪಟ್ಟಣದಲ್ಲಿರುವ 7 ಎಂ.ಎಲ್.ಡಿ. ಸಾಮರ್ಥ್ಯದ ಜಲಶುದ್ಧೀಕರಣ ಘಟಕದಲ್ಲಿ 120 ಅಶ್ವಶಕ್ತಿ / ಸೂಕ್ತ ಅಶ್ವಶಕ್ತಿ ಸಬ್‌ಮರ್ಜ್ಡ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು ಹಾಗೂ ಇನ್ನಿತರ ಉಪಕರಣಗಳನ್ನು ಸರಬರಾಜು, ಅಳವಡಿಸಿ, ವಿದ್ಯುದ್ದೀಕರಣ, ಪರೀಕ್ಷಿಸಿ ಮತ್ತು ಚಾಲನೆಗೊಳಿಸುವ ಕಾಮಗಾರಿಯ ಟೆಂಡರ್ 1) ಟೆಂಡರಿಗಿಟ್ಟ ಅಂದಾಜು ಮೊತ್ತ 6,47,77,053/– 2) ಇಎಮ್‌ಡಿ ರೂಪಾಯಿ: ಸರಕಾರದ ಆದೇಶದ ಸಂಖ್ಯೆ ಆ.ಇ.675 ವೆಚ್ಚ–12/2020 ಬೆಂಗಳೂರು ದಿನಾಂಕ:22/12/2020 ಅನ್ವಯ ಇಎಮ್‌ಡಿ ಡಿಕ್ಲೇರೆಷನ್ ಫಾರ್ಮನ್ನು ಅಪ್ಲೋಡ್‌ಮಾಡುವುದು 3) ದಸ್ತಾವೇಜುಗಳ ಬೆಲೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ವಯ ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ : 9 ತಿಂಗಳು ಮಳೆಗಾಲ ಸೇರಿದಂತೆ, ತಾಂತ್ರಿಕ & ಆರ್ಥಿಕ ಅರ್ಹತಾ ಅಗತ್ಯಗಳು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ತಿಳಿಸಿರುವಂತೆ.

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಭಾಗವಹಿಸುವಿಕೆ ಕುರಿತಾದ ವಿವರಗಳನ್ನು ಇ–ಆಡಳಿತ ಇಲಾಖೆ ಕೊಠಡಿ ಸಂಖ್ಯೆ 141, ಗೇಟ್ ನಂ. 2, ಎಂ.ಎಸ್.ಬಿಲ್ಡಿಂಗ್, ಬೆಂಗಳೂರು – 560 001 ಇಲ್ಲಿರುವ ಇ–ಪ್ರೊಕ್ಯೂರ್‌ಮೆಂಟ್ ಸಲಹಾ ಕೇಂದ್ರದಿಂದ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: **080–25501216 / 25501227 080–460100 / 68948777,** ಇ–ಮೇಲ್ ಸಪೋರ್ಟ hphelpdesk.blr@intrvo.com, support@eprohelpdesk.com (1) ಮೇಲೆ ತಿಳಿಸಿರುವ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಮಂಡಳಿಯಲ್ಲಿ ನೋಂದಣಿ ಕಡ್ಡಾಯವಾಗಿರವುದಿಲ್ಲ. (2)ಬಿಡ್ ದಾಖಲೆಯಲ್ಲಿ ತಿಳಿಸಿರುವ ನಿರ್ದಿಷ್ಟ ನಮೂನೆಯಲ್ಲಿ ಬಿಡ್ ಭದ್ರತೆ / ಭದ್ರತಾ ಠೇವಣಿ ಡಿಕ್ಲರೇಷನ್ ಫಾರ್ಮನ್ನು ಅಪ್‌ಲೋಡ್ ಮಾಡುವುದು. (3) ಯಾವುದೇ ಟೆಂಡರ್ ಅನ್ನು ಸ್ವೀಕರಿಸುವ ಮತ್ತು ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಮುಖ್ಯ ಅಭಿಯಂತರರು ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಧಾರವಾಡ ಇವರು ಹೊಂದಿರುತ್ತಾರೆ. (4) 2021–22 ನೇ ಸಾಲಿನ ಆರ್ಥಿಕ ವರ್ಷಕ್ಕೆ ಸರಿದೂಗಿಸಲು ಶೇ. 10% ವೇಟೇಜನ್ನು ಹಿಂದಿನ ವರ್ಷಗಳ ವಾರ್ಷಿಕ ವಹಿವಾಟು ಮತ್ತು ಪೂರ್ಣಗೊಂಡ ಕಾಮಗಾರಿಯ ಮೊತ್ತಕ್ಕೆ ಸೇರಿಸಲಾಗುವುದು. (5) ವಿವಿಧ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳಿಗಾಗಿ ಹಾಗೂ ಬಿಡ್ ದಾಖಲೆಯ ನಮೂನೆಗಳನ್ನು ಭರ್ತಿ ಮಾಡಿ ಬಿಡ್‌ನೊಂದಿಗೆ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಅಪೂರ್ಣ ಬಿಡ್‌ಗಳನ್ನು ಅಯಶಸ್ವಿ ಬಿಡ್‌ಗಳೆಂದು ಪರಿಗಣಿಸಲಾಗುವುದು. (6) ಟೆಂಡರ್‌ನ ಮೊತ್ತಕ್ಕೆ ಜಿ.ಎಸ್.ಟಿ. ಅನ್ನು ಅನ್ವಯಿಸುವಂತೆ ಪ್ರತ್ಯೇಕವಾಗಿ ಪಾವತಿಸಲಾಗುವುದು.

ಟೆಂಡರ್ ದಿನಾಂಕಗಳು : (1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ 11–08–2021 11:00 ಗಂಟೆಯ ನಂತರ (2) ಬಿಡ್ ಪೂರ್ವ ಸಭೆ : 25–08–2021 11:00 ಗಂಟೆಯ ನಂತರ (3) ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 13–09–2021 ಸಂಜೆ 17:30 ಗಂಟೆಯವರೆಗೆ (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ 15–09–2021 11:00 ಗಂಟೆಯ ನಂತರ ಹೆಚ್ಚಿನ ಮಾಹಿತಿಗಳಿಗಾಗಿ ಮುಖ್ಯ ಅಭಿಯಂತರು ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಧಾರವಾಡ ಇವರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– (ಕೆ. ವಿ. ಶ್ರೀಕೇಶವ)
ಮುಖ್ಯ ಅಭಿಯಂತರು, ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ಧಾರವಾಡ.

ವಾ.ಸಾ.ಇ/ಧಾ/387/2021–22/ದೇಶಪಾಂಡೆಪಬ್ಲಿಸಿಟಿ

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪೆಗಾಸಸ್ ಕುತಂತ್ರಾಂಶ ಗೂಢಚರ್ಯೆ ಪ್ರಕರಣ: ಶಿಸ್ತು ಪಾಲಿಸುವಂತೆ ಅರ್ಜಿದಾರರಿಗೆ ಸೂಚನೆ

ಸಾಮಾಜಿಕ ಮಾಧ್ಯಮಗಳಲ್ಲಿನ ಚರ್ಚೆಗೆ 'ಸುಪ್ರೀಂ' ಕಿಡಿ

ನವದೆಹಲಿ (ಪಿಟಿಐ): ಪೆಗಾಸಸ್ ಪ್ರಕರಣವು ನ್ಯಾಯಾಲಯದಲ್ಲಿದ್ದಾಗಲೂ, ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತ್ಯೇಕ ಚರ್ಚೆ ನಡೆಯುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಮಂಗಳವಾರ ಕಿಡಿಕಾರಿದೆ.

'ಪೆಗಾಸಸ್ ಕುತಂತ್ರಾಂಶ ಬಳಸಿ ಬೇಹುಗಾರಿಕೆ ನಡೆದಿದೆ ಎನ್ನಲಾದ ಪ್ರಕರಣದ ಬಗ್ಗೆ ಸ್ವತಂತ್ರ ತನಿಖೆಗೆ ಆಗ್ರಹಿಸಿರುವ ಕೆಲವು ಅರ್ಜಿದಾರರು, ಇದೇ ವೇಳೆಗೆ ಸಾಮಾಜಿಕ ಮಾಧ್ಯಮಗಳಲ್ಲಿ, ವೆಬ್‌ಸೈಟ್‌ಗಳಲ್ಲಿಯೂ ಚರ್ಚೆ ಮಾಡುತ್ತಿರುವುದು ಸರಿಯಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಾಲಯ, ಈ ಸಂಬಂಧ ಶಿಸ್ತು ಪಾಲನೆ ಮಾಡುವಂತೆ ಹೇಳಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ್ ನೇತೃತ್ವದ ತ್ರಿಸದಸ್ಯ ಪೀಠವು, ಪೆಗಾಸಸ್ ಬಗ್ಗೆ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿತು.

'ನ್ಯಾಯಾಲಯವು ಚರ್ಚೆಯನ್ನು ವಿರೋಧಿಸುತ್ತಿಲ್ಲ. ಆದರೆ, ನ್ಯಾಯಾಲಯದಲ್ಲಿರುವ ಪ್ರಕರಣದ ಬಗ್ಗೆ ಮಾತನಾಡಬೇಕಾದಾಗ ವಿಚಾರ ಮಾಡಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ವಿನೀತ್ ಸರಣ್ ಹಾಗೂ

ಸೂರ್ಯಕಾಂತ್ ಅವರನ್ನು ಒಳಗೊಂಡ ನ್ಯಾಯಪೀಠ ಎಚ್ಚರಿಸಿತು.

ಈ ವಿಷಯವಾಗಿ ಅರ್ಜಿ ಸಲ್ಲಿಸಿರುವ ಹಿರಿಯ ಪತ್ರಕರ್ತರಾದ ಎನ್.ರಾಮ್ ಮತ್ತು ಶಶಿಕುಮಾರ್ ಅವರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, 'ಪ್ರಕರಣದ ಬಗ್ಗೆ ಕಳೆದ ಸಲ ನ್ಯಾಯಾಲಯದಲ್ಲಿ ವಿಚಾರಣೆ ನಡೆದ ಬಳಿಕ, ಅರ್ಜಿದಾರ ರಾಮ್ ಅವರನ್ನು ಟ್ರೋಲ್ ಮಾಡಲಾಗಿದೆ' ಎಂದು ನ್ಯಾಯಾಲಯಕ್ಕೆ ತಿಳಿಸಿದರು.

'ನಾವೂ ಅದನ್ನೇ ಹೇಳುತ್ತಿರುವುದು. ಅರ್ಜಿದಾರರು ವ್ಯವಸ್ಥೆಯ ಮೇಲೆ ವಿಶ್ವಾಸವಿಡಬೇಕು. ಈ ವಿಷಯದ ಆಗುಹೋಗುಗಳ ಚರ್ಚೆ ಇಲ್ಲಿಯೇ ಆಗಬೇಕು. ಸಾಮಾಜಿಕ ಮಾಧ್ಯಮ ಮತ್ತು ಜಾಲತಾಣಗಳಲ್ಲಿ ಅಲ್ಲ' ಎಂದು ನ್ಯಾಯಾಲಯ ಸೂಚನೆ ನೀಡಿತು.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಅರ್ಜಿಗಳಲ್ಲಿ ಎತ್ತಿದ ಕೆಲವು ವಿಷಯಗಳ ಬಗ್ಗೆ ಸರ್ಕಾರದಿಂದ ಸೂಚನೆ ಪಡೆಯುವುದಕ್ಕೆ ತಮಗೆ ಇನ್ನಷ್ಟು ಕಾಲಾವಕಾಶ ನೀಡುವಂತೆ ಕೋರಿದರು. ಮುಂದಿನ ವಿಚಾ ರಣೆಯನ್ನು ಆಗಸ್ಟ್ 16ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿತು.

ಗೂಢಚಾರಿಕೆಗೆ ಪೆಗಾಸಸ್ ಬಳಕೆಯಾಗಿದೆ ಎಂಬ ಬಗ್ಗೆ ಸ್ವತಂತ್ರ ತನಿಖೆಗೆ ಆಗ್ರಹಿಸಿ, ಭಾರತೀಯ ಎಡಿಟರ್ಸ್ ಗಿಲ್ಡ್ ಸಲ್ಲಿಸಿದ ಅರ್ಜಿ ಹಾಗೂ ಇದೇ ವಿಚಾರವಾಗಿ ಸಲ್ಲಿಕೆಯಾದ ಹಲವು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಮೋದಿ ಮೌನ ಏಕೆ: ಚಿದಂಬರಂ ಪ್ರಶ್ನೆ

ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ಸರ್ಕಾರದ ಎಲ್ಲ ಸಚಿವರು ಮತ್ತು ಇಲಾಖೆಗಳ ಪರವಾಗಿ ಪ್ರಧಾನಿ ನರೇಂದ್ರ ಮೋದಿಯವರೇ ಉತ್ತರಿಸಬಹುದಿತ್ತು, ಯಾಕೆ ಅವರು ಈ ವಿಷಯದಲ್ಲಿ ಮೌನವಹಿಸಿದ್ದಾರೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಪಿ. ಚಿದಂಬರಂ ಪ್ರಶ್ನಿಸಿದ್ದಾರೆ.

ಕೇಂದ್ರ ರಕ್ಷಣಾ ಖಾತೆ ರಾಜ್ಯ ಸಚಿವ ಅಜಯ್ ಭಟ್ ಅವರು ಸೋಮವಾರ ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, 'ರಕ್ಷಣಾ ಸಚಿವಾಲಯ ಎನ್‌ಎಸ್‌ಒ ತಂತ್ರಜ್ಞಾನಗಳ ಸಮೂಹದೊಂದಿಗೆ ಯಾವುದೇ ವ್ಯವಹಾರ ನಡೆಸಿಲ್ಲ' ಎಂದು ಮಾಹಿತಿ ನೀಡಿದ್ದರು.

ಈ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಮಂಗಳವಾರ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಚಿದಂಬರಂ,

ಪಿ.ಚಿದಂಬರಂ

'ಎನ್‌ಎಸ್‌ಒ ಸಮೂಹದೊಂದಿಗೆ ಯಾವುದೇ ವ್ಯವಹಾರ ನಡೆಸಿಲ್ಲ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಆ ಸಚಿವಾಲಯಕ್ಕೆ ಸಂಬಂಧಿಸಿ ಅವರ ಹೇಳಿಕೆ ಸರಿ ಇರಬಹುದು. ಆದರೆ, ಈ ವಿಚಾರದಲ್ಲಿ ಸರ್ಕಾರದಲ್ಲಿರುವ ಹಲವು ಸಚಿವಾಲಯಗಳ ಮೇಲೆ ಶಂಕೆ ಇದೆ. ಅವುಗಳ ಬಗ್ಗೆ ಯಾರು ಪ್ರತಿಕ್ರಿಯೆ ನೀಡುತ್ತಾರೆ? ಆ ಸಚಿವಾಲಯಗಳ ಪರವಾಗಿ ಪ್ರಧಾನಿ ಮಾತ್ರ ಉತ್ತರಿಸಬಹುದು. ಅವರು ಏಕೆ ಮೌನವಾಗಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

'ವಿದೇಶಿಯರ ಕೈವಾಡದ ಕುರಿತು ತನಿಖೆ ನಡೆಸಿ'

ಮುಂಬೈ (ಪಿಟಿಐ): ಪೆಗಾಸಸ್ ಗೂಢಚರ್ಯೆ ಕುತಂತ್ರಾಂಶವನ್ನು ಕೇಂದ್ರ ಸರ್ಕಾರ ಬಳಸಿಲ್ಲ ಎನ್ನುವುದಾರೆ, ಯಾವ ವಿದೇಶಿ ಸರ್ಕಾರಗಳು ನಮ್ಮ ದೇಶದ ರಾಜಕಾರಣಿಗಳು, ನ್ಯಾಯಾಧೀಶರು, ಅಧಿಕಾರಿಗಳು ಮತ್ತು ಪತ್ರಕರ್ತರ ಮೇಲೆ ಗೂಢಚರ್ಯೆ ನಡೆಸಿವೆ ಎಂಬುದರ ಬಗ್ಗೆ ತನಿಖೆ ನಡೆಸಬೇಕು ಎಂದು ಎನ್‌ಸಿಪಿ ವಕ್ತಾರ ಮತ್ತು ಸಚಿವ ನವಾಬ್ ಮಲಿಕ್ ಮಂಗಳವಾರ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಮಲಿಕ್, ಪೆಗಾಸಸ್ ಗೂಢಚರ್ಯೆ ಕುತಂತ್ರಾಂಶಕ್ಕೆ ಸಂಬಂಧಿಸಿದಂತೆ ಇಸ್ರೇಲ್ ಕಂಪನಿ ಎನ್‌ಎಸ್‌ಒ ಸಮೂಹದ ಜತೆ ಯಾವುದೇ ವ್ಯವಹಾರ ನಡೆದಿಲ್ಲ ಎಂದು ಕೇಂದ್ರ ರಕ್ಷಣಾ ಸಚಿವಾಲಯ ಸ್ಪಷ್ಟನೆ ನೀಡಿದೆ. ಹಾಗಾದರೆ, ಕೇಂದ್ರ ಸರ್ಕಾರ ತಕ್ಷಣ ತನಿಖೆಗೆ ಆದೇಶಿಸಿ, ಯಾವ ವಿದೇಶಿ ಸರ್ಕಾರ ಈ ಕೆಲಸ ಮಾಡಿದೆ ಎಂದು ಪತ್ತೆ ಮಾಡಬೇಕು' ಎಂದು ಒತ್ತಾಯಿಸಿದರು.

ಈ ಕೆಲಸ ಸರ್ಕಾರದಲ್ಲ ಎಂದಾದ ಮೇಲೆ, ಇದೊಂದು ಗಂಭೀರ ಪ್ರಕರಣವಾಗುತ್ತದೆ. ತ್ವರಿತಗತಿಯಲ್ಲಿ ತನಿಖೆ ನಡೆಸಿ, ಪ್ರಕರಣಕ್ಕೆ ಕಾರಣರಾದವರನ್ನು ಪತ್ತೆ ಮಾಡಬೇಕು ಎಂದು ಆಗ್ರಹಿಸಿದರು.

'ಯಾವುದೇ ಸರ್ಕಾರಿ ಇಲಾಖೆಯು ಎನ್‌ಎಸ್‌ಒ ಸಮೂಹ ಅಭಿವೃದ್ಧಿಪಡಿಸಿದ ಪೆಗಾಸಸ್ ಗೂಢಚರ್ಯೆ ಕುತಂತ್ರಾಂಶವನ್ನು ಬಳಸಿಲ್ಲ ಎಂದು ಕೇಂದ್ರ ಸರ್ಕಾರ ಬಹಿರಂಗವಾಗಿ ಹೇಳಬೇಕು. ಕೇವಲ ಒಂದು ಇಲಾಖೆ ಮಾತ್ರ ಈ ಸೇವೆಯ ಬಳಕೆ ಮಾಡಿಲ್ಲ ಎಂದು ಹೇಳಿದರೆ, ಇದು ಸಂಪೂರ್ಣ ಕೇಂದ್ರ ಸರ್ಕಾರದ ಸ್ಪಷ್ಟೀಕರಣವಾಗುವುದಿಲ್ಲ' ಎಂದು ಮಲಿಕ್ ಹೇಳಿದರು.

ಸುದ್ದಿ 2 ನಿಮಿಷ

'ಜಮ್ಮು–ಕಾಶ್ಮೀರದಲ್ಲಿ ರಾಜ್ಯದ ಸ್ಥಾನಮಾನ ಪುನರ್ ಸ್ಥಾಪಿಸಿ'

ಶ್ರೀನಗರ: 'ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜ್ಯದ ಸ್ಥಾನಮಾನ ಪುನರ್ ಸ್ಥಾಪಿಸಬೇಕು' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಮಂಗಳವಾರ ಒತ್ತಾಯಿಸಿದ್ದಾರೆ.

ಶ್ರೀನಗರದಲ್ಲಿ ನೂತನ ಕಾಂಗ್ರೆಸ್ ಭವನ ಉದ್ಘಾಟನಾ ಸಮಾರಂಭದಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಜಮ್ಮು ಮತ್ತು ಕಾಶ್ಮೀರದಲ್ಲಿ ಮುಕ್ತ, ನ್ಯಾಯ ಸಮ್ಮತ ಮತ್ತು ಪಾರದರ್ಶಕವಾಗಿ ವಿಧಾನಸಭಾ ಚುನಾವಣೆ ನಡೆಯಬೇಕು. ರಾಜ್ಯದ ಸ್ಥಾನಮಾನ ಪುನರ್ ಸ್ಥಾಪನೆ ಮಾಡಬೇಕು ಎನ್ನುವ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ನಿಲುವು ಸ್ಪಷ್ಟವಾಗಿದೆ' ಎಂದು ಹೇಳಿದರು.

'ಪ್ರಧಾನಿ ನರೇಂದ್ರ ಮೋದಿ ಅವರ ಭಾರತವನ್ನು ವಿಭಜಿಸುವ ನೀತಿಯ ವಿರುದ್ಧ ಹೋರಾಟ ಮಾಡಬೇಕಿದೆ. ಜಮ್ಮು ಮತ್ತು ಕಾಶ್ಮೀರ ಮಾತ್ರವಲ್ಲ ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ಮತ್ತು ದೇಶದ ಇತರ ಭಾಗಗಳಲ್ಲೂ ವಿಭಜನೆಯ ನೀತಿ ತರುತ್ತಿದ್ದಾರೆ. ಜಮ್ಮು–ಕಾಶ್ಮೀರವು ದೆಹಲಿಯಿಂದ ನೇರವಾಗಿ ದಾಳಿಗೆ ಒಳಗಾಗಿದ್ದರೆ, ಇತರ ಭಾಗಗಳು ಪರೋಕ್ಷ ದಾಳಿಯನ್ನು ಎದುರಿಸುತ್ತಿವೆ' ಎಂದು ಅವರು ಆರೋಪಿಸಿದರು.

'ಕೇಂದ್ರಾಡಳಿತ ಪ್ರದೇಶದ ಜನರ ನೋವು ನನಗೆ ಅರ್ಥವಾಗುತ್ತದೆ. ಪ್ರೀತಿ ಮತ್ತು ಗೌರವದ ಮೂಲಕ ಸಂಬಂಧವನ್ನು ಕಟ್ಟಿಕೊಡಲು ನಾನು ನಿಮ್ಮೊಂದಿಗೆ ಇರುತ್ತೇನೆ' ಎಂದ ಅವರು, 'ಬಿಜೆಪಿಯವರು ನ್ಯಾಯಾಂಗ ವ್ಯವಸ್ಥೆ, ಲೋಕಸಭೆ ಅಷ್ಟೇ ಏಕೆ ಮಾಧ್ಯಮಗಳ ಧ್ವನಿಯನ್ನೂ ಅಡಗಿಸಿದ್ದಾರೆ' ಎಂದೂ ಟೀಕಿಸಿದರು.

ಅಫ್ಗಾನಿಸ್ತಾನ : ಭಾರತೀಯರ ಸ್ಥಳಾಂತರಕ್ಕೆ ಕ್ರಮ

ನವದೆಹಲಿ (ರಾಯಿಟರ್ಸ್): ತಾಲಿಬಾನ್ ಉಗ್ರರು ಮತ್ತು ಭದ್ರತಾ ಪಡೆಗಳ ನಡುವಿನ ದಾಳಿಯ ಕಾರಣ ಅಫ್ಗಾನಿಸ್ತಾನದಲ್ಲಿನ ದೂತಾವಾಸ ಕಚೇರಿಯನ್ನು ಮುಚ್ಚಲು ನಿರ್ಧರಿಸಿರುವ ಭಾರತ, ತನ್ನ ನಾಗರಿಕರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ಮಿಲಿಟರಿ ವಿಮಾನವನ್ನು ಕಳುಹಿಸಿಕೊಟ್ಟಿದೆ.

ಅಫ್ಗಾನಿಸ್ತಾನದ ಉತ್ತರ ಭಾಗದಲ್ಲಿರುವ ಮಜರ್–ಇ–ಷರೀಫ್ ನಗರದಲ್ಲಿರುವ ದೂತಾವಾಸ ಕಚೇರಿಯನ್ನು ಮುಚ್ಚಲು ನಿರ್ಧರಿಸಲಾಗಿದ್ದು, ವಿಶೇಷ ವಿಮಾನದಲ್ಲಿ ರಾಜತಾಂತ್ರಿಕ ಸಿಬ್ಬಂದಿ ಮತ್ತು ಭಾರತೀಯ ನಾಗರಿಕರನ್ನು ಕರೆತರಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಫ್ಗಾನಿಸ್ತಾನದ ಅಭಿವೃದ್ಧಿಗಾಗಿ ಕೋಟ್ಯಂತರ ರೂಪಾಯಿ ವಿನಿಯೋಗಿಸಿರುವ ರಾಷ್ಟ್ರಗಳಲ್ಲಿ ಭಾರತ ಪ್ರಮುಖವಾಗಿದ್ದು, ಕಾಬೂಲ್‌ನಲ್ಲಿರುವ ರಾಯಭಾರ ಕಚೇರಿಯನ್ನು ಹೊರತುಪಡಿಸಿ ತನ್ನ ಎಲ್ಲ ದೂತಾವಾಸ ಕಚೇರಿಗಳನ್ನು ಮುಚ್ಚಿದೆ ಎಂದು ಅವರು ಹೇಳಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಸಿಖ್ ಮತ್ತು ಹಿಂದೂ ಸಮುದಾಯಕ್ಕೆ ಸೇರಿರುವ ಅಂದಾಜು 750 ಜನರನ್ನು ತಾಲಿಬಾನ್ ಸಂಭವನೀಯ ದಾಳಿಯ ಹಿನ್ನೆಲೆಯಲ್ಲಿ ಕೂಡಲೇ ಸ್ಥಳಾಂತರಿಸಬೇಕೆಂದು ಕಾಂಗ್ರೆಸ್ ಮುಖಂಡರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು.

ದೇಶದ ಉತ್ತರ, ಪಶ್ಚಿಮ ಮತ್ತು ದಕ್ಷಿಣ ಭಾಗದಲ್ಲಿರುವ ಪ್ರಾಂತೀಯ ರಾಜಧಾನಿಗಳನ್ನು ತಾಲಿಬಾನ್ ಪಡೆಗಳು ಈಗಾಗಲೇ ವಶಕ್ಕೆ ಪಡೆದುಕೊಂಡಿವೆ.

ನಟ ಪ್ರಕಾಶ್‌ರಾಜ್ ಕಾಲಿಗೆ ಪೆಟ್ಟು

ಬೆಂಗಳೂರು: ಬಹುಭಾಷಾ ನಟ ಪ್ರಕಾಶ್ ರಾಜ್ ಅವರು ಇತ್ತೀಚೆಗೆ ಅಪಘಾತಕ್ಕೆ ಒಳಗಾಗಿದ್ದು, ಕಾಲಿಗೆ ಪೆಟ್ಟಾಗಿದೆ. ಹೈದರಾಬಾದ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ.

'ತಾವು ಹೈದರಾಬಾದ್‌ಗೆ ತೆರಳುತ್ತಿದ್ದು, ಸ್ನೇಹಿತರೂ ಆದ ವೈದ್ಯ ಡಾ. ಗುರುವಾರೆಡ್ಡಿ ಅವರು ಶಸ್ತ್ರಚಿಕಿತ್ಸೆ ನಡೆಸುವರು. ಆತಂಕಪಡುವ ಅಗತ್ಯ ವಿಲ್ಲ' ಎಂದು 56 ವರ್ಷದ ಪ್ರಕಾಶ್ ರಾಜ್ ಸ್ವತಃ ಟ್ವೀಟ್ ಮಾಡಿದ್ದಾರೆ.

ಸಣ್ಣದಾಗಿ ಬಿದ್ದೆ. ಅಲ್ಪಪ್ರಮಾಣದಲ್ಲಿ ಪೆಟ್ಟಾಗಿದೆ. ಚೆನ್ನಾಗಿದ್ದೇನೆ. ಆತಂಕ ಬೇಡ ಎಂದು ಅವರು ಬರೆದಿದ್ದಾರೆ. ಆದರೆ, ಅಪಘಾತ ಅಥವಾ ಬಿದ್ದಿರುವ ಕುರಿತು ಅವರು ಯಾವುದೇ ಮಾಹಿತಿಯನ್ನು ಹಂಚಿಕೊಂಡಿಲ್ಲ.

ಕಾಂಗ್ರೆಸ್ ಹಿರಿಯ ಮುಖಂಡ ಕಪಿಲ್ ಸಿಬಲ್ ಔತಣಕೂಟದಲ್ಲಿ ವಿಪಕ್ಷ ಮುಖಂಡರು

'ತೃತೀಯ ರಂಗ' ಸಾಕಾರಕ್ಕೆ ವಿಪಕ್ಷಗಳ ಮುನ್ನುಡಿ?

ಪ್ರಜಾವಾಣಿ ವಾರ್ತೆ

ನವದೆಹಲಿ: 'ಆಡಳಿತಾರೂಢ ಬಿಜೆಪಿಯನ್ನು ಸೋಲಿಸಲು ಒಂದಾಗುವುದೊಂದೇ ದಾರಿ' ಎಂಬುದನ್ನು ಮನಗಂಡಿರುವ ವಿರೋಧ ಪಕ್ಷಗಳ ಮುಖಂಡರು, ಕಾಂಗ್ರೆಸ್ ಮುಖಂಡ ಕಪಿಲ್ ಸಿಬಲ್ ಅವರು ಸೋಮವಾರ ರಾತ್ರಿ ಕರೆದಿದ್ದ ಔತಣಕೂಟದಲ್ಲಿ ಭಾಗವಹಿಸುವ ಮೂಲಕ ಒಗ್ಗಟ್ಟಿನ ಮಂತ್ರ ಪಠಿಸಿದ್ದಾರೆ.

ಕಾಂಗ್ರೆಸ್ ನಾಯಕತ್ವ ಹಾಗೂ ಸಂಘಟನೆಯ ವೈಖರಿಯನ್ನು ಟೀಕಿಸಿ ಕಳೆದ ವರ್ಷ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದ ಪಕ್ಷದ 23 ಜನ ನಾಯಕರಲ್ಲಿ ಪ್ರಮುಖರಾದ ಸಿಬಲ್, ಇತರ 22 ಜನ 'ಸಮಾನ ಮನಸ್ಕ' ಸ್ನೇಹಿತರೂ ಒಳಗೊಂಡಂತೆ ವಿವಿಧ ಪಕ್ಷಗಳ ಮುಖಂಡರನ್ನು ಒಂದೆಡೆ ಸೇರಿಸಿ ಬಿಜೆಪಿಯನ್ನು ಹಿಮ್ಮೆಟ್ಟಿಸುವ ಬಗ್ಗೆ ಚರ್ಚೆ ನಡೆಸಿದ್ದಾರೆ.



ಕಪಿಲ್ ಸಿಬಲ್

ಈ ಕೂಟಕ್ಕೆ ಗಾಂಧಿ ಕುಟುಂಬದವರನ್ನು ಹೊರತುಪಡಿಸಿ ಎಲ್ಲ ಪ್ರಮುಖ ವಿರೋಧ ಪಕ್ಷಗಳ ಮುಖಂಡರನ್ನು ಆಹ್ವಾನಿಸಿದ್ದು ವಿಶೇಷ.

2022ರ ಮಾರ್ಚ್‌ನಲ್ಲಿ ನಡೆಯಲಿರುವ ಉತ್ತರ ಪ್ರದೇಶದ ವಿಧಾನಸಭೆ ಚುನಾವಣೆ ಹಾಗೂ 2024ರ ಲೋಕಸಭೆ ಚುನಾವಣೆಯಲ್ಲಿ ವಿರೋಧಿ ಶಕ್ತಿಗಳೆಲ್ಲವೂ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಬಿಜೆಪಿಗೆ ಅನುಕೂಲ ಕಲ್ಪಿಸಿಕೊಡುವ ಬದಲು, ಒಮ್ಮತದ ಒಬ್ಬ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ದೈತ್ಯ ಶಕ್ತಿಯಾಗಿ ಹೊರಹೊಮ್ಮಬೇಕು ಎಂಬ ಅಂಶ ಚರ್ಚೆಗೊಳಗಾಗಿದೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಆರ್‌ಜೆಡಿಯ ಲಾಲೂ ಪ್ರಸಾದ್, ನ್ಯಾಷನಲ್ ಕಾನ್ಫರೆನ್ಸ್‌ನ ಓಮರ್ ಅಬ್ದುಲ್ಲಾ, ಸಿಪಿಎಂನ ಸೀತಾರಾಂ ಯೆಚೂರಿ, ಡಿಎಂಕೆಯ ತಿರುಚ್ಚಿ ಶಿವ, ತೃಣಮೂಲ ಕಾಂಗ್ರೆಸ್‌ನ ಡೆರೆಕ್ ಓಬ್ರಿಯಾನ್, ಕಲ್ಯಾಣ್ ಬ್ಯಾನರ್ಜಿ, ಸಿಪಿಐನ ಡಿ.ರಾಜಾ, ಆರ್‌ಎಲ್‌ಡಿ ಮುಖಂಡ ಜಯಂತ್ ಚೌಧರಿ, ಶಿವಸೇನಾದ ಸಂಜಯ್ ರಾವುತ್, ಎಎಪಿಯ ಸಂಜಯ್ ಸಿಂಗ್, ಆಂಧ್ರದ ವೈಎಸ್‌ಆರ್‌ಸಿಪಿಯ ಮುಖಂಡರೂ ಔತಣಕೂಟದಲ್ಲಿ ಪಾಲ್ಗೊಂಡಿದ್ದರು.

ಈ ಹಿಂದೆ ಬಿಜೆಪಿ ನೇತೃತ್ವದ ಎನ್‌ಡಿಎ ಭಾಗವಾಗಿದ್ದ ಶಿರೋಮಣಿ ಅಕಾಲಿದಳ ಮತ್ತು ತೆಲುಗು ದೇಶಂ ಪಕ್ಷದ ಮುಖಂಡರು, ಸಂಸತ್‌ನಲ್ಲಿ ಬಿಜೆಪಿಗೆ ಯಾವುದೇ ರೀತಿಯ ವಿರೋಧ ಸೂಚಿಸದೇ ಬೆಂಬಲ ವ್ಯಕ್ತಪಡಿಸುತ್ತಲೇ ಬಂದಿರುವ ನವೀನ್ ಪಟ್ನಾಯಕ್ ಅವರ ಬಿಜು ಜನತಾದಳ ಮುಖಂಡರೂ ಭಾಗವಹಿಸಿದ್ದರು.

ಸೋನಿಯಾ ಅವರಿಗೆ ಪತ್ರ ಬರೆದಿದ್ದ 23 ಜನರಲ್ಲಿ ಪ್ರಮುಖರಾದ ಗುಲಾಂ ನಬಿ ಆಜಾದ್, ಪೃಥ್ವಿರಾಜ ಚೌಹಾಣ್, ಭೂಪಿಂದರ್ ಸಿಂಗ್ ಹೂಡಾ, ಆನಂದ ಶರ್ಮಾ, ಮುಕುಲ್ ವಾಸ್ನಿಕ್, ಮನೀಷ್ ತಿವಾರಿ, ಶಶಿ ತರೂರ್, ಈ ಗುಂಪಿನಿಂದ ಹೊರತಾಗಿರುವ ಕಾಂಗ್ರೆಸ್‌ನ ಪಿ. ಚಿದಂಬರಂ, ಸಂಸದ ಕಾರ್ತಿ ಚಿದಂಬರಂ ಮತ್ತಿತರರು ಸಿಬಲ್ ಆಹ್ವಾನಕ್ಕೆ ಓಗೊಟ್ಟ ಪ್ರಮುಖರು.

ಲೋಕತಾಂತ್ರಿಕ ಜನತಾ ದಳದ ಮುಖಂಡ ಶರದ್ ಯಾದವ್ ಭಾನು ವಾರವೇ ಸಿಬಲ್ ಅವರನ್ನು ಭೇಟಿಯಾಗಿ, ಚರ್ಚೆ ನಡೆಸಿದ್ದು ಇದರಿಂದ ಸಂತಸವಾಗಿದೆ ಎಂದಿದ್ದಾರೆ.

ರಾಷ್ಟ್ರೀಯ ಪಕ್ಷಗಳಿಗೆ ಹೊರತಾಗಿ, ಪ್ರಾದೇಶಿಕ ಪಕ್ಷಗಳೇ ಪ್ರಮುಖವಾಗಿರುವ ಪರ್ಯಾಯ ಶಕ್ತಿಯಾದ 'ತೃತೀಯ ರಂಗ'ದ ಕನಸನ್ನು ಕಾಣುತ್ತಲೇ ಕೆಲವರು ರಾಜಕಾರಣದಿಂದ ನಿವೃತ್ತರಾಗಿದ್ದಾರೆ. ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಲು, ಅವರಿವರೆನ್ನದೆ ಎಲ್ಲರೂ ಒಂದಾಗಿ, ಹಿರಿಯರ ಕನಸನ್ನು ನನಸು ಮಾಡುವ ಕಾಲ ಕೂಡಿಬಂದಿದೆ ಎಂಬ ಅಭಿಪ್ರಾಯವನ್ನು ಪ್ರತಿಯೊಬ್ಬರೂ ವ್ಯಕ್ತಪಡಿಸಿದರು ಎಂದು ಶಿವಸೇನೆಯ ಸಂಜಯ್ ರಾವುತ್ ತಿಳಿಸಿದ್ದಾರೆ.

'ನಮ್ಮೊಳಗಿನ ಭಿನ್ನಾಭಿಪ್ರಾಯ ಬದಿಗಿರಿಸಿ, ಬಿಜೆಪಿ ವಿರುದ್ಧ ಒಗ್ಗಟ್ಟನ್ನು ಬಲಪಡಿಸಬೇಕು' ಎಂದು ಹೇಳಿದ್ದಾರೆ.

'ಇದು ಆರಂಭವಷ್ಟೇ. ಸೋಮವಾರದ ಚರ್ಚೆಯಲ್ಲಿ ಪ್ರಮುಖ ಮತ್ತು ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗಿಲ್ಲ. ಆದರೆ, ಇಂತಹ ಇನ್ನೂ ಅನೇಕ ಸಭೆಗಳನ್ನು ಆಯೋಜಿಸುವ ಅಗತ್ಯವಿದೆ ಎಂಬುದಕ್ಕೆ ವಿರೋಧ ಪಕ್ಷಗಳ ಪ್ರಮುಖರು ಒತ್ತು ನೀಡಿದ್ದಾರೆ' ಎಂದೂ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಹೈಡ್ರಾಮಾ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈತರ ಸಮಸ್ಯೆ ಮೇಲಿನ ಚರ್ಚೆಯ ವೇಳೆ ರಾಜ್ಯಸಭೆಯಲ್ಲಿ ನಾಟಕೀಯ ಸನ್ನಿವೇಶ ಸೃಷ್ಟಿಯಾಯಿತು. ಕಲಾಪವನ್ನು ಮುಂದೂಡಿದ ಬಳಿಕ ವಿರೋಧ ಪಕ್ಷದ ಇಬ್ಬರು ಸದಸ್ಯರು ಮೇಜಿನ ಮೇಲೆ ಹತ್ತಿದರು. ಒಬ್ಬರು ಕಪ್ಪುಬಟ್ಟೆಯನ್ನು ಪ್ರದರ್ಶಿಸಿದರೆ, ಮತ್ತೊಬ್ಬರು ಸಭಾಪತಿಗಳ ಪೀಠದತ್ತ ಕಡತವೊಂದನ್ನು ಎಸೆದರು. ಐದಕ್ಕೂ ಹೆಚ್ಚು ಸಂಸದರು ಮೇಜು ಹತ್ತಿ ಕುಳಿತರು.

ಪ್ರತಿಪಕ್ಷಗಳ ಸಂಸದರು ಸಭಾಧ್ಯಕ್ಷದ ಮುಂದಿನ ಮೇಜಿನ ಮೇಲೆ ಸುಮಾರು 100 ನಿಮಿಷಗಳ ಕಾಲ ಹತ್ತಿ ಕುಳಿತಿದ್ದರು. ಮಧ್ಯಾಹ್ನ 2.16ರಿಂದ ಸಂಜೆ 4.01ರವರೆಗೂ ಈ ಪ್ರಹಸನ ಮುಂದುವರಿಯಿತು. ಈ ವೇಳೆ ಸದನವನ್ನು ಹಲವು ಬಾರಿ ಮುಂದೂಡಲಾಯಿತು. ಉಪ ಸಭಾಪತಿ ಪೀಠದಲ್ಲಿದ್ದ ಭುವನೇಶ್ವರ್ ಕಲಿತಾ ಅವರು ಸದನವನ್ನು ದಿನದ ಮಟ್ಟಿಗೆ ಮುಂದೂಡಬೇಕಾಯಿತು.

ಸದನದಲ್ಲಿ ನಡೆದ ಘಟನೆಯನ್ನು ಮಿತಿ ಮೀರಿದ ಅಸಾಂವಿಧಾನಿಕ ನಡವಳಿಕೆ ಎಂದು ಸರ್ಕಾರ ಕರೆಯಿತು. ಇದಕ್ಕೆ ತಿರುಗೇಟು ನೀಡಿದ ಪ್ರತಿಪಕ್ಷಗಳು, ತಮಗೆ ಬೇಕಿರುವುದು ಕೃಷಿ ಕುರಿತ ಕಾವ್ಯಾತ್ಮಕ ಚರ್ಚೆಯಲ್ಲ. ಬದಲಾಗಿ ವಿವಾದಾತ್ಮಕ ಕೃಷಿ ಕಾನೂನು ರದ್ದತಿ ಮತ್ತು ರೈತರ ಪ್ರತಿಭಟನೆ ಕುರಿತು ಒಂದು ನಿರ್ದಿಷ್ಟ ಚರ್ಚೆ ಎಂದು ಹೇಳಿದವು.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಮುಂಗಾರು ಅಧಿವೇಶನದಲ್ಲಿ ವಿವಾದಿತ ಮೂರು ಕೃಷಿ ಕಾನೂನುಗಳನ್ನು ಅಂಗೀಕರಿಸುವಾಗ ರಾಜ್ಯಸಭೆಯು ಇದೇ ರೀತಿಯ ಸನ್ನಿವೇಶವನ್ನು ಕಂಡಿತ್ತು. ವಿರೋಧ ಪಕ್ಷಗಳ ಸಂಸದರು ಸಭಾಪತಿ ಎದುರಿನ ಪೀಠದ ಎದುರು ಜಮಾಯಿಸಿ, ಘೋಷಣೆಗಳನ್ನು ಕೂಗಿ, ನಿಯಮಾವಳಿ ಪುಸ್ತಕವನ್ನು ಕುರ್ಚಿಯ ಮೇಲೆ ಎಸೆದಿದ್ದರು. ಮೈಕ್ರೊಫೋನ್ ಮುರಿದು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದರು. ಹೀಗಾಗಿ ಪ್ರತಿಪಕ್ಷಗಳ ಎಂಟು ಸಂಸದರನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಳಿಸಲಾಗಿತ್ತು.

ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಸದನ ಸಭೆ ಸೇರುತ್ತಿದ್ದಂತೆ, ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ್ ರಮೇಶ್ ಅವರು 2015ರಲ್ಲಿ ಸಭಾಪತಿಗಳ ತೀರ್ಪನ್ನು ಉಲ್ಲೇಖಿಸಿ ಮಾತನಾಡಿದರು. ಸದನದ ಗಮನಕ್ಕೆ ತಾರದೇ ತಮ್ಮ 'ಗಮನ ಸೆಳೆಯುವ ಸೂಚನೆ'ಯನ್ನು ಅಲ್ಪಾವಧಿಯ ಚರ್ಚೆಯಾಗಿ ಪರಿವರ್ತಿಸಲಾಗಿದೆ ಎಂದು ಆರೋಪಿಸಿದರು. ಈ ನಿರ್ಧಾರವು ಏಕಪಕ್ಷೀಯ ಎಂದು ಹೇಳಿದರು. ಅಂತಹ ವಿಷಯ ಎಂದಿಗೂ ಸಂಭವಿಸಿಲ್ಲ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸಭಾಪತಿ ಎಂ. ವೆಂಕಯ್ಯ ನಾಯ್ಡು ಅವರು ತೆಗೆದುಕೊಂಡ ನಿರ್ಧಾರವನ್ನು ಹಿಂಪಡೆಯಲು ಸಾಧ್ಯವಿಲ್ಲ ಎಂದು ಉಪಸಭಾಪತಿ ಹೇಳಿದರು. ಹೀಗಾಗಿ ವಿರೋಧ ಪಕ್ಷದ ಸಂಸದರು ಘೋಷಣೆಗಳನ್ನು ಕೂಗುತ್ತಾ ಪೀಠದ ಎದುರು ಬಂದರು. ಎಎಪಿ ಸಂಸದ ಸಂಜಯ್ ಸಿಂಗ್ ಅವರು ಮೊದಲಿಗೆ ಮೇಜು ಹತ್ತಿ ಕಪ್ಪುಬಟ್ಟೆ ಪ್ರದರ್ಶಿಸಿದರು. ಹೀಗಾಗಿ ಕಲಾಪ ಮುಂದೂಡಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಲಾಯಿತು. ಅಧಿವೇಶನವನ್ನು ದಿನದ ಮಟ್ಟಿಗೆ ಮುಂದೂ ಡುವವರೆಗೂ ಸಂಸದರು ಮೇಜಿನಿಂದ ಕೆಳಗಿಳಿಯಲಿಲ್ಲ.

ಮಾರ್ಷಲ್‌ಗಳು ಸಿಂಗ್ ಅವರನ್ನು ಮೇಜಿನಿಂದ ಕೆಳಗಿಳಿಸಿದಾಗ ಸದನವನ್ನು ಮುಂದೂಡಲಾಯಿತು. ಕಾಂಗ್ರೆಸ್‌ನ ಪ್ರತಾಪಸಿಂಹ ಬಾಜ್ವಾ ಮೇಜು ಹತ್ತಿ ಘೋಷಣೆಗಳನ್ನು ಕೂಗಿ, ನಂತರ ಕಡತವೊಂದನ್ನು ಕುರ್ಚಿಯ ಮೇಲೆ ಎಸೆದರು. ಕಾಂಗ್ರೆಸ್‌ನ ರಿಪುನ್ ಬೋರಾ ಕೂಡ ಮೇಜಿನ ಮೇಲೆ ಸ್ವಲ್ಪ ಹೊತ್ತು ನಿಂತಿದ್ದರು.

ವಿರೋಧ ಪಕ್ಷಗಳ ಘೋಷಣೆಗೆ ಬಿಜೆಪಿ ಸಂಸದರು ಪ್ರತಿ ಘೋಷಣೆಗಳನ್ನು ಕೂಗಿದರು. ವಿರೋಧ ಪಕ್ಷಗಳ ಹಲವು ಸಂಸದರು ಕಪ್ಪು ಅಂಗಿ, ಕುರ್ತಾ ಮತ್ತು ಸೀರೆ ಧರಿಸಿದ್ದರೆ, ಇನ್ನೂ ಕೆಲವರು ಕಪ್ಪು ಶಾಲು, ಕಪ್ಪು ಬ್ಯಾಂಡ್ ಮತ್ತು ಕಪ್ಪು ಮುಖವಾಡ ಧರಿಸಿದ್ದರು.

ಸದನವು ಮರುಸೇರ್ಪಡೆಯಾದಾಗ, ಸಿಪಿಐನ ಬಿನೋಯ್ ವಿಶ್ವಂ, ಸಿಪಿಎಂ ಸಂಸದ ವಿ.ಶಿವದಾಸನ್, ಕಾಂಗ್ರೆಸ್‌ನ ದೀಪೇಂದರ್ ಹೂಡಾ, ರಿಪುನ್ ಬೋರಾ ಮತ್ತು ರಾಜಮಣಿ ಪಟೇಲ್, ಡಿಎಂಕೆಯ ಎಂ. ಷಣ್ಮುಗಂ ಮತ್ತು ತೃಣಮೂಲ ಕಾಂಗ್ರೆಸ್‌ನ ಮೌಸಮ್ ನೂರ್ ಅವರೂ ಜೊತೆಗೂಡಿದರು. ಕೊನೆಗೆ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಪರಿಶೀಲನೆ

ಪಶ್ಚಿಮ ಬಂಗಾಳದ ಪಶ್ಚಿಮ ಮಿಡ್ನಾಪುರದ ಪ್ರವಾಹಪೀಡಿತ ಪ್ರದೇಶಗಳಿಗೆ ಮಂಗಳವಾರ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು –ಪಿಟಿಐ ಚಿತ್ರ

ರಾಜ್ಯಸಭೆ: ಮತ ಹಾಕುವ ವೇಳೆ ಗೈರಾದವರ ವಿವರ ಕೇಳಿದ ಮೋದಿ

ನವದೆಹಲಿ(ಪಿಟಿಐ): ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸಂಸದರು ಮಂಡಿಸಿದ್ದ ನಿರ್ಣಯಗಳ ಮೇಲೆ ಮತದಾನ ನಡೆಯುವ ಸಂದರ್ಭದಲ್ಲಿ ಗೈರು ಹಾಜರಾಗಿದ್ದ ಪಕ್ಷದ ಸಂಸದರ ಕುರಿತ ವಿವರಗಳನ್ನು ಸಲ್ಲಿಸುವಂತೆ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಷಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಸೂಚಿಸಿದ್ದಾರೆ.

ಪಕ್ಷದ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಈ ಸೂಚನೆ ನೀಡಿದರು ಎಂದು ಮೂಲಗಳು ಹೇಳಿವೆ.

'ನ್ಯಾಯಮಂಡಳಿಗಳ ಸುಧಾರಣಾ ಮಸೂದೆ'ಯನ್ನು ಸದನದ ಆಯ್ಕೆ ಸಮಿತಿಗೆ ಕಳುಹಿಸಬೇಕು ಎಂದು ಒತ್ತಾಯಿಸಿ, ವಿರೋಧ ಪಕ್ಷಗಳ ಕೆಲ ಸದಸ್ಯರು ಸೋಮವಾರ ನಿರ್ಣಯ ಮಂಡಿಸಿದ್ದರು. ಆದರೆ, ನಿರ್ಣಯವನ್ನು ಸದನ ತಿರಸ್ಕರಿಸಿತು.

ಒಲಿಂಪಿಕ್ಸ್‌ನಲ್ಲಿ ಅಸಾಧಾರಣ ಪ್ರತಿಭೆ ಮೆರೆದು, ಪದಕಗಳನ್ನು ಗೆದ್ದವರಿಗೆ ಸಭೆಯಲ್ಲಿ ಪಾಲ್ಗೊಂಡಿದ್ದವರು ಎದ್ದು ನಿಂತು ಚಪ್ಪಾಳೆ ತಟ್ಟಿ, ಅಭಿನಂದಿಸಿದರು.

ವ್ಯಾಪಕ ಪ್ರಚಾರಕ್ಕೆ ಸಲಹೆ: 'ಕ್ರೀಡಾ ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ನಿಮ್ಮ ಕ್ಷೇತ್ರದ ಜನರಿಗೆ ಪ್ರೋತ್ಸಾಹ ನೀಡಬೇಕು. ಪೋಷಣ್ ಅಭಿಯಾನ್ ಮತ್ತು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಬೇಕು' ಎಂದು ಸಂಸದರಿಗೆ ಪ್ರಧಾನಿ ಸಲಹೆ ನೀಡಿದರು.

'ದೇಶದಾದ್ಯಂತ ಎನ್‌ಆರ್‌ಸಿ ಜಾರಿ ನಿರ್ಧಾರವಾಗಿಲ್ಲ'

ನವದೆಹಲಿ (ಪಿಟಿಐ): 'ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ದೇಶದಾದ್ಯಂತ ಜಾರಿಗೊಳಿಸುವ ಕುರಿತು ಕೇಂದ್ರ ಸರ್ಕಾರ ಇನ್ನೂ ಯಾವುದೇ ತೀರ್ಮಾನ ಕೈಗೊಂಡಿಲ್ಲ' ಎಂದು ಕೇಂದ್ರ ಸಚಿವ ನಿತ್ಯಾನಂದ ರಾಯ್ ಮಂಗಳವಾರ ಲೋಕಸಭೆಯಲ್ಲಿ ತಿಳಿಸಿದರು.

ಪ್ರತ್ಯೇಕ ಒಬಿಸಿ ಪಟ್ಟಿ: ಮಸೂದೆಗೆ ಅಸ್ತು

ಒಂದನೇ ಪುಟದಿಂದ

ಸಂವಿಧಾನದ 127ನೇ ತಿದ್ದುಪಡಿ ಮಸೂದೆ–2021 ಅನ್ನು ಐತಿಹಾಸಿಕ ಎಂದು ಕರೆದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ವೀರೇಂದ್ರ ಕುಮಾರ್, ದೇಶದ 671 ಜಾತಿಗಳು ಇದರಿಂದ ಪ್ರಯೋಜನ ಪಡೆಯುತ್ತವೆ ಎಂದರು. ತಮ್ಮದೇ ಆದ ಪ್ರತ್ಯೇಕ ಒಬಿಸಿ ಪಟ್ಟಿಯನ್ನು ರಾಜ್ಯಗಳು ಸಿದ್ಧಪಡಿಸಲು ಈ ಮಸೂದೆಯು ಅಧಿಕಾರ ನೀಡುವುದರಿಂದ, ವಿವಿಧ ಸಮುದಾಯಗಳಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಸಿಕ್ಕಂತಾಗುತ್ತದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ರಚನೆ, ಕರ್ತವ್ಯಗಳು, ಅಧಿಕಾರಗಳನ್ನು ತಿಳಿಸುವ 338ಬಿ ಕಲಂ ಹಾಗೂ ಒಂದು ನಿರ್ದಿಷ್ಟ ಜಾತಿಯನ್ನು ಎಸ್‌ಇಬಿಸಿ ಎಂದು ಘೋಷಿಸಲು ಮತ್ತು ಅಧ್ಯಕ್ಷರ ಅಧಿಕಾರಗಳನ್ನು ತಿಳಿಸುವ 342ಎ ಕಲಂಗಳನ್ನು 2018ರ 102ನೇ ಸಂವಿಧಾನ ತಿದ್ದುಪಡಿ ಕಾಯಿದೆಯು ಸೇರಿಸಿತ್ತು.

ಸಂವಿಧಾನದ 102ನೇ ತಿದ್ದುಪಡಿಯು ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡಲು ಹಿಂದುಳಿದ ಜಾತಿಗಳನ್ನು ಗುರುತಿಸುವ ರಾಜ್ಯಗಳಿಗೆ ಅಧಿಕಾರ ಇಲ್ಲ ಎಂದು ತಿಳಿಸುತ್ತದೆ. ಈ ಕಾಯ್ದೆಯ ಅಂಶಗಳನ್ನು ಎತ್ತಿಹಿಡಿದಿದ್ದ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿದ್ದ ಕೇಂದ್ರದ ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

ಲೋಕಸಭೆಯಲ್ಲಿ ಚರ್ಚೆಯನ್ನು ಆರಂಭಿಸಿದ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಮಸೂದೆಗೆ ತಮ್ಮ ಪಕ್ಷದ ಸಂಪೂರ್ಣ ಬೆಂಬಲ ಇದೆ ಎಂದರು. ಆದರೆ, 2018ರಲ್ಲಿ ಸಂವಿಧಾನ ತಿದ್ದುಪಡಿ ಮಾಡಿದ ಸರ್ಕಾರದ ಕ್ರಮವನ್ನು ಟೀಕಿಸಿದರು. ಸರ್ಕಾರವು ಪ್ರತಿಪಕ್ಷಗಳು ನೀಡಿದ್ದ ಸಲಹೆ ಸ್ವೀಕರಿಸಿದ್ದರೆ ಇಂದಿನ ಸ್ಥಿತಿ ಉದ್ಭವವಾಗುತ್ತಿರಲಿಲ್ಲ ಎಂದು ಹೇಳಿದರು.

'ನೀವು 2018ರಲ್ಲಿ 102ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ತರುವ ಮೂಲಕ ಸಂವಿಧಾನ ತಿರುಚಿದ್ದೀರಿ. ಹೀಗಾಗಿ ಜನರು ನ್ಯಾಯಾಲಯಕ್ಕೆ ಹೋಗಬೇಕಾಯಿತು. ಅಂತಿಮವಾಗಿ ಸುಪ್ರೀಂ ಕೋರ್ಟ್, ರಾಜ್ಯಗಳ ಅಧಿಕಾರ ತೆಗೆದುಹಾಕುವಂತಾಯಿತು' ಎಂದರು.

ಪೆಗಾಸಸ್ ಚರ್ಚೆಯಿಂದ ಸರ್ಕಾರ ಓಡಿಹೋಗಿದೆ ಎಂದು ಆರೋಪಿಸಿದ ಚೌಧರಿ, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಹಂಗೇರಿ, ಅಮೆರಿಕ ಮತ್ತು ಇಸ್ರೇಲ್‌ನಂತಹ ದೇಶಗಳು ವಿವಾದಾತ್ಮಕವಾದ ಈ ವಿಷಯದ ಬಗ್ಗೆ ತನಿಖೆಗೆ ಆದೇಶಿಸಿವೆ ಎಂದು ಹೇಳಿದರು.

ಜೆಡಿಯುನ ಲಾಲನ್ ಸಿಂಗ್, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಬಿಎಸ್‌ಪಿಯ ರಿತೇಶ್ ಪಾಂಡೆ ಮತ್ತು ಡಿಎಂಕೆಯ ಟಿ.ಆರ್. ಬಾಲು ಮೊದಲಾದ ಅನೇಕ ನಾಯಕರು ದೇಶಾದ್ಯಂತ ಜಾತಿ ಗಣತಿ ನಡೆಸುವಂತೆ ಒತ್ತಾಯಿಸಿದರು. ಮೀಸಲಾತಿ ಮೇಲಿರುವ ಶೇ 50ರ ಮಿತಿ ತೆಗೆದುಹಾಕುವಂತೆ ಕಾಂಗ್ರೆಸ್, ಡಿಎಂಕೆ ಹಾಗೂ ಎಸ್‌ಪಿ ಒತ್ತಾಯಿಸಿದವು.

ಚರ್ಚೆಯಲ್ಲಿ ಮಧ್ಯಪ್ರವೇಶಿಸಿದ ಕಾರ್ಮಿಕ ಮತ್ತು ಉದ್ಯೋಗ ಸಚಿವ ಭೂಪೇಂದರ್ ಯಾದವ್, 'ಮೋದಿ ಸರ್ಕಾರದಿಂದ ದಲಿತರು, ಒಬಿಸಿಗಳು ಮತ್ತು ಬಡವರಿಗೆ ನ್ಯಾಯ ಒದಗಿಸಲು ಗರಿಷ್ಠ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಪ್ರತಿಪಾದಿಸಿದರು.

ಈ ತಿದ್ದುಪಡಿಯಿಂದ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯನ್ನು ತ್ವರಿತವಾಗಿ ತಯಾರಿಸಲು ಸಾಧ್ಯವಾಗಲಿದೆ.

ಕೆ. ಜಯಪ್ರಕಾಶ್ ಹೆಗ್ಡೆ,
ಅಧ್ಯಕ್ಷರು, ರಾಜ್ಯ ಹಿಂದುಳಿದ ವರ್ಗಗಳ ಆಯೋಗ

ಈ ಹಿಂದೆ ರಾಜ್ಯಗಳ ಬಳಿ ಇದ್ದ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರವನ್ನು ಕೇಂದ್ರ ಕಸಿದುಕೊಂಡಿತ್ತು. ಅದನ್ನು ಈಗ ವಾಪಸು ನೀಡಿದೆ.

ಸಿದ್ದರಾಮಯ್ಯ,
ವಿಧಾನಸಭೆ ವಿರೋಧ ಪಕ್ಷದ ನಾಯಕ

ಇದೊಂದು ಐತಿಹಾಸಿಕ ಹೆಜ್ಜೆ. ಇದರಿಂದ ಈವರೆಗೆ ನ್ಯಾಯ ಸಿಗದೇ ಅವಕಾಶಗಳಿಂದ ವಂಚಿತರಾಗಿದ್ದ ಹಿಂದುಳಿದ ವರ್ಗಗಳಲ್ಲಿನ ಸಣ್ಣ ಪುಟ್ಟ ಜಾತಿಗಳಿಗೆ ಅನುಕೂಲವಾಗಲಿದೆ.

ಎನ್.ರವಿಕುಮಾರ್,
ಪ್ರಧಾನ ಕಾರ್ಯದರ್ಶಿ, ರಾಜ್ಯ ಬಿಜೆಪಿ

ರಾಜಕೀಯ ಪಕ್ಷಗಳಿಗೆ 'ಸುಪ್ರೀಂ' ದಂಡ

ಒಂದನೇ ಪುಟದಿಂದ

'ಅಭ್ಯರ್ಥಿಗಳ ಮಾಹಿತಿ ಕುರಿತಾಗಿ ಆದೇಶ ಹೊರಡಿಸಿದ ನಂತರದಲ್ಲಿ ನಡೆದದ್ದು ಇದೇ ಮೊದಲ ಚುನಾವಣೆಯಾಗಿದ್ದರಿಂದ, ಸುಪ್ರೀಂ ಕೋರ್ಟ್ ಇದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಆದರೆ, ಮುಂಬರುವ ಚುನಾವಣೆಗಳ ಸಂದರ್ಭದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಸುಪ್ರೀಂ ಕೋರ್ಟ್ ನಿರ್ದೇಶನ ಹಾಗೂ ಚುನಾವಣಾ ಆಯೋಗದ ನಿಯಮಗಳನ್ನು ಚಾಚೂತಪ್ಪದೇ ಪಾಲಿಸಬೇಕು' ಎಂದು ತಿಳಿಸಿತು.

ಯಾವುದೇ ರಾಜಕೀಯ ಪಕ್ಷವು ನ್ಯಾಯಾಲಯದ ನಿರ್ದೇಶನಗಳನ್ನು ಉಲ್ಲಂಘಿಸಿದ್ದಲ್ಲಿ, ಅಂಥ ಪ್ರಕರಣಗಳನ್ನು ಕೂಡಲೇ ನ್ಯಾಯಾಲಯದ ಗಮನಕ್ಕೆ ತರುವಂತೆ ಚುನಾವಣಾ ಆಯೋಗಕ್ಕೂ ಎಚ್ಚರಿಸಿತು.

ಅಭ್ಯರ್ಥಿಯನ್ನು ಘೋಷಿಸಿದ 48 ಗಂಟೆಗಳ ಒಳಗಾಗಿ ರಾಜಕೀಯ ಪಕ್ಷಗಳು, ಅಪರಾಧ ಹಿನ್ನೆಲೆಯ ದಾಖಲೆಗಳು ಸೇರಿದಂತೆ ಆ ವ್ಯಕ್ತಿಯ ಮಾಹಿತಿಯನ್ನು ಪ್ರಕಟಿಸಬೇಕು.

ಅಷ್ಟೇ ಅಲ್ಲ, ಈ ಮಾಹಿತಿಯನ್ನು ತಮ್ಮ ಪಕ್ಷದ ವೆಬ್‌ಸೈಟ್‌ನ ಹೋಂಪೇಜ್‌ನಲ್ಲಿಯೂ ಪ್ರಕಟಿಸಬೇಕು ಎಂದು ನ್ಯಾಯಪೀಠ ಸೂಚಿಸಿತು. ಇದರಿಂದ ಮತದಾರರಿಗೆ ತಮ್ಮ ಕ್ಷೇತ್ರದ ಅಭ್ಯರ್ಥಿಗಳ ಬಗ್ಗೆ ತಿಳಿದುಕೊಳ್ಳುವುದು ಸುಲಭವಾಗುತ್ತದೆ ಎಂದು ಅಭಿಪ್ರಾಯಪಟ್ಟಿತು.

ಇದರೊಂದಿಗೆ, ಇಂಥವರ ಮಾಹಿತಿ ನೀಡುವಾಗ, ಹೋಂಪೇಜ್‌ನಲ್ಲಿ ಆಯಾ ರಾಜ್ಯದ ವಿಭಾಗದಲ್ಲಿ 'ಅಪರಾಧ ಹಿನ್ನೆಲೆ ಇರುವ ಅಭ್ಯರ್ಥಿಗಳು' ಎಂಬ ಶೀರ್ಷಿಕೆಯೂ ಅಗತ್ಯ ಎಂದಿದೆ.

ಎಲ್ಲ ರಾಜಕೀಯ ಪಕ್ಷಗಳ ಅಭ್ಯರ್ಥಿಗಳ ಅಪರಾಧ ಹಿನ್ನೆಲೆಯ ವಿವರವನ್ನು ಒಳಗೊಂಡ ಮೊಬೈಲ್ ಅಪ್ಲಿಕೇಶನ್ ಸಿದ್ಧಪಡಿಸುವಂತೆ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದ ಸುಪ್ರೀಂ ಕೋರ್ಟ್, ಇದರೊಂದಿಗೆ ಮತದಾರರಲ್ಲಿ ಅರಿವು ಮೂಡಿಸುವ ಅಭಿಯಾನವನ್ನೂ ನಡೆಸುವಂತೆ ತಿಳಿಸಿತು.

ಪ್ರಕರಣ ಹಿಂಪಡೆಯಲು ಹೈಕೋರ್ಟ್ ಅನುಮತಿ ಕಡ್ಡಾಯ

ಒಂದನೇ ಪುಟದಿಂದ

ಜನಪ್ರತಿನಿಧಿಗಳ ವಿರುದ್ಧದ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದರೆ, ಅವುಗಳ ಕುರಿತು ನಿಗದಿತ ನಮೂನೆಯಲ್ಲಿ ಮಾಹಿತಿ ಸಲ್ಲಿಸುವಂತೆ ಎಲ್ಲ ಹೈಕೋರ್ಟ್‌ಗಳ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶನ ನೀಡಲಾಗಿದೆ. ಬಾಕಿ ಇರುವ ಪ್ರಕರಣಗಳ ಸಂಖ್ಯೆ ಹಾಗೂ ಅವುಗಳ ವಿಚಾರಣೆ ಯಾವ ಹಂತಗಳಲ್ಲಿದೆ ಎಂಬ ಮಾಹಿತಿ ನೀಡುವಂತೆಯೂ ನ್ಯಾಯಪೀಠ ಸೂಚಿಸಿದೆ.

ಸಂಸದರು, ಶಾಸಕರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳ ತ್ವರಿತ ವಿಚಾರಣೆಗೆ ನಿರ್ದೇಶನ ನೀಡುವಂತೆ ಕೋರಿ ಅಶ್ವಿನಿ ಉಪಾಧ್ಯಾಯ 2016ರಲ್ಲಿ ಪಿಐಎಲ್ ಸಲ್ಲಿಸಿದ್ದರು. ಶಿಕ್ಷೆಗೆ ಗುರಿಯಾದ ರಾಜಕಾರಣಿಗಳು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಶಾಶ್ವತ ನಿಷೇಧ ಹೇರಬೇಕು ಎಂದೂ ಅವರು ಅರ್ಜಿಯಲ್ಲಿ ಕೋರಿದ್ದರು.

ಈ ಪ್ರಕರಣದಲ್ಲಿ ನ್ಯಾಯಾಲಯದ ಸಲಹೆಗಾರರಾಗಿ ನೇಮಕವಾಗಿದ್ದ ವಿಜಯ್ ಹಂಸಾರಿಯಾ ಅವರು ವರದಿ ಸಲ್ಲಿಸಿದ್ದರು.

ಹಲವು ರಾಜ್ಯ ಸರ್ಕಾರಗಳು ಹಾಲಿ ಹಾಗೂ ಮಾಜಿ ಶಾಸಕರು/ಸಂಸದರ ವಿರುದ್ಧದ ಪ್ರಕರಣಗಳನ್ನು ಅನ್ಯ ಕಾರಣಗಳಿಂದ ಹಿಂತೆಗೆದುಕೊಂಡಿವೆ.

ಈ ಬಗ್ಗೆ ಕರ್ನಾಟಕ ಸರ್ಕಾರವು 2020ರ ಆಗಸ್ಟ್‌ನಲ್ಲಿ ಜನಪ್ರತಿನಿಧಿಗಳ ವಿರುದ್ಧದ 61 ಪ್ರಕರಣಗಳನ್ನು ಹಿಂಪಡೆದಿರುವುದನ್ನು ಹಾಗೂ ಮಹಾರಾಷ್ಟ್ರ ಹಾಗೂ ಉತ್ತರಪ್ರದೇಶದಲ್ಲಿ ಇದೇ ರೀತಿಯ ಪ್ರಕ್ರಿಯೆಗಳನ್ನೂ ಅವರು ಉಲ್ಲೇಖಿಸಿದ್ದಾರೆ.

ವಿಚಾರಣೆಯ ಸಂದರ್ಭದಲ್ಲಿ, ಶಾಸಕರು ಹಾಗೂ ಸಂಸದರ ವಿರುದ್ಧದ ಮೊಕದ್ದಮೆಗಳ ಮಾಹಿತಿಯನ್ನು ನೀಡುವಲ್ಲಿ ಸಿಬಿಐ ವಿಫಲವಾಗಿದೆ ಎಂದೂ ಸುಪ್ರೀಂ ಕೋರ್ಟ್ ಚಾಟಿ ಬೀಸಿತು.

ಅಲ್ಲದೇ ಈ ಬಗ್ಗೆ ಕೊನೆಯ ಅವಕಾಶ ನೀಡುವುದಾಗಿ ಹೇಳಿತು. ಪ್ರಕರಣದ ಮುಂದಿನ ವಿಚಾರಣೆಯನ್ನು ಆಗಸ್ಟ್ 25ಕ್ಕೆ ನಿಗದಿಪಡಿಸಿತು.

11ನೇ ತರಗತಿ ಪ್ರವೇಶಕ್ಕೆ ಸಿಇಟಿ ಆದೇಶ ರದ್ದು

ಮುಂಬೈ (ಪಿಟಿಐ): ಮಹಾ ರಾಷ್ಟ್ರದ ಕಿರಿಯ ಕಾಲೇಜುಗಳಲ್ಲಿ 11ನೇ ತರಗತಿಗೆ ಪ್ರವೇಶವನ್ನು ಕಲ್ಪಿಸಲು ಸರ್ಕಾರ ನಡೆಸಲು ಉದ್ದೇಶಿಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಬಾಂಬೆ ಹೈಕೋರ್ಟ್ ರದ್ದುಪಡಿಸಿದೆ.

ಕೋವಿಡ್ ಕಾರಣದಿಂದ ಸಿಇಟಿ ನಡೆಸುವುದು ನ್ಯಾಯಯುತ ಕ್ರಮವಲ್ಲ. ವಿದ್ಯಾರ್ಥಿಗಳ ಬದುಕಿಗೇ ಧಕ್ಕೆ ತರಲಿದೆ ಎಂದು ನ್ಯಾಯಮೂರ್ತಿಗಳಾದ ಆರ್. ಡಿ.ಧನುಕಾ ಮತ್ತು ಆರ್.ಐ.ಚಗ್ಲಾ ಅವರಿದ್ದ ವಿಭಾಗೀಯ ಪೀಠ ಹೇಳಿತು. ಪ್ರಸಕ್ತ ಶೈಕ್ಷಣಿಕ ವರ್ಷ ಕಾಲೇಜುಗಳಿಗೆ ಪ್ರವೇಶ ಬಯಸಿದ್ದ ವಿದ್ಯಾರ್ಥಿಗಳಿಗೆ ಸಿಇಟಿ ನಡೆಸಲು ಮಹಾರಾಷ್ಟ್ರ ಸರ್ಕಾರ ಆದೇಶ ಹೊರಡಿಸಿತ್ತು.

ಎಬಿಎಂ ಪಕ್ಷದ ರಾಜ್ಯ ಘಟಕಕ್ಕೆ ಚಾಲನೆ

ಬೆಂಗಳೂರು: 'ಅಪ್ನಾ ಭಾರತ್ ಮೋರ್ಚಾ' (ಎಬಿಎಂ) ಪಕ್ಷದ ಕರ್ನಾಟಕ ಘಟಕಕ್ಕೆ ಪಕ್ಷದ ರಾಷ್ಟ್ರೀಯ ಸಂಚಾಲಕ ಅಶೋಕ್ ತನ್ವರ್ ಅವರು ಪ್ರೆಸ್‌ಕ್ಲಬ್‌ನಲ್ಲಿ ಮಂಗಳವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ಈಗಿನ ಸರ್ಕಾರಗಳು ಜನರ ಅಗತ್ಯಗಳು ಹಾಗೂ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲ ವಾಗಿವೆ. ಜನರು ಕಡಿಮೆ ಆದಾಯದಲ್ಲೇ ಉಳಿದಿದ್ದು, ಸುಸ್ಥಿರ ಭಾರತದ ನಿರ್ಮಾಣ ಆಗಬೇಕಿದೆ. ವಿರೋಧ ಪಕ್ಷಗಳೂ ತಮ್ಮ ಜವಾಬ್ದಾರಿ ಮರೆತಿರುವುದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ' ಎಂದರು.



ಇದು 'ವಾಚ್' ಕರಗುವ ಸಮಯ

ಕ್ಷಮಾ ವಿ. ಭಾನುಪ್ರಕಾಶ್



ಸಾಂದರ್ಭಿಕ ಚಿತ್ರ

ಚಿಕ್ಕಂದಿನಲ್ಲಿ ಟ್ರಾನ್ಸಿಸ್ಟರ್, ವಾಕ್ಮಾನ್, ಟೇಪ್ ರೆಕಾರ್ಡರ್‌ನ ಸೆಲ್ ಸಿಕ್ಕರೆ ಅದೇನೋ ಕುತೂಹಲ; ಅದನ್ನು ಆಟಿಕೆಯಾಗಿ ಉಪಯೋಗಿಸಿಯೇ ಕಸದಬುಟ್ಟಿ ಸೇರಿಸುತ್ತಿದ್ದದ್ದು. ಕೆಲವರಂತೂ ಕಲ್ಲಿನಲ್ಲಿ ಜಜ್ಜಿ ನಜ್ಜುಗುಜ್ಜಾಗಿಸದ ಹೊರತು ಎಸೆಯುತ್ತಿರಲಿಲ್ಲ. ಪಟಾಕಿಯೊಳಗಿನ ರಾಸಾಯನಿಕದಂತೆ ಬ್ಯಾಟರಿಗಳೊಳಗಿನ ವಸ್ತುವಿನ ಬಗ್ಗೆಯೂ ತಿಳಿದುಕೊಳ್ಳುವ ಯೋಜನೆ ಮಕ್ಕಳದ್ದು. ಆದರೆ ಹೆಚ್ಚಿನವರಿಗೆ ತಿಳಿಯದ ವಿಷಯವೆಂದರೆ ಅದರಿಂದಾಗುವ ಅಪಾಯ.

ಯಾವುದೇ ಬಗೆಯ ಸೆಲ್ ಆಗಿರಲಿ, ವಿದ್ಯುತ್-ವಿದ್ಯುನ್ಮಾನ ಉಪಕರಣಗಳ ಭಾಗವಾಗಿರಲಿ, ಅದು ಖಂಡಿತ ಆಟಿಕೆಯಲ್ಲ. ಅವುಗಳಲ್ಲಿ ಅವುಗಳ ಕಾರ್ಯಕ್ಷಮತೆ ಹೆಚ್ಚಿಸಲು ಬಳಸಲಾಗಿರುವ ಕ್ಯಾಡ್ಮಿಯಂ, ಮರ್ಕ್ಯುರಿ, ಸೀಸದಂತಹ ಭಾರದ ಲೋಹಗಳಿರುತ್ತವೆ; ಜೊತೆಗೆ ಅನೇಕ ಅಪಾಯಕಾರಿ ರಾಸಾಯನಿಕಗಳಿರುತ್ತವೆ. ಇವೆಲ್ಲಾ ನಮ್ಮ ಅವಿವೇಕತನದಿಂದ ಭೂಮಿಯ, ನೀರಿನ, ಗಾಳಿಯ ಪಾಲಾಗಿ ನಮ್ಮನ್ನೇ, ನಮ್ಮ ಮುಂದಿನ ಜನಾಂಗವನ್ನೇ ಕಾಡುತ್ತವೆ ಎಂಬುದು ಕಹಿಸತ್ಯ. ಇಂತಹದ್ದೇ ವಿಷಕಾರಿ ಅಂಶಗಳು ನಮ್ಮ ಲ್ಯಾಪ್‌ಟಾಪ್, ಫೋನುಗಳು, ಸ್ಮಾರ್ಟ್‌ವಾಚ್‌ಗಳ ಭಾಗ ಕೂಡ. ಸರಿಯಾಗಿ ವಿಲೇವಾರಿ ಮಾಡದಿದ್ದರೆ ಅದರಿಂದ ಅಪಾಯ ಕಟ್ಟಿಟ್ಟ ಬುತ್ತಿ. ಇದನ್ನು ತಪ್ಪಿಸುವ ಸಲುವಾಗಿಯೇ ಹೊಸ ಬಗೆಯ ಸ್ಮಾರ್ಟ್‌ವಾಚ್ ಒಂದು ಬರಲಿದೆ. ಇದು ನೀರಿನಲ್ಲಿ ಕರಗುವ ಸ್ಮಾರ್ಟ್‌ವಾಚ್!

> ಅಭಿವೃದ್ಧಿಯ ಹೆಸರಿನಲ್ಲಿ ಬರುವ ತಂತ್ರಜ್ಞಾನಗಳು ಪರಿಸರಕ್ಕೆ ಹಾನಿಕಾರಕ ಎಂದೆನಿಸಿರುವ ಕಾಲದಲ್ಲಿ ಅದಕ್ಕೆ ವ್ಯತಿರಿಕ್ತವಾದ ಈ ಸಂಶೋಧನೆ ಒಂದು ಮೈಲಿಗಲ್ಲು ಎನ್ನಬಹುದು.

ವಾಟರ್ ಪ್ರೂಫ್ ವಸ್ತುಗಳು ಬೇಕೆನ್ನುವ ಕಾಲದಲ್ಲಿ 'ನೀರಲ್ಲಿ ಕರಗೋದು ಯಾಕೆ' ಎಂದು ಹುಬ್ಬೇರಿಸಬೇಡಿ. ತಕ್ಕಮಟ್ಟಿಗೆ ವಾಟರ್ ಪ್ರೂಫ್, ಜೊತೆಗೆ ಪರಿಸರಸ್ನೇಹಿ ಸ್ಮಾರ್ಟ್‌ವಾಚ್ ಅನ್ನು ತಯಾರಿಸಬಹುದು ಎಂದು ಸಾಬೀತು ಪಡಿಸಿದ್ದಾರೆ, ಚೀನಾದ ಟಿಯಾನ್ಜಿನ್ ವಿಶ್ವವಿದ್ಯಾಲಯದ ಸಂಶೋಧಕರು. ಅಭಿವೃದ್ಧಿಯ ಹೆಸರಿನಲ್ಲಿ ಬರುವ ತಂತ್ರಜ್ಞಾನಗಳು ಪರಿಸರಕ್ಕೆ ಹಾನಿಕಾರಕ ಎಂದೆನಿಸಿರುವ ಕಾಲದಲ್ಲಿ ಅದಕ್ಕೆ ವ್ಯತಿರಿಕ್ತವಾದ ಈ ಸಂಶೋಧನೆ ಒಂದು ಮೈಲಿಗಲ್ಲು ಎನ್ನಬಹುದು.

ಸಂಶೋಧಕರ ತಂಡವು ಝಿಂಕ್ ಲೋಹವನ್ನು ಆಧರಿಸಿ ಒಂದು ಸಂಕೀರ್ಣ ಪದಾರ್ಥ ಸೃಷ್ಟಿಸಿದ್ದರು. ಅದು ಸಂಪೂರ್ಣವಾಗಿ ಪರಿಸರಸ್ನೇಹಿಯಾಗಿದ್ದು, ಮಣ್ಣಿನಲ್ಲಿ ಮಣ್ಣಾಗುವ ಪದಾರ್ಥ. ಅದನ್ನು ಬಳಸಿ ಸ್ಮಾರ್ಟ್‌ವಾಚ್ ತಯಾರಿಸುವಾಗ ಅದರ ವಿದ್ಯುದ್ವಾಹಕತೆಯಲ್ಲಿ ಸಮಸ್ಯೆ ಕಂಡುಬಂತು. ಆಗ, ನ್ಯಾನೋ ತಂತ್ರಜ್ಞಾನದ ಮೊರೆ ಹೊಕ್ಕ ವಿಜ್ಞಾನಿಗಳು, ಬೆಳ್ಳಿಯ ನ್ಯಾನೋ-ತಂತಿಗಳನ್ನು ಬಳಸಿ ಸರ್ಕ್ಯೂಟ್ ತಯಾರಿಸಿ ಈ ಸಮಸ್ಯೆಗೆ ಉತ್ತರ ಕಂಡುಕೊಂಡು, ಒಂದು ಹಂತಕ್ಕೆ ಗೆದ್ದರು. ನಂತರದ ಹಂತವೇ ಇದಿಷ್ಟನ್ನೂ ಜೈವಿಕವಾಗಿ ವಿಘಟನೆಯಾಗಬಲ್ಲ ಹೊರಕವಚದೊಳಗೆ ಸೇರಿಸುವುದು. ಸಾಮಾನ್ಯವಾಗಿ ನಾವೆಲ್ಲಾ ಬಳಸುವ ಸ್ಮಾರ್ಟ್‌ವಾಚ್‌ಗಳು ಪ್ಲಾಸ್ಟಿಕ್ ಅಂಶಗಳನ್ನೇ ಪ್ರಮುಖವಾಗಿ ಹೊಂದಿರುತ್ತವೆ. ಅದರ ಬದಲಿಗೆ ಇಲ್ಲಿ ಬಳಸಲಾದ ಸಂಯುಕ್ತ ಪದಾರ್ಥವೇ ಪಾಲಿ-ವಿನೈಲ್ ಆಲ್ಕೋಹಾಲ್. ಇದು ಕೃತಕವಾಗಿ ರಾಸಾಯನಿಕ ಪ್ರಕ್ರಿಯೆಗಳ ಮೂಲಕ ತಯಾರಿಸಲಾಗಿದ್ದರೂ, ನೈಸರ್ಗಿಕ ಸಂಯುಕ್ತ ಪದಾರ್ಥಗಳಂತೆ ನಿರುಪದ್ರವಿ. ಇಂಗಾಲ, ಜಲಜನಕ, ಆಮ್ಲಜನಕಗಳ ಮೊತ್ತವಾಗಿ ಇದು ತಯಾರಾಗಿದ್ದು, ಎಣ್ಣೆ, ಗ್ರೀಸ್‌ನಂತಹ ದ್ರವಗಳಲ್ಲಿ ಕರಗದು. ನೀರಿನಲ್ಲಿ ಮಾತ್ರ ಕರಗಬಲ್ಲ ಈ ಪಾಲಿ-ವಿನೈಲ್ ಆಲ್ಕೋಹಾಲ್ ನಮ್ಮ ಸಂಶೋಧಕರಿಗೆ ಪ್ಲಾಸ್ಟಿಕ್‌ನ ಬದಲಿಗೆ ಬಳಸಬಹುದಾದ ಪದಾರ್ಥವಾಗಿ ದೊರೆಯಿತು. ಅವರು ತಯಾರಿಸಿದ ಬೆಳ್ಳಿಯ ನ್ಯಾನೋ-ತಂತಿಗಳ ವಿದ್ಯುನ್ಮಾನ ಸರ್ಕ್ಯೂಟ್ ಅನ್ನು ಈ ಬಳಕುವ ಎಲಾಸ್ಟಿಕ್‌ನಂತಹ ವಸ್ತುವಿನಲ್ಲಿ ಅಳವಡಿಸಿ, ಸ್ಮಾರ್ಟ್ ವಾಚ್‌ನ ರೂಪ ನೀಡಿದರು.

ಹೀಗೆ ಸ್ಮಾರ್ಟ್‌ವಾಚ್‌ನ ಹೊರಕವಚವಾದ ಪಾಲಿ-ವಿನೈಲ್ ಆಲ್ಕೊಹಾಲ್, ನೀರಿನ ಹನಿ ಬಿದ್ದ ತಕ್ಷಣ ಕರಗಿಬಿಡದು. ನಾವೀಗ ಹೇಗೆ ಮಳೆಯಲ್ಲಿ ನೆನೆದಾಗಲೂ, ಗಿಡಕ್ಕೆ ನೀರುಣಿಸುವಾಗಲೂ, ಪಾತ್ರೆ ತೊಳೆವಾಗಲೂ, ಬೆವರು ಹರಿಸುತ್ತಾ ವ್ಯಾಯಾಮ ಮಾಡುವಾಗಲೂ ಸ್ಮಾರ್ಟ್‌ವಾಚ್ ಧರಿಸಿರುತ್ತೇವೆಯಲ್ಲ? ಹಾಗೆಯೇ ಈ ಹೊಸ 'ನೀರಿನಲ್ಲಿ ಕರಗಬಲ್ಲ ಸ್ಮಾರ್ಟ್‌ವಾಚ್' ಅನ್ನೂ ಧರಿಸಬಹುದು; ಏಕೆಂದರೆ ಕೆಲವೇ ಹನಿಗಳು ಇದರ ಮೇಲೆ ಬಿದ್ದಾಕ್ಷಣ, ಘಂಟೆ ಹೊಡೆದಾಗ ಸಿಂಡರೆಲ್ಲಾಳ ಚಪ್ಪಲಿ, ಚೆಂದದ ಗೌನು, ಅಲಂಕಾರ ಮಾಯವಾದಂತೆ ನಿಮ್ಮ ವಾಚೇನೂ ಮಾಯವಾಗಿಬಿಡದು. ನಲವತ್ತು ಗಂಟೆಗಳ ಕಾಲ ನೀರಿನಲ್ಲಿ ನೆನೆಸಿಟ್ಟಾಗ ಮಾತ್ರ ಈ ಕರಗಬಲ್ಲ ವಾಚ್‌ನ ಬಹುಪಾಲು ಭಾಗಗಳು ಕಾಣದಂತೆ ಮಾಯವಾಗಿಬಿಡುತ್ತವೆ. ಕೊನೆಗೆ ಉಳಿಯುವುದು ಕೇವಲ ಓಎಲ್‌ಇಡಿ ಫಲಕ ಮತ್ತು ಮೈಕ್ರೋನಿಯಂತ್ರಕಗಳು ಮಾತ್ರ. ಅವುಗಳನ್ನು ಮರುಬಳಕೆ ಮಾಡಬಹುದು ಕೂಡ.

ಹೀಗೆ ವಾಚ್‌ನ ಭಾಗಗಳು ಕರಗಿರುವ ನೀರು ಕೂಡ ವಿಷಕಾರಿಯಲ್ಲ ಮತ್ತು ನಂತರ ಭೂಮಿಗೆ ಸೇರಿದರೂ ಅಪಾಯಕಾರಿಯಲ್ಲ. ಮಾರುಕಟ್ಟೆಯಲ್ಲಿ ಈಗಾಗಲೇ ಲಭ್ಯವಿರುವ ಇತರ ಫಿಟ್ನೆಸ್ ಬ್ಯಾಂಡ್‌ಗಳು ಮತ್ತು ಸ್ಮಾರ್ಟ್‌ವಾಚ್‌ಗಳಂತೆ ಮೆಸೇಜ್‌ಗಳು, ಕರೆಗಳು ಬಂದಾಗ ನೋಟಿಫಿಕೇಶನ್ ನೀಡುವುದು, ಹೃದಯದ ಬಡಿತ, ನಡಿಗೆಯ ಹೆಜ್ಜೆಗಳಂತಹ ಮಾಹಿತಿಯನ್ನು ಕಂಡುಕೊಂಡು ಪ್ರದರ್ಶಿಸುವುದು – ಎಲ್ಲವುದನ್ನು ಸಮರ್ಥವಾಗಿ ಮಾಡುತ್ತದೆ ಈ ಹೊಸ ಪರಿಸರಸ್ನೇಹಿ ಸ್ಮಾರ್ಟ್‌ವಾಚ್.

ಇನ್ನೂ ಕೊಂಚ ಸಮಯದ ನಂತರ ಮಾರುಕಟ್ಟೆಯಲ್ಲಿ ಲಭ್ಯವಾಗುವ ಈ ನವನವೀನ ತಂತ್ರಜ್ಞಾನವು, ಈಗಾಗಲೇ ಅಂತರಿಕ್ಷದಲ್ಲಿ, ಮಣ್ಣಿನಲ್ಲಿ, ನೀರಿನಲ್ಲಿ, ಗಾಳಿಯಲ್ಲಿ ಸೇರಿರುವ ಇ-ತ್ಯಾಜ್ಯಕ್ಕೆ ನಮ್ಮ ಕೊಡುಗೆಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆಮಾಡುವುದು ಎಂಬುದು ಪಸ್ತುತ ಸನ್ನಿವೇಶದಲ್ಲಿ ಅತ್ಯಂತ ಮಹತ್ವಪೂರ್ಣ.

ಆಂಡ್ರಾಯ್ಡ್ ಫೋನ್‌ಗಳ 'ಸ್ಮಾರ್ಟ್'ಗಳು

ಅವಿನಾಶ್ ಬಿ.

ಸಾಮಾನ್ಯ ದೂರವಾಣಿಗಳ ಸ್ಥಾನದಲ್ಲಿ ಬೇಸಿಕ್ ಫೋನ್, ಫೀಚರ್ ಫೋನ್ ಬಳಿಕ ಸ್ಮಾರ್ಟ್ ಫೋನ್‌ಗಳು ಬಂದು ಕಾಲವೆಷ್ಟೋ ಆಯಿತು. ಆದರೆ, ಈ ಫೋನ್‌ಗಳಲ್ಲಿರುವ ಸ್ಮಾರ್ಟ್ ವೈಶಿಷ್ಟ್ಯಗಳ ಬಗ್ಗೆ ಬಹುತೇಕರಿಗೆ ಇನ್ನೂ ಅರಿವಿಲ್ಲ. ಈಗಿನ ಆಂಡ್ರಾಯ್ಡ್ 11 ಕಾರ್ಯಾಚರಣಾ ವ್ಯವಸ್ಥೆಯಿರುವ ಅತ್ಯಾಧುನಿಕ ಸ್ಮಾರ್ಟ್‌ಫೋನ್‌ಗಳಲ್ಲಿ ಇರುವ ಕೆಲವೊಂದು ಉಪಯುಕ್ತ 'ಸ್ಮಾರ್ಟ್' ವೈಶಿಷ್ಟ್ಯಗಳನ್ನು ತಿಳಿಯೋಣ.

ಸದ್ಯಕ್ಕೆ ಹೊಸ ಫೋನ್‌ಗಳಲ್ಲಿ ಅಗತ್ಯ ಎಂದು ಪರಿಗಣಿಸಬಹುದಾದ ಅಂಶಗಳೆಂದರೆ ಕನಿಷ್ಠ 4 ಜಿಬಿ RAM, ಕನಿಷ್ಠ 64 GB ಸ್ಟೋರೇಜ್ ಸಾಮರ್ಥ್ಯ, ಒಳ್ಳೆಯ ಕ್ಯಾಮೆರಾ, ಉತ್ತಮ ಪ್ರೊಸೆಸರ್ ಮತ್ತು ಸ್ಕ್ರೀನ್ ಅನ್‌ಲಾಕ್ ಮಾಡಲು ಇರುವ ಫಿಂಗರ್‌ಪ್ರಿಂಟ್ ಸ್ಕ್ಯಾನರ್ ಅಥವಾ ಮುಖ ಗುರುತಿಸುವ (ಫೇಸ್ ಅನ್‌ಲಾಕ್) ಸಾಮರ್ಥ್ಯ.

ಈ ಮೂಲಭೂತ ಆಧುನಿಕ ವೈಶಿಷ್ಟ್ಯಗಳೊಂದಿಗೆ ಮೊಬೈಲ್ ಫೋನ್ ತಯಾರಿಕಾ ಸಂಸ್ಥೆಗಳು ಗೂಗಲ್‌ನ ಆಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ (ಒಎಸ್) ಯನ್ನು ಒಂದಿಷ್ಟು ಬದಲಾಯಿಸಿ, ಕೆಲವೊಂದು ಉಪಯುಕ್ತ ಅತ್ಯಾಧುನಿಕ ವೈಶಿಷ್ಟ್ಯಗಳನ್ನು ಸೇರಿಸುತ್ತವೆ. ಇವುಗಳನ್ನು ನಾವು ಎನೇಬಲ್ ಮಾಡಿಕೊಳ್ಳಬೇಕಷ್ಟೆ. ಅವುಗಳನ್ನು ಸೆಟ್ಟಿಂಗ್ಸ್ ಆ್ಯಪ್‌ನಲ್ಲಿ ಹುಡುಕಬೇಕಾಗುತ್ತದೆ.

ಸೆಟ್ಟಿಂಗ್ಸ್‌ನಲ್ಲಿ ಮೊಬೈಲ್ ತಯಾರಿಕ ಸಂಸ್ಥೆಗಳು ವಿಭಿನ್ನ ಹೆಸರುಗಳನ್ನು ನೀಡಿರುತ್ತವೆ. Gestures ಅಥವಾ Smart features ಇಲ್ಲವೇ Intelligent, Advanced features ... ಹೀಗೆ ಬೇರೆ ಬೇರೆ ಮೊಬೈಲ್ ಫೋನ್‌ಗಳಲ್ಲಿ ಭಿನ್ನ ಭಿನ್ನ ಹೆಸರುಗಳಿರಬಹುದು. ಸಾಮಾನ್ಯವಾಗಿ ಇತ್ತೀಚಿನ ಸ್ಯಾಮ್‌ಸಂಗ್ ಫೋನ್‌ಗಳಲ್ಲಿ Advanced Features ಹೆಸರಿನಲ್ಲಿ, ಒನ್‌ಪ್ಲಸ್ ಫೋನ್‌ಗಳಲ್ಲಿ Buttons & Gestures, ಮೇಡ್ ಇನ್ ಇಂಡಿಯಾದ ಮೈಕ್ರೋಮ್ಯಾಕ್ಸ್ ಫೋನ್‌ಗಳಲ್ಲಿ Intelligent Assistance ಅಂತ ಹೆಸರುಗಳಿರುತ್ತವೆ. ಅಲ್ಲಿ ನೋಡಿದಾಗ ನಮಗೆ ಈ ಅತ್ಯಾಧುನಿಕ ವೈಶಿಷ್ಟ್ಯಗಳು ಗೋಚರಿಸುತ್ತವೆ. ಅವುಗಳಲ್ಲಿ ಉಪಯುಕ್ತವಾದ ಕೆಲವು ಇಲ್ಲಿದ್ದು, ಅವುಗಳೆದುರು ಇರುವ ಬಟನ್ ಆನ್ ಮಾಡಿದರಾಯಿತು.

ಗೂಗಲ್ ಅಸಿಸ್ಟೆಂಟ್ ಎಂಬ ಧ್ವನಿ ಸಹಾಯಕ ವೈಶಿಷ್ಟ್ಯವು ಹೆಚ್ಚಿನ ಫೋನ್‌ಗಳ ಹೋಂ ಬಟನ್ ಒತ್ತಿ ಹಿಡಿದಾಗ ಸಕ್ರಿಯಗೊಳ್ಳುತ್ತದೆ. ಅದನ್ನು ಎನೇಬಲ್ ಮಾಡಿದರೆ, ನಾವು ಹೇಳಿದ್ದನ್ನು ಅದು ಹುಡುಕಿ ತೋರಿಸುತ್ತದೆ.

ಸೆಟ್ಟಿಂಗ್ಸ್‌ನಲ್ಲಿ ನಾವೇ ಆನ್/ಆಫ್ ಮಾಡಿಕೊಳ್ಳಬಹುದಾದ ಮತ್ತಷ್ಟು ವೈಶಿಷ್ಟ್ಯಗಳು:

- ಟೇಬಲ್‌ನಲ್ಲಿದ್ದ ಫೋನ್ ಎತ್ತಿಕೊಂಡ ತಕ್ಷಣ ಸ್ಕ್ರೀನ್ ಆನ್ ಆಗುವಂತೆ (ಪ್ರತ್ಯೇಕವಾಗಿ ಪವರ್ ಬಟನ್ ಒತ್ತಬೇಕಾಗಿಲ್ಲ) ಹೊಂದಿಸಬಹುದು.
- ಡಿಸ್‌ಪ್ಲೇ ಆನ್ ಅಥವಾ ಆಫ್ ಮಾಡಲು ಸ್ಕ್ರೀನ್ ಮೇಲೆ ಎರಡು ಬಾರಿ ತಟ್ಟಿದರೆ ಸಾಕಾಗುತ್ತದೆ.
- ದೊಡ್ಡ ಲೇಖನ ಓದುತ್ತಿರುವಾಗ, ಸ್ಕ್ರೀನ್ ಸದಾ ಆನ್ ಆಗಿರುವಂತೆ (ಸ್ಲೀಪ್ ಮೋಡ್‌ಗೆ ಹೋಗದಂತೆ) ಹೊಂದಿಸಬಹುದು.
- ಮಿಸ್ ಕಾಲ್ ಅಥವಾ ಸಂದೇಶ ಇದೆಯೆಂದಾದರೆ, ಫೋನ್ ಎತ್ತಿಕೊಂಡಾಗಲೇ ವೈಬ್ರೇಟ್ ಆಗುವಂತೆ ಹೊಂದಿಸಬಹುದು.
- ಸ್ಕ್ರೀನ್ ಮೇಲೆ ನಿಮ್ಮ ಹಸ್ತ ಆಡಿಸಿದರೆ ಒಳಕರೆಗಳ ಸಂದರ್ಭದ ರಿಂಗಿಂಗ್ ಟೋನ್ ಅಥವಾ ಅಲಾರಂ ಮ್ಯೂಟ್ ಮಾಡಬಹುದು.
- ಮೂರು ಬೆರಳಿನಿಂದ ಮೇಲಿಂದ ಕೆಳಕ್ಕೆ ಸ್ವೈಪ್ ಮಾಡಿದರೆ ಸ್ಕ್ರೀನ್ ಶಾಟ್ ತೆಗೆಯಬಹುದು.
- ಒಳಬರುವ ಕರೆ ಸಂದರ್ಭದಲ್ಲಿ ಫೋನ್ ಕವುಚಿ ಇಟ್ಟರೆ ರಿಂಗಿಂಗ್ ಟೋನ್ ಸದ್ದು ಮ್ಯೂಟ್ ಆಗುವಂತೆ ಹೊಂದಿಸಬಹುದು.
- ಕರೆ ಬಂದಾಗ, ಫೋನ್ ಎತ್ತಿಕೊಂಡು ಕಿವಿಯ ಬಳಿ ಇರಿಸಿದರೆ ಸಾಕು, 'Answer' ಬಟನ್ ಒತ್ತದೆಯೇ ಕರೆಗೆ ಉತ್ತರಿಸಬಹುದು.



ಆಂಡ್ರಾಯ್ಡ್ ಫೋನ್‌ನ ಸ್ಮಾರ್ಟ್ ವೈಶಿಷ್ಟ್ಯಗಳು

- ಪವರ್ ಬಟನ್ ಒತ್ತಿದರೆ ನೇರವಾಗಿ ಕ್ಯಾಮೆರಾ ಆನ್ ಆಗುವಂತೆ ಹೊಂದಿಸುವುದು.
- ಫಿಂಗರ್‌ಪ್ರಿಂಟ್ ಸ್ಕ್ಯಾನರ್ ಅನ್ನು ಫೋಟೋ ತೆಗೆಯುವಂತೆ ಅಥವಾ ಸ್ಕ್ರೀನ್ ಶಾಟ್ ತೆಗೆಯಲು ಅಥವಾ ಹೋಂ ಸ್ಕ್ರೀನ್‌ಗೆ ಮರಳಲು ಹೊಂದಿಸಬಹುದು.
- ಕರೆ ಬಂದಾಗ, ಫೋನ್ ಎತ್ತಿಕೊಂಡಾಕ್ಷಣ ರಿಂಗಿಂಗ್ ಧ್ವನಿಯ ವಾಲ್ಯೂಮ್ ಕಡಿಮೆ ಅಥವಾ ನಿಶ್ಶಬ್ದವಾಗುವಂತೆ ಹೊಂದಿಸಬಹುದು.
- ಕರೆ ಬಂದಾಗ ಫ್ಲ್ಯಾಶ್ ಬೆಳಕು ಆನ್ ಆಗುವಂತೆ ಅಥವಾ ವೈಬ್ರೇಟ್ ಆಗುವಂತೆ ಹೊಂದಿಸಬಹುದು.
- ಕರೆ ನಿರಾಕರಿಸಲು ಪವರ್ ಬಟನ್ ಬಳಸುವುದು (ಕೆಲವು ಫೋನ್‌ಗಳಲ್ಲಿ ಇದು ಡೀಫಾಲ್ಟ್ ಆಗಿರುತ್ತದೆ).

ಗಮನಿಸಬೇಕಾದ ವಿಚಾರವೆಂದರೆ, ಮೇಲಿನೆಲ್ಲ ವೈಶಿಷ್ಟ್ಯಗಳು ಎಲ್ಲ ಆಂಡ್ರಾಯ್ಡ್ ಫೋನ್‌ಗಳಲ್ಲಿ ಇರಲೇಬೇಕೆಂದಿಲ್ಲ. ಕೆಲವು ಬ್ರ್ಯಾಂಡ್‌ನ ಫೋನ್‌ಗಳಲ್ಲಿ ಇವುಗಳಲ್ಲಿ ಹೆಚ್ಚಿನ ವೈಶಿಷ್ಟ್ಯಗಳಿರುತ್ತವೆ, ಕೆಲವು ಇಲ್ಲದಿರಲೂಬಹುದು.

ಸಿಇಟಿ ದಿಕ್ಸೂಚಿ

Chemistry - Thermodynamics & Equilibrium-3

1. Silver iodide is used for producing artificial rain because AgI
   (1) is easy to spray at high altitude
   (2) is easy of synthesize
   (3) has crystal structure similar to ice
   (4) is insoluble in water

2. The equilibrium constant of a reaction is 0.008 at 298 K. The standard free energy change of the reaction at the same temperature is
   (1) +11.96 kJ (2) -11.96 kJ
   (3) -5.43 kJ (4) -8.45 kJ

3. Which of the following statements is TRUE?
   (1) The total entropy of the universe remains constant
   (2) The total entropy of the universe is continuously decreasing
   (3) The total energy of the universe is continuously decreasing
   (4) The total energy of the universe remains constant

4. A gas expands from a volume of 1 m^3 to a volume of 2 m^3 against an external pressure of 10^5 Nm^{-2}. The work done by the gas will be
   (1) 10^5 kJ (2) 10^2 kJ
   (3) 10^2 J (4) 10^3 J

5. The relationship between K_p and K_c is $K_p = K_c(RT)^{\Delta n}$. What would be the value of Δn for the reaction $NH_4Cl(s) \rightleftharpoons NH_3(g) + HCl(g)$?
   (1) 1 (2) 0.5
   (3) 1.5 (4) 2

6. Acidity of BF_3 can be explained on which of the following concepts?
   (1) Arrhenius concept
   (2) Bronsted-Lowry concept
   (3) Lewis concept
   (4) Bronsted-Lowry as well as Lewis concept

7. Consider the following gaseous equilibria with equilibrium constants K_1 and K_2 respectively,
   $SO_2(g) + \frac{1}{2}O_2(g) \rightleftharpoons SO_3(g)$
   $2SO_3(g) \rightleftharpoons 2SO_2(g) + O_2(g)$
   The equilibrium constants are related as
   (1) $2K_1 = K_2^2$ (2) $K_1^2 = \frac{1}{K_2}$
   (3) $K_2^2 = \frac{1}{K_1}$ (4) $K_2 = \frac{2}{K_1^2}$

8. pH value of which one of the following is not equal to one?
   (1) $0.1\,M\ CH_3COOH$
   (2) $0.1\,M\ HNO_3$
   (3) $0.05\,M\ H_2SO_4$
   (4) $50cm^3\ 0.4M\ HCl + 50cm^3\ 0.2M\ NaOH$

9. A buffer solution contains 0.1 mole of sodium acetate dissolved in 1000 cm^3 of 0.1 M acetic acid. To the above buffer solution, 0.1 mole of sodium acetate is further added and dissolved. The pH of the resulting buffer is
   (1) pK_a (2) $pK_a + 2$
   (3) $pK_a - \log 2$ (4) $pK_a + \log 2$

10. H_2S is passed into one dm^3 of a solution containing 0.1 mole of Zn^{2+} and 0.01 mole of Cu^{2+} till the sulphide ion concentration reaches to 8.1×10^{-19} moles. Which one of the following statements is true? [K_{sp} of ZnS and CuS are 3×10^{-22} and 8×10^{-36} respectively]
    (1) Only ZnS precipitates
    (2) Both CuS and ZnS precipitates
    (3) Only CuS precipitates
    (4) No precipitation occurs

11. 0.023 g of sodium metal is reacted with 100 cm^3 of water. The pH of the resulting solution is
    (1) 10 (2) 8
    (3) 9 (4) 12

12. For the equilibrium: $CaCO_{3(s)} \rightleftharpoons CaO_{(s)} + CO_{2(g)}; K_P = 1.64$ atm at 1000 K 50 g of $CaCO_3$ in a 10 litre closed vessel is heated to 1000 K. Percentage of $CaCO_3$ that remains unreacted at equilibrium is (Given R = 0.082 L atm K^{-1} $mol^{-(1)}$
    (1) 50 (2) 20
    (2) 40 (4) 60

13. One mole of ammonia was completely absorbed in one litre solution each of
    (a) 1M HCl (b) 1M CH_3COOH
    (c) 1M H_2SO_4 at 298 K. The decreasing order for the pH of the resulting solution is (Given $K_b(NH_3) = 4.74$)
    (1) a > b > c (2) c > b > a
    (3) b > c > a (4) b > a > c

14. The yield of the products in the reaction, $A_{2(g)} + 2B_{(g)} \rightleftharpoons C_{(g)} + Q.kJ$ would be higher at
    (1) High temperature and high pressure
    (2) High temperature and low pressure
    (3) Low temperature and high pressure
    (4) Low temperature and low pressure

15. An example for a neutral buffer is
    (1) Ammonium hydroxide and Ammonium chloride
    (2) Acetic acid and Sodium acetate
    (3) Acetic acid and Ammonium hydroxide
    (4) Citric acid and Sodium citrate

ANSWERS

1. Answer (3)
   Silver iodide is used for producing artificial rain because AgI

2. Answer (1)
   Solution : $\Delta G^0 = -2.303RT\log K$
   $\Delta G^0 = -2.303 \times 8.314 \times 218 \log(0.008)$
   $\Delta G^0 = 11964.65J$ or 11.96 kJ.

3. Answer (4)
   Solution :The total energy of the universe remains constant

4. Answer (2)
   Solution : work done $\omega = P\Delta V$
   $= P \times (V_2 - V_1)$
   $10^5 \times (2-1) \Rightarrow 10^5 J$ or 10^2 kJ

5. Answer (4)
   Solution:
   $NH_4Cl_{(s)} \rightleftharpoons NH_{3(g)} + HCl_{(g)}$
   $\Delta n_g = (1+1) - 0 = 2$

6. Answer (3)
   Solution: BF_3 is a Lewis acid because it is lone pair acceptor

7. Answer (2)
   Solution:
   $SO_2(g) + \frac{1}{2}O_2(g) \rightleftharpoons SO_3(g) ....(i) K_1$
   $2SO_3 \rightleftharpoons 2SO_2(g) + O_2(g) ....(ii) K_2$
   $K_1^2 = \frac{1}{K_2}$

8. Answer (1)
   Solution: $0.1\,M\ CH_3COOH$ is not comple[tely] dissociated. Therefore, pH will not be one

9. Answer (4)
   Solution:
   $pH = pK_a + \log\frac{[Salt]}{[Acid]}$
   $\therefore pH = pK_a + \log\frac{[0.2]}{[0.1]}$
   $pH = pK_a + \log 2$

10. Answer (2)

11. Answer (4)
    Solution:
    $\underset{\substack{(2\times23=46)\\0.023}}{2Na} + 2H_2O \rightarrow \underset{\substack{(2\times40=80)\\0.04}}{2NaOH} + H_2$
    $\therefore [OH^-] = \frac{0.04}{40} \times 10 = 10^{-2}$
    $pH = 14 - 2$
    $pH = 12$

12. Answer (4)
    Solution:
    $CaCO_3(s) \rightleftharpoons CaO(s) + CO_2(g)$; kP = 1.64 at
    k_P = P.P of $CO_2 = 1.64$
    $PV = nRT \Rightarrow n = \frac{PV}{RT} = \frac{1.64 \times 10}{0.0821 \times 1000}$
    $n = 0.2$
    Number of moles of CO_2 = 0.2
    i.e 0.2 moles of $CaCO_3$ is decomposed
    Initial moles of $CaCO_3 = \frac{50}{100}$ =0.5 mole
    The percentage of unreacted $CaCO_3$ = $\frac{0.3}{0.5} \times 100 = 60\%$

13. Answer (4)
    Solution: Acidic strength order is
    $H_2SO_4 > HCl > CH_3COOH$

14. Answer (3)
    Solution: At low temperature and at high pressure the position of equilibrium shift towards forward direction for exothermic reaction

15. Answer (3)
    Solution: Conceptual

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -39

516. 'ಆಗಸ್ಟ್ ಪ್ರಸ್ತಾವನೆ'ಯನ್ನು ಬ್ರಿಟಿಷರು ನೀಡಿದ ವರ್ಷ ಯಾವುದು?
ಎ) 1939 ಬಿ) 1940
ಸಿ) 1941 ಡಿ) 1942

517. ಐಹೊಳೆ ಮತ್ತು ಬಾದಾಮಿಯ ದೇವಸ್ಥಾನಗಳು ಯಾರ ಶಿಲ್ಪಕಲೆಗಳ ನಿರ್ಮಾಣವಾಗಿದೆ?
ಎ) ಚಾಲುಕ್ಯರು ಬಿ) ರಾಷ್ಟ್ರಕೂಟರು
ಸಿ) ಗಂಗರು ಡಿ) ಹೊಯ್ಸಳರು

518. ಎಲ್ಲಾ ಆಮ್ಲಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವಸ್ತು ಯಾವುದು?
ಎ) ಜಲಜನಕ
ಬಿ) ಇಂಗಾಲ
ಸಿ) ಗಂಧಕ
ಡಿ) ಆಮ್ಲಜನಕ

519. ಸೌರವ್ಯೂಹದಲ್ಲಿ ಅತಿ ಚಿಕ್ಕ ಗ್ರಹ ಯಾವುದು?
ಎ) ಯುರೇನಸ್
ಬಿ) ನೆಪ್ಚೂನ್
ಸಿ) ಬುಧ
ಡಿ) ಮಂಗಳ

520. ರೋಗಗಳ ಅಧ್ಯಯನವನ್ನು ಏನೆಂದು ಕರೆಯುತ್ತಾರೆ?
ಎ) ಪ್ಯಾಥಾಲಜಿ
ಬಿ) ನೆಫ್ರಾಲಾಜಿ
ಸಿ) ನ್ಯೂರಾಲಾಜಿ
ಡಿ) ಆಂಜಿಯಾಲಾಜಿ

521. 'ಮುರ್ರಾ' ಇದು ಯಾವ ಪ್ರಾಣಿಯ ತಳಿ?
ಎ) ಆಕಳು
ಬಿ) ಎಮ್ಮೆ
ಸಿ) ಕುರಿ
ಡಿ) ಆಡು

522. 'ಕಾದಂಬರಿ' ಕೃತಿಯ ಕರ್ತೃ ಯಾರು?
ಎ) ಚಾಣಕ್ಯ
ಬಿ) ಬಾಣಭಟ್ಟ
ಸಿ) ಚರಕ
ಡಿ) ಸುಶ್ರುತ

523. ರಾಷ್ಟ್ರಕೂಟ ರಾಜವಂಶದ ಮೂಲಪುರುಷ ಯಾರು?
ಎ) ದಂತಿದುರ್ಗ
ಬಿ) ಕೃಷ್ಣ-I
ಸಿ) ಇಂದ್ರ-II
ಡಿ) ಗೋವಿಂದ-I

524. ಅಣುಬಾಂಬ್ ಯಾವ ಸಿದ್ಧಾಂತವನ್ನು ಆಧರಿಸಿದೆ?
ಎ) ಪರಮಾಣು ಸಂಯೋಜನೆ
ಬಿ) ಪರಮಾಣು ವಿಭಜನೆ
ಸಿ) ವಿಕಿರಣಶೀಲತೆ
ಡಿ) ಮೇಲಿನ ಯಾವುದೂ ಅಲ್ಲ

525. ಕಿಣ್ವಗಳು ಏನಾಗಿವೆ?
ಎ) ಸಸಾರಜನಕಗಳು
ಬಿ) ಶರ್ಕರ– ಪಿಷ್ಟಗಳು
ಸಿ) ಕೊಬ್ಬುಗಳು
ಡಿ) ಮೇಲಿನ ಯಾವುದೂ ಅಲ್ಲ

526. ಬಿ.ಎಸ್.ಇ ವಿಸ್ತೃತ ರೂಪವೇನು?
ಎ) ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್
ಬಿ) ಬಿಗ್ ಸ್ಟಾಕ್ ಎಕ್ಸ್‌ಚೇಂಜ್
ಸಿ) ಬಿಲ್ಡರ್ಸ್ ಸ್ಟಾಕ್ ಎಕ್ಸ್‌ಚೇಂಜ್
ಡಿ) ಬ್ರಿಡ್ಜ್ ಸ್ಟಾಕ್ ಎಕ್ಸ್‌ಚೇಂಜ್

527. ಕೆಳಗಿನವುಗಳಲ್ಲಿ ಯಾವುದು ಭಾರತದಲ್ಲಿ ಸರಕು ಮಾರುಕಟ್ಟೆಗಳ ನಿಯಂತ್ರಕ?
ಎ) ಆರ್‌ಬಿಐ
ಬಿ) ಎಸ್‌ಇಬಿಐ
ಸಿ) ಎಸ್‌ಬಿಐ
ಡಿ) ಫಾರ್ವರ್ಡ್ ಮಾರ್ಕೆಟ್ ಕಮಿಷನ್

528. ಆದಾಯ ತೆರಿಗೆ ಒಂದು ______
ಎ) ಪರೋಕ್ಷ ತೆರಿಗೆ
ಬಿ) ನೇರ ತೆರಿಗೆ
ಸಿ) ಪ್ರತಿಗಮನ ತೆರಿಗೆ
ಡಿ) ಇವುಗಳಲ್ಲಿ ಯಾವುದೂ ಅಲ್ಲ

529. ಜಿಎನ್‌ಪಿ, ಅರ್ಥಶಾಸ್ತ್ರದಲ್ಲಿ ______ ಅನ್ನು ಸೂಚಿಸುತ್ತದೆ.
ಎ) ಗ್ರಾಸ್ ನಂಬರ್ ಪ್ರಾಡಕ್ಟ್
ಬಿ) ಗ್ರಾಸ್ ನ್ಯೂಟ್ರಲ್ ಪ್ರಾಡಕ್ಟ್
ಸಿ) ಗ್ರಾಸ್ ನ್ಯಾಷನಲ್ ಪ್ರಾಡಕ್ಟ್
ಡಿ) ಇವುಗಳಲ್ಲಿ ಯಾವುದೂ ಅಲ್ಲ

530. ಕರ್ನಾಟಕ ರಾಜ್ಯದ ಮೊದಲ ರಾಜ್ಯಪಾಲ ಯಾರು?
ಎ) ಜಯಚಾಮರಾಜೇಂದ್ರ ಒಡೆಯರ್
ಬಿ) ಎಸ್.ಎಮ್. ಶ್ರೀನಾಗೇಶ್
ಸಿ) ವಿ.ವಿ. ಗಿರಿ
ಡಿ) ಗುಂಡೂರಾವ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ- 38 ರ ಉತ್ತರ: 501. ಸಿ, 502. ಡಿ, 503. ಸಿ, 504. ಎ, 505. ಬಿ, 506. ಸಿ, 507. ಬಿ, 508. ಬಿ, 509. ಎ, 510. ಬಿ, 511. ಸಿ, 512. ಎ, 513. ಡಿ, 514. ಎ, 515. ಎ

ಸುಭಾಷಿತ

ಸತ್ಯವನ್ನು ನಿಭಾಯಿಸುವುದು ಮತ್ತು ಅದರೊಟ್ಟಿಗೆ ಬದುಕುವುದು ಸುಲಭ. ಸುಳ್ಳು ಹೇಳುವುದಕ್ಕಿಂತ ಅಥವಾ ನುಣುಚಿಕೊಳ್ಳುವುದಕ್ಕಿಂತಲೂ ಅದೊಂದು ಸುಲಭವಾದ ಮಾರ್ಗ.

-ಜೆ.ಕೆ.ರೋಲಿಂಗ್

ಒಬಿಸಿ ಪಟ್ಟಿ: ರಾಜ್ಯಗಳಿಗೆ ಅಧಿಕಾರ ಒಕ್ಕೂಟ ವ್ಯವಸ್ಥೆಯ ತತ್ವಕ್ಕೆ ಮಣೆ

ಇತರೆ ಹಿಂದುಳಿದ ವರ್ಗಗಳನ್ನು (ಒಬಿಸಿ) ಗುರುತಿಸುವ ಮತ್ತು ರಾಜ್ಯಕ್ಕೆ ಸೀಮಿತವಾಗಿ ಒಬಿಸಿ ಪ್ರತ್ಯೇಕ ಪಟ್ಟಿ ರೂಪಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಮತ್ತೆ ದೊರಕಿಸಿಕೊಡುವ ಉದ್ದೇಶದ ಸಂವಿಧಾನದ 127ನೇ ತಿದ್ದುಪಡಿ ಮಸೂದೆಯನ್ನು ಲೋಕಸಭೆ ಅನುಮೋದಿಸಿದೆ. ಈ ಮಸೂದೆಯನ್ನು ರಾಜ್ಯಸಭೆಯೂ ಅಂಗೀಕರಿಸಿ ಆ ಬಳಿಕ ರಾಷ್ಟ್ರಪತಿಗಳ ಅಂಕಿತ ಬಿದ್ದರೆ, ಮೂರು ವರ್ಷಗಳ ಹಿಂದೆ ರಾಜ್ಯ ಸರ್ಕಾರಗಳಿಂದ ಕಸಿದುಕೊಂಡಿದ್ದ ಸಾಂವಿಧಾನಿಕ ಹಕ್ಕೊಂದನ್ನು ಕೇಂದ್ರವು ರಾಜ್ಯಗಳಿಗೆ ಮರಳಿಸಿದಂತಾಗುತ್ತದೆ. 2018ರಲ್ಲಿ ಕೇಂದ್ರ ಸರ್ಕಾರವು ಸಂವಿಧಾನಕ್ಕೆ 102ನೇ ತಿದ್ದುಪಡಿಯನ್ನು ತಂದು ಕೆಲವು ಮಾರ್ಪಾಡುಗಳನ್ನು ಮಾಡಿತ್ತು. ಅದರ ಪರಿಣಾಮವಾಗಿ ಇತರೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರವು ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ ದಕ್ಕಿತು. ಈ ಆಯೋಗವು ಸಿದ್ಧಪಡಿಸಿದ ಇತರೆ ಹಿಂದುಳಿದ ವರ್ಗಗಳ ಪಟ್ಟಿಯು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುತ್ತಿತ್ತು. ಈಗ ಲೋಕಸಭೆ ಅನುಮೋದಿಸಿರುವ 127ನೇ ತಿದ್ದುಪಡಿಯು ಒಕ್ಕೂಟ ವ್ಯವಸ್ಥೆಯ ತತ್ವಗಳಿಗೆ ಸಂದ ಜಯವೂ ಹೌದು. ಕೇಂದ್ರ ಸರ್ಕಾರದ ಆಗಿನ ಕ್ರಮವನ್ನು ವಿರೋಧ ಪಕ್ಷಗಳು ಮಾತ್ರವಲ್ಲ, ಹಲವು ರಾಜ್ಯ ಸರ್ಕಾರಗಳೂ ವಿರೋಧಿಸಿದ್ದವು. ವಿರೋಧ ಪಕ್ಷಗಳು ಸಂಸತ್ತಿನಲ್ಲೂ ಪ್ರತಿಭಟನೆ ನಡೆಸಿದ್ದವು. ಮಹಾರಾಷ್ಟ್ರ ಸರ್ಕಾರವು ಮರಾಠಾ ಸಮುದಾಯಕ್ಕೆ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಕಲ್ಪಿಸಿದ್ದ ಮೀಸಲಾತಿ ಸೌಲಭ್ಯವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದಾಗ, ಸಂವಿಧಾನದ 102ನೇ ತಿದ್ದು- ಪಡಿಯನ್ನೇ ಆಧಾರವಾಗಿ ಪರಿಗಣಿಸಿತ್ತು. ಈ ತಿದ್ದುಪಡಿಯು ಇತರೆ ಹಿಂದುಳಿದ ವರ್ಗಗಳನ್ನು ಗುರುತಿಸುವ ವಿಷಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮಧ್ಯೆ ಹಲವು ಗೊಂದಲಗಳನ್ನೂ ಸೃಷ್ಟಿಸಿತ್ತು. ಈ ಗೊಂದಲಗಳನ್ನು ನಿವಾರಿಸುವ ದಿಸೆಯಲ್ಲಿ ಸಂವಿಧಾನದ 127ನೇ ತಿದ್ದುಪಡಿಯು ಮಹತ್ವದ್ದಾಗಿದ್ದು, ದೂರಗಾಮಿ ಪರಿಣಾಮವನ್ನೂ ಬೀರಲಿದೆ.



ರಾಜ್ಯ ಸರ್ಕಾರಗಳು ರಾಜಕೀಯ ಒತ್ತಡಗಳಿಗೆ ಒಳಗಾಗದೆ, ಹೆಚ್ಚು ಜವಾಬ್ದಾರಿಯಿಂದ ಮತ್ತು ವಿವೇಚನೆಯಿಂದ ಈ ಅಧಿಕಾರವನ್ನು ಬಳಸಬೇಕಿದೆ

ಇತರೆ ಹಿಂದುಳಿದ ವರ್ಗಗಳ ಪಟ್ಟಿ ವಿಚಾರದಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರ ಮರಳಿ ಸಿಕ್ಕಿದಾಕ್ಷಣ ರಾಜ್ಯ ಸರ್ಕಾರಗಳಿಗೆ ಮನಬಂದಂತೆ ತೀರ್ಮಾನ ಕೈಗೊಳ್ಳುವ ಅಧಿಕಾರ ದೊರೆಯಲಿದೆ ಎಂದು ಅರ್ಥವಲ್ಲ. ರಾಜಕೀಯ ಒತ್ತಡಗಳಿಗೆ ಒಳಗಾಗದೆ, ಹೆಚ್ಚು ಜವಾಬ್ದಾರಿಯಿಂದ ಮತ್ತು ವಿವೇಚನೆಯಿಂದ ಈ ಅಧಿಕಾರವನ್ನು ಬಳಸಬೇಕಿದೆ. ರಾಜ್ಯ ಸರ್ಕಾರಗಳು ಈಗಾಗಲೇ ಸಿದ್ಧಪಡಿಸಿರುವ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ವಿವಿಧ ವರ್ಗಗಳ ಮೀಸಲು ಪ್ರಮಾಣವನ್ನು ವ್ಯತ್ಯಾಸ ಮಾಡುವುದಿದ್ದರೂ ಅದಕ್ಕೆ ರಾಜ್ಯದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಯನ ಮತ್ತು ವರದಿಗಳೇ ಮುಖ್ಯ ಅಳತೆಗೋಲಾಗುತ್ತವೆ. ಕರ್ನಾಟಕದಲ್ಲಿ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಬದಲಾವಣೆಗಳನ್ನು ಕೋರಿ ಹಲವು ಸಮುದಾಯಗಳು ಈಗಾಗಲೇ ಬೇಡಿಕೆಗಳನ್ನು ಮಂಡಿಸಿವೆ. ತಮ್ಮ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ '2ಎ'ಗೆ ಸೇರಿಸಬೇಕೆಂದು ಲಿಂಗಾಯತ ಪಂಚಮಸಾಲಿ ಸಮುದಾಯವು ಬಲವಾದ ಆಗ್ರಹ ಮಂಡಿಸಿದೆ. ಇನ್ನೊಂದೆಡೆ, ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಕುರುಬ ಸಮುದಾಯವು ತಮ್ಮನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕೆಂದು ಬೇಡಿಕೆ ಮುಂದಿಟ್ಟಿದೆ. ಇನ್ನೂ ಹಲವು ಸಮುದಾಯಗಳು ಇಂತಹ ಬೇಡಿಕೆ ಮಂಡಿಸಿವೆ. ಈ ಬೇಡಿಕೆಗಳ ಸಹಿತ ಇತರ ಯಾವುದೇ ಬದಲಾವಣೆಗಳನ್ನು ರಾಜ್ಯ ಸರ್ಕಾರ ಮಾಡುವುದಿದ್ದರೂ ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ ಒಂಬತ್ತು ನ್ಯಾಯಮೂರ್ತಿಗಳ ಪೀಠವು ನೀಡಿದ ಒಟ್ಟು ಮೀಸಲು ಪ್ರಮಾಣವು ಶೇಕಡ 50 ಮೀರುವಂತಿಲ್ಲ ಎಂಬ ತೀರ್ಪನ್ನು ಅನುಸರಿಸಲೇಬೇಕಾಗುತ್ತದೆ. ಮಹಾರಾಷ್ಟ್ರ ಸರ್ಕಾರ ರೂಪಿಸಿದ್ದ ಮರಾಠಾ ಮೀಸಲು ನೀತಿಯನ್ನು ರದ್ದುಗೊಳಿಸಿದಾಗ ಸುಪ್ರೀಂ ಕೋರ್ಟಿನ ಐವರು ನ್ಯಾಯಮೂರ್ತಿಗಳ ಪೀಠವೂ ಶೇ 50ರ ಮಿತಿಯ ತತ್ವವನ್ನು ಎತ್ತಿಹಿಡಿದಿದೆ. ರಾಜ್ಯದಲ್ಲಿ ವಿವಿಧ ಸಮುದಾಯಗಳ ಮೀಸಲು ಬೇಡಿಕೆಗಳನ್ನು ಪರಿಗಣಿಸುವ ದಿಸೆಯಲ್ಲಿ ಕರ್ನಾಟಕ ಸರ್ಕಾರ ಒಟ್ಟು ಮೀಸಲು ಪ್ರಮಾಣವನ್ನು ಹೆಚ್ಚಿಸಲು ಪ್ರಯತ್ನಿಸುವುದಿದ್ದರೂ, ಹಾಗೆ ಮಾಡುವಾಗ ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆ ಬರದಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದರೆ, ಸಂವಿಧಾನದ 127ನೇ ತಿದ್ದುಪಡಿ ಮಸೂದೆಯು ರಾಜ್ಯ ಸರ್ಕಾರಕ್ಕೆ ಅಪರಿಮಿತ ಅಧಿಕಾರವನ್ನು ನೀಡಲಿದೆ ಎಂದು ಭಾವಿಸುವಂತಿಲ್ಲ. ಬದಲಾಗಿ, ಮೀಸಲಾತಿ ವರ್ಗೀಕರಣ ಮಾಡುವಾಗ ರಾಜ್ಯ ಸರ್ಕಾರದ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ ಎಂದೇ ಹೇಳಬೇಕಾಗುತ್ತದೆ.

ಒಕ್ಕೂಟ ನೀತಿಗೆ ವಿರುದ್ಧದ ನಡೆ, ಖಾಸಗೀಕರಣಕ್ಕೆ ಒತ್ತು ಕೊಡುವ ಒಳ ಆಶಯ

ಶಿಕ್ಷಣ ನೀತಿ: ಒಂದು ಚಿಂತನೆ



ವಿಶ್ಲೇಷಣೆ

ಎಸ್.ಜಿ.ಸಿದ್ಧರಾಮಯ್ಯ

ನಮ್ಮದು ಒಕ್ಕೂಟಗಳ ಭಾರತ, ಬಹುತ್ವ ಭಾರತ, ಬಹುಭಾಷಿಕ ಭಾರತ. ನಾವು ಯಾವ ಭಾಷೆಯನ್ನೂ ದ್ವೇಷಿಸುವುದಿಲ್ಲ. ಎಲ್ಲ ಭಾಷೆಗಳನ್ನೂ ಗೌರವಿಸುತ್ತೇವೆ. ಲಿಪಿಯಿರಲಿ ಅಥವಾ ಇಲ್ಲದಿರಲಿ ಎಲ್ಲ ಭಾಷೆಗಳಿಗೂ, ಆಯಾ ಭಾಷಾ ಸಮುದಾಯಗಳಿಗೂ ಗೌರವ ತೋರಬೇಕಾದುದು ನಮ್ಮ ಮೂಲಭೂತ ಕರ್ತವ್ಯ.

ಯಾವುದೇ ಭಾಷೆಯ ಆಕ್ರಮಣವನ್ನು, ಬಲವಂತದ ಹೇರುವಿಕೆಯನ್ನು ನಾವು ಸಹಿಸುವುದಿಲ್ಲ. ಯಾರೂ ಸಹಿಸಬೇಕಾದ ಅಗತ್ಯವಿಲ್ಲ. ಈ ಕಾರಣದಿಂದ ಹಿಂದಿ ಹೇರುವಿಕೆಯನ್ನು ನಾವು ವಿರೋಧಿಸುತ್ತೇವೆ. ಯಾರು ಎಷ್ಟೇ ಭಾಷೆಯನ್ನು ಕಲಿಯುವುದು ಅವರ ಇಚ್ಛಾಶಕ್ತಿಗೆ ಬಿಟ್ಟ ವಿಚಾರ. ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ವಲಸೆ ಅನಿವಾರ್ಯ. ಆದರೆ ವಲಸೆಯೆಂಬುದು ವೈಜ್ಞಾನಿಕವಾದ, ಆರೋಗ್ಯಕರವಾದ ಸಹಬಾಳ್ವೆಯ ತತ್ವವಾದರೆ ಒಪ್ಪೋಣ. ಸ್ಥಳೀಯರನ್ನು ಕಡೆಗಣಿಸಿದ ದಬ್ಬಾಳಿಕೆಯ ವಲಸೆಯಾದರೆ ಅದನ್ನು ವಿರೋಧಿಸಲೇಬೇಕಾಗುತ್ತದೆ. ಈ ಎಲ್ಲ ಹಿನ್ನೆಲೆಗಳ ಅರಿವಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಇಂದು ಅರ್ಥಮಾಡಿಕೊಳ್ಳುವ ಅಗತ್ಯವಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯ ಮುನ್ನೋಟದಲ್ಲಿ ಹೇಳಿರುವಂತೆ ಈ ನೀತಿಯು 'ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ನಮ್ಮ ಸಮಾಜವನ್ನು ಒಂದು ಸುಸ್ಥಿರ, ಸಮಾನ ಹಾಗೂ ಜೀವಂತಿಕೆಯುಳ್ಳ ಸಮಾಜವನ್ನಾಗಿ ಮಾರ್ಪಡಿಸಲು ಶ್ರಮಿಸುತ್ತದೆ'- ಈ ಉದ್ದೇಶ ಅದ್ಭುತವಾದುದು. ಸಮಾನತೆ, ಸಾಕ್ಷರತೆ, ಸುಸ್ಥಿರ ಬಾಳ್ವೆಯ ಕನಸು ಕಾಣುವ ನಾಗರಿಕನ ಆಶಯಗಳಿಗೆ ಅರ್ಥಪೂರ್ಣ ವಾತಾವರಣ ಕಲ್ಪಿಸುವ ಉದ್ದೇಶದ ಮುನ್ನೋಟ ಇದಾಗಿದೆ. ಹೆಚ್ಚು ವೈಜ್ಞಾನಿಕ, ವೈಚಾರಿಕ ಮುನ್ನೋಟದಿಂದ ರೂಪಿಸಲಾಗಿರುವ ನೀತಿಯ ಮುಖ್ಯಾಂಶದಂತೆ ಮೇಲ್ನೋಟಕ್ಕೆ ಭಾಸವಾಗುತ್ತದೆ. ಆದರೆ ಒಂದೊಂದನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ, ಪ್ರಾಯೋಗಿಕವಾಗಿ ಒಕ್ಕೂಟ ನೀತಿಗೆ ವಿರುದ್ಧವಾದ ನಡೆಗಳಿರುವುದು ಗೋಚರವಾಗುತ್ತದೆ; ಖಾಸಗೀಕರಣಕ್ಕೆ ಹೆಚ್ಚು ಒತ್ತು ಕೊಡುವ ಒಳ ಆಶಯದಿಂದ ಇವು ಕೂಡಿವೆ.

ನಮ್ಮ ಸಂವಿಧಾನದಲ್ಲಿ ಶಿಕ್ಷಣದ ಕುರಿತು ಇರುವ ರಾಜ್ಯ ಮತ್ತು ಕೇಂದ್ರಗಳ ಸಹಭಾಗಿತ್ವದ ಉದ್ದೇಶವನ್ನೇ ವಿಫಲಗೊಳಿಸುವ ಸಾಧ್ಯತೆಗಳು ಢಾಳಾಗಿ ಕಾಣುತ್ತವೆ. ವಿಕೇಂದ್ರೀಕರಣಕ್ಕಿಂತ ಕೇಂದ್ರೀಕೃತ ಆಧಿಪತ್ಯದ ನೀತಿಯ ಒತ್ತಡ ಇಲ್ಲಿದ್ದಂತಿದೆ. ಆರಂಭದಲ್ಲಿ ಪ್ರಸ್ತಾಪಿಸಿರುವ ಶಾಲಾ ಶಿಕ್ಷಣ ಮತ್ತು ಆನಂತರ ಪ್ರಸ್ತಾಪಿಸಿರುವ ಉನ್ನತ ಶಿಕ್ಷಣದ ಭಾಗಗಳ ಕಡೆ ಗಮನಹರಿಸಿದರೆ- 'ಸಮಾನ ಹಾಗೂ ಎಲ್ಲರನ್ನೂ ಒಳಗೊಂಡ ಶಿಕ್ಷಣ, ಯಾವುದೇ ಮಗು ತನ್ನ ಹುಟ್ಟು, ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳ ಕಾರಣದಿಂದಾಗಿ ಕಲಿಕೆಯ ಅವಕಾಶದಿಂದ ವಂಚಿತವಾಗದಿರಲು ನೀತಿಯು ಅನೇಕ ಕ್ರಮಗಳನ್ನು ಸೂಚಿಸುತ್ತದೆ' ಎಂದು ಹೇಳುತ್ತದೆ. ಈ ಅಂಶದ ಪ್ರಕಾರ, ಇಡೀ ದೇಶದಲ್ಲಿ ಈ ಆಶಯವನ್ನು ಜಾರಿಗೊಳಿಸಬೇಕಾದರೆ ಅದು ಕಡ್ಡಾಯ ಶಿಕ್ಷಣ ಮತ್ತು ಉಚಿತ ಶಿಕ್ಷಣ ಎಂಬ ಉದ್ದೇಶಿತ ಕಾರ್ಯಯೋಜನೆಯ ಮುಖೇನ ಮುಂದುವರಿಯಬೇಕಾಗುತ್ತದೆ. ಇದು ಜಾರಿಗೆ ಬರಬೇಕಾದರೆ ಇಡೀ ಶಿಕ್ಷಣದ ಜವಾಬ್ದಾರಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೊರಬೇಕಾಗುತ್ತದೆ. ಖಾಸಗೀಕರಣದ ಶಿಕ್ಷಣದಿಂದ ಅದು ಸಾಧ್ಯವಾಗುವುದಿಲ್ಲ.

ಸಮಾನ ಶಿಕ್ಷಣದ ಆಶಯ ಜಾರಿಯಾಗಬೇಕಾದರೆ, ಮಗು ವಾಸಿಸುವ ಒಂದು ಕಿ.ಮೀ. ವ್ಯಾಪ್ತಿಯಲ್ಲಿರುವ ಶಾಲೆಗೆ ಮಾತ್ರ ಅದನ್ನು ಸೇರಿಸಬೇಕು. ಜಿಲ್ಲಾಧಿಕಾರಿಯ ಮಗುವಾಗಲಿ, ಮುಖ್ಯಮಂತ್ರಿಯ ಮಗುವಾಗಲಿ, ಕೊಳೆಗೇರಿಯಲ್ಲಿರುವ ಕೂಲಿಕಾರ್ಮಿಕರ ಮಕ್ಕಳಾಗಲಿ ಎಲ್ಲರೂ ಈ ನಿಯಮಕ್ಕೆ ಬದ್ಧರಾಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಬೇಕು. ಆಗ ಮಾತ್ರ ಗುಣಮಟ್ಟದ ಶಿಕ್ಷಣವೆಂಬುದು ಸಮಾನವಾಗುವ ಸಾಧ್ಯತೆ ಇರುತ್ತದೆ. ಅದುಬಿಟ್ಟು ಉಳ್ಳವರಿಗೆ ಖಾಸಗಿ ಶಿಕ್ಷಣ ಶಾಲೆಗಳು, ಬಡವರಿಗೆ ಸರ್ಕಾರಿ ಶಾಲೆಗಳು ಎಂಬ ನೀತಿ ಜಾರಿಯಾದರೆ ಈ ಆಶಯಕ್ಕೆ ಯಾವ ಅರ್ಥವೂ ಇರುವುದಿಲ್ಲ.

ಆದ್ದರಿಂದ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣಗೊಳಿಸುವ ಸಮಾನ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಅಗತ್ಯವಿದೆ. ಅದಿಲ್ಲದೆ ದಿನದಿಂದ ದಿನಕ್ಕೆ ಖಾಸಗೀಕರಣವನ್ನು ಹೆಚ್ಚು ಬೆಂಬಲಿಸುತ್ತಿರುವ ಆಡಳಿತ ನೀತಿಯು ಅಸಮಾನತೆಯನ್ನು ಹೆಚ್ಚಿಸುತ್ತದೆ. ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸುತ್ತದೆ. ಇದರಿಂದ ಈ 'ಎಲ್ಲರನ್ನೂ ಒಳಗೊಂಡ ಸಮಾನ ಶಿಕ್ಷಣ' ಎಂಬುದು ಕೇವಲ ಬಡವರ ತುಟಿಗೆ ತುಪ್ಪ ಸವರಿದ ಮಾತಾಗುತ್ತದೆ.

ಹಾಗೆಯೇ ಕೊನೆಯಲ್ಲಿರುವ 'ಎಚ್' ವಿಭಾಗದಲ್ಲಿ- 'ಶಾಲಾ ಕಾರ್ಯನಿರ್ವಹಣೆ ಹಾಗೂ ನಿಯಂತ್ರಣಗಳನ್ನು ಭಿನ್ನ ಭಿನ್ನ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುವುದು. ಇದು ಹಿತಾಸಕ್ತಿಗಳ ಸಂಘರ್ಷವನ್ನು ತಪ್ಪಿಸಲು ನೆರವಾಗುತ್ತದೆ. ನೀತಿ ನಿರೂಪಣೆ, ನಿಯಂತ್ರಣ, ಕಾರ್ಯಾಚರಣೆ ಮತ್ತು ಶೈಕ್ಷಣಿಕ ವಿಷಯಗಳನ್ನು ನಿರ್ವಹಿಸಲು ಭಿನ್ನ ಭಿನ್ನವಾದ ಹಾಗೂ ಸ್ಪಷ್ಟವಾದ ವ್ಯವಸ್ಥೆಗಳನ್ನು ರೂಪಿಸಲಾಗುತ್ತದೆ' ಎಂಬ ವಿವರಣೆಯಿದೆ. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಇದು ಖಾಸಗೀಕರಣದ ವಶಕ್ಕೆ ಇಡೀ ಶಿಕ್ಷಣ ಸಂಸ್ಥೆಯನ್ನು ಒಪ್ಪಿಸುವ ದಿಕ್ಕಿನತ್ತ ಹರಿಯುವ ಸ್ವರೂಪವೆಂಬುದು ಅರಿವಿಗೆ ಬರುತ್ತದೆ. ಮೇಲ್ನೋಟಕ್ಕೆ ಆದರ್ಶದ ನಿಯಂತ್ರಣ ನಿರ್ವಹಣೆಯಂತೆ ಕಂಡರೂ ಖಾಸಗಿ ಮತ್ತು ಸರ್ಕಾರಿ ಎಂಬ ಭಿನ್ನತೆಯನ್ನು ಹೆಚ್ಚು ಗಟ್ಟಿಗೊಳಿಸುವ, ಸಮಾನತೆಯ ಹೆಸರು ಹೇಳುತ್ತಲೇ ಅಸಮಾನತೆಯನ್ನು ಹೆಚ್ಚಿಸುವ ನೀತಿ ಇದಾಗಿದೆ.



ವಿವರಣೆಯ ಭಾಗದಲ್ಲಿ, 'ಸ್ಥಳೀಯ ಸಮುದಾಯಗಳು ಮತ್ತು ಸ್ವಯಂಸೇವಕರ ಭಾಗವಹಿಸುವಿಕೆ' ಎಂದಿದೆ. ಸ್ವಯಂಸೇವಕರು ಯಾರು? ಯಾವ ಸಂಘಟನೆಯವರು? ಇವೆಲ್ಲಾ ಅಸ್ಪಷ್ಟತೆಯಿಂದ ಕೂಡಿವೆ. ಇಲ್ಲಿನ ಗೋಪ್ಯತೆಯನ್ನು ನೋಡಿದರೆ, ಇಡೀ ಶಿಕ್ಷಣ ವ್ಯವಸ್ಥೆಯ ನಿರ್ವಹಣೆ, ಮೇಲ್ವಿಚಾರಣೆಯನ್ನು ಯಾರಿಗೋ ಗುತ್ತಿಗೆಗೆ ಒಳಗು ಮಾಡುವ ಉದ್ದೇಶವಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. 'ಎಚ್' ವಿಭಾಗದಲ್ಲಿ, 'ದೇಶದೆಲ್ಲೆಡೆ ತ್ರಿಭಾಷಾ ಸೂತ್ರವನ್ನು ಕಾಯಾ ವಾಚಾ ಮನಸಾ ಅಳವಡಿಸಿಕೊಳ್ಳಲಾಗುವುದು' ಎಂದೂ ಹೇಳಲಾಗಿದೆ! ಈ ಭಾಗದಲ್ಲಿ ಸ್ಥಳೀಯ ಭಾಷೆ ಮತ್ತು ಮಾತೃಭಾಷೆ ಎಂದು ಬಳಸುತ್ತಾರೆ. ಎಲ್ಲಿಯೂ ರಾಜ್ಯಭಾಷೆಗಳ ಅರ್ಥಾತ್ ರಾಜ್ಯಗಳಲ್ಲಿರುವ ಆಡಳಿತ ಭಾಷೆಗಳ ಪ್ರಸ್ತಾಪವೇ ಬರುವುದಿಲ್ಲ. ಈಗಾಗಲೇ ಕೋರ್ಟಿನಲ್ಲಿ ಮಾತೃಭಾಷೆಯ ಆಯ್ಕೆ ಪೋಷಕರಿಗೆ ಬಿಟ್ಟದ್ದು ಎಂದು ತೀರ್ಪು ಬಂದಿದೆ. ಇದರ ಲಾಭವನ್ನು ಪಡೆದಂತೆ ಖಾಸಗಿ ಸಂಸ್ಥೆಗಳು ಇಂಗ್ಲಿಷ್ ಮಾಧ್ಯಮ ಶಿಕ್ಷಣದ ಮಾರಾಟದಲ್ಲಿ ನಿರತವಾಗಿವೆ. ಪೋಷಕರು ಕೂಡ ತಮ್ಮ ಮನೆಯ ಮಾತು ಅರ್ಥಾತ್ ಮಾತೃಭಾಷೆ ಯಾವುದೇ ಇದ್ದರೂ ಇಂಗ್ಲಿಷನ್ನು ಆಯ್ಕೆಯ ಭಾಷೆಯಾಗಿಸಿಕೊಂಡು ರಾಜ್ಯಭಾಷೆಯನ್ನು ಈಗಾಗಲೇ ಕಡೆಗಣಿಸುತ್ತಿದ್ದಾರೆ.

ಅಷ್ಟೇ ಅಲ್ಲ, ತ್ರಿಭಾಷಾ ನೀತಿಯಲ್ಲಿ ರಾಜ್ಯಭಾಷೆಯ ಕಡ್ಡಾಯದ ಬಗ್ಗೆ ಪ್ರಸ್ತಾಪವೇ ಇಲ್ಲದಿರುವುದರಿಂದ ರಾಜ್ಯಭಾಷೆಗಳು ರಾಜ್ಯದ ಶಿಕ್ಷಣದಲ್ಲಿ ಕಳೆದುಹೋಗುವುದು ನಿಶ್ಚಿತ. ಇದನ್ನು ಮನಗಂಡೇ ಕರ್ನಾಟಕ ಸರ್ಕಾರ 2017ರಲ್ಲಿ ಕನ್ನಡ ಭಾಷಾ ಕಲಿಕಾ ಕಾಯ್ದೆಯನ್ನು ಜಾರಿಗೊಳಿಸಿತು. ಅದರ ಅನ್ವಯ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳು ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆ ವ್ಯಾಪ್ತಿಯಲ್ಲಿರುವ ಖಾಸಗಿ ಶಾಲೆಯೊಂದರ ವಿದ್ಯಾರ್ಥಿಗಳ ಪೋಷಕರು, ಕನ್ನಡ ಭಾಷಾ ಕಲಿಕಾ ಕಾಯ್ದೆಯ ವಿರುದ್ಧ ಆನ್‌ಲೈನ್ ಸಹಿ ಸಂಗ್ರಹ ಅಭಿಯಾನ ಹಮ್ಮಿಕೊಂಡಿದ್ದಾರೆ. ಈ ರೋಗ ಸಹಜವಾಗಿ ಖಾಸಗಿ ಶಿಕ್ಷಣ ಶಾಲೆಗಳಿಗೆ ಭರದಿಂದ ವ್ಯಾಪಿಸುವ ಸಾಧ್ಯತೆಯಿದೆ. ಏಕೆಂದರೆ ಹಲವು ಕಾನ್ವೆಂಟ್‌ಗಳಲ್ಲಿ ಕನ್ನಡದಲ್ಲಿ ಮಾತನಾಡಿದರೆ ವಿದ್ಯಾರ್ಥಿಗಳಿಗೆ ದಂಡ ಹಾಕುವ ಪರಿಪಾಟವಿದೆ! ಬಹುತೇಕ ಎಲ್ಲ ರಾಜ್ಯಗಳ ಸ್ಥಿತಿಯೂ ಇದೇ ಆಗಿದೆ. ಪ್ರಾಥಮಿಕ ಶಿಕ್ಷಣದಲ್ಲಿಯೇ ರಾಜ್ಯಭಾಷೆ ಕನ್ನಡ ಕಳೆದುಹೋದರೆ ಅದನ್ನು ಉನ್ನತ ಶಿಕ್ಷಣದಲ್ಲಿ ಉಳಿಸಿಕೊಳ್ಳುವುದು ಹೇಗೆ?

ಇನ್ನು ತಾಂತ್ರಿಕ, ವೈದ್ಯಕೀಯ ಶಿಕ್ಷಣ ಕ್ಷೇತ್ರದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವೆನಿಸುತ್ತದೆ. ಹೀಗಿರುವಾಗ ಆಡಳಿತ ಭಾಷೆಯಾಗಿ ಕನ್ನಡ ಉಳಿಯುತ್ತದೆ ಎಂದುಕೊಳ್ಳುವುದು ದೂರದ, ಅರ್ಥವಿಲ್ಲದ ಮಾತಾಗುತ್ತದೆ.

ಯಾವ ರಾಜ್ಯದಲ್ಲಿ ಆಡಳಿತವೆಂಬುದು ಜನಭಾಷೆಯಲ್ಲಿ ನಡೆಯುವುದಿಲ್ಲವೋ ಆ ರಾಜ್ಯದಲ್ಲಿ ರಾಜ್ಯ ಸರ್ಕಾರದ ಯೋಜನೆಗಳು ಜನರನ್ನು ಮುಟ್ಟುವುದರಲ್ಲಿ ವಿಫಲವಾಗುತ್ತವೆ. ರಾಜ್ಯದ ಪ್ರಗತಿ ಕುಂಠಿತವಾಗುತ್ತದೆ.

ಚುರುಮುರಿ

ಊಟಭಾಗ್ಯ

• ಮಣ್ಣೆರಾಜು

'ರೀ, ಇಂದಿರಾ ಕ್ಯಾಂಟೀನ್ ಹೆಸರು ಚೇಂಜ್ ಮಾಡ್ಬೇಕಂತಾ? ಯಾಕೆ, ವ್ಯವಹಾರ ನಷ್ಟದಲ್ಲಿದೆಯಂತಾ?' ಸುಮಿ ಕೇಳಿದಳು.

'ಹೌದಂತೆ, ಬಿಜೆಪಿಗೆ ಅಪಾರ ನಷ್ಟವಾಗುತ್ತಿದೆಯಂತೆ. ಕ್ಯಾಂಟೀನ್‌ಗೆ ಮನೆದೇವರ ಹೆಸರಿಟ್ಟರೆ ಲಾಭದಾಯಕ ಅಂತ ಆಸ್ಥಾನ ಜ್ಯೋತಿಷಿ ಹೇಳಿರಬಹುದು' ಅಂದ ಶಂಕ್ರಿ.

'ಇಂದಿರಾ ಕ್ಯಾಂಟೀನ್ ಕಾಂಗ್ರೆಸ್‌ನವರ ಮನೆದೇವರ ಹೆಸರಿನಲ್ಲೇ ಇದೆಯಲ್ರೀ...'

'ಹೌದು, ಆ ದೇವರನ್ನು ಬಿಜೆಪಿಯವರು ಆರಾಧಿಸೊಲ್ಲ. ಇವರು ಬೇರೆ ದೇವರ ಒಕ್ಕಲು'.

'ಅವರವರ ದೇವರ ಹೆಸರಲ್ಲಿ ಕ್ಯಾಂಟೀನ್ ತೆರೆದು ಹೂ ಇಟ್ಟು, ಊದುಬತ್ತಿ ಹಚ್ಚಿದ್ರೆ ವ್ಯವಹಾರ ಸುಧಾರಿಸಬಹುದು'.

'ಇಂದಿರಾ ಕ್ಯಾಂಟೀನ್‌ನ ಆಯ, ಪಾಯ ಸರಿಯಿಲ್ಲವಂತೆ, ಅದರ ದಿಕ್ಕು ಬದಲಾಯಿಸಿದರೆ ಬಿಜೆಪಿಯವರ ದಿಕ್ಕು-ದೆಸೆ ಬದಲಾಗುತ್ತದೆ ಅಂತ ಜ್ಯೋತಿಷಿ ಹೇಳಿರಬಹುದು'.

'ಕ್ಯಾಂಟೀನ್ ಹೆಸರು ಬದಲಾದಮೇಲೆ ಮೆನುನೂ ಬದಲಾಗಬಹುದಾ?'

'ಆಗಬಹುದು. ಕಾಂಗ್ರೆಸ್, ಬಿಜೆಪಿಯವರ ರುಚಿ- ಅಭಿರುಚಿ ಬೇರೆಬೇರೆ, ಒಬ್ಬರದ್ದು ಇನ್ನೊಬ್ಬರಿಗೆ ರುಚಿಸುವುದಿಲ್ಲ'.

'ಇಂದಿರಾ ಗ್ರೂಪ್ ಆಫ್ ಕ್ಯಾಂಟೀನ್ಸ್‌ನ ಹೆಸರು ಬದಲಾಯಿಸಿ ಊರೂರಲ್ಲೂ ಕ್ಯಾಂಟೀನ್ ಶಾಖೆ ಆರಂಭಿಸಬಹುದು ಅಲ್ವೇನ್ರೀ?'

'ಹೌದು, ಕ್ಯಾಂಟೀನ್ ಇಲಾಖೆ ರಚಿಸಿ ಮಂತ್ರಿ ನೇಮಿಸಿ, ಕ್ಯಾಂಟೀನ್ ಉದ್ಯಮ ವಿಸ್ತರಿಸಿ ಉದ್ಯೋಗ ಸೃಷ್ಟಿಸಬಹುದು'.

'ಹೀಗಾದ್ರೆ, ಹೋಟೆಲ್ ಉದ್ಯಮವನ್ನು ಸರ್ಕಾರೀಕರಣ ಮಾಡಿದಂತಾಗುವುದಿಲ್ಲವೇ?'

'ಅಷ್ಟೇ ಅಲ್ಲ, ಬರೀ ರೇಷನ್ ಕೊಡುವ ಅನ್ನಭಾಗ್ಯದ ಬದಲು, ಪಡಿತರದಾರರಿಗೆ ಅನ್ನ-ಸಾಂಬಾರ್ ವಿತರಿಸಿ ಅನ್ನಭಾಗ್ಯ ಯೋಜನೆಯನ್ನು ಅರ್ಥಪೂರ್ಣಗೊಳಿಸಬಹುದು. ಎಲ್ಲ ಊರಲ್ಲೂ ಸರ್ಕಾರಿ ಕ್ಯಾಂಟೀನ್ ಆರಂಭಿಸಿ, ಉದಾರೀಕರಣದಿಂದ ಊಟ, ತಿಂಡಿ ವ್ಯವಸ್ಥೆ ಮಾಡಿ ಹಸಿವುಮುಕ್ತ ರಾಜ್ಯ ಮಾಡಬಹುದು'.

'ಮಾಡಬೇಕೂರೀ, ದುಬಾರಿಯಾಗುತ್ತಿರುವ ಬೇಳೆ, ಎಣ್ಣೆ, ತರಕಾರಿ, ಅಡುಗೆಗ್ಯಾಸ್ ಹೊಂಚುವ ರಗಳೆ ತಪ್ಪುತ್ತದೆ. ಸರ್ಕಾರಿ ಕ್ಯಾಂಟೀನ್‌ನಲ್ಲಿ ನಿತ್ಯ ಊಟ, ತಿಂಡಿ ತಿಂದ್ಕೊಂಡು ಹಾಯಾಗಿರಬಹುದು...' ಸುಮಿ ಆಸೆಪಟ್ಟಳು.

ದಿನದ ಟ್ವೀಟ್

ಅನಗತ್ಯ ವೆಚ್ಚ ತಗ್ಗಿಸಿ

ಬಸವರಾಜ ಬೊಮ್ಮಾಯಿ ಸರ್, ನಿಮ್ಮನ್ನು ಹಿಂಬಾಲಿಸುವ ವಾಹನಗಳ ಸಂಖ್ಯೆಯನ್ನು ನಿಯಂತ್ರಿಸಲು ದಯವಿಟ್ಟು ಪ್ರಯತ್ನಿಸಿ. ನಿನ್ನೆ ಮೈಸೂರಿನಲ್ಲಿ ಸುಮಾರು 50 ಕಾರುಗಳು ನಿಮ್ಮನ್ನು ಹಿಂಬಾಲಿಸುತ್ತಿದ್ದುದನ್ನು ಗಮನಿಸಿದೆ. ಯಾರ ಹಣವನ್ನು ಅವರೆಲ್ಲ ವ್ಯರ್ಥ ಮಾಡುತ್ತಿದ್ದಾರೆ? ಅಗತ್ಯ ಇರುವವರನ್ನು ಮಾತ್ರ ಕರೆಸಿಕೊಳ್ಳಿ. ಉಳಿದವರು ಯಾರೇ ಆಗಿರಲಿ ಅವರನ್ನು ನಿರ್ಬಂಧಿಸಿ.

ಮಹೇಶ್ ಕಾಮತ್ ಕೆ., ಕಾರ್ಯದರ್ಶಿ, ಜಿಎಸ್‌ಬಿ ಸಭಾ

ಕಿಡಿನುಡಿ

ಬಿಜೆಪಿಯವರು ಗೇಮ್ ಚೇಂಜರ್ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದರು. ಈಗ ನೇಮ್ ಚೇಂಜರ್ ಆಗಿದ್ದಾರೆ. ಇಂದಿರಾ ಗಾಂಧಿ, ರಾಜೀವ್ ಗಾಂಧಿಯವರ ಹೆಸರುಗಳನ್ನು ಅವರು ಬದಲಾಯಿಸಬಹುದು. ಆದರೆ, ಈ ನೆಲದ ಮೇಲೆ ಬಿದ್ದ ಹೋರಾಟಗಾರರ ರಕ್ತ ಅಳಿಸಲು ಯಾರಿಗೂ ಸಾಧ್ಯವಿಲ್ಲ. ಅವರು ಎಷ್ಟು ದೂರ ಹೋಗುತ್ತಾರೋ ಹೋಗಲಿ ನೋಡೋಣ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ

25 ವರ್ಷಗಳ ಹಿಂದೆ

ಭಾನುವಾರ- 11-8-1996

• ದೇವೇಗೌಡರ ವಿರುದ್ಧ ಭೂಸ್ವಾಧೀನ ಆದೇಶ ರದ್ದು ಆರೋಪ

ಬೆಂಗಳೂರು, ಆ. 10- ಅಧಿಸೂಚನೆ ಮೂಲಕ ಸರ್ಕಾರಿ ಸ್ವಾಧೀನಕ್ಕೆ ಪಡೆದಿದ್ದ ನೂರಾರು ಎಕರೆ ಬೆಲೆ ಬಾಳುವ ಭೂಮಿಯ ಸಂಬಂಧದಲ್ಲಿ ಪ್ರಭಾವಿಗಳ ಒತ್ತಡಕ್ಕೆ ಮಣಿದು ಆ ಅಧಿಸೂಚನೆಯನ್ನೇ ರದ್ದುಗೊಳಿಸುವ ತೀರ್ಮಾನವನ್ನು ಮುಖ್ಯಮಂತ್ರಿಯಾಗಿ ಕರ್ತವ್ಯ ನಿರ್ವಹಿಸಿದ ಕೊನೆಯ ದಿನದಂದು ಎಚ್.ಡಿ. ದೇವೇಗೌಡರು ಕೈಗೊಂಡರು ಎಂದು ವಿರೋಧ ಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ವಿಧಾನಸಭೆಯಲ್ಲಿ ಇಂದು ಆಪಾದಿಸಿದರು.

• ಆಲಮಟ್ಟಿ: ಆಂಧ್ರ- ಕರ್ನಾಟಕ ಬಿಗಿಪಟ್ಟು; ಸಭೆ ಅಪೂರ್ಣ

ನವದೆಹಲಿ, ಆ. 10- ಆಲಮಟ್ಟಿ ಅಣೆಕಟ್ಟು ವಿವಾದದ ಬಗ್ಗೆ ಇಂದು ರಾತ್ರಿ ಪ್ರಧಾನಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೃಷ್ಣಾ ಕಣಿವೆಯ ಮೂರು ರಾಜ್ಯಗಳ ಮಹತ್ವದ ಸಭೆಯಲ್ಲಿ ಯಾವುದೇ ಸ್ಪಷ್ಟ ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲ. ಕರ್ನಾಟಕ ಮತ್ತು ಆಂಧ್ರಪ್ರದೇಶ ತಮ್ಮ ವಾದಗಳಿಗೆ ಬಲವಾಗಿ ಕಟ್ಟುಬಿದ್ದ ಕಾರಣ ಸಭೆಯು ಅಪೂರ್ಣಗೊಂಡಿತು.

50 ವರ್ಷಗಳ ಹಿಂದೆ

ಬುಧವಾರ 11-8-1971

• ಸ್ವತಂತ್ರ ಪಕ್ಷ, ಜನಸಂಘದ ಟೀಕೆ ಮಧ್ಯೆ ರಾಜ್ಯಸಭೆಯಲ್ಲಿ ಸಂವಿಧಾನ ಮಸೂದೆ ಮಂಡನೆ

ನವದೆಹಲಿ, ಆ. 10- ಆಡಳಿತ ಕಾಂಗ್ರೆಸ್ ಸದಸ್ಯರ ಹರ್ಷೋದ್ಗಾರ ಹಾಗೂ ಜನಸಂಘ ಮತ್ತು ಸ್ವತಂತ್ರ ಪಕ್ಷಗಳ ಸದಸ್ಯರ ಆಕ್ಷೇಪಣೆಗಳ ಮಧ್ಯೆ ಸಂವಿಧಾನ ತಿದ್ದುಪಡಿ ವಿಧೇಯಕದ ಚರ್ಚೆಯನ್ನು ಇಂದು ರಾಜ್ಯಸಭೆ ಆರಂಭಿಸಿತು.

ಚರ್ಚೆಗಾಗಿ ವಿಧೇಯಕ ಮಂಡಿಸಿದ ಕೇಂದ್ರ ಕಾನೂನು ಸಚಿವ ಎಚ್.ಆರ್. ಗೋಖಲೆ ಅವರು, 'ಪ್ರಗತಿಯ ಹಾದಿಯಲ್ಲಿ ಅಡ್ಡಬಂದಿರುವ ಕೆಲವು ನ್ಯಾಯಾಂಗ ನಿರ್ಧಾರಗಳ ಅಡಚಣೆಗಳನ್ನು ನಿವಾರಿಸಲು ಹಾಗೂ ಸಂವಿಧಾನದ ಯಾವ ಭಾಗವನ್ನೇ ಆಗಲಿ ತಿದ್ದಲು ಸಂಸತ್ತಿಗೆ ಇರುವ ಪರಮಾಧಿಕಾರವನ್ನು ಮತ್ತೆ ಸ್ಥಾಪಿಸುವುದೇ ವಿಧೇಯಕದ ಉದ್ದೇಶವೆಂದು ವಿವರಿಸಿದರು.

• ರಷ್ಯಾದೊಡನೆ ಒಪ್ಪಂದ ಮುಕ್ತಕಂಠದ ಸ್ವಾಗತ

ನವದೆಹಲಿ, ಆ. 10- ರಷ್ಯಾದೊಡನೆ ಭಾರತ ಮಾಡಿಕೊಂಡಿರುವ 20 ವರ್ಷಗಳ ಅವಧಿಯ ಶಾಂತಿ, ಸ್ನೇಹ ಮತ್ತು ಸಹಕಾರ ಒಪ್ಪಂದವನ್ನು ಇಂದು ಲೋಕಸಭೆಯಲ್ಲಿ ಸಾಮಾನ್ಯವಾಗಿ ಎಲ್ಲ ಪಕ್ಷಗಳೂ ಮುಕ್ತಕಂಠದಿಂದ ಸ್ವಾಗತಿಸಿದವು.

ಕಷ್ಟದ ಸಮಯಗಳಲ್ಲಿ, ಭಾರತಕ್ಕೊಂದು ನಂಬಲರ್ಹ ಮಿತ್ರ ರಾಷ್ಟ್ರ ಸಿಕ್ಕಿರುವುದೆಂದು ಜನಸಂಘದ ನಾಯಕ ಎ.ಬಿ. ವಾಜಪೇಯಿ ಹೇಳಿದರು. ಸ್ವತಂತ್ರ ಪಕ್ಷದ ಪಿಲೂಮೋದಿ ಅವರು ಈ ಒಪ್ಪಂದದಿಂದ ರಷ್ಯಾಕ್ಕೆ ಅನುಕೂಲವೆಂದು ಜಾಗರೂಕ ವಿಶ್ಲೇಷಣೆಯಿಂದ ವ್ಯಕ್ತಪಡುವುದೆಂದರು.

ಸಂಗತ

ಟ್ಯಾಗೋರ್ ಆಶಯ: ನಮಗೆಷ್ಟು ದಕ್ಕಿದೆ?

ಭವಿಷ್ಯದ ಭಾರತಕ್ಕಾಗಿ ಟ್ಯಾಗೋರ್ ಅವರು ತೆರೆದಿಟ್ಟ ವಿಶಾಲ ಹೆದ್ದಾರಿಯಲ್ಲಿ ನಾವೆಷ್ಟು ಕ್ರಮಿಸಿದ್ದೇವೆ ಎನ್ನುವ ಕುರಿತಾದ ಪುನರ್ವಿಮರ್ಶೆ ಸಂದರ್ಭೋಚಿತ

• ಡಾ. ಜ್ಯೋತಿ

ಭಾರತವು ಸ್ವಾತಂತ್ರ್ಯ ಚಳವಳಿಯ ಮೂಲಕ ಬ್ರಿಟಿಷರ ವಸಾಹತುಶಾಹಿ ಆಡಳಿತದಿಂದ ಮುಕ್ತಿ ಹೊಂದಿ ರಾಜಕೀಯ ಸ್ವಾತಂತ್ರ್ಯ ಪಡೆದ 75ನೇ ವರ್ಷಾಚರಣೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ, ಆಧುನಿಕ ಭಾರತದ ಬೌದ್ಧಿಕ ಜಗತ್ತನ್ನು ರೂಪಿಸಿದವರ ಚಿಂತನೆಗಳನ್ನು ಮೆಲುಕು ಹಾಕುವ ಪ್ರಸ್ತುತತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಯಾಕೆಂದರೆ, ಉತ್ತಮ ರಾಷ್ಟ್ರ ನಿರ್ಮಾಣಕ್ಕೆ ರಾಜಕೀಯ ಸ್ವಾತಂತ್ರ್ಯದಷ್ಟೇ ಅಲ್ಲಿನ ನಾಗರಿಕರ ಬೌದ್ಧಿಕ ಪ್ರಬುದ್ಧತೆ ಹಾಗೂ ಸ್ವಾತಂತ್ರ್ಯವೂ ಅಷ್ಟೇ ಮುಖ್ಯ.

ಐರೋಪ್ಯ ದೇಶಗಳಿಂದ ಎರವಲು ಪಡೆದ ರಾಷ್ಟ್ರದ ಪರಿಕಲ್ಪನೆಗೆ ಭಿನ್ನವಾಗಿ, ಭಾರತ ಒಂದು ದೇಶವಾಗಿ ವಿಭಿನ್ನ ಸಂಸ್ಕೃತಿ, ಜಾತಿ, ಧರ್ಮ ಹಾಗೂ ಭಾಷೆಗಳನ್ನು ಒಳಗೊಂಡಿದೆ. ಇತಿಹಾಸದ ಪುಟಗಳಲ್ಲಿ ದಾಖಲಿಸಿದಂತೆ, ಅಮೆರಿಕ ಮತ್ತು ಆಸ್ಟ್ರೇಲಿಯಾದಲ್ಲಿ, ಯುರೋಪಿನ ವಸಾಹತುಗಾರರು ಮೂಲ ನಿವಾಸಿಗಳನ್ನು ಸದೆಬಡಿದು ರಾಷ್ಟ್ರೀಯ ಏಕಸ್ವಾಮ್ಯ ಸಾಧಿಸಿದರು. ಇದಕ್ಕೆ ತದ್ವಿರುದ್ಧವಾಗಿ, ಭಾರತ 'ವಸುಧೈವ ಕುಟುಂಬಕಮ್' ತತ್ವದ ಅನುಸಾರ, ಇಲ್ಲಿ ನೆಲೆಯಾಗಲು ಇಚ್ಛಿಸಿದವರನ್ನು ಗೌರವದಿಂದ ಸ್ವೀಕರಿಸಿ, ವಿವಿಧತೆಯಲ್ಲಿ ಏಕತೆ ಸಾಧಿಸಿದೆ. ಹಾಗಾಗಿ, ಇದಕ್ಕೆ ವಿರುದ್ಧವಾದ ಯಾವುದೇ ರೀತಿಯ ನಿಲುವು ಹೊಂದುವುದು ಭಾರತೀಯ ಶ್ರೇಷ್ಠ ಪರಂಪರೆ, ತಾತ್ವಿಕತೆಗೆ ವಿರುದ್ಧ ಹಾಗೂ ಅಪ್ರಾಯೋಗಿಕ ಕೂಡ.

ಈ ದಿಸೆಯಲ್ಲಿ, ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಭಾರತದ ದಾರ್ಶನಿಕರು ರಾಷ್ಟ್ರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವ ಬಗೆಯ ದೃಷ್ಟಿಕೋನಗಳನ್ನು ಹೊಂದಿದ್ದರು ಎನ್ನುವುದರ ಅವಲೋಕನ ನಡೆಸುವುದು ಬಹಳ ಪ್ರಸ್ತುತವಾಗಿದೆ. ದೇಶದ ಬೌದ್ಧಿಕ ಜಗತ್ತಿಗೆ ಬಹುದೊಡ್ಡ ಕಾಣಿಕೆ ನೀಡಿದವರಲ್ಲಿ ಪ್ರಮುಖ ಹೆಸರು ರವೀಂದ್ರನಾಥ ಟ್ಯಾಗೋರ್. ಅವರು ತಮ್ಮ ಸಾಹಿತ್ಯ, ಸಂಗೀತ, ಚಿತ್ರಕಲೆ, ತತ್ವಶಾಸ್ತ್ರ ಹಾಗೂ ವಿನೂತನ ಶಿಕ್ಷಣ ಕ್ರಮದ ಪರಿಕಲ್ಪನೆಯ ಮೂಲಕ ಭವಿಷ್ಯದ ಭಾರತಕ್ಕೆ ಬೇಕಾದ ವಿಶಾಲ ಹೆದ್ದಾರಿಯೊಂದನ್ನು ಜನರಿಗೆ ತೆರೆದಿಟ್ಟಿದ್ದರು. ಇಷ್ಟು ವರ್ಷಗಳಲ್ಲಿ ಆ ಹೆದ್ದಾರಿಯಲ್ಲಿ ನಾವೆಷ್ಟು ಕ್ರಮಿಸಿದ್ದೇವೆ ಎನ್ನುವ ಕುರಿತಾದ ಪುನರ್ವಿಮರ್ಶೆ ಸಂದರ್ಭೋಚಿತ.

ಟ್ಯಾಗೋರ್ ಪರಿಕಲ್ಪನೆಯ ಸ್ವತಂತ್ರ ಭಾರತವನ್ನು ಸಮಗ್ರವಾಗಿ ಹಿಡಿದಿಟ್ಟಿರುವ ಅವರ ಕವಿತೆ, 'ಎಲ್ಲಿ ಮನಕೆ ಅಳುಕಿರದೋ...' ಇದನ್ನು 1910ರಲ್ಲಿ, ಅವರ ಕಾವ್ಯಸಂಗ್ರಹ 'ಗೀತಾಂಜಲಿ'ಯ ಭಾಗವಾಗಿ ಪ್ರಕಟಿಸಲಾಯಿತು. ವಿಷಾದವೆಂದರೆ, ಶತಮಾನದ ಹಿಂದೆ ಟ್ಯಾಗೋರರ ಪ್ರಬುದ್ಧ ಯೋಚನಾಲಹರಿಯ ಕನಸಿನ ಭಾರತ, ನಮಗಿನ್ನೂ ಸಂಪೂರ್ಣವಾಗಿ ಸಿದ್ಧಿಸಿಲ್ಲ.

ಟ್ಯಾಗೋರ್ ಅವರ ಪ್ರಕಾರ, ಸ್ವತಂತ್ರ ದೇಶವೆಂದರೆ ಅಲ್ಲಿನ ನಾಗರಿಕರು ನಿರ್ಭೀತಿಯಿಂದ ಬದುಕುವ ವಾತಾವರಣವಿರುತ್ತದೆ. ಅವರು ನಿರ್ದಿಷ್ಟವಾಗಿ 'ಅಳುಕಿಲ್ಲದ ಮನಸ್ಸು' ಎಂದು ಉಲ್ಲೇಖಿಸುತ್ತಾರೆ. ಯಾಕೆಂದರೆ, ಭಯಗ್ರಸ್ತ ಮನಸ್ಸು ಬದುಕಿನ ಉನ್ನತ ಸಾಧನೆಗೆ ಅಡ್ಡಿಯಾಗಬಹುದು. ಆನಂತರ ಟ್ಯಾಗೋರ್ ತಲೆಯೆತ್ತಿ ನಿಲ್ಲುವ ಸ್ವಾಭಿಮಾನದ ಬದುಕಿನ ಅಗತ್ಯವನ್ನು ಪ್ರಸ್ತಾಪಿಸುತ್ತಾರೆ. ಅಂದರೆ, ಇದು ಮಾನವ ನಿರ್ಮಿತ ವ್ಯವಸ್ಥೆ ಪ್ರತಿಪಾದಿಸುವ ದೈಹಿಕ ಮತ್ತು ಮಾನಸಿಕ ಗುಲಾಮಗಿರಿಯಿಂದ ಕಳಚಿಕೊಂಡ ಗೌರವದ ಬದುಕು. ಸ್ವತಂತ್ರ ರಾಷ್ಟ್ರದಲ್ಲಿ ಜಾತಿ, ಧರ್ಮ, ಲಿಂಗ, ಭಾಷೆ ಅಥವಾ ವರ್ಗ ಆಧಾರಿತ ತಾರತಮ್ಯಗಳಿಗೆ ಆಸ್ಪದವಿಲ್ಲ ಎನ್ನುವುದೇ ಇಲ್ಲಿನ ತಾತ್ಪರ್ಯ.

ಉಳಿದ ಜೀವರಾಶಿಗಳಿಗಿಂತ ವಿಭಿನ್ನವೆಂದು ಗುರುತಿಸಿಕೊಳ್ಳುವ ಮನುಷ್ಯನ ವಿಶೇಷವೆಂದರೆ, ಜ್ಞಾನ ಹಾಗೂ ಸ್ವತಂತ್ರ ಚಿಂತನೆ. ಇದು ಉದ್ದೀಪನವಾಗುವುದು ಶಿಕ್ಷಣದ ಮೂಲಕ. ಹಾಗಾಗಿ, ಗುಣಮಟ್ಟದ ಉಚಿತ ಶಿಕ್ಷಣ ಒದಗಿಸುವುದು ಅಭಿವೃದ್ಧಿಯ ಕನಸು ಕಾಣುವ ದೇಶಗಳ ಮೂಲಭೂತ ಜವಾಬ್ದಾರಿ.

ಮಹತ್ತರವಾಗಿ, ಟ್ಯಾಗೋರರ ಕನಸಿನ ಭಾರತದಲ್ಲಿ, ಮನುಷ್ಯರ ನಡುವಿನ ಸಹಜ ಭಿನ್ನತೆಗಳು, ಮನಸ್ಸು ಮನಸ್ಸುಗಳ ನಡುವಿನ ಸಂಕುಚಿತ ಅಡ್ಡಗೋಡೆಗಳಾಗಿ ಮಾರ್ಪಡದಿರಲಿ ಎನ್ನುವ ಕಳಕಳಿಯಿದೆ. ಸುಳ್ಳಿನ ತಳಹದಿಯ ಮೇಲೆ ಮಾತಿನ ಸೌಧ ಕಟ್ಟಿ ಬದುಕುವವರಿಗೆ ಸಾರ್ವಜನಿಕ ಮನ್ನಣೆ ಸಿಗಬಾರದು ಎನ್ನುವ ಎಚ್ಚರಿಕೆ ಮೂಡಿಸುವ



ಟ್ಯಾಗೋರ್, ಮನುಷ್ಯನ ಮಾತು ಸತ್ಯದ ಆಳದಿಂದ ಹೊರಸೂಸಬೇಕು ಎನ್ನುತ್ತಾರೆ.

ಮನುಷ್ಯಜೀವನದ ಒಟ್ಟು ತಾತ್ಪರ್ಯವನ್ನು ಹೀಗೆನ್ನುತ್ತಾರೆ: 'ದಣಿವಿಲ್ಲದ ಪ್ರಯತ್ನಗಳ ಮೂಲಕ ನಿರಂತರವಾಗಿ ಪರಿಪೂರ್ಣತೆಯತ್ತ ಕೈಚಾಚುವುದೇ ಜೀವನದ ಉದ್ದೇಶ. ಅದರಂತೆಯೇ, ವೈಜ್ಞಾನಿಕ ದೃಷ್ಟಿಕೋನವೆನ್ನುವ ಚಿಂತನೆಯ ಸ್ಫಟಿಕದ ತೊರೆಯು ಸಮಾಜದಲ್ಲಿ ಆಳವಾಗಿ ಬೇರೂರಿರುವ ಮೂಢನಂಬಿಕೆಯೆಂಬ ಮರುಭೂಮಿಯಲ್ಲಿ ಇಂಗಿಹೋಗದೆ, ಸದಾ ಜನಮನದಲ್ಲಿ ಹರಿದು ದಾರಿದೀಪವಾಗಲಿ'. ಹಾಗೆಯೇ, ಮನುಷ್ಯ ತನ್ನ ಸುತ್ತಲಿನ ಜಗತ್ತಿನ ಒಡನಾಟದಿಂದ ಪಡೆಯುವ ವಿದ್ವತ್, ಅವನ ದೃಷ್ಟಿಕೋನವನ್ನು ನಿರಂತರವಾಗಿ ವಿಶಾಲಗೊಳಿಸುತ್ತ, ಅವನ ಆಲೋಚನೆ ಹಾಗೂ ಕಾಯಕದಲ್ಲಿ ಪ್ರತಿಫಲಿಸುತ್ತಿರಬೇಕು.

ಈ ಎಲ್ಲಾ ಅಂಶಗಳು ಯಾವ ದೇಶವಾಸಿಗಳ ಜೀವನಮಾರ್ಗ ಆಗಿರುತ್ತವೋ ಮತ್ತು ಅದಕ್ಕೆ ಪೂರಕವಾದ ವ್ಯವಸ್ಥೆ ಇರುತ್ತದೋ ಅದೇ ನೈಜ ಸ್ವಾತಂತ್ರ್ಯದ ಅನುಭವ. ದುರದೃಷ್ಟವಶಾತ್, ಟ್ಯಾಗೋರ್ ಅವರ ಕನಸಿನ ದಾರ್ಶನಿಕ ಸ್ವಾತಂತ್ರ್ಯವನ್ನು ನಾವು ಇನ್ನೂ ದಕ್ಕಿಸಿಕೊಂಡಿಲ್ಲ.

ಕುವೆಂಪು ಅವರು ಹೇಳಿದಂತೆ, ಸ್ವಾತಂತ್ರ್ಯ ಹೋರಾಟ ನಿರಂತರವಾದುದು, ಅದಕ್ಕೆ ಪೂರ್ಣ ವಿರಾಮವಿಲ್ಲ. ನಮ್ಮ ಸ್ವಾತಂತ್ರ್ಯಹರಣವಾಗದಂತೆ ಸದಾ ಎಚ್ಚರ ಕಾಯ್ದುಕೊಂಡು, ಅದಕ್ಕಾಗಿ ನಾವು ನಿತ್ಯವೂ ಹೋರಾಡುತ್ತಲೇ ಇರಬೇಕಾಗುತ್ತದೆ.

ವಾಚಕರ ವಾಣಿ

ಕನಿಷ್ಠ- ಅನಿಷ್ಟ- ಬಲಿಷ್ಠ!

ಬಸವರಾಜ ಬೊಮ್ಮಾಯಿ ಅವರ ಮಂತ್ರಿಮಂಡಲ ಬಹುಶಃ ಈವರೆಗೆ ಕರ್ನಾಟಕ ಕಂಡ ಸರಾಸರಿ ಕನಿಷ್ಠ ವಿದ್ಯಾರ್ಹತೆಯ ಸಚಿವ ಸಂಪುಟವೆಂದು ಕಾಣುತ್ತದೆ ಎಂದಿದ್ದಾರೆ ಡಿ.ಎಸ್.ನಾಗಭೂಷಣ (ವಾ.ವಾ., ಆ. 7). ಮುಂದೆ ಎಲ್ಲಿಯಾದರೂ ಜನಪ್ರತಿನಿಧಿಗಳಿಗೆ ಕನಿಷ್ಠ ವಿದ್ಯಾರ್ಹತೆಯ ಮಾನದಂಡ ನಿಗದಿಪಡಿಸಿದರೆ, ಖಂಡಿತ ರಾತ್ರಿ ಬೆಳಗಾಗುವುದರೊಳಗೆ ಪದವಿಪತ್ರ ಪಡೆಯುವಷ್ಟು ರಾಜಕೀಯ ವ್ಯವಸ್ಥೆ ಬಲಿಷ್ಠವಾಗಿದೆ! ಕೋರ್ಟು- ಕಚೇರಿ ಎಂದು ಹೋದಲ್ಲಿ, ತೀರ್ಪು ಬರುವ ಹೊತ್ತಿಗೆ ಇವರುಗಳ ಅವಧಿಯೇ ಮುಗಿದಿರುತ್ತದೆ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಲಂಚ ಒಪ್ಪಿತ ಮೌಲ್ಯವಾದಾಗ...

ಭ್ರಷ್ಟಾಚಾರದ ಬಗ್ಗೆ ಸಫ್ರಾಜ್ ಚಂದ್ರಗುತ್ತಿ ಅವರ ಲೇಖನ (ಸಂಗತ, ಆ. 7) ಬೆಳಕು ಚೆಲ್ಲಿದೆ. ಹಿಂದೆ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಕೆ.ಪಿ.ಹನುಮಂತರಾಯಪ್ಪ ಅವರು ಕಾರ್ಯಕ್ರಮವೊಂದರಲ್ಲಿ ಮಾತನಾಡುವಾಗ, 'ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಇಲ್ಲದಿದ್ದರೆ ಶೇಕಡ 80ರಷ್ಟು ಸಮಸ್ಯೆಗಳು ಕಡಿಮೆಯಾಗುತ್ತವೆ. ಭ್ರಷ್ಟಾಚಾರ ಎಂಬುದು ಲಂಚ ತೆಗೆದುಕೊಳ್ಳುವ ಮತ್ತು ಕೊಡುವ ಎರಡನ್ನೂ ಒಳಗೊಂಡಿದೆ. ಇವುಗಳಲ್ಲಿ ಯಾವುದಾದರೂ ಒಂದು ಅನೈತಿಕ ಎಂದು ಭಾವಿಸಿ ಅದನ್ನು ಮಾಡದಿದ್ದರೆ ಭ್ರಷ್ಟಾಚಾರದ ಪ್ರಮಾಣ ಕಡಿಮೆಯಾಗುತ್ತದೆ' ಎಂದಿದ್ದರು. ಆದರೆ ಎರಡು ಕಡೆಯಿಂದಲೂ ಲಂಚ ಒಪ್ಪಿತ ಮೌಲ್ಯವಾದಾಗ ಭ್ರಷ್ಟಾಚಾರವೆಂಬ ವೈರಸ್‌ಗೆ ಮದ್ದನ್ನು ಎಲ್ಲಿಂದ ತರುವುದು? ಹೀಗಾಗಿಯೇ, ಲೇಖನದಲ್ಲಿ ಹೇಳಿರುವಂತೆ, ಭ್ರಷ್ಟಾಚಾರ ನಿರ್ಮೂಲನ ಸಾಮರ್ಥ್ಯದ ಬಗ್ಗೆ ಲೋಕಲ್ ಸರ್ಕಲ್ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ಜನ ನಿರಾಶಾವಾದಿಗಳಾಗಿ ಪ್ರತಿಕ್ರಿಯಿಸಿರಬಹುದು.

ಶಿವಕುಮಾರ್ ಎಸ್., ಊರುಕೆರೆ, ತುಮಕೂರು

'ವಲಯಗಳೆಷ್ಟು?' ವೃತ್ತಾಂತ ನೆನಪಾಯಿತು

2021ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ 99.9 ವಿದ್ಯಾರ್ಥಿಗಳು ತೇರ್ಗಡೆಯಾದುದು ತಿಳಿದು ಬಹಳ ಸಂತೋಷವಾಯಿತು. ನನಗೆ 'ವಲಯಗಳೆಷ್ಟು?' ವೃತ್ತಾಂತ ನೆನಪಾಯಿತು. ಒಂದು ಶಾಲೆಯಲ್ಲಿ ನಿಗದಿತ ವೇಳೆಗೆ 'ಭೂಗೋಳ' ಪಠ್ಯ ಪೂರೈಸಿರಲಿಲ್ಲ. ಧೈರ್ಯವಾಗಿರಿ ಅಂತ ಗುರುಹಿರಿಯರಿಂದ ಅಭಯ ಬಂದಿತ್ತು. ಪ್ರಶ್ನೆಪತ್ರಿಕೆಯಲ್ಲಿ ಮೂರೇ ಮೂರು ಪ್ರಶ್ನೆಗಳಿದ್ದವು: ವಲಯಗಳೆಷ್ಟು? ಮೂರು ವಲಯಗಳು ಯಾವುವು? ಉಷ್ಣ, ಶೀತ, ಸಮಶೀತೋಷ್ಣ ವಲಯಗಳನ್ನು ವಿವರಿಸಿ. ಅಂತೂ ಪರೀಕ್ಷೆಗೆ ಹಾಜರಾದವರೆಲ್ಲ ಪ್ರಥಮ ದರ್ಜೆಯಲ್ಲೇ ತೇರ್ಗಡೆಯಾಗಿದ್ದರು (ಶೇ 66.6 ಫಲಿತಾಂಶ).

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಹೆಸರು ಬದಲಾವಣೆ: ಬಾಲಿಶ ನಡೆ

ಇಂದಿರಾ ಕ್ಯಾಂಟೀನ್ ಹೆಸರು ಬದಲಾಯಿಸುವ ಈಗಿನ ಪ್ರಸ್ತಾವದಿಂದ ಹಿಡಿದು ಕೇಂದ್ರದಿಂದ ಈಗಾಗಲೇ ಮೊಟೇರಾ ಸ್ಟೇಡಿಯಂನ ಹೆಸರನ್ನು ಬದಲಿಸಿರುವುದು ಸಂಪಾದಕೀಯದಲ್ಲಿ (ಪ್ರ.ವಾ., ಆ. 9) ವಿಶ್ಲೇಷಿಸಿರುವಂತೆ ಒಂದು ರಾಜಕೀಯ ಚೇಷ್ಟೆಯೇ ಸರಿ. ಇವೆಲ್ಲಾ ರಾಜಕಾರಣಿಗಳ ಬಾಲಿಶ ನಡೆಗಳಿಗೆ ಸಾಕ್ಷಿಯಲ್ಲದೆ ಮತ್ತೇನು? ಆಡಳಿತ ಪಕ್ಷ ಬದಲಾದಂತೆಲ್ಲಾ ಸ್ಟೇಡಿಯಂಗಳು, ಪ್ರಶಸ್ತಿ ಪದಕಗಳು, ಸರ್ಕಾರಿ ಯೋಜನೆಗಳ ಹೆಸರುಗಳು ಹೀಗೆ ಬದಲಾಗುತ್ತಿದ್ದರೆ, ಯಾವುದಾದರೂ ಐತಿಹಾಸಿಕ ಪಂದ್ಯ ನಡೆದ ಸ್ಟೇಡಿಯಂ ನೋಡಲು ವಿದೇಶಿ ಪ್ರವಾಸಿಗನೊಬ್ಬ ದಶಕಗಳ ನಂತರ ಬಂದು ಹುಡುಕಿದರೆ ಅವನಿಗೆ ಗೊಂದಲವಾಗುವುದು ಸಹಜ. ಇದೇ ರೀತಿ ಬೇರೆ ದೇಶದವರೂ ರಾಜಕೀಯ ಮೇಲಾಟದಲ್ಲಿ ತೊಡಗಿದ್ದಿದ್ದರೆ ಇಂಗ್ಲೆಂಡ್‌ನಲ್ಲಿ 1814ರಲ್ಲಿ ಸ್ಥಾಪಿಸಲಾದ ಲಾರ್ಡ್ಸ್ ಕ್ರೀಡಾಂಗಣವಾಗಲಿ, ಒಂದು ಶತಮಾನದಷ್ಟು ಹಳೆಯದಾದ ಆಸ್ಟ್ರೇಲಿಯಾದ ಮೆಲ್ಬರ್ನ್ ಕ್ರಿಕೆಟ್ ಗ್ರೌಂಡ್ ಆಗಲಿ ಇಷ್ಟು ಹೊತ್ತಿಗೆ ಏನೋ ಬೇರೆ ಹೆಸರಿನದ್ದಾಗಿರುತ್ತಿದ್ದವು ಅಲ್ಲವೇ?

ರವಿಕಿರಣ್ ಶೇಖರ್, ಬೆಂಗಳೂರು

ಕಾಯಂ ಖಾತೆ

ಯಾಕೆ ತೆಗೆಯುವಿರಿ
ಖಾತೆಗಾಗಿ ಕ್ಯಾತೆ?
ಕೊಟ್ಟ ಖಾತೆಯ
ಚಂದದಿ ನಿರ್ವಹಿಸಿ
ತೆರೆಯಿರಿ ಜನರ ಮನದೊಳಗೆ
ಒಂದು ಕಾಯಂ ಖಾತೆ!

ಚಾವಲ್ಮನೆ ಸುರೇಶ್ ನಾಯಕ್
ಹಾಲ್ಮುತ್ತೂರು, ಕೊಪ್ಪ

ಆರಂಭವಾಗದ ಪ್ರವೇಶಾತಿ: ಕಾಣದ ವೃತ್ತಿಪರತೆ

ದ್ವಿತೀಯ ಪಿಯು ಫಲಿತಾಂಶ ಪ್ರಕಟವಾಗಿ ಬಹುತೇಕ ಒಂದು ತಿಂಗಳು ಸಮೀಪಿಸುತ್ತಿದ್ದರೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮೊದಲ ವರ್ಷದ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಆರಂಭವಾದಂತಿಲ್ಲ. ಈ ಕುರಿತು ವಿದ್ಯಾರ್ಥಿಗಳು ಕಾಲೇಜುಗಳನ್ನು ಸಂಪರ್ಕಿಸಿದಾಗ, ಇಲಾಖೆಯಿಂದ ಇನ್ನೂ ಆದೇಶ ಬಂದಿಲ್ಲ ಎನ್ನುತ್ತಾರೆ. ಸರ್ಕಾರಿ ಕಾಲೇಜಿನಲ್ಲಿ ಸೀಟು ಸಿಗುವುದೋ ಇಲ್ಲವೋ ಎಂಬ ಭಯದಲ್ಲಿ ವಿದ್ಯಾರ್ಥಿಗಳು ಅನಿವಾರ್ಯವಾಗಿ, ಕೋವಿಡ್ ತಂದೊಡ್ಡಿರುವ ಸಂಕಷ್ಟದ ಸಮಯದಲ್ಲಿಯೂ ದುಬಾರಿ ಶುಲ್ಕ ತೆತ್ತು ಖಾಸಗಿ ಕಾಲೇಜುಗಳತ್ತ ಮುಖ ಮಾಡುತ್ತಿದ್ದಾರೆ.

ಖಾಸಗಿ ಕಾಲೇಜುಗಳು ಪಿಯು ಫಲಿತಾಂಶ ಪ್ರಕಟಣೆಗಿಂತಲೂ ಮೊದಲೇ ಬಹಳಷ್ಟು ಪೂರ್ವ ತಯಾರಿಯೊಂದಿಗೆ ವಿದ್ಯಾರ್ಥಿಗಳನ್ನು ಸೆಳೆಯುವ ಎಲ್ಲ ಪ್ರಯತ್ನಗಳನ್ನೂ ನಡೆಸಿವೆ. ಈ ರೀತಿಯ ವೃತ್ತಿಪರತೆ ಕಾಲೇಜು ಶಿಕ್ಷಣ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗೆ ಏಕಿಲ್ಲ? ಕಳೆದ ಬಾರಿ ಕೂಡ ಮೊದಲನೇ ವರ್ಷದ ಪ್ರವೇಶಾತಿಗೆ ಆನ್‌ಲೈನ್ ಅರ್ಜಿ ತುಂಬುವುದು, ಮೆರಿಟ್ ಪಟ್ಟಿಯಲ್ಲಿದ್ದವರನ್ನು ಮಾತ್ರವೇ ದಾಖಲು ಮಾಡಿಸಿಕೊಳ್ಳುವಂತಹ ಪ್ರಹಸನಗಳಿಂದ ವಿದ್ಯಾರ್ಥಿಗಳು ಕೊನೆಯ ಕ್ಷಣದಲ್ಲಿ ಅನಿವಾರ್ಯವಾಗಿ ಖಾಸಗಿ ಕಾಲೇಜುಗಳತ್ತ ಮುಖ ಮಾಡುವಂತೆ ಆಗಿತ್ತು. ಈ ಬಾರಿಯೂ ಪ್ರವೇಶ ಪ್ರಕ್ರಿಯೆ ಆರಂಭಿಸದಿರುವುದು ಇಲಾಖೆಯು ಖಾಸಗಿ ಕಾಲೇಜುಗಳಿಗೆ ಅನುಕೂಲ ಮಾಡಿಕೊಡುವ ಹುನ್ನಾರವೇ? ಈ ಬಾರಿಯಾದರೂ ಆನ್‌ಲೈನ್‌ನಲ್ಲಿ ಅರ್ಜಿ ಹಾಕುವ ಪ್ರಕ್ರಿಯೆ ಸರಳಗೊಳಿಸಿ, ಬಡ ಮತ್ತು ಆಕಾಂಕ್ಷಿ ವಿದ್ಯಾರ್ಥಿಗಳನ್ನು ಸರ್ಕಾರಿ ಕಾಲೇಜುಗಳು ಹಾಗೂ ಇಲಾಖೆ ಬರಮಾಡಿಕೊಳ್ಳುತ್ತವೆಯೇ?

ಪಿ.ಬಿ.ನಾಯಕ್, ಕಾರವಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಲಿಂಪಿಕ್ಸ್ ವರ್ಷದಲ್ಲೇ ಕ್ರೀಡಾ ಬಜೆಟ್ ಕಡಿತ

ಒಲಿಂಪಿಕ್ಸ್‌ನಲ್ಲಿ ಭಾರತವು ಹಲವು ಪದಕಗಳನ್ನು ಗೆದ್ದ ಬೆನ್ನಲ್ಲೇ, ಈ ಹಣಕಾಸು ವರ್ಷದಲ್ಲಿ ಕ್ರೀಡಾ ವಿಭಾಗಕ್ಕೆ ಕೇಂದ್ರ ಸರ್ಕಾರವು ತನ್ನ ಬಜೆಟ್‌ನಲ್ಲಿ ಮೀಸಲಿರಿಸಿದ್ದ ಅನುದಾನವನ್ನು ಕಡಿತ ಮಾಡಿತ್ತು ಎಂಬ ವಿಷಯ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಒಂದೆಡೆ, ಕ್ರೀಡೆಗೆ ಕೇಂದ್ರ ಸರ್ಕಾರವು ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಮತ್ತೊಂದೆಡೆ ಕ್ರೀಡಾ ವಿಭಾಗಕ್ಕೆ ಬಜೆಟ್‌ನಲ್ಲಿ ಹಾಕಿರುವ ಕತ್ತರಿಯನ್ನು ಬೊಟ್ಟು ಮಾಡಿ ವಿರೋಧ ಪಕ್ಷಗಳು ಟೀಕಿಸುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲೂ ಈ ಬಗ್ಗೆ ಚರ್ಚೆ ನಡೆಯುತ್ತಿದೆ.

2020-21ನೇ ಸಾಲಿನಲ್ಲಿ ಟೋಕಿಯೊ ಒಲಿಂಪಿಕ್ಸ್ ನಿಗದಿಯಾಗಿದ್ದ ಕಾರಣ, ಬಜೆಟ್‌ನಲ್ಲಿ ₹ 2,826 ಕೋಟಿಯನ್ನು ಕ್ರೀಡೆಗೆ ಮೀಸಲಿರಿಸಲಾಗಿತ್ತು. ಕೋವಿಡ್ ಲಾಕ್ಡೌನ್ನ ಕಾರಣ ಈ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಲಿಲ್ಲ. ಲಾಕ್‌ಡೌನ್ ತೆರವಾದ ನಂತರವೂ ಈ ಅನುದಾನದ ಹೆಚ್ಚಿನಂಶ ಬಳಕೆಯಾಗದೇ ಉಳಿಯಿತು. ಒಟ್ಟಾರೆ 2020-21ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ ಸರ್ಕಾರವು ₹ 1,800 ಕೋಟಿ ಮಾತ್ರವೇ ಬಿಡುಗಡೆ ಮಾಡಿತ್ತು. ಕ್ರೀಡಾ ಚಟುವಟಿಕೆಗಳು ನಡೆಯದ ಕಾರಣ ಅನುದಾನ ಖರ್ಚಾಗಿಲ್ಲ ಎಂದು ಸರ್ಕಾರವು ಸಮರ್ಥನೆ ನೀಡಿತ್ತು.

2021-22ನೇ ಸಾಲಿಗೆ ಟೋಕಿಯೊ ಒಲಿಂಪಿಕ್ಸ್ ಮುಂದೂಡಲಾಗಿತ್ತು. ಆದರೆ ಈ ಸಾಲಿನ ಬಜೆಟ್ನಲ್ಲಿ ಕ್ರೀಡೆಗೆ ಮೀಸಲಿರಿಸಿದ ಅನುದಾನದಲ್ಲೇ ಸರ್ಕಾರ ಕಡಿತ ಮಾಡಿತ್ತು. ಈ ಸಾಲಿನಲ್ಲಿ ಒಟ್ಟು ₹ 2,596 ಕೋಟಿ ಅನುದಾನವನ್ನು ಕ್ರೀಡೆಗೆ ಘೋಷಿಸಲಾಗಿದೆ. ಇದರಲ್ಲಿ ಎಷ್ಟು ಅನುದಾನವನ್ನು ಈಗ ಬಳಕೆ ಮಾಡಲಾಗಿದೆ ಎಂಬುದರ ಮಾಹಿತಿಯನ್ನು ಸರ್ಕಾರ ಇನ್ನಷ್ಟೇ ನೀಡಬೇಕಿದೆ.

₹2,826 ಕೋಟಿ — 2020-21ನೇ ಸಾಲಿನಲ್ಲಿ ಮೀಸಲಿರಿಸಿದ್ದ ಅನುದಾನ

₹2,596 ಕೋಟಿ — 2021-22ನೇ ಸಾಲಿನಲ್ಲಿ ಮೀಸಲಿರಿಸಿರುವ ಅನುದಾನ





ಕ್ರೀಡಾಪಟುಗಳನ್ನು ತಯಾರು ಮಾಡುವ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ನೀಡಲಾಗುತ್ತಿರುವ ಅನುದಾನದಲ್ಲೂ ಕಡಿತ ಮಾಡಲಾಗಿದೆ. ಐದು ವರ್ಷಗಳಲ್ಲಿ ಒಂದೇ ಪ್ರಮಾಣದ ಅನುದಾನವನ್ನು ನೀಡಲಾಗುತ್ತಿದೆ. ಒಲಿಂಪಿಕ್ಸ್ ಕ್ರೀಡಾಕೂಟದ ವರ್ಷದಲ್ಲೂ ಈ ಮೊತ್ತವನ್ನು ಏರಿಕೆ ಮಾಡಿಲ್ಲ.



ಕ್ರೀಡಾಕೂಟಗಳಿಗೆ ಕ್ರೀಡಾಪಟುಗಳನ್ನು ತಯಾರುಮಾಡುವ ಭಾರತೀಯ ಕ್ರೀಡಾ ಪ್ರಾಧಿಕಾರಕ್ಕೆ (ಸಾಯ್) ಈ ಹಿಂದಿನ ವರ್ಷಗಳಲ್ಲಿ ನೀಡಲಾಗಿದ್ದ ಅನುದಾನದಲ್ಲಿ ಕಡಿತ ಮಾಡಲಾಗಿತ್ತು. 2021-22ನೇ ಸಾಲಿನಲ್ಲಿ ಪ್ರಾಧಿಕಾರಕ್ಕೆ ನೀಡಿರುವ ಬಜೆಟ್‌ನಲ್ಲಿ ತುಸು ಏರಿಕೆ ಮಾಡಲಾಗಿದೆ. ಆದರೆ ಇದು ಇಡೀ ವರ್ಷಕ್ಕೆ ಮೀಸಲಿರಿಸಿದ್ದ ಅನುದಾನವಾಗಿದ್ದು, ಒಲಿಂಪಿಕ್ಸ್ ತಯಾರಿಗೆ ಈ ಮೊತ್ತದಲ್ಲಿ ಸ್ವಲ್ಪವಷ್ಟೇ ಬಳಕೆಯಾಗಿದೆ ಎಂದು ಮೂಲಗಳು ಹೇಳಿವೆ.

ಕೈಗೆ ಬಾರದ ನಗದು ಪುರಸ್ಕಾರ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಕ್ರೀಡಾಪುಟಗಳಿಗೆ ನಗದು ಪುರಸ್ಕಾರ ಘೋಷಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕ್ರಮವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ. ಜಾವೆಲಿನ್ ಥ್ರೋನಲ್ಲಿ ಚಿನ್ನ ಗೆದ್ದಿರುವ ನೀರಜ್ ಚೋಪ್ರಾ ಅವರು 2019ರಲ್ಲಿ ಮಾಡಿದ್ದ ಟ್ವೀಟ್ ಒಂದನ್ನು ಟ್ಯಾಗ್ ಮಾಡಿರುವ ರಾಹುಲ್ ಗಾಂಧಿ, ಸರ್ಕಾರಗಳು ನೀಡುವ ಭರವಸೆಯನ್ನು ಈಡೇರಿಸುವ ಕೆಲಸ ಮಾಡಬೇಕು ಎಂದು ಟ್ವೀಟ್ ಮಾಡಿದ್ದಾರೆ.

2018ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಭಜರಂಗ್ ಪುನಿಯಾ ಅವರಿಗೆ ಹರಿಯಾಣ ಸರ್ಕಾರವು ₹ 3 ಕೋಟಿ ನಗದು ಪುರಸ್ಕಾರವನ್ನು ಘೋಷಿಸಿತ್ತು. ಆ ಘೋಷಣೆಯ ಟ್ವೀಟ್‌ನ ಸ್ಕ್ರೀನ್ ಶಾಟ್ ಅನ್ನು ಟ್ಯಾಗ್ ಮಾಡಿ 2019ರ ಜನವರಿ 26ರಂದು ಭಜರಂಗ್ ಪುನಿಯಾ ಟ್ವೀಟ್ ಮಾಡಿದ್ದರು.

‘ಕ್ರೀಡಾಪಟುಗಳಿಗೆ ನೀವು ನಗದು ಪುರಸ್ಕಾರ ಘೋಷಿಸಿದಾಗ ಅದು ಅವರಿಗೆ ನೀಡಿದ ಆಮಿಷವಾಗಿರುವುದಿಲ್ಲ, ಬದಲಿಗೆ ಅವರ ಜೆತಯಲ್ಲಿ ಇರುತ್ತೇವೆ ಎಂಬುದರ ಭರವಸೆಯಾಗಿರುತ್ತದೆ. ನೀವು ನೀಡಿದ ಭರವಸೆಯನ್ನು ಈಡೇರಿಸದೇ ಇದ್ದರೆ, ಭವಿಷ್ಯದಲ್ಲಿ ಯಾವ ಕ್ರೀಡಾಪಟುವು ನಿಮ್ಮನ್ನು ನಂಬುತ್ತಾರೆ?’ ಎಂದು ಭಜರಂಗ್ ಪುನಿಯಾ ಬೇಸರ ವ್ಯಕ್ತಪಡಿಸಿದ್ದರು. ಆ ಟ್ವೀಟ್ ಅನ್ನು ರಿಟ್ವೀಟ್ ಮಾಡಿ, ನೀರಜ್ ಚೋಪ್ರಾ ಸಹ ಅದೇ ದಿನ ತಮ್ಮ ಬೇಸರ ವ್ಯಕ್ತಪಡಿಸಿದ್ದರು.

‘ನಾವು ಪದಕ ಗೆದ್ದು ಬಂದಾಗ ಇಡೀ ದೇಶವೇ ಸಂಭ್ರಮಿಸುತ್ತದೆ. ನಾವು ಹರಿಯಾಣದವರು ಎಂದು ರಾಜ್ಯದವರು ಹೆಮ್ಮೆ ಪಡುತ್ತಾರೆ. ನಾವು ವಿಶ್ವ ಕ್ರೀಡಾಜಗತ್ತಿನಲ್ಲಿ ಹರಿಯಾಣದ ಮುದ್ರೆ ಒತ್ತಿದ್ದೇವೆ ಎಂದು ಹೇಳಲಾಗುತ್ತದೆ. ಇವೆಲ್ಲಾ ಒತ್ತಪಟ್ಟಿಗಿರಲಿ. ಆದರೆ ನೀವು ಘೋಷಿಸುವ ನಗದು ಪುರಸ್ಕಾರವನ್ನು ನೀಡಿ. ಆಗ ನಾವು ಹಣಕಾಸಿನ ವಿಚಾರವನ್ನು ಬದಿಗೊತ್ತಿ, ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವತ್ತ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಬಹುದು’ ಎಂದು ನೀರಜ್ ಚೋಪ್ರಾ ಟ್ವೀಟ್ ಮಾಡಿದ್ದರು.

ಈ ಟ್ವೀಟ್‌ಗಳನ್ನು ಬಳಸಿಕೊಂಡು ರಾಹುಲ್ ಗಾಂಧಿ ಸರ್ಕಾರದ ವಿರುದ್ಧ ದಾಳಿ ನಡೆಸಿದ್ದರು. ‘ನೀವು ಕ್ರೀಡಾಪಟುಗಳಿಗೆ ವಿಡಿಯೊ ಕರೆ ಮಾಡಿದ್ದು ಸಾಕು, ಅವರಿಗೆ ಘೋಷಿಸಿದ್ದ ನಗದು ಪುರಸ್ಕಾರವನ್ನು ನೀಡಿ’ ಎಂದು ರಾಹುಲ್ ಹರಿಹಾಯ್ದಿದ್ದರು.



- ಖೇಲೋ ಇಂಡಿಯಾ ಕಾರ್ಯಕ್ರಮಕ್ಕೆ ಆರಂಭದಲ್ಲಿ ₹97.52 ಅನುದಾನ ಒದಗಿಸಲಾಗಿತ್ತು
- ಬರುವ ವರ್ಷದ ಬಜೆಟ್‌ಗಳಲ್ಲಿ ಈ ಅನುದಾನದ ಮೊತ್ತ ಏರುತ್ತಾ ಹೋಯಿತು
- 2019–20ನೇ ಸಾಲಿನಲ್ಲಿ ಈ ಮೊತ್ತ ₹500 ಕೋಟಿಗೆ ತಲುಪಿತು
- 2020–21ರಲ್ಲಿ ಭರ್ಜರಿ ₹890.42 ಕೋಟಿ ನಿಗದಿ ಮಾಡಿದ್ದರೂ 2021-22ರಲ್ಲಿ ಈ ಮೊತ್ತ ₹657.71ಕ್ಕೆ ಇಳಿಯಾಯಿತು

ಖೇಲೋ ಇಂಡಿಯಾಗೆ ಭಾರಿ ಅನುದಾನ

ಪ್ರತಿಭೆಗಳ ಶೋಧಕ್ಕಾಗಿ ಹುಟ್ಟಿಕೊಂಡಿದ್ದ ಮಹತ್ವದ ಖೇಲೋ ಇಂಡಿಯಾ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಭಾರಿ ಅನುದಾನ ನೀಡಿದೆ. ಆರಂಭದಲ್ಲಿ ₹97 ಕೋಟಿ ಅನುದಾನದ ನೀಡಿದ್ದ ಸರ್ಕಾರ ಐದಾರು ವರ್ಷಗಳಲ್ಲಿ ಈ ಮೊತ್ತವನ್ನು ₹890 ಕೋಟಿಗೆ ಏರಿಸಿತು. ಆದರೆ ಕಳೆದ ವರ್ಷದ ಬಜೆಟ್‌ಗೆ ಹೋಲಿಸಿದರೆ, ಸುಮಾರು ₹230 ಕೋಟಿಯಷ್ಟು ಕಡಿತ ಮಾಡಿತು. ಕೇಂದ್ರ ಸರ್ಕಾರ 2021-22ನೇ ಆರ್ಥಿಕ ವರ್ಷದಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಕ್ರೀಡಾ ವಲಯದ ಅನುದಾನವನ್ನು ಕಡಿತ ಮಾಡಿದ್ದರಿಂದ ಖೇಲೋ ಇಂಡಿಯಾದ ಅನುದಾನವೂ ಇಳಿಕೆಯಾಗಿತ್ತು.

ಕೋವಿಡ್ ಸಾಂಕ್ರಾಮಿಕದ ಕಾರಣ ವಿಶ್ವದಾದ್ಯಂತ ಎಲ್ಲಾ ಕ್ರೀಡಾಕೂಟಗಳು ಸ್ಥಗಿತಗೊಂಡವು. ಟೋಕಿಯೊ ಒಲಿಂಪಿಕ್ಸ್ ನಿಗದಿತ ವೇಳಾಪಟ್ಟಿ ಪ್ರಕಾರ ಜರುಗಲಿಲ್ಲ. ಬಹುತೇಕ ಎಲ್ಲಾ ಕ್ರೀಡೆಗಳಲ್ಲಿ ದೇಶೀಯ ಪಂದ್ಯಗಳನ್ನು ರದ್ದುಗೊಳಿಸಲಾಯಿತು. ಹೆಚ್ಚಿನ ಭಾರತೀಯ ಕ್ರೀಡಾಪಟುಗಳಿಗೆ ಯಾವುದೇ ವಿದೇಶಿ ತರಬೇತಿ ಮತ್ತು ಸ್ಪರ್ಧೆ ಸಾಧ್ಯವಾಗಲಿಲ್ಲ. ಲಾಕ್‌ಡೌನ್‌ನಿಂದಾಗಿ ಬಹುತೇಕ ರಾಷ್ಟ್ರೀಯ ಶಿಬಿರಗಳನ್ನು ಮುಚ್ಚಿದ್ದರಿಂದ ಕಳೆದ ವರ್ಷ ಯಾವುದೇ ಚಟುವಟಿಕೆ ಇರಲಿಲ್ಲ. ಮೂಲಸೌಕರ್ಯ ಅಭಿವೃದ್ಧಿ, ಕ್ರೀಡಾಂಗಣಗಳ ಉನ್ನತೀಕರಣದ ದೃಷ್ಟಿಯಿಂದಲೂ ಯಾವುದೇ ಪ್ರಗತಿ ಕಂಡುಬರಲಿಲ್ಲ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಏನಿದು ಖೇಲೋ ಇಂಡಿಯಾ?

ದೇಶದ ಪ್ರತಿಭಾವಂತ ಕ್ರೀಡಾಪಟುಗಳ ಶೋಧಕ್ಕಾಗಿ ಕೇಂದ್ರ ಸರ್ಕಾರ 2018ರಲ್ಲಿ ಜಾರಿಗೊಳಿಸಿದ ಕಾರ್ಯಕ್ರಮವೇ ‘ಖೇಲೋ ಇಂಡಿಯಾ’. ಒಲಿಂಪಿಕ್ಸ್‌ನಲ್ಲಿ ಸ್ಪರ್ಧೆ ಮಾಡಬಲ್ಲ ಕ್ರೀಡಾಳುಗಳನ್ನು ಹುಡುಕಲು ದೀರ್ಘಕಾಲೀನ ಕಾರ್ಯಕ್ರಮವಾಗಿ ಖೇಲೋ ಇಂಡಿಯಾ ರೂಪುತಳೆಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಬಲ್ಲ ಕ್ರೀಡಾಪಟುಗಳಿಗೆ ಅಗತ್ಯ ಮೂಲಸೌಕರ್ಯ, ತರಬೇತಿ, ಭತ್ಯೆ ನೀಡಲಾಗುತ್ತದೆ. ಈ ಯೋಜನೆಯು ದೇಶದಲ್ಲಿ ಕ್ರೀಡಾ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಮತ್ತು ಎಲ್ಲಾ ಕ್ರೀಡೆಗಳಿಗೆ ಬಲವಾದ ಚೌಕಟ್ಟನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ.

ಪ್ರತಿ ವರ್ಷ ಜನವರಿ ಅಥವಾ ಫೆಬ್ರವರಿಯಲ್ಲಿ ಖೇಲೋ ಇಂಡಿಯಾ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಉದ್ಘಾಟನಾ ಆವೃತ್ತಿಯಲ್ಲಿ 16 ಕ್ರೀಡೆಗಳಲ್ಲಿ ಸ್ಪರ್ಧಿಗಳು ಭಾಗವಹಿಸಿದ್ದರು. ಬಿಲ್ಲುಗಾರಿಕೆ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಮೊದಲಾದ ಕ್ರೀಡೆಗಳಿಗೆ ಆದ್ಯತೆ ನೀಡಲಾಗಿದೆ. ಪ್ರತಿ ಕ್ರೀಡೆಗೂ ಪ್ರತ್ಯೇಕ ‘ಪ್ರತಿಭಾ ಶೋಧ ಸಮಿತಿ’ ಇದೆ.

ಟೋಕಿಯೊ ಒಲಿಂಪಿಕ್ಸ್ ನಂತರ ಖೇಲೋ ಇಂಡಿಯಾ ಗೇಮ್ಸ್ 2021 ಅನ್ನು ಹರಿಯಾಣದ ಪಂಚಕುಲಾದಲ್ಲಿ ಆಯೋಜಿಸಲಾಗಿದೆ. ಮೊದಲ ಆವೃತ್ತಿಯಲ್ಲಿ ಹರಿಯಾಣ ಅತಿಹೆಚ್ಚು ಪದಕ ಪಡೆದ ಹೆಗ್ಗಳಿಕೆ ಗಳಿಸಿತ್ತು. ಎರಡನೇ ಮತ್ತು ಮೂರನೇ ಆವೃತ್ತಿಯಲ್ಲಿ ಮಹಾರಾಷ್ಟ್ರ ಮೇಲುಗೈ ಸಾಧಿಸಿತ್ತು.

ಒಲಿಂಪಿಕ್ಸ್‌ಗೆ ಸಿದ್ಧತೆ: ಯುವೆ ಹಾನ್ ಆಕ್ಷೇಪ

ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ನೀರಜ್ ಚೋಪ್ರಾ ಅವರ ಮುಖ್ಯ ತರಬೇತುದಾರ ಆಗಿರುವ 58 ವರ್ಷದ ಜರ್ಮನಿಯ ಯುವೆ ಹಾನ್ ಅವರು ಕ್ರೀಡಾಕೂಟಕ್ಕೆ ಮಾಡಿಕೊಂಡ ಸಿದ್ಧತೆ ಬಗ್ಗೆ, ತಿಂಗಳ ಹಿಂದೆ ಆಕ್ಷೇಪ ವ್ಯಕ್ತಪಡಿಸಿದ್ದರು. ಒಲಿಂಪಿಕ್ಸ್‌ಗೆ ನೀಡುವ ತರಬೇತಿ ಯೋಜಿತವಾಗಿಲ್ಲ ಎಂದಿದ್ದ ಅವರು, ಕ್ರೀಡಾಪಟುಗಳ ಆಹಾರಕ್ರಮವೂ ಸೂಕ್ತವಾಗಿಲ್ಲ ಎಂದಿದ್ದರು. ಜಾವೆಲಿನ್ ಎಸೆತ ಸ್ಪರ್ಧೆಯಲ್ಲಿ 100 ಮೀಟರ್ ಎಸೆದ ದಾಖಲೆ ಇವರದ್ದು. ಈ ಸಾಧನೆ ಮಾಡಿದ ಜಗತ್ತಿನ ಏಕೈಕ ವ್ಯಕ್ತಿ ಇವರು.

ದೇಶದ ಅಗ್ರ ಕ್ರೀಡಾ ಸಂಸ್ಥೆಗಳಾದ ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಮತ್ತು ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ (ಎಎಫ್‌ಐ) ಈ ಬೃಹತ್ ಕ್ರೀಡಾಕೂಟಕ್ಕೆ ಕ್ರೀಡಾಪಟುಗಳನ್ನು ತಯಾರಿಸಲು ಸಾಕಷ್ಟು ಮುತುವರ್ಜಿ ವಹಿಸಿಲ್ಲ ಎಂದು ಆರೋಪಿಸಿದ್ದರು. ತನಗೆ ಒಪ್ಪಿಗೆಯಿಲ್ಲದಿದ್ದರೂ ಒಪ್ಪಂದಕ್ಕೆ ಸಹಿ ಹಾಕಲು ಬೆದರಿಕೆ ಒಡ್ಡಲಾಗಿತ್ತು ಎಂದು ಅವರು ಆರೋಪಿಸಿದ್ದರು.

‘ಪಟಿಯಾಲದಲ್ಲಿ ತರಬೇತಿ ಪಡೆಯುತ್ತಿರುವ ನೀರಜ್ ಚೋಪ್ರಾ ಅವರನ್ನು ಯುರೋಪ್‌ಗೆ ತರಬೇತಿ ಶಿಬಿರಕ್ಕೆ ಕಳುಹಿಸಬೇಕಿತ್ತು. ಆದರೆ ಈ ಎರಡೂ ಸಂಸ್ಥೆಗಳಿಗೆ ಈ ಬಗ್ಗೆ ಆಸಕ್ತಿಯಿಲ್ಲ. ಶಿಬಿರಗಳ ಹೊರತಾಗಿ, ಪೌಷ್ಠಿಕಾಂಶ ತಜ್ಞರ ಸಲಹೆಯಂತೆ ಕ್ರೀಡಾಪಟುಗಳಿಗೆ ಪೂರಕ ಪದಾರ್ಥಗಳನ್ನು ಒದಗಿಸಲು ಕೇಳಿದಾಗಲೂ ಸರಿಯಾದ ಉತ್ತರ ಬರಲಿಲ್ಲ’ ಎಂದು ಆರೋಪಿಸಿದ್ದರು.

ದೆಹಲಿ ಹೈಕೋರ್ಟ್‌ಗೆ ಕೇಂದ್ರ ಮಾಹಿತಿ

ಟ್ವಿಟರ್‌ನಿಂದ ಮೇಲ್ನೋಟಕ್ಕೆ ಮಾತ್ರ ಐಟಿ ನಿಯಮಗಳ ಪಾಲನೆ

ನವದೆಹಲಿ (ಪಿಟಿಐ): 'ಕಾಯಂ ಆಧಾರದಲ್ಲಿ ಮುಖ್ಯ ಕಾನೂನು ಪಾಲನೆ ಅಧಿಕಾರಿ (ಸಿಸಿಒ), ಸ್ಥಾನಿಕ ಕುಂದುಕೊರತೆ ಅಧಿಕಾರಿ (ಆರ್‌ಜಿಒ) ಮತ್ತು ನೋಡಲ್ ಅಧಿಕಾರಿಯನ್ನು ನೇಮಿಸುವ ಮೂಲಕ ಟ್ವಿಟರ್ ಮೇಲ್ನೋಟಕ್ಕೆ ನೂತನ ಐಟಿ ನಿಯಮಗಳನ್ನು ಪಾಲನೆ ಮಾಡಿರುವಂತೆ ತೋರುತ್ತದೆ' ಎಂದು ಕೇಂದ್ರ ಸರ್ಕಾರ ಮಂಗಳವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಟ್ವಿಟರ್ ಐಟಿ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ ಎಂದು ಆರೋಪಿಸಿ ಸಲ್ಲಿಕೆಯಾಗಿರುವ ಅರ್ಜಿ ವಿಚಾರಣೆ ವೇಳೆ ಕೇಂದ್ರ ಸರ್ಕಾರ ಹೈಕೋರ್ಟ್‌ಗೆ ಈ ಮಾಹಿತಿ ನೀಡಿದೆ. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರೇಖಾ ಪಲ್ಲಿ ಅವರು, 'ಸರ್ಕಾರವು ತನ್ನ ಹೇಳಿಕೆ ಬಗ್ಗೆ ಎರಡು ವಾರಗಳಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ. ಅಕ್ಟೋಬರ್ 5 ರಂದು ಮುಂದಿನ ವಿಚಾರಣೆ ನಡೆಯಲಿದೆ.

'ಹೊಸ ಕಾನೂನಿನ ಅನುಸಾರ ಟ್ವಿಟರ್ ಮೂವರು ಅಧಿಕಾರಿಗಳನ್ನು ನೇಮಿಸಿದೆ. ಆ ಕುರಿತು ಇ-ಮೇಲ್ ಬಂದಿದೆ. ಆದರೂ ಪ್ರಮಾಣಪತ್ರ ಸಲ್ಲಿಸುವುದು ಉತ್ತಮ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಚೇತನ್ ಶರ್ಮಾ ಪೀಠಕ್ಕೆ ತಮ್ಮ ಅಭಿಪ್ರಾಯ ತಿಳಿಸಿದರು.

'ಟ್ವಿಟರ್, ಮೂರು ಹುದ್ದೆಗಳಿಗೆ ಕಾಯಂ ಅಧಿಕಾರಿಗಳನ್ನು ನೇಮಿಸಿದೆ. ನೇಮಕವಾದ ಅಧಿಕಾರಿಗಳು ಪೂರ್ಣಾವಧಿ ಆಧಾರದಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ನ್ಯಾಯಾಲಯ ನಮಗೆ ದೀರ್ಘಾವಧಿ ಸಮಯ ನೀಡಿತ್ತು. ಅಂತಿಮವಾಗಿ ನಾವು ಅಧಿಕಾರಿಗಳನ್ನು ನೇಮಿಸಿದ್ದೇವೆ' ಎಂದು ಟ್ವಿಟರ್ ಪರ ವಕೀಲ ಸಜನ್ ಪೂವಯ್ಯ ಹೇಳಿದರು.

ಮುಖ್ಯ ಕುಂದುಕೊರತೆ ಅಧಿಕಾರಿಯನ್ನು ಪೂರ್ಣಾವಧಿಗೆ ನೇಮಕ ಮಾಡದ ಹಿನ್ನೆಲೆ ಜುಲೈ 28 ರಂದು ನ್ಯಾಯಾಲಯ ಟ್ವಿಟರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತ್ತು. ಹೊಸ ಐಟಿ ನಿಯಮಗಳನ್ನು ಟ್ವಿಟರ್ ಪಾಲಿಸುತ್ತಿಲ್ಲ ಎಂದು ಹೇಳಿತ್ತು. 'ನ್ಯಾಯಾಲಯ ನಿಮಗೆ ದೀರ್ಘಾವಧಿ ಸಮಯ ನೀಡುತ್ತಿದೆ. ಆದರೆ ನ್ಯಾಯಾಲಯ ಮುಂದೆಯೂ ಅದನ್ನು ಮಾಡುತ್ತದೆ ಎಂದು ನಿರೀಕ್ಷಿಸಬೇಡಿ' ಎಂದು ಟ್ವಿಟರ್‌ಗೆ ಎಚ್ಚರಿಸಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇಶದ ಸರ್ವೋಚ್ಚ ನ್ಯಾಯಾಲಯವಾಗಿರುವ ಸುಪ್ರೀಂ ಕೋರ್ಟ್ ದೆಹಲಿಯಲ್ಲಿದ್ದು, ದೇಶದ ಇತರ ಭಾಗಗಳಲ್ಲೂ ಅದರ ಪೀಠ ರಚನೆ ಮಾಡುವ ಪ್ರಸ್ತಾವವಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸ್ವಾತಂತ್ರ್ಯಾನಂತರ ಇದೇ ಮೊದಲ ಬಾರಿಗೆ ಇಂತಹ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ. ಕೋಲ್ಕತ್ತ, ಚೆನ್ನೈ ಹಾಗೂ ಮುಂಬೈ ನಗರಗಳಲ್ಲಿ ಸುಪ್ರೀಂ ಕೋರ್ಟ್‌ನ ಶಾಖೆಗಳು ರಚನೆಯಾಗಲಿವೆ ಎಂಬ ಉಲ್ಲೇಖವಿದೆ. ದೇಶದ ವಿವಿಧ ಭಾಗದ ಜನರು ಅರ್ಜಿ ಸಲ್ಲಿಸಲು ದೆಹಲಿಗೆ ಹೋಗುವ ಅನಿವಾರ್ಯತೆ ಇನ್ನು ಇರುವುದಿಲ್ಲ ಎಂದು ಹೇಳಲಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಪ್ರೀಂ ಕೋರ್ಟ್ ಪೀಠ ರಚನೆ ಪ್ರಸ್ತಾವ ಸುಳ್ಳು ಎಂದು ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ಸ್ಪಷ್ಟಪಡಿಸಿದೆ. ಪೀಠ ರಚನೆ ಸಂಬಂಧ ಕೇಂದ್ರ ಸರ್ಕಾರವು ಇದುವರೆಗೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಹಾಗೂ ಘೋಷಣೆ ಹೊರಡಿಸಿಲ್ಲ ಎಂದು ತಿಳಿಸಿದೆ.

ಗುಂಡಣ್ಣ

© 2021 by King Features Syndicate, Inc. World Rights reserved
www.Blondie.com

ದಿನ ಭವಿಷ್ಯ

ಬುಧವಾರ ಆಗಸ್ಟ್ 11, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ತೃತೀಯ ಗಂ. 26-56 (ಸಾ. 5-00) ಬುಧವಾರ ನಿತ್ಯ ನಕ್ಷತ್ರ ಪೂರ್ವಫಲ್ಗುಣಿ ಗಂ. 11-2 (ಹ. 10-38) ಶಿವ ನಾಮ ಯೋಗ ಗಂ. 35-33 ಗರಜ ಕರಣ ಗಂ. 26-56 ವಿಷ ಗಂ. 28-37 ಅಮೃತ ಗಂ. 57-63 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-10 ಸೂರ್ಯಾಸ್ತ: 6-39 ಅದೃಷ್ಟ ಸಂಖ್ಯೆ 6 9

ಮೇಷ: ಉದ್ಯೋಗದಲ್ಲಿ ಯಶಸ್ಸು. ಕುತಂತ್ರಿಗಳ ಕಾರಾಸ್ಥಾನಕ್ಕೆ ಬಲಿಯಾಗುವ ಸಾಧ್ಯತೆ. ಆರೋಗ್ಯದಲ್ಲಿ ಸಾಮಾನ್ಯ ಪ್ರಗತಿ. ವಿದ್ಯಾರ್ಥಿಗಳಿಗೆ ಶ್ರಮ ಹೆಚ್ಚಾಗಲಿದೆ.

ವೃಷಭ: ಮಕ್ಕಳಿಂದ ಸಂತೋಷದ ವಾತಾವರಣ. ತಂದೆ ತಾಯಿಗಳಿಂದ ಮಕ್ಕಳಿಗೆ ಪ್ರೋತ್ಸಾಹ. ಉದ್ಯೋಗ ಮತ್ತು ವ್ಯಾಪಾರದಲ್ಲಿ ಅಭಿವೃದ್ಧಿ. ಆರೋಗ್ಯದಲ್ಲಿ ಉತ್ತಮ ಸುಧಾರಣೆ.

ಮಿಥುನ: ವ್ಯವಹಾರಸ್ಥರಿಗೆ ಉತ್ತಮ ಫಲ. ಕೋರ್ಟ್ ಸಂಬಂಧಿ ವ್ಯವಹಾರಗಳಲ್ಲಿ ಪ್ರಗತಿ. ಜಯಲಕ್ಷ್ಮಿ ಅನುಗ್ರಹವಿದೆ. ಆರೋಗ್ಯದ ಬಗ್ಗೆ ವಿಶೇಷವಾದ ಎಚ್ಚರ ಅಗತ್ಯ. ಮನೆಯಲ್ಲಿ ಆನಂದದ ವಾತಾವರಣ.

ಕರ್ಕಾಟಕ: ವಿದ್ಯಾರ್ಥಿಗಳಿಗೆ ಒತ್ತಡ ಹೆಚ್ಚಲಿದೆ. ವಿವಾಹಾಕಾಂಕ್ಷಿಗಳಿಗೆ ವಿವಾಹ ಭಾಗ್ಯ. ಕೆಲಸ ಕಾರ್ಯಗಳಲ್ಲಿ ಕ್ಷಿಪ್ರ ಪ್ರಗತಿ. ಆರ್ಥಿಕ ರಂಗದಲ್ಲಿ ಸಮಾಧಾನ. ಉದ್ಯೋಗರಂಗದಲ್ಲಿ ಬದಲಾವಣೆ ಸಾಧ್ಯತೆ.

ಸಿಂಹ: ರಾಜಕೀಯ ವಿಷಯದಲ್ಲಿ ಗಂಭೀರ ಚಿಂತನೆಗಳು. ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ದಿನದ ಅಂತ್ಯದಲ್ಲಿ ಶಾಂತಿಯ ವಾತಾವರಣ ನೆಲೆಸಲಿದೆ. ಬಂಧುಗಳ ಆಗಮನ ನಿರೀಕ್ಷೆ.

ಕನ್ಯಾ: ಉದ್ಯೋಗ ವಿಷಯದಲ್ಲಿ ಆತ್ಮೀಯರಿಂದ ಸೂಕ್ತ ಸಲಹೆ. ಭೂ ಸಂಬಂಧಿ ವಿಷಯಗಳಲ್ಲಿ ಜಯ. ಮನಸ್ಸಿಗೆ ಸಂತೋಷದ ದಿನ. ಉತ್ತಮ ಬಾಂಧವ್ಯ ಕೂಡಿ ಬರುವ ಸಾಧ್ಯತೆ.

ತುಲಾ: ಉದ್ಯೋಗ ರಂಗದಲ್ಲಿನ ಒತ್ತಡ ಕಡಿಮೆಯಾಗಿ ಮನಸ್ಸಿಗೆ ಸಂತೋಷ. ಮೇಲಾಧಿಕಾರಿಗಳಿಂದ ಪ್ರೋತ್ಸಾಹ. ಆರ್ಥಿಕ ಸುಧಾರಣೆಯಾಗಿ ಸಂಕಷ್ಟಗಳ ನಿವಾರಣೆ.

ವೃಶ್ಚಿಕ: ದೂರದೂರಿಗೆ ಕುಟುಂಬ ಸಮೇತ ಪ್ರಯಾಣ ಸಾಧ್ಯತೆ. ವ್ಯವಹಾರದಲ್ಲಿ ಉತ್ತಮ ಫಲ. ಆರೋಗ್ಯದಲ್ಲಿ ವೃದ್ಧಿ. ಆರ್ಥಿಕ ವ್ಯವಸ್ಥೆಯಲ್ಲಿ ಸಫಲತೆ. ಮಕ್ಕಳಿಂದ ಹರ್ಷ ಉಂಟಾಗಲಿದೆ.

ಧನು: ಕಾರ್ಯಗಳಲ್ಲಿ ಉತ್ತಮ ಫಲ ನಿರೀಕ್ಷಿಸಬಹುಸು ಸಾಂಸಾರಿಕವಾಗಿ ಶಾಂತಿಯುತ ವಾತಾವರಣ ಲಭಿಸಲಿದೆ. ಕಳೆದುಹೋದ ವಸ್ತುಗಳು ಪುನಃ ಪ್ರಾಪ್ತಿ. ಆರೋಗ್ಯದಲ್ಲಿ ಅಚಾತುರ್ಯ ಬೇಡ.

ಮಕರ: ತೀರ್ಥಕ್ಷೇತ್ರ ಯಾತ್ರೆಯನ್ನು ಚಿಂತಿಸುವ ದಿನ. ಆರೋಗ್ಯದಲ್ಲಿ ಏರಿಳಿತಗಳು ಕಂಡುಬರುವ ಸಾಧ್ಯತೆ. ಉದ್ಯೋಗದಲ್ಲಿ ಸಮಾಧಾನ. ಮಾನಸಿಕ ನೆಮ್ಮದಿ.

ಕುಂಭ: ಉದ್ಯೋಗ ಮತ್ತು ಆರೋಗ್ಯದಲ್ಲಿ ಗೊಂದಲಕರ ವಾತಾವರಣ. ಯಾವುದೇ ಭಯಕ್ಕೆ ಕಾರಣವಿಲ್ಲ. ವಾಹನಗಳಿಂದ ಲಾಭ. ಕ್ಷಣಿಕ ದುಗುಡ ದುಮ್ಮಾನಗಳ ನಡುವೆಯೂ ನೆಮ್ಮದಿ ಕಾಣುವಿರಿ.

ಮೀನ: ಕೃಷಿಕರಿಗೆ ಸ್ವಲ್ಪ ಮಟ್ಟಿನ ಆತಂಕ ಎದುರಾಗುವ ಸಾಧ್ಯತೆ. ಉದ್ಯೋಗದಲ್ಲಿ ಯಶಸ್ಸು, ಕೀರ್ತಿ ಆರ್ಥಿಕ ಲಾಭ. ಆಲಸ್ಯ ಅನಾರೋಗ್ಯ ಸಾಧ್ಯತೆ. ಮೇಲಾಧಿಕಾರಿಗಳಿಂದ ಪ್ರಶಂಸೆ.

ನಿಮ್ಮ ಜನ್ಮದಿನ 11-ಆಗಸ್ಟ್: ಇಂದು ಅತ್ಯಂತ ಶುಭದಾಯಕವಾಗಿದ್ದು, ಅನುಕೂಲಕರ ವಾತಾವರಣದಿಂದಾಗಿ ಸಂತೋಷವೇ ಜಾಸ್ತಿ. ಸ್ವಂತ ಉದ್ಯೋಗದಲ್ಲಿ ಅತ್ಯಂತ ಶ್ರಮದಿಂದ ಯಶಸ್ಸು ಪ್ರಾಪ್ತಿ. ಸಾಂಸಾರಿಕ ಜೀವನದಲ್ಲಿ ಉತ್ತಮ ಪ್ರತಿಕ್ರಿಯೆ. ವಿದ್ಯಾರ್ಥಿಗಳಿಗೆ ಮಾನಸಿಕ ಗೊಂದಲ ನಿವಾರಣೆಯಾಗಲಿದೆ. ಕೃಷಿ ಕ್ಷೇತ್ರದಲ್ಲಿರುವವರಿಗೆ ನಿರಾಸಕ್ತಿ ಮೂಡುವ ಸಾಧ್ಯತೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ದ್ವಂದ್ವಗಳ ಸಮನ್ವಯತೆ

ಬಿಂದು ವಿಸರಗಳನುವು, ವಂಕುಸರಲಗಳನುವು |
ಚೆಂದ ಕಣ್ಣಿಗೆ ವರ್ಣ ವಿವಿಧಂಗಳನುವು ||
ಚೆಂದ ವೇಗ ಸ್ತಿಮಿತದನುವು, ಹುಳಿಯುಪ್ಪನುವು |
ದ್ವಂದ್ವದನುವುಗಳಿಂದ – ಮಂಕುತಿಮ್ಮ || 448 ||

ಪದ-ಅರ್ಥ: ವಿಸರ = ವಿಸ್ತಾರ, ಅನುವು = ಅವಕಾಶ, ಹೊಂದಾಣಿಕೆ, ವಂಕು = ವಕ್ರ, ವರ್ಣವಿವಿಧಂಗಳನವು = ವರ್ಣವಿವಿಧಂಗಳ + ಅನುವು, ಸ್ತಿಮಿತ = ಸ್ಥಿಮಿತ, ಹುಳಿಯುಪ್ಪನುವು = ಹುಳಿ + ಉಪ್ಪಿನ + ಅನುವು, ದ್ವಂದ್ವದನುವುಗಳಿಂದ = ದ್ವಂದ್ವದ + ಅನುವುಗಳಿಂದ

ವಾಚ್ಯಾರ್ಥ: ಚುಕ್ಕೆ ಮತ್ತು ವಿಸ್ತಾರಗಳ ಹೊಂದಾಣಿಕೆ, ವಕ್ರ ಮತ್ತು ನೇರಗಳ ಹೊಂದಾಣಿಕೆ, ವಿವಿಧ ಬಣ್ಣಗಳ ಹೊಂದಾಣಿಕೆ ಕಣ್ಣಿಗೆ ತುಂಬ ಚೆಂದ. ಅಂತೆಯೇ ವೇಗ ಮತ್ತು ಸ್ಥಿಮಿತಗಳ ನಡುವಿನ ಹೊಂದಾಣಿಕೆ, ಹುಳಿ ಮತ್ತು ಉಪ್ಪುಗಳ ಹೊಂದಾಣಿಕೆ. ಈ ದ್ವಂದ್ವಗಳ ಹೊಂದಾಣಿಕೆಯೇ ಅಂದ.

ವಿವರಣೆ: ಸಾಮಾನ್ಯ ಅರ್ಥದಲ್ಲಿ ದ್ವಂದ್ವವೆಂದರೆ ತಾಕಲಾಟ, ಪರಸ್ಪರ ವಿರೋಧ ಮತ್ತು ಹೊಂದಾಣಿಕೆಯಾಗದಂಥವುಗಳು ಎಂಬ ಭಾವನೆ ಬರುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ದ್ವಂದ್ವಗಳು ಎನ್ನಿಸಿದವುಗಳು ಒಂದಕ್ಕೊಂದು ಪೂರಕವಾಗಿಯೇ ಇವೆ. ರಾತ್ರಿ ಇರುವುದರಿಂದ ಹಗಲಿಗೊಂದು ಅರ್ಥವಿದೆ. ಸದಾಕಾಲ ಹಗಲೇ ಇರುವುದಾದರೆ ರಾತ್ರಿಯ ಇರುವಿಕೆಯೇ ಇಲ್ಲ. ಮರುದಿನ ಬೆಳಗಾದೀತು ಎಂಬ ನಂಬಿಕೆಯೇ ರಾತ್ರಿಯನ್ನು ಸುಖಕರವಾಗಿಸುತ್ತದೆ. ರಾತ್ರಿಯ ನೆನಪು ಹಗಲನ್ನು ಹಸಿರಾಗಿಡುತ್ತದೆ ಸಾವಿರುವುದರಿಂದ ಬದುಕಿಗೊಂದು ಅರ್ಥ. ದುಃಖವಿರುವುದರಿಂದ ಸುಖದ ಸಂತೋಷ ಹೆಚ್ಚು. ಶ್ರೀರಾಮನ ಬಗ್ಗೆ ವಾಲ್ಮೀಕಿ ಹೇಳುವ ಮಾತು ಹೀಗಿದೆ.

ವಿಷ್ಣುನಾ ಸದೃಶೋ ವಿರ್ಯೇ ಸೋಮವತ್ ಪ್ರಿಯದರ್ಶನ:|
ಕಾಲಾಗ್ನಿ ಸದೃಶ: ಕ್ರೋಧೇ ಕ್ಷಮಯಾ ಪೃಥವೀ ಸಮ:||

‘ರಾಮನು ಪರಾಕ್ರಮದಲ್ಲಿ ವಿಷ್ಣುವಿನಂಥವನು ಆದರೂ ನೋಟದಲ್ಲಿ ಚಂದ್ರನಂತೆ ಪ್ರಿಯನಾದವನು. ಕೋಪಗೊಂಡಾಗ ಆತ ಪ್ರಳಯಾಗ್ನಿ. ಆದರೆ ಕ್ಷಮಿಸುವದರಲ್ಲಿ ಭೂಮಾತೆಯಂಥವನು’.

ಭವಭೂತಿಯ ಇನ್ನೊಂದು ಮಾತು ಹೀಗಿದೆ ‘ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ ಲೋಕೋತ್ತರಾಣಾಂ ಚೇತಾಂಸಿ ಕೋಹಿ ವಿಜ್ಞಾತುಮರ್ಹತಿ|| ‘ಲೋಕೋತ್ತರರಾದ ಮಹಾನುಭಾವರ ಹೃದಯವನ್ನು ಹೇಗೆ ತಾನೇ ಕಂಡುಕೊಳ್ಳಲಾದೀತು? ಅದು ವಜ್ರಕ್ಕಿಂತ ಕಠಿಣವಾಗಿರುವಂತೆ, ಹೂವಿಗಿಂತ ಮೃದುವೂ ಆಗಿರುವಂಥದ್ದು’. ಕಾಠಿಣ್ಯ ಮತ್ತು ಮೃದುತ್ವ, ಪ್ರಳಯಾಗ್ನಿ ಕೋಪ ಮತ್ತು ಭೂತಾಯಿಯ ಕ್ಷಮಾಗುಣ, ಇವು ಪರಸ್ಪರ ವಿರುದ್ಧವೆನ್ನಿಸುವಂಥವುಗಳು. ಆದರೆ ಮಹಾಪುರುಷರಲ್ಲಿ, ಪ್ರಕೃತಿಯಲ್ಲಿ ಅವು ಒಂದಕ್ಕೊಂದು ಪೂರಕವಾದವು.

ಸಮಗ್ರದರ್ಶನದಲ್ಲಿ ಯಾವುದೂ ದ್ವಂದ್ವ ಅಥವಾ ವಿರೋಧವಲ್ಲ. ವಿಸ್ತಾರದಲ್ಲಿ ಬಿಂದು ವಿಶಿಷ್ಟ. ನೇರವಾದದ್ದರ ನಡುವೆ ವಕ್ರಗತಿ ತುಂಬ ಚೆಂದ. ವಾಹನದಲ್ಲಿ ಬರೀ ಬ್ರೇಕ್ ಇದ್ದರೆ ಮುಂದೆ ಸಾಗದು. ಬರೀ ವೇಗವರ್ಧಕ (accelerator) ಇದ್ದರೆ ಅಪಾಯ ತಪ್ಪದು. ನಿಂಬೆಹಣ್ಣಿನ ಹುಳಿ ಪಾನಕಕ್ಕೆ ಎಷ್ಟು ಬೇಕೋ ಅಷ್ಟೇ ಸಕ್ಕರೆ, ಉಪ್ಪೂ ಬೇಕು. ಹೀಗೆ ಪರಸ್ಪರ ವಿರೋಧಿಗಳೆಂದು ತೋರುವುವು ಸೇರಿದಾಗ ಸುಂದರ ಸಮನ್ವಯತೆ ಸಾಧ್ಯವಾಗುತ್ತದೆ. ❖

ಪದಬಂಧ 4685

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭರಣಿಯ ತುಂಬಾ ಇರುವ ನಗ (4)
3.ಮೈ ತುಂಬಾ ಮುಳ್ಳುಗಳಿರುವ ಸೂಕರ (4)
5.ಪ್ರಸಾದವನ್ನು ಹೀಗೂ ಹೇಳುವರು (3)
7.ಭವನದಲ್ಲಿರುವ ಸಂಸಾರ! (2)
9.ಯೌವ್ವನದಲ್ಲಿ ನೋಡಿದ ಅರಣ್ಯ (2)
10.ಪತ್ರಿಕೆಗಳಲ್ಲಿನ ಉದ್ದ ಸಾಲು (3)
11.ಪಿನಾಕದ ಹತ್ತಿರವಿರುವ ಕೋಗಿಲೆ (2)
12.ಬಣವೆ ಹಾಕುವ ಗುಂಪು ತಿರುಗಿದೆಯಲ್ಲಾ? (2)
14.ವನದಲ್ಲಿ ಹುಟ್ಟಿದುದು (3)
16.ಬೆಟ್ಟದ ಮೇಲಿನ ಕೋಟೆ (4)
17.ದೇಗುಲದ ಸಭಾ ಮಂಟಪ (4)

ಮೇಲಿಂದ ಕೆಳಕ್ಕೆ

1.ಒಕ್ಕಲುತನವನ್ನು ಹೀಗೂ ಹೇಳುವರು (3)
2. ದುಡ್ಡು ಇಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆ (2)
3.ಮುದುಕನಿಗಾದ ಸಂತೋಷ! (2)
4.ಮಂತ್ರಿ ಇಲ್ಲಿದ್ದಾನೆ (3)
6.ಎಲ್ಲರೂ ಒಟ್ಟಿಗೆ ಮಾಡುವ ಊಟ (7)
8.ಕಾಡಿನ ರಕ್ಷಕನೀತ (5)
9.ಗುಂಪುಗಳನ್ನಾಗಿ ವರ್ಗೀಕರಿಸುವುದು (5)
11.ದೊಡ್ಡ ಬಂದೂಕು (3)
13.ನೆಂಟರ ಸಮೂಹ (3)
14.ಇಯತ್ತೆ ಅಥವಾ ತರಗತಿ (2)
15.ಜವಾನನ ಸುತ್ತ ನೆರೆದ ಗುಂಪು! (2)



4684ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಚರಕ 3.ಪಗಾರ 5.ಕರೆ 6.ಟಗರು 7.ನೆಪ 9.ಪಾದ 10.ಭಾವ 11.ಕಡ 13.ಕಲುಷ 15.ಮನೆ 16.ರಿಪೇರಿ 17.ಷಡ್ಡಕ

ಮೇಲಿಂದ ಕೆಳಕ್ಕೆ: 1.ಚಹರೆ 2.ಕರಟ 3.ಪನ್ನೀರು 4.ರವಾನೆ 5.ಕಲೋಪಾಸಕ 8.ಪರಿವರ್ತನೆ 12.ಡಬರಿ 13.ಕತ್ತರಿ 14.ಷಡ್ಡಕ 15.ಮರುಳ

ಸುಡೊಕು 5071

2		6					5	
	4	7	5		6	3		2
3	8			2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5070 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್ ಬುಕ್, ಯೂ ಟ್ಯೂಬ್, ಟ್ವಿಟರ್ ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಗ್ರೀನ್ ಟಾಕ್
ನೃಪತುಂಗ ಬೆಟ್ಟಕ್ಕೆ ತಪಸ್ವಿ ರಕ್ಷಣೆ
https://bit.ly/3xwwbuB
ಪಾಡ್‌ಕಾಸ್ಟ್: ಇಂದಿನ ವಿಶೇಷ: ಝಣ ಝಣ ಕಾಂಚಾಣ
ಪ್ರತೀ ದಿನ: ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ
ನಾಳೆ
ಸಂವಾದ ರಾಜ್ಯಗಳಿಗೆ ಒಬಿಸಿ ಪಟ್ಟಿಯ ಅಧಿಕಾರ; ಪರಿಣಾಮಗಳೇನು?
ಭಾಗವಹಿಸುವವರು: ವಿ.ಆರ್.ಸುದರ್ಶನ್, ಕೆಪಿಸಿಸಿ ಮಾಧ್ಯಮ ವಿಭಾಗದ ಸಹ ಅಧ್ಯಕ್ಷ., ಬಿ.ಜೆ.ಪುಟ್ಟಸ್ವಾಮಿ, ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷ., ರವಿವರ್ಮ ಕುಮಾರ್, ರಾಜ್ಯದ ಮಾಜಿ ಅಡ್ವೊಕೇಟ್ ಜನರಲ್
ಗುರುವಾರ, ಬೆಳಿಗ್ಗೆ 11ರಿಂದ 12
ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಜಪಾನ್‌ನ ಟೆಕ್ನೊ ಪ್ರೊ ತೆಕ್ಕೆಗೆ ರೊಬೊಸಾಫ್ಟ್

ಪ್ರಜಾವಾಣಿ ವಾರ್ತೆ

ಉಡುಪಿ: ಕರಾವಳಿಯ ಪ್ರಸಿದ್ಧ ರೊಬೊಸಾಫ್ಟ್ ಸಾಫ್ಟ್‌ವೇರ್ ಕಂಪನಿಯನ್ನು ಖರೀದಿಸಲು ಜಪಾನ್‌ನ ಟೆಕ್ನೊ ಪ್ರೋ ಗ್ರೂಪ್ ಮುಂದಾಗಿದೆ. ರೊಬೊಸಾಫ್ಟ್‌ನ ಶೇ 100ರಷ್ಟು ಷೇರುಗಳನ್ನು ಖರೀದಿಸಲು ಟೆಕ್ನೊ ಪ್ರೊ ಒಪ್ಪಂದ ಮಾಡಿಕೊಂಡಿದೆ.

ಸದ್ಯ ಇರುವ ಆಡಳಿತ ಮಂಡಳಿಯೇ ಕಂಪನಿಯನ್ನು ಮುನ್ನಡೆಸಿಕೊಂಡು ಹೋಗಲಿದ್ದು, ರವಿತೇಜ ಬೊಮ್ಮಿರೆಡ್ಡಿಪಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಮುಂದುವರಿಯಲಿದ್ದಾರೆ ಎಂದು ರೊಬೊಸಾಫ್ಟ್ ಸ್ಪಷ್ಟಪಡಿಸಿದೆ.

ತಂತ್ರಾಂಶ ಅಭಿವೃದ್ಧಿ, ಆ್ಯಪ್‌ಗಳ ನಿರ್ಮಾಣ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ರೊಬೊಸಾಫ್ಟ್ ಸ್ಥಾಪನೆ ಆಗಿದ್ದು 1996ರಲ್ಲಿ. ಉಡುಪಿಯಲ್ಲಿ ಕೇಂದ್ರ ಕಚೇರಿಯಿದ್ದು, ಬೆಂಗಳೂರು ಹಾಗೂ ಮುಂಬೈನಲ್ಲಿ ಡೆಲಿವರಿ ಕೇಂದ್ರ ಹಾಗೂ ಅಮೆರಿಕ, ಜಪಾನ್ ಸೇರಿದಂತೆ ಹಲವೆಡೆ ಮಾರಾಟ ಕೇಂದ್ರಗಳನ್ನು ಹೊಂದಿದೆ. ರೊಬೊಸಾಫ್ಟ್ ಕಂಪನಿಯಲ್ಲಿ 1,000ಕ್ಕೂ ಹೆಚ್ಚು ಉದ್ಯೋಗಿಗಳು ಇದ್ದಾರೆ.

'ಎರಡು ದಶಕಗಳಲ್ಲಿ ಕಂಪನಿ ಬಹಳ ಎತ್ತರಕ್ಕೆ ಬೆಳೆದಿದೆ. ಜಾಗತಿಕ ದೈತ್ಯ ಸಂಸ್ಥೆಯಾಗಿರುವ ಟೆಕ್ನೊ ಪ್ರೊ ಭಾಗವಾಗುತ್ತಿರುವುದಕ್ಕೆ ಸಂತೋಷವಾಗುತ್ತಿದೆ' ಎಂದು ರೊಬೊಸಾಫ್ಟ್ ಸಂಸ್ಥಾಪಕ ಹಾಗೂ ಎಂ.ಡಿ. ರೋಹಿತ್ ಭಟ್ ತಿಳಿಸಿದ್ದಾರೆ.

ರೊಬೊಸಾಫ್ಟ್‌ನಲ್ಲಿ ಬಂಡವಾಳ ಹೂಡುತ್ತಿರುವುದಕ್ಕೆ ಹರ್ಷವಾಗುತ್ತಿದೆ. ಕಂಪನಿಯ ಬೆಳವಣಿಗೆ, ಸಾಫ್ಟ್‌ವೇರ್ ಕ್ಷೇತ್ರದಲ್ಲಿನ ಅನುಭವ ಹಾಗೂ ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ಬಳಸಿಕೊಂಡು ಮತ್ತಷ್ಟು ಎತ್ತರಕ್ಕೆ ಬೆಳೆಯುವುದಾಗಿ ಟೆಕ್ನೊ ಪ್ರೊ ಸಿಇಒ ತಾಕೇಶಿ ಯಾಗಿ ತಿಳಿಸಿದ್ದಾರೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಸ್ವಾಮಿನಾಥನ್, ಎಂ.ಜಿ. ರಸ್ತೆ, ಬೆಂಗಳೂರು

- ಪ್ರಶ್ನೆ: ನಾನು ನಿಮ್ಮ ಅಭಿಮಾನಿ. ಸದ್ಯದಲ್ಲಿಯೇ ನಿವೃತ್ತನಾಗುತ್ತಿದ್ದೇನೆ. ಸ್ವಂತ ಮನೆ ಇದೆ. ಪಿಂಚಣಿ ತಿಂಗಳಿಗೆ ಸುಮಾರು ₹ 48 ಸಾವಿರ. ನಿವೃತ್ತಿಯಿಂದ ಬರುವ ಮೊತ್ತ ಸುಮಾರು ₹ 75 ಲಕ್ಷ. ಈ ಮೊತ್ತಕ್ಕೆ ತೆರಿಗೆ ಇದೆಯೇ? ಸುರಕ್ಷಿತ ಹೂಡಿಕೆ ವಿಚಾರವಾಗಿ ತಿಳಿಸಿ.

ಉತ್ತರ: ನಿವೃತ್ತಿಯಿಂದ ನೀವು ಪಡೆಯುವ ಮೊತ್ತಕ್ಕೆ ಸಂಪೂರ್ಣ ಆದಾಯ ತೆರಿಗೆ ವಿನಾಯಿತಿ ಇದೆ.

ಸೆಕ್ಷನ್	ಬರುವ ಹಣದ ವಿವರಣೆ
10 (10)ii	ಗ್ರಾಚುಟಿ
10 (10ಎ) iiಎ	ಕಮ್ಯುಟೇಷನ್
10 (II)	ಪಿ.ಎಫ್.
10 (ಎಎ)	ರಜಾ ಸಂಬಳ

ವಿ.ಸೂ: ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೌಕರರಿಗೆ ಮಾತ್ರ ರಜಾ ಸಂಬಳಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ಇದೆ. ಇತರರ ಗರಿಷ್ಠ ಮಿತಿ ₹ 3 ಲಕ್ಷ.

ನಿಮಗೆ ಬರುವ ₹ 75 ಲಕ್ಷದಲ್ಲಿ, ₹ 15 ಲಕ್ಷ ಅಂಚೆ ಕಚೇರಿ ಅಥವಾ ಬ್ಯಾಂಕ್‌ಗಳಲ್ಲಿ ಹಿರಿಯ ನಾಗರಿಕರ ಠೇವಣಿಯಲ್ಲಿ ಹಾಗೂ ₹ 15 ಲಕ್ಷ ಎಲ್.ಐ.ಸಿ.ಯ ವಯೋವಂದನಾ ಯೋಜನೆಯಲ್ಲಿ ಇರಿಸಿರಿ. ₹ 5 ಲಕ್ಷ ಉಳಿತಾಯ ಖಾತೆಯಲ್ಲಿ ಇರಿಸಿಕೊಳ್ಳಿ ಹಾಗೂ ಇನ್ನುಳಿದ ₹ 40 ಲಕ್ಷವನ್ನು ₹ 5 ಲಕ್ಷದಂತೆ ಠೇವಣಿಯಲ್ಲಿ ಇರಿಸಿ. ನೀವು ಹಾಗೂ ನಿಮ್ಮ ಹೆಂಡತಿ ಒಳಗೊಂಡು ₹ 5 ಲಕ್ಷದ ಆರೋಗ್ಯ ವಿಮೆಯನ್ನು ತಪ್ಪದೇ ಮಾಡಿ. ಫ್ಲೋಟರ್ ಪಾಲಿಸಿ ಮಾಡಿಸಿ. ಇದರಿಂದ ₹ 5 ಲಕ್ಷದ ಮಿತಿಯೊಳಗೆ ಇಬ್ಬರೂ ಸವಲತ್ತು ಪಡೆಯಬಹುದು.

ಕೃಷ್ಣರಾಜ್, ಊರುಬೇಡ

- ಪ್ರಶ್ನೆ: ನನ್ನ ವಯಸ್ಸು 41 ವರ್ಷ. ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕ. ತಿಂಗಳ ಸಂಬಳ ₹ 42 ಸಾವಿರ. ಒಬ್ಬಳು ಮಗಳು. ಅವಳ ವಯಸ್ಸು 5 ವರ್ಷ. ನನ್ನ ಉಳಿತಾಯ ಖಾತೆಯಲ್ಲಿ ₹ 60 ಸಾವಿರ ಇದೆ. ಈ ಹಣದಿಂದ ಬಂಗಾರದ ನಾಣ್ಯ ಕೊಂಡು ಮುಂದೆ ಬೆಲೆ ಬಂದಾಗ ಮಾರಾಟ ಮಾಡಬೇಕೆಂದಿದ್ದೇನೆ. ಉಳಿತಾಯ ಹಾಗೂ ತೆರಿಗೆ ವಿಚಾರದಲ್ಲಿ ಸೂಕ್ತ ಸಲಹೆ ನೀಡಿ.

ಉತ್ತರ: ನಿಮಗೆ ಸೆಕ್ಷನ್ 16 (1ಎ) ಆಧಾರದ ಮೇಲೆ ₹ 50 ಸಾವಿರ ಸ್ಟ್ಯಾಂಡರ್ಡ್ ಡಿಡಕ್ಷನ್ ಸೌಲಭ್ಯ ಇರುವುದರಿಂದ ನಿಮಗೆ ಬರುವ ಸಂಬಳದ ವರಮಾನದಿಂದ ನೀವು ಸದ್ಯ ಆದಾಯ ತೆರಿಗೆಗೆ ಒಳಗಾಗುವುದಿಲ್ಲ. ಆದರೆ, ಐ.ಟಿ. ರಿಟರ್ನ್ಸ್ ತುಂಬಬೇಕಾಗುತ್ತದೆ. ನಿಮ್ಮೊಡನಿರುವ ₹ 60 ಸಾವಿರದಿಂದ ಬಂಗಾರದ ನಾಣ್ಯ ಕೊಂಡು ಮುಂದೆ ಮಾರಾಟ ಮಾಡುವುದಕ್ಕಿಂತ ಚಿನ್ನದ ಬಾಂಡ್ ಅಥವಾ ಚಿನ್ನದ ಇಟಿಎಫ್‌ಗಳಲ್ಲಿ ತೊಡಗಿಸುವುದು ಸೂಕ್ತ. ನಿಮ್ಮ ಮಗಳ ಸಲುವಾಗಿ ಕನಿಷ್ಠ ₹ 5 ಸಾವಿರವನ್ನು ಪ್ರತಿ ತಿಂಗಳು ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ತೊಡಗಿಸಲು ಪ್ರಾರಂಭಿಸಿ. ಇದರಿಂದ ಮಗಳ ವಿದ್ಯಾಭ್ಯಾಸ, ಮದುವೆಗೆ ನೆರವಾಗುವುದಲ್ಲದೆ ಮುಂದೆ ನೀವು ತೆರಿಗೆಗೆ ಒಳಗಾದಲ್ಲಿ ಈ ಯೋಜನೆಯ ಮೂಲಕ ತೆರಿಗೆ ವಿನಾಯಿತಿ ಪಡೆಯಬಹುದು.

ಶಿವರುದ್ರಪ್ಪ, ರಾಣೆಬೆನ್ನೂರು

- ಪ್ರಶ್ನೆ: ನಾನು ಸರ್ಕಾರಿ ನೌಕರ. ಕಳೆದ 10 ವರ್ಷಗಳಿಂದ ನಿಮ್ಮ ಅಂಕಣ ಓದಿ ಸ್ಫೂರ್ತಿ ಪಡೆದು ಆರ್.ಡಿ. ಮಾಡುತ್ತಾ ಬಂದು 30X40 ಅಳತೆಯ ನಿವೇಶನವನ್ನು ರಾಣೆಬೆನ್ನೂರಿನಲ್ಲಿ ಕೊಂಡಿರುತ್ತೇನೆ. ತಿಂಗಳ ಸಂಬಳ ₹ 50,375. ಈಗ ಗೃಹ ಸಾಲ ಪಡೆದು ಮನೆ ಕಟ್ಟಿಸಲು ನಿಮ್ಮ ಸಲಹೆ ಬೇಕಾಗಿದೆ. ನಾನು, ನನ್ನ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ವಿಮೆ ಪಾಲಿಸಿ ಮಾಡಿಸಿದಲ್ಲಿ ಆದಾಯ ತೆರಿಗೆ ಉಳಿಸಲು ಸಾಧ್ಯವೇ?

ಉತ್ತರ: ನಿಮ್ಮ ವಯಸ್ಸು, ಕುಟುಂಬದ ವಿವರ, ಸಂಬಳದಲ್ಲಿ ಕಡಿತ ಹಾಗೂ ಇದುವರೆಗೆ ಮಾಡಿರುವ ಉಳಿತಾಯವನ್ನು ತಿಳಿಸಿಲ್ಲ. ನೀವು ಆರ್.ಡಿ. ಮಾಡುತ್ತಾ ಬಂದು ಒಂದು ನಿವೇಶನ ಕೊಂಡಿರುವುದು ಸಂತೋಷದ ವಿಚಾರ. ಸ್ಥಿರ ಆಸ್ತಿಗೆ ಮಿಗಿಲಾದ ಹೂಡಿಕೆ ಬೇರೊಂದಿಲ್ಲ. ನೀವು ಆದಷ್ಟು ಬೇಗ ನಿಮ್ಮ ಬಜೆಟ್‌ಗೆ ಅನುಗುಣವಾಗಿ ಮನೆ ಕಟ್ಟಲು ಪ್ರಾರಂಭಿಸಿ. ಗೃಹ ನಿರ್ಮಾಣದ ವೆಚ್ಚ ದಿನ ಕಳೆದಂತೆ ಹೆಚ್ಚಾಗುತ್ತಿರುವುದರಿಂದ ಈ ವಿಚಾರ ಮುಂದೂಡಬೇಡಿ. ವ್ಯಕ್ತಿಯ ವಯಸ್ಸಿಗೆ ಅನುಗುಣವಾಗಿ ಗೃಹ ಸಾಲ ಮರುಪಾವತಿಸಲು ಬ್ಯಾಂಕ್‌ಗಳು ಗರಿಷ್ಠ 30 ವರ್ಷಗಳ, 360 ಮಾಸಿಕ ಕಂತುಗಳನ್ನು ಕೊಡುತ್ತವೆ. ಸೆಕ್ಷನ್ 80ಸಿ ಆಧಾರದ ಮೇಲೆ ಗೃಹ ಸಾಲದ ಕಂತು, ಸೆಕ್ಷನ್ 24 (ಬಿ) ಆಧಾರದ ಮೇಲೆ ಗೃಹಸಾಲದ ಬಡ್ಡಿಯಿಂದ ತೆರಿಗೆ ವಿನಾಯಿತಿ ಪಡೆಯಬಹುದು. ನಿಮ್ಮ ಇಂದಿನ ಸಂಬಳದ ಆದಾಯ ಪರಿಗಣಿಸುವಾಗ ನೀವು ಗೃಹಸಾಲ ಪಡೆದರೆ ಸಂಪೂರ್ಣ ತೆರಿಗೆ ವಿನಾಯಿತಿ ಪಡೆಯಬಹುದು. ನೀವು ಬಯಸಿದಂತೆ ನಿಮ್ಮ ಹೆಂಡತಿ ಹಾಗೂ ಮಕ್ಕಳ ಹೆಸರಿನಲ್ಲಿ ವಿಮಾ ಕಂತು ತುಂಬಿದರೂ ತೆರಿಗೆ ವಿನಾಯಿತಿ ಪಡೆಯಲು ಅವಕಾಶವಿದೆ. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಷೇರುಪೇಟೆ ವಹಿವಾಟು

151



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,258
ಇಂದಿನ ಅಂತ್ಯ	16,280
▲	21
ದಿನದ ಗರಿಷ್ಠ	16,359

ವಿನಿಮಯ ದರ

$ ಡಾಲರ್	74.43
£ ಪೌಂಡ್	103.16
€ ಯುರೊ	87.26
¥ ಯೆನ್ (100ಕ್ಕೆ)	67.36

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹430

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600- 6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	388
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-45000
ಹಳತು	42500-52000
ಭದ್ರಾವತಿ	
ರಾಶಿ	41666-44199
ಕಾರ್ಕಳ	
ಹೊಸತು	40000-45000
ಹಳತು	46000-52000
ಕುಂದಾಪುರ	
ಹಳೆಚಾಲಿ	36000-52000
ಹೊಸಚಾಲಿ	36000-46000
ಪುತ್ತೂರು	
ಕೋಕ	10500-26000
ಹೊಸತು	31000-45000
ಸಾಗರ	
ಬಿಳಿಗೋಟು	33199-34219
ಚಾಲಿ	39099-39615
ಕೋಕ	34499-35129
ಕೆಂಪುಗೋಟು	32699-34699
ರಾಶಿ	39099-43900
ಸಿಪ್ಪೆಗೋಟು	20789-23429
ಶಿವಮೊಗ್ಗ	
ಬೆಟ್ಟೆ	45119-47147
ಗೊರಬಲು	15910-35869
ರಾಶಿ	38199-44099
ಸಿದ್ದಾಪುರ	
ಬಿಳಿಗೋಟು	28689-35099
ಚಾಲಿ	36899-41099
ಕೋಕ	15699-30899
ಕೆಂಪುಗೋಟು	305189-31699
ರಾಶಿ	40159-42209
ತಟ್ಟಿಬೆಟ್ಟೆ	32469-39239
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	239-507
ದ್ವಿತಳಿ (ಬಿ.ವಿ)	266-551

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ: ಮುದ್ರಮನೆ	ಹಾಸನ: ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	12,500	12,350	179.35ಸೆಂಟ್ಸ್
ಎಸಿ	-	4,800	4,925	
ಆರ್‌ಪಿ	-	5,800	6,025	ಲಂಡನ್
ಆರ್‌ಸಿ	-	3,300	3,450	1785ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 10-8-2021

ಜಾವಾ 70/80(ಹೊಸ)	9950-10000
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	9550-9600
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1460)
ಒಂದು ವಾರದ ಡೆಲಿವರಿ	1475 (1455)
ಸೋಯಾ ಕಚ್ಚಾ	1325 (1330)
ಪಾಮ್ ವಾರದ ಡೆಲಿವರಿ	1241 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
45,950 (46,400)
ಬೆಳ್ಳಿ ಕೆ.ಜಿ
62,900 (64,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1450)
ಸೋಯಾ (ರಿಫೈನ್ಡ್)	₹1375(1385)
ಸೂರ್ಯಕಾಂತಿ (ರಿಫೈನ್ಡ್)	₹1450 (1450)
ಪಾಮೋಲಿನ್	₹1243 (1250)

ಕೊಬ್ಬರಿ ಧಾರಣೆ

ಬೆಂಗಳೂರು	₹15000-16725
ತುರುವೇಕೆರೆ	₹16500-16500

ಸಾರ್ವಕಾಲಿಕ ದಾಖಲೆ ಮಟ್ಟಕ್ಕೆ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರದ ವಹಿವಾಟಿನಲ್ಲಿ 151 ಅಂಶ ಏರಿಕೆ ಕಂಡು, ಸಾರ್ವಕಾಲಿಕ ದಾಖಲೆಯ ಮಟ್ಟವಾದ 54,554ರಲ್ಲಿ ವಹಿವಾಟು ಕೊನೆಗೊಳಿಸಿತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 21 ಅಂಶ ಏರಿಕೆ ಕಂಡಿತು. 'ದೇಶಿ ಷೇರು ಮಾರುಕಟ್ಟೆಗಳು ಮಂಗಳವಾರ ಬಹಳ ಚಂಚಲ ವಹಿವಾಟು ನಡೆಸಿದವು. ನಿಫ್ಟಿ ಸೂಚ್ಯಂಕವು ದಾಖಲೆಯ ಮಟ್ಟವನ್ನು ತಲುಪಿ, ನಂತರ ಕುಸಿತ ಕಂಡಿತು' ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ವಿನೋದ್ ಮೋದಿ ಹೇಳಿದ್ದಾರೆ.

ಮಿಡ್ ಕ್ಯಾಪ್ ಹಾಗೂ ಸ್ಮಾಲ್ ಕ್ಯಾಪ್ ಷೇರುಗಳ ಮೌಲ್ಯದಲ್ಲಿ ಈಚಿನ ತಿಂಗಳುಗಳಲ್ಲಿ ಹೆಚ್ಚಳ ಆಗಿದ್ದರಿಂದಾಗಿ, ಹೂಡಿಕೆದಾರರು ಲಾಭದ ಉದ್ದೇಶದಿಂದ ಈ ಷೇರುಗಳನ್ನು ಮಾರಾಟ ಮಾಡಿದರು ಎಂದು ವರ್ತಕರು ಹೇಳಿದ್ದಾರೆ.

ಜೊಮ್ಯಾಟೊಗೆ ₹ 360 ಕೋಟಿ ನಷ್ಟ

ನವದೆಹಲಿ (ಪಿಟಿಐ): ಜೊಮ್ಯಾಟೊ ಕಂಪನಿಯು ಮಂಗಳವಾರ ತನ್ನ ಜೂನ್ ತ್ರೈಮಾಸಿಕದ ಫಲಿತಾಂಶವನ್ನು ಪ್ರಕಟಿಸಿದ್ದು, ₹ 360.7 ಕೋಟಿ ನಷ್ಟ ಅನುಭವಿಸಿರುವುದಾಗಿ ಹೇಳಿದೆ. ವೆಚ್ಚಗಳು ಹೆಚ್ಚಾಗಿದ್ದು ನಷ್ಟಕ್ಕೆ ಕಾರಣ ಎಂದು ತಿಳಿಸಿದೆ.

ದೂರಸಂಪರ್ಕ ಉದ್ಯಮಕ್ಕೆ ಬೆಂಬಲ ಅಗತ್ಯ: ಮಿತ್ತಲ್

ನವದೆಹಲಿ (ಪಿಟಿಐ): ದೂರಸಂಪರ್ಕ ಉದ್ಯಮ ವಲಯವನ್ನು ಮುಂದೆಯೂ ಹೂಡಿಕೆಗೆ ಯೋಗ್ಯವಾದ ಕ್ಷೇತ್ರವಾಗಿ ಉಳಿಸಲು ಕೇಂದ್ರ ಸರ್ಕಾರ ಹಾಗೂ ನಿಯಂತ್ರಣ ಸಂಸ್ಥೆಗಳು ಕ್ರಮ ಕೈಗೊಳ್ಳಲಿವೆ ಎಂಬ ಭರವಸೆಯನ್ನು ಭಾರ್ತಿ ಏರ್‌ಟೆಲ್ ಕಂಪನಿಯ ಅಧ್ಯಕ್ಷ ಸುನಿಲ್ ಮಿತ್ತಲ್ ವ್ಯಕ್ತಪಡಿಸಿದ್ದಾರೆ.

ಉದ್ಯಮದಲ್ಲಿ ಈಗಿನಂತೆಯೇ ನಾಲ್ಕು ಕಂಪನಿಗಳು ಉಳಿದುಕೊಳ್ಳಬೇಕು ಎಂದಾದಲ್ಲಿ ದೀರ್ಘಾವಧಿಯ ಬೆಂಬಲದ ಅಗತ್ಯ ಇದೆ ಎಂದು ಹೇಳಿದ್ದಾರೆ.

ಸುಸ್ಥಿರವಲ್ಲದ ಶುಲ್ಕ ನಿಗದಿ, ಭಾರಿ ಬಂಡವಾಳ ಹೂಡಿಕೆ ಮಾಡಿದ್ದರೂ ತೀರಾ ಕಡಿಮೆ ಲಾಭ ಬರುತ್ತಿರುವುದು, ದಶಕಗಳಿಂದ ಉಳಿದಿರುವ ಕಾನೂನು ತೊಡಕುಗಳು ಉದ್ಯಮ ಬೆಲೆ ತೆರುವಂತೆ ಮಾಡಿವೆ ಎಂದು ಮಿತ್ತಲ್ ಅವರು ಏರ್‌ಟೆಲ್‌ನ 2020-21ನೇ ಸಾಲಿನ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ.

CONNECT

EDUCATION CORNER

KFDC Ltd. MATHSYA BANDHANA™ MATHSYA BANDHANA PVT. LTD.
ಪ್ರತಿಷ್ಠಿತ ಕಂಪನಿಯ ಫಿಶ್ ಚಿಪ್ಸ್ ಮಾರಾಟ ಮಾಡಲು ಕರ್ನಾಟಕ ರಾಜ್ಯಾದ್ಯಂತ ಸೂಪರ್ ಸ್ಟಾಕಿಸ್ಟ್ ಮತ್ತು ವಿತರಕರು ಬೇಕಾಗಿದ್ದಾರೆ.
Fish Wafers
ಹೆಚ್ಚಿನ ಮಾಹಿತಿಗಾಗಿ ದಿನಾಂಕ 12-08-2021ರಂದು ಬೆಂಗಳೂರಿನ ಶೆಫ್‌ಟಾಕ್ ಸಂಸ್ಥೆಯಲ್ಲಿ ನಡೆಯುವ ಸಭೆಗೆ ಆಗಮಿಸಿ ಅಥವಾ ಕರೆಮಾಡಿ ನೊಂದಾಯಿಸಿ
ಅನುಭವಿ ಸೂಪರ್ ಸ್ಟಾಕಿಸ್ಟ್ ಮತ್ತು ವಿತರಕರಿಗೆ ಮೊದಲ ಆದ್ಯತೆ
6366908224 / 080-41310018
(ಸಂಪರ್ಕಿಸುವ ಸಮಯ : ಬೆಳಿಗ್ಗೆ 9.30 ರಿಂದ ಸಂಜೆ 6.00)

SET's BHEEMAJJA PU COLLEGE Recognised by govt of Karnataka
+91 7019425622 +91 9972868311 +91 8026720604
www.nargund.edu.in/bpc office@nargund.edu.in
STUDY IN MURUDI, KOPPAL
JOIN OUR Science, Commerce & Arts
ENROLL NOW FOR 2021-2022 INTAKE
• TRANING FOR COMPETITIVE COURSES
• HOSTEL FACILITY AVAILABLE

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

ಉದ್ಯೋಗಾವಕಾಶ

Drivers
ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಾರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿಗೆ ಅನುಭವವುಳ್ಳ ಆಟೋ ಚಾಲಕರು ಬೇಕಾಗಿದ್ದಾರೆ. ಸಂಪರ್ಕಿಸಿ: ಫೋನ್: 09940136089

General
TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

TOYOTA, TVS, ವಿಡಿಯೋಕಾನ್, ಬ್ರಿಟಾನಿಯಾಗಳಿಗೆ ಬಿಗ್ ಬಜಾರ್‌ಗಳಿಗೆ SSLC,PUC,Degree ಯವರು, ITI ನವರು, (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ. 17,000-56,000/- ವಸತಿಯೂಟವಿದೆ. 9611715755

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/- ದವರೆಗೆ.9538250222, 9538191333

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

WANTED RESPECTABLE Hindu Female cook for family of 5 Good salary accommodation and food Police Verification will be done Contact 9741900909

Marketing & Sales
WANTED EXPERIENCED Sales Managers for Cement, Contact: 9916449766/ 9986696546, acecemex@gmail.com
WANTED DRA/NON DRA Field Executives/ Telecallers for Bangalore, Attractive Salary, PF+ESI Contact: 9113602995/ 8867052293.

Office Boys/ Peon
ಆಫೀಸ್‌ಬಾಯ್ ಬೇಕಾಗಿದ್ದಾರೆ. ಕೆ.ಆರ್.ಪುರಂ ರೈಲ್ವೆ ಸ್ಟೇಷನ್ ಹತ್ತಿರವಿರುವ ಆಫೀಸ್‌ನಲ್ಲಿ ಕೆಲಸಮಾಡಲು, ದ್ವಿಚಕ್ರ ವಾಹನ ಹೊಂದಿರಬೇಕು, ಸಂಬಳ 15,000=00. ಸಂಪರ್ಕಿಸಿ: 9845058243

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted
ವಯಸ್ಸಾದವರನ್ನು ನೂಡೀಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೆಲ್ಪಟ್ಟವರಿಗೆ ಉಚಿತ ಊಟವಸತಿಯೋಂದಿಗೆ 11000 ರಿಂದ 16000 ವರೆಗೆ ಸಂಬಳ. ಫೋ: 8139962883

ಭವಿಷ್ಯ
Astrology
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

॥★ಉಚಿತ ಭವಿಷ್ಯವಾಣಿ★॥ ವಶೀಕರಣ ಸ್ಪೆಷಲಿಸ್ಟ್ ಸರ್ವಸಿದ್ಧಿ ಸಾಧಕರು ಮಂಜುನಾಥಶಾಸ್ತ್ರಿ 9900277438. ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ. 100% ಗ್ಯಾರಂಟಿ ಪರಿಹಾರ.

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ವ್ಯಾಪಾರ
Business Offers
Finance
★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 08222841175, 08278291749.ಏಜೆಂಟರು ಸಂಪರ್ಕಿಸಬಹುದು.

ವಾಹನ
Four Wheelers Selling
Others
ಸ್ವತಂತ್ರ ದಿನಾಚರಣೆಗೆ ಕೊಡುಗೆಗಳೊಂದಿಗೆ ವರಮಹಾಲಕ್ಷ್ಮಿಯನ್ನು ಬರಮಾಡಿಕೊಳ್ಳಿ
BS6 TATA ACE GOLD CNG
4.99%* ಬಡ್ಡಿದರ 48 ತಿಂಗಳು ಅಥವಾ 5.99%* ಬಡ್ಡಿದರ 60 ತಿಂಗಳು
ಕೊಡುಗೆಗಳು ₹25 000/-* ದವರೆಗೆ ಎಕ್ಸ್‌ಚೇಂಜ್ ₹12 000/-* ದವರೆಗೆ
2 ವರ್ಷ/50 000 km AMC ಪಡೆಯಿರಿ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 98950 23373
Hubli/Haveri/Gadag/Bellary/ Raichur - 96209 55858
Bagalkot/Bijapur/Gulbarga/ Bidar - 80952 02223
Hubli/Belgaum 91088 64572
* ಷರತ್ತುಗಳು ಅನ್ವಯಿಸುತ್ತದೆ.

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

HEALTH SPECIAL
VIH ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
Before After
ಲೈಂಗಿಕ ರೋಗಗಳು · ಉದ್ರೇಕದ ಸಮಸ್ಯೆ · ಲೈಂಗಿಕ ನಿರಾಸಕ್ತಿ · ನಿದ್ರಾ ಸ್ಖಲನ · ಶೀಘ್ರ ಸ್ಖಲನ · ಲಿಂಗ ಚಿಕ್ಕದಾಗುವುದು · ನರ ದೌರ್ಬಲ್ಯ · ಅವಧಿಗೆ ಮೊದಲೇ ಸ್ಖಲನ · ಆತಂಕ, ದೌರ್ಬಲ್ಯ · ಕಡಿಮೆ ವೀರ್ಯಾಣು · ಮುಷ್ಠಿ ಮೈಥುನದ ಅಡ್ಡಪರಿಣಾಮ
NO SIDE EFFECTS 100%
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com or Scan QR code to access booking form

9ನೇ ವರ್ಷದ ಚಿರಸ್ಮರಣೆ

ಶ್ರೀ ಎಲ್. ಪದ್ಮನಾಭರೆಡ್ಡಿ
ನಿಧನ : 11.8.2012
ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳು, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ. ನಿಮ್ಮನ್ನು ಸದಾ ಸ್ಮರಿಸುವ.....
ದುಃಖತಪ್ತರು: ಪತ್ನಿ- ಶ್ರೀಮತಿ ಶಶಿಕಲಾ ಮತ್ತು ಮಕ್ಕಳು ಹಾಗೂ ಕುಟುಂಬದವರು

1ST YEAR REMEMBRANCE

B M Shivaram (Shivanna)
Our hearts are filled with Fond memories, we remember you every minute with silent tears.
Missed by
Wife, children, daughter-in-laws, grandchildren, Billemane family Byrathi and friends.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕರುಣ್ ಶತಕ

ಕರುಣ್ ನಾಯರ್

ಬೆಂಗಳೂರು: ಕರುಣ್ ನಾಯರ್ (143; 151 ಎಸೆತ, 7 ಬೌಂಡರಿ, 5 ಸಿಕ್ಸರ್) ಆಕರ್ಷಕ ಶತಕದ ಬಲದಿಂದ ವಲ್ಚರ್ಸ್ ಕ್ರಿಕೆಟ್ ಕ್ಲಬ್ ತಂಡವು ಮಂಗಳವಾರ ಇಲ್ಲಿ ನಡೆದ ಸರ್ ಮಿರ್ಜಾ ಇಸ್ಮಾಯಿಲ್ ಮೊದಲ ಡಿವಿಷನ್ ಲೀಗ್ ಒಂದನೇ ಗುಂಪಿನ ಪಂದ್ಯದಲ್ಲಿ ಜಯಿಸಿತು.

ಕರ್ನಾಟಕ ರಣಜಿ ತಂಡದ ಮಾಜಿ ನಾಯಕ ಕರುಣ್ ಶತಕದಿಂದಾಗಿ ತಂಡವು 50 ಓವರ್‌ಗಳಲ್ಲಿ 6ಕ್ಕೆ422 ರನ್ ಗಳಿಸಿತು. ಅದಕ್ಕುತ್ತರವಾಗಿ ಮಾಡರ್ನ್‌ಸಿಸಿ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 191 ರನ್ ಗಳಿಸಿತು. ಇದರಿಂದಾಗಿ ವಲ್ಚರ್ಸ್ ಸಿಸಿಯು 231 ರನ್‌ಗಳ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ವಲ್ಚರ್ಸ್ ಸಿಸಿ: 50 ಓವರ್‌ಗಳಲ್ಲಿ 6ಕ್ಕೆ422 (ಡಿ. ನಿಶ್ಚಲ್ 47, ಕರುಣ್ ನಾಯರ್ 143, ಕೆ. ಎಲ್ ಶ್ರೀಜಿತ್ 52, ಅಶ್ವನಿ ಕುಮಾರ್ 38ಕ್ಕೆ2) ಮಾಡರ್ನ್ ಸಿಸಿ: 50 ಓವರ್‌ಗಳಲ್ಲಿ 8ಕ್ಕೆ191 (ಮೊಹಮ್ಮದ್ ಅಕೀಬ್ ಜಾವೇದ್ 59, ವಿಷ್ಣುಪ್ರಿಯನ್ 25, ಆಯುಷ್ ಕುಮಾರ್ ಬಾರಿಕ್ ಔಟಾಗದೆ 31, ಪ್ರವೀಣ ದುಬೆ 39ಕ್ಕೆ3)

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ಸ್ಥಾನಕ್ಕೆ ಅರ್ಜಿ ಆಹ್ವಾನಿಸಿದ ಬಿಸಿಸಿಐ

ರಾಹುಲ್ ದ್ರಾವಿಡ್‌ಗೂ ಅವಕಾಶ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ) ಮುಖ್ಯಸ್ಥರ ಹುದ್ದೆಗೆ ಅರ್ಜಿ ಆಹ್ವಾನಿಸಿದೆ.

2019ರ ಜುಲೈನಲ್ಲಿ ಕನ್ನಡಿಗ ರಾಹುಲ್ ದ್ರಾವಿಡ್ ಅವರನ್ನು ಈ ಹುದ್ದೆಗೆ ನೇಮಿಸಲಾಗಿತ್ತು. ಅವರ ಎರಡು ವರ್ಷಗಳ ಅಧಿಕಾರಾವಧಿ ಮುಕ್ತಾಯಗೊಂಡಿದೆ. ಹೀಗಾಗಿ ಬಿಸಿಸಿಐ ಹೊಸದಾಗಿ ಅರ್ಜಿಗಳನ್ನು ಕರೆದಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 15 ಕೊನೆಯ ದಿನವಾಗಿದೆ. ದ್ರಾವಿಡ್ ಅವರು ಈ ಹುದ್ದೆಯಲ್ಲಿ ಮುಂದುವರಿಯಲು ಇಚ್ಛಿಸಿದರೆ, ಅವರು ಕೂಡ ಅರ್ಜಿ ಹಾಕಬಹುದು.

ಭಾರತದ ಭವಿಷ್ಯದ ಕ್ರಿಕೆಟಿಗರನ್ನು ರೂಪಿಸುವಲ್ಲಿ ರಾಹುಲ್ ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಭಾರತದ 19 ವರ್ಷದೊಳಗಿನವರ ತಂಡವು ವಿಶ್ವಕಪ್ ಜಯಿಸಿತ್ತು. ರಾಹುಲ್ ಅವರು ಹಲವು ಟೂರ್ನಿಗಳಲ್ಲಿ ಭಾರತ 'ಎ' ತಂಡಕ್ಕೂ ಮಾರ್ಗದರ್ಶನ ನೀಡಿದ್ದರು. ಇತ್ತೀಚೆಗೆ ನಡೆದಿದ್ದ ಶ್ರೀಲಂಕಾ ವಿರುದ್ಧದ ಸರಣಿಗೆ ಬಿಸಿಸಿಐ, ದ್ರಾವಿಡ್ ಅವರನ್ನು ಕೋಚ್ ಆಗಿ ನೇಮಿಸಿತ್ತು.

ರಾಹುಲ್ ದ್ರಾವಿಡ್

'ದ್ರಾವಿಡ್ ಮತ್ತೊಂದು ಅವಧಿಗೆ ಈ ಹುದ್ದೆಯಲ್ಲಿ ತಮ್ಮನ್ನು ಮುಂದುವರಿಸುವಂತೆ ಅರ್ಜಿ ಸಲ್ಲಿಸಲು ಅವಕಾಶ ಇದೆ. ಆ ಸಾಧ್ಯತೆ ತೀರಾ ವಿರಳ. ಭಾರತ ಸೀನಿಯರ್ ತಂಡದ ಮುಖ್ಯ ಕೋಚ್ ರವಿಶಾಸ್ತ್ರಿ ಅವರ ಅವಧಿ ಈ ವರ್ಷದ ನವೆಂಬರ್‌ನಲ್ಲಿ ಅಂತ್ಯಗೊಳ್ಳಲಿದೆ. ಅವರಿಂದ ತೆರವಾಗುವ ಸ್ಥಾನಕ್ಕೆ ರಾಹುಲ್ ಅವರನ್ನು ಪರಿಗಣಿಸುವ ಸಾಧ್ಯತೆ ದಟ್ಟವಾಗಿದೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಭಾರತ ತಂಡದ ಮುಖ್ಯ ಕೋಚ್ ಹುದ್ದೆಗೇರುವವರ ವಯಸ್ಸು 60 ವರ್ಷ ದಾಟಬಾರದೆಂಬ ನಿಯಮವಿದೆ. ಈ ವರ್ಷದ ಮೇ ತಿಂಗಳಿನಲ್ಲಿ ರವಿಶಾಸ್ತ್ರಿ 59ನೇ ವಸಂತಕ್ಕೆ ಕಾಲಿಟ್ಟಿದ್ದರು. ಒಂದೊಮ್ಮೆ ಭಾರತವು ಈ ವರ್ಷದ ಅಂತ್ಯದಲ್ಲಿ ನಡೆಯುವ ಟಿ–20 ವಿಶ್ವಕಪ್‌ನಲ್ಲಿ ಶ್ರೇಷ್ಠ ಸಾಮರ್ಥ್ಯ ತೋರದಿದ್ದರೆ ರವಿಶಾಸ್ತ್ರಿ ಸ್ಥಾನಕ್ಕೆ ಕುತ್ತು ಬರುವುದು ನಿಶ್ಚಿತ. ಆಗ ಕೋಚ್ ಹುದ್ದೆಗೆ ದ್ರಾವಿಡ್ ಅವರ ಹೆಸರು ಮುನ್ನೆಲೆಗೆ ಬರಬಹುದು ಎಂದೂ ಹೇಳಲಾಗಿದೆ.

ದೇಶದಲ್ಲಿ ನಡೆಯುವ ಎಲ್ಲಾ ಕ್ರಿಕೆಟ್ ತರಬೇತಿ ಕಾರ್ಯಕ್ರಮದ ಹೊಣೆ, ಅಕಾಡೆಮಿಯಲ್ಲಿ ತರಬೇತಿ ಪಡೆಯುವ ಕ್ರಿಕೆಟಿಗರ ಮೇಲೆ ನಿಗಾ ಇಡುವ ಜವಾಬ್ದಾರಿ ಎನ್‌ಸಿಎ ಮುಖ್ಯಸ್ಥರದ್ದಾಗಿರುತ್ತದೆ.

ಒಲಿಂಪಿಕ್ ಸಾಧಕರಿಗೆ ಅಭಿನಂದನೆ ಮಹಾಪೂರ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಸಾಧನೆ ಮಾಡಿದ ಭಾರತ ಮಹಿಳಾ ಹಾಕಿ ತಂಡದ ಆಟಗಾರ್ತಿಯರಾದ ಶರ್ಮಿಳಾ ದೇವಿ, ನಿಶಾ ವಾರ್ಸಿ ಮತ್ತು ನೇಹಾ ಗೋಯಲ್ ಅವರನ್ನು ಸೋನಿಪತ್‌ನಲ್ಲಿ ಮಂಗಳವಾರ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು –ಪಿಟಿಐ ಚಿತ್ರ

ಟೋಕಿಯೊ ಒಲಿಂಪಿಕ್ಸ್‌ನ ಕುಸ್ತಿಯಲ್ಲಿ ಬೆಳ್ಳಿ ಪದಕ ಜಯಿಸಿದ ರವಿ ದಹಿಯಾ ಅವರನ್ನು ನವದೆಹಲಿಯ ಛತ್ರಸಾಲಾ ಕ್ರೀಡಾಂಗಣದಲ್ಲಿ ಸನ್ಮಾನಿಸಲಾಯಿತು –ಪಿಟಿಐ ಚಿತ್ರ

ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಪಿ.ವಿ. ಸಿಂಧು ಅವರನ್ನು ಮಂಗಳವಾರ ಹೈದರಾಬಾದ್ ಪೊಲೀಸ್ ಕಮಿಷನರ್ ಅಂಜನಿ ಕುಮಾರ್ ಸತ್ಕರಿಸಿದರು –ಪಿಟಿಐ ಚಿತ್ರ

ಭಾರತ ಪುರುಷರ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರಿಗೆ ಕೊಚ್ಚಿ ವಿಮಾನ ನಿಲ್ದಾಣದಲ್ಲಿ ಅದ್ಧೂರಿ ಸ್ವಾಗತ ನೀಡಲಾಯಿತು . ಕೇರಳ ಕ್ರೀಡಾ ಸಚಿವ ವಿ. ಅಬ್ದುರಹೀಮಾನ್ ಹಾಜರಿದ್ದರು –ಪಿಟಿಐ ಚಿತ್ರ

ಹರಿಯಾಣದ ಸೋನಿಪತ್‌ನಲ್ಲಿರುವ ತಮ್ಮ ಮನೆಗೆ ಸೋಮವಾರ ತಡರಾತ್ರಿ ತಲುಪಿದ ಕಂಚಿನ ಪದಕವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಅವರನ್ನು ಅಭಿಮಾನಿಗಳು ಸತ್ಕರಿಸಿದರು. ಈ ವೇಳೆ ಬಜರಂಗ್ ಪತ್ನಿ ಸಂಗೀತಾ ಫೋಗಟ್ ಇದ್ದರು –ಪಿಟಿಐ ಚಿತ್ರ

ಬೆಂಗಳೂರಿನಲ್ಲಿ ಭಾರತ ಕ್ರಿಕೆಟ್ ತಂಡದ ಆಟಗಾರ್ತಿಯರು

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ್ತಿಯರು ಈ ತಿಂಗಳ ಅಂತ್ಯದಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಪ್ರವಾಸಕ್ಕೆ ಪೂರ್ವಭಾವಿ ಸಿದ್ಧತೆ ಕೈಗೊಳ್ಳುವ ಸಲುವಾಗಿ ಮಂಗಳವಾರ ಬೆಂಗಳೂರಿಗೆ ಬಂದಿದ್ದಾರೆ.

ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾದಲ್ಲಿ ಸರಣಿ ನಿಗದಿಯಾಗಿದೆ. ಇದಕ್ಕಾಗಿ ಒಟ್ಟು 30 ಆಟಗಾರ್ತಿಯರು ಬೆಂಗಳೂರಿನಲ್ಲಿ ಅಭ್ಯಾಸ ನಡೆಸಲಿದ್ದಾರೆ. ತರಬೇತಿಗೂ ಮುನ್ನ ಎಲ್ಲರೂ ಆರು ದಿನ ಪ್ರತ್ಯೇಕ ವಾಸದಲ್ಲಿ ಇರಲಿದ್ದಾರೆ.

'ದ ಹಂಡ್ರೆಡ್' ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರುವ ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗ್ರಸ್, ದೀಪ್ತಿ ಶರ್ಮಾ ಮತ್ತು ಶಫಾಲಿ ವರ್ಮಾ ಅವರಿಗೆ ಇದೇ 22ರೊಳಗೆ ತರಬೇತಿ ಶಿಬಿರ ಸೇರಿಕೊಳ್ಳುವಂತೆ ಸೂಚಿಸಲಾಗಿದೆ. ಇವರು ಕೂಡ ಬೆಂಗಳೂರು ತಲುಪಿದ ಬಳಿಕ ಆರು ದಿನ ಪ್ರತ್ಯೇಕ ವಾಸದ ಮೊರೆ ಹೋಗಬೇಕಾಗುತ್ತದೆ.

ಟೆನಿಸ್: ಸೆಮಿಗೆ ಅರ್ಜುನ್

ಪ್ರಜಾವಾಣಿ ವಾರ್ತೆ

ಅರ್ಜುನ್ ಮಣಿಕಂಠನ್

ಬೆಂಗಳೂರು: ಅಮೋಘ ಆಟವಾಡಿದ ಅರ್ಜುನ್ ಮಣಿಕಂಠನ್ ಕೆಎಸ್‌ಎಲ್‌ಟಿಎ–ಎಐಟಿಎ 12 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಮಂಗಳವಾರ ನಡೆದ ಬಾಲಕರ ವಿಭಾಗದ ಎಂಟರಘಟ್ಟದ ಹಣಾಹಣಿಯಲ್ಲಿ ಅವರು 8-2ರಿಂದ ಆರುಷ್ ಮಾಳನ್ನವರ ಸವಾಲು ಮೀರಿದರು.

16ರ ಘಟ್ಟದ ಪಂದ್ಯದಲ್ಲಿ ಅಗ್ರಶ್ರೇಯಾಂಕದ ಆಟಗಾರ ರುಹಾನ್ ಕೊಮಂದೂರ್ ಅವರಿಗೆ ಸೋಲುಣಿಸಿದ್ದ ಆರುಷ್‌ಗೆ ಕ್ವಾರ್ಟರ್‌ಫೈನಲ್‌ನಲ್ಲಿ ಅದೇ ಸಾಮರ್ಥ್ಯ ತೋರಲು ಸಾಧ್ಯವಾಗಲಿಲ್ಲ.

ಬಾಲಕಿಯರ ವಿಭಾಗದ ಪ್ರೀ-ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ರೀತ್ ಜಾವರ್ 8–3ರಿಂದ ಎರಡನೇ ಶ್ರೇಯಾಂಕದ ತೀರ್ಥಾ ಎ.ಎನ್. ಅವರನ್ನು ಮಣಿಸಿದ್ದರು. ಆದರೆ ರೀತ್ ಎಂಟರಘಟ್ಟದಲ್ಲಿ ತಮಿಳುನಾಡಿನ ಸನ್ಮಿತಾ ಹರಿಣಿ ಎದುರು 2–8ರಿಂದ ಎಡವಿದರು.

ಚೆನ್ನೈಗೆ ಬಂದ ಧೋನಿ

ಚೆನ್ನೈ (ಪಿಟಿಐ): ಭಾರತ ತಂಡದ ಅನುಭವಿ ಆಟಗಾರ ಮಹೇಂದ್ರ ಸಿಂಗ್ ಧೋನಿ, ಮಂಗಳವಾರ ಚೆನ್ನೈಗೆ ಬಂದಿಳಿದಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್‌ನ ಉಳಿದ ಪಂದ್ಯಗಳು ಮುಂದಿನ ತಿಂಗಳು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ನಿಗದಿಯಾಗಿದೆ. ಇದರಲ್ಲಿ ಪಾಲ್ಗೊಳ್ಳುವ ಸಲುವಾಗಿ ನಾಯಕ ಧೋನಿ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡದ ಇತರ ಆಟಗಾರರು ಇದೇ 13ರಂದು ಯುಇಎಗೆ ಪ್ರಯಾಣ ಬೆಳೆಸುವ ಸಾಧ್ಯತೆ ಇದೆ.

'ತಂಡದಲ್ಲಿರುವ ಭಾರತ ತಂಡದ ಆಟಗಾರರು ಚೆನ್ನೈನಲ್ಲಿ ನಡೆಯುವ ಸಿದ್ಧತಾ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಮಹೇಂದ್ರ ಸಿಂಗ್ ಧೋನಿ

ಅವರು ಇದೇ 13ರಂದು ಯುಎಇಗೆ ಹೋಗುವ ನಿರೀಕ್ಷೆ ಇದೆ' ಎಂದು ಸಿಎಸ್‌ಕೆ ಸಿಇಒ ಕೆ.ಎಸ್.ವಿಶ್ವನಾಥ್ ತಿಳಿಸಿದ್ದಾರೆ.

ಕ್ರಿಕೆಟಿಗ ಕ್ರಿಸ್ ಕೇನ್ಸ್ ಸ್ಥಿತಿ ಗಂಭೀರ

ಮೆಲ್ಬರ್ನ್ (ಪಿಟಿಐ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಕ್ರಿಸ್ ಕೇನ್ಸ್ ತೀವ್ರ ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

51 ವರ್ಷದ ಕ್ರಿಸ್ ಸ್ಥಿತಿ ಗಂಭೀರವಾಗಿದ್ದು ಜೀವಸುರಕ್ಷಾ ಸಾಧನದ ನೆರವು ಒದಗಿಸಲಾಗಿದೆ. ಏರಾಟಿಕ್ ಡಿಸೆಕ್ಷನ್ ಎಂಬ ಕಾಯಿಲೆಯಿಂದ ಅವರು ಬಳಲುತ್ತಿದ್ದಾರೆ. ಮಂಗಳವಾರ ಅವರು ಕುಸಿದುಬಿದ್ದ ಅವರನ್ನು ಕೆನ್‌ಬೆರಾದ ಆಸ್ಪತ್ರೆಗೆ ದಾಖಲಾಯಿಸಲಾಯಿತು.

ಕ್ರಿಸ್ ಕೇನ್ಸ್

'ಏರಾಟಿಕ್ ಡಿಸೆಕ್ಷನ್ ಕಾಯಿಲೆಯಲ್ಲಿ ಹೃದಯದ ಮುಖ್ಯ ಧಮನಿಯು ಜಖಂ ಆಗಿರುತ್ತದೆ. ಅವರಿಗೆ ಅಗತ್ಯವಿರುವ ಕೆಲವು ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ. ಆದರೆ ಚಿಕಿತ್ಸೆಗೆ ಸ್ಪಂದಿಸುತ್ತಿಲ್ಲ' ಎಂದು ಆಸ್ಪತ್ರೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನ್ಯೂಜಿಲೆಂಡ್ ಕ್ರಿಕೆಟ್‌ನಲ್ಲಿ ಶ್ರೇಷ್ಠ ಆಲ್‌ರೌಂಡರ್‌ಗಳಲ್ಲಿ ಕ್ರಿಸ್ ಕೂಡ ಒಬ್ಬರು. 1989–2006ರ ಅವಧಿಯಲ್ಲಿ ಅವರು 62 ಟೆಸ್ಟ್, 215 ಏಕದಿನ ಮತ್ತು ಎರಡು ಟಿ20 ಪಂದ್ಯಗಳನ್ನು ಆಡಿದ್ದಾರೆ.

ಆರ್ಚರಿಪಟುಗಳ ವಿಶ್ವದಾಖಲೆ

ವ್ರೊಕ್ಲಾ (ಪಿಟಿಐ): ವಿಶ್ವ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರುವ ಭಾರತದ 18 ವರ್ಷದೊಳಗಿನವರ ಆರ್ಚರಿಪಟುಗಳು ಮಂಗಳವಾರ ವಿಶ್ವದಾಖಲೆ ನಿರ್ಮಿಸಿದ್ದಾರೆ.

ಕಾಂಪೌಂಡ್ ಬಾಲಕಿಯರು ಮತ್ತು ಮಿಶ್ರ ತಂಡ ವಿಭಾಗಗಳಲ್ಲಿ ಈ ದಾಖಲೆಗಳು ಅರಳಿವೆ.

ಪ್ರಿಯಾ ಗುರ್ಜರ್, ಪರ್ಣೀತ್ ಕೌರ್ ಮತ್ತು ರಿಧು ಸೆಂಥಿಲ್‌ಕುಮಾರ್ ಅವರಿದ್ದ ಬಾಲಕಿಯರ ತಂಡ ರ‍್ಯಾಂಕಿಂಗ್ ಸುತ್ತಿನಲ್ಲಿ ಒಟ್ಟು 2,067 ಪಾಯಿಂಟ್ಸ್‌ಗಳಿಸಿ ಈ ಸಾಧನೆ ಮಾಡಿತು. ಅಮೆರಿಕದ ಕೀನೆ ಸ್ಯಾಂಚಿಕೊ, ಬ್ರಿಯೆನ್ನಾ ಟೆವೊಡೊರ್ ಮತ್ತು ಸವನ್ನಾ ವ್ಯಾಂಡರ್‌ವಿಯರ್ ಅವರಿದ್ದ ತಂಡ 2017ರಲ್ಲಿ ರೊಸಾರಿಯೊದಲ್ಲಿ ನಡೆದಿದ್ದ ಸ್ಪರ್ಧೆಯಲ್ಲಿ ಒಟ್ಟು 2,045 ಪಾಯಿಂಟ್ಸ್ ಕಲೆಹಾಕಿದ್ದು ಇದುವರೆಗಿನ ದಾಖಲೆಯಾಗಿತ್ತು.

ರ‍್ಯಾಂಕಿಂಗ್ ಸುತ್ತಿನಲ್ಲಿ ಪ್ರಿಯಾ 696 ಸ್ಕೋರ್ ಗಳಿಸಿ ಗಮನ ಸೆಳೆದರು.

ಮಿಶ್ರ ತಂಡ ವಿಭಾಗದಲ್ಲಿ ಕುಶಾಲ್ ದಲಾಲ್ ಜೊತೆಗೂಡಿ ಆಡಿದ ಪ್ರಿಯಾ ಮೋಡಿ ಮಾಡಿದರು. ಪ್ರಿಯಾ ಮತ್ತು ಕುಶಾಲ್ 1,401 ಪಾಯಿಂಟ್ಸ್ ಗಳಿಸಿ ಡೆನ್ಮಾರ್ಕ್‌ನ ನತಾಶ ಸ್ಟುಟ್ಜ್ ಮತ್ತು ಮಥಿಯಸ್ ಫುಲ್ಲೆರ್ಟನ್ (1,387) ಹೆಸರಿನಲ್ಲಿದ್ದ ವಿಶ್ವದಾಖಲೆ ಅಳಿಸಿಹಾಕಿದರು.

ಕಾಂಪೌಂಡ್ ತಂಡವು ಇಲ್ಲಿ 2ನೇ ಸ್ಥಾನ ಪಡೆಯಿತು. ದಲಾಲ್ ಅವರು ವೈಯಕ್ತಿಕ ರ‍್ಯಾಂಕಿಂಗ್ ಸುತ್ತಿನಲ್ಲಿ 3ನೇ ಸ್ಥಾನ ತಮ್ಮದಾಗಿಸಿಕೊಂಡರು.

ಪ್ರಿಯಾ ಗುರ್ಜರ್, ಪರ್ಣೀತ್ ಕೌರ್ ಮತ್ತು ರಿಧು ಸೆಂಥಿಲ್‌ಕುಮಾರ್ ಅವರ ಸಂಭ್ರಮ –ಟ್ವಿಟರ್ ಚಿತ್ರ

ಆನ್‌ಲೈನ್ ದೈತ್ಯರಿಂದ ಸಣ್ಣ ವ್ಯಾಪಾರಿಗಳ ಮೇಲೆ ಪ್ರಭಾವ

'ಪರಿಣಾಮ ನಿಭಾಯಿಸಲು ಕ್ರಮ'

ನವದೆಹಲಿ (ಪಿಟಿಐ): ಆನ್‌ಲೈನ್ ಜಗತ್ತಿನ ದೈತ್ಯ ಕಂಪನಿಗಳು ಸಣ್ಣ ವ್ಯಾಪಾರಿಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿರುವ ವಿಚಾರವಾಗಿ ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಮಂಗಳವಾರ ಕಳವಳ ವ್ಯಕ್ತಪಡಿಸಿದ್ದಾರೆ. ದೀರ್ಘಾವಧಿಯಲ್ಲಿ ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಒಳ್ಳೆಯ ಗುಣಮಟ್ಟದ ವಸ್ತುಗಳು ಸಿಗುವಂತೆ ನೋಡಿಕೊಳ್ಳಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಹೇಳಿದ್ದಾರೆ.

ನ್ಯಾಯಸಮ್ಮತವಲ್ಲದ ರೀತಿಯಲ್ಲಿ ವ್ಯಾಪಾರ ನಡೆಸಲಾಗುತ್ತಿದೆ ಎಂಬ ಆರೋಪದ ಬಗ್ಗೆ ತನಿಖೆಗೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ನೀಡಿರುವ ಆದೇಶವನ್ನು ರದ್ದುಪಡಿಸಬೇಕು ಎಂದು ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಕಂಪನಿಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದವು. ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

ಆನ್‌ಲೈನ್ ಮೂಲಕ ವಸ್ತುಗಳನ್ನು ಮಾರಾಟ ಮಾಡುವ ಕಂಪನಿಗಳ ಕೈಯಲ್ಲಿ ಹಣದ ಶಕ್ತಿ ಇರುವ ಕಾರಣ ಅವರ ಪ್ರಭಾವ ಹೆಚ್ಚುತ್ತಿದೆ. ಸಣ್ಣ ಪ್ರಮಾಣದ ವ್ಯಾಪಾರಿಗಳು ಅಂಗಡಿ ಬಾಗಿಲು ಹಾಕುತ್ತಿದ್ದಾರೆ ಎಂದು ಸಚಿವರು ಲೋಕಸಭೆಯಲ್ಲಿ ಹೇಳಿದ್ದಾರೆ. ಈ ವಿಚಾರವಾಗಿ ಭಾರತದಲ್ಲಿ ಮಾತ್ರವಲ್ಲದೆ, ಜಗತ್ತಿನ ಎಲ್ಲೆಡೆಯೂ ಕಳವಳ ವ್ಯಕ್ತವಾಗುತ್ತಿದೆ ಎಂದು ಸಚಿವರು ಹೇಳಿದ್ದಾರೆ.

ಗೋಯಲ್ ಅವರು ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಸರಬರಾಜು ಸಚಿವಾಲಯಗಳ ಹೊಣೆಯನ್ನು ಹೊತ್ತಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ, ಗ್ರಾಹಕರ ಸಂರಕ್ಷಣೆ (ಇ–ವಾಣಿಜ್ಯ) ತಿದ್ದುಪಡಿ ನಿಯಮಗಳಿಗೆ ಸಂಬಂಧಿಸಿದ ಪೂರಕ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡುವಾಗ ಅವರು ಈ ಮಾತುಗಳನ್ನು ಹೇಳಿದ್ದಾರೆ.

ಭಾರತದಲ್ಲಿ ಸರಿಸುಮಾರು ಆರು ಕೋಟಿ ಸಣ್ಣ ವ್ಯಾಪಾರಸ್ಥರು ಇದ್ದಾರೆ. ಇವರು ಅಂದಾಜು 12 ಕೋಟಿಯಿಂದ 13 ಕೋಟಿ ಜನರಿಗೆ ಉದ್ಯೋಗ ನೀಡಿದ್ದಾರೆ. ಆನ್‌ಲೈನ್ ಮೂಲಕ ವಸ್ತುಗಳನ್ನು ಮಾರಾಟ ಮಾಡುವ ಕಂಪನಿಗಳು ಹೆಚ್ಚಿನ ಪ್ರಭಾವ ಹೊಂದಿರುತ್ತವೆ. ಕಾಲಕ್ರಮೇಣ, ವಸ್ತುಗಳಿಗೆ ಹೆಚ್ಚಿನ ಬೆಲೆ ನೀಡಿ ಖರೀದಿಸಬೇಕಾದ ಅನಿವಾರ್ಯ ಗ್ರಾಹಕರಿಗೆ ಎದುರಾಗಬಹುದು ಎಂದು ಸಚಿವರು ಹೇಳಿದ್ದಾರೆ.

ಸಿಸಿಐ ತನಿಖೆಯನ್ನು ನಿಲ್ಲಿಸಲು ಕೆಲವು ಕಂಪನಿಗಳು ಯತ್ನಿಸಿದ್ದವು. 'ಆದರೆ, ಸಿಸಿಐ ತನಿಖೆ ನಡೆಯಲಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದು ನನಗೆ ಸಂತಸ ತಂದಿದೆ' ಎಂದೂ ಅವರು ಹೇಳಿದ್ದಾರೆ.

ವಲಸೆ ಕಾರ್ಮಿಕರಿಗೆ ಎಲ್‌ಪಿಜಿ ಸಂಪರ್ಕ ಇನ್ನು ಸರಳ

• ಅನ್ನಪೂರ್ಣಾ ಸಿಂಗ್

ನವದೆಹಲಿ: ಬಡ ಕುಟುಂಬಗಳಿಗೆ ಉಚಿತವಾಗಿ ಎಲ್‌ಪಿಜಿ ಸಿಲಿಂಡರ್ ಒದಗಿಸುವ ತನ್ನ ಪ್ರಮುಖ ಯೋಜನೆಯೊಂದರಲ್ಲಿ ವಲಸೆ ಕಾರ್ಮಿಕರನ್ನೂ ಸೇರಿಸಿಕೊಳ್ಳಲು ಕೇಂದ್ರ ಸರ್ಕಾರವು ನಿಯಮಗಳನ್ನು ಸಡಿಲಿಸಿದೆ.

ನಿಯಮ ಸಡಿಲಿಸಿರುವ ಘೋಷಣೆಯನ್ನು ಉತ್ತರ ಪ್ರದೇಶದಿಂದ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಎಲ್‌ಪಿಜಿ ಸಿಲಿಂಡರ್ ಪಡೆಯಲು ವಲಸೆ ಕಾರ್ಮಿಕರು ತಾವು ವಾಸ ಮಾಡುತ್ತಿರುವುದು ಎಲ್ಲಿ ಎಂಬುದನ್ನು ತಿಳಿಸಿದರೆ ಸಾಕು ಎಂದು ಹೇಳಿದರು. ವಲಸೆ ಕಾರ್ಮಿಕರು ತಮ್ಮ ವಾಸಸ್ಥಳದ ದಾಖಲೆಗಳನ್ನು ಸಲ್ಲಿಸಬೇಕಾಗಿಲ್ಲ.

ಈ ಯೋಜನೆಯ ಅಡಿಯಲ್ಲಿ ಎಲ್‌ಪಿಜಿ ಸಿಲಿಂಡರ್‌ಅನ್ನು ಠೇವಣಿ ಇರಿಸದೆಯೂ ಪಡೆಯಬಹುದು. ಅಲ್ಲದೆ, ಇದರ ಜೊತೆ ಒಂದು ಸ್ಟವ್‌ಅನ್ನು ಉಚಿತವಾಗಿ ನೀಡಲಾಗುತ್ತದೆ.

'ಎಲ್‌ಪಿಜಿ ಸಂಪರ್ಕವನ್ನು ಉಚಿತವಾಗಿ ನೀಡುವ ಈ ಯೋಜನೆಯ ಪ್ರಯೋಜನವು ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ಅರ್ಥವಾಗಿದೆ. ಉಜ್ವಲಾ ಯೋಜನೆಯ ಕಾರಣದಿಂದಾಗಿ ಎಲ್‌ಪಿಜಿ ಅನಿಲ ಮೂಲಸೌಕರ್ಯದಲ್ಲಿ ಹೆಚ್ಚಳ ಕಂಡುಬಂದಿದೆ. ಕಳೆದ 6–7 ವರ್ಷಗಳ ಅವಧಿಯಲ್ಲಿ 11 ಸಾವಿರಕ್ಕಿಂತ ಹೆಚ್ಚು ಎಲ್‌ಪಿಜಿ ವಿತರಣೆ ಕೇಂದ್ರಗಳನ್ನು ತೆರೆಯಲಾಗಿದೆ' ಎಂದು ಮೋದಿ ಅವರು ತಿಳಿಸಿದರು.

ವಲಸೆ ಕಾರ್ಮಿಕರು ವಾಸಸ್ಥಳದ ದಾಖಲೆಯನ್ನು ತೋರಿಸುವಲ್ಲಿ ಸಮಸ್ಯೆ ಎದುರಿಸುತ್ತಾರೆ. ಆದರೆ, ಉಜ್ವಲಾ 2.0 ಯೋಜನೆಯು ಇಂತಹ ಕುಟುಂಬಗಳಿಗೆ ಹೆಚ್ಚಿನ ಪ್ರಯೋಜನ ತಂದುಕೊಡಲಿದೆ. ವಲಸೆ ಕಾರ್ಮಿಕರು ವಾಸಸ್ಥಳದ ದಾಖಲೆಗಾಗಿ ಅಲೆಯಬೇಕಾಗಿಲ್ಲ. ಅವರು ತಮ್ಮ ವಾಸಸ್ಥಳದ ಬಗ್ಗೆ ತಾವೇ ಒಂದು ಹೇಳಿಕೆ ನೀಡಿದರೆ ಸಾಕು ಎಂದು ತಿಳಿಸಿದರು.

ಲೈಂಗಿಕ ಕಿರುಕುಳ: ಪ್ರಿನ್ಸ್ ಆ್ಯಂಡ್ರ್ಯೂ ವಿರುದ್ಧ ದೂರು

ನವದೆಹಲಿ (ಎಎಫ್‌ಪಿ): ಲೈಂಗಿಕ ಕಿರುಕುಳ ಆರೋಪದಡಿ ಮಹಿಳೆಯೊಬ್ಬರ ದೂರು ಆಧರಿಸಿ ಕ್ವೀನ್ ಎಲಿಜಬೆತ್– 2 ಅವರ ಎರಡನೇ ಪುತ್ರ ಪ್ರಿನ್ಸ್ ಆ್ಯಂಡ್ರ್ಯೂ ಅವರ ವಿರುದ್ಧ ನ್ಯೂಯಾರ್ಕ್ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಾಗಿದೆ.

'ಹಣಕಾಸು ವಹಿವಾಟು ನಡೆಸುತ್ತಿದ್ದ ದಿವಂಗತ ಜೆಫ್ರಿ ಎಪ್‌ಸ್ಟೀನ್ ಎಂಬುವರು ಬಾಲಕಿಯಾಗಿದ್ದಾಗ ನನ್ನನ್ನು ನಿಯಮಿತವಾಗಿ ಲೈಂಗಿಕವಾಗಿ ಬಳಸುತ್ತಿದ್ದರು. ಇದೇ ಉದ್ದೇಶಕ್ಕಾಗಿ 'ಪ್ರಿನ್ಸ್ ಆ್ಯಂಡ್ರ್ಯೂ' ಹೆಸರಿನ ಪ್ರಭಾವಿಯ ಬಳಿಗೂ ಕಳುಹಿಸಿಕೊಟ್ಟಿದ್ದರು' ಎಂದು ಮಹಿಳೆ ತನ್ನ ದೂರಿನಲ್ಲಿ ಆರೋಪಿಸಿದ್ದಾರೆ.

ದೂರಿನಲ್ಲಿ ಪ್ರಿನ್ಸ್ ಆ್ಯಂಡ್ರ್ಯೂ ಅವರನ್ನು ಆರೋಪಿಯಾಗಿ ಹೆಸರಿಸಿದ್ದು, 'ಪ್ರಿನ್ಸ್ ಲಂಡನ್‌ನ ತನ್ನ ಮನೆಯಲ್ಲಿ 20 ವರ್ಷದ ಹಿಂದೆ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಆಗ ನನಗೆ 18 ವರ್ಷವಾಗಿರಲಿಲ್ಲ' ಎಂದಿದ್ದಾರೆ.

ಈ ಆರೋಪವನ್ನು 61 ವರ್ಷದ ಪ್ರಿನ್ಸ್ ಆ್ಯಂಡ್ರ್ಯೂ ನಿರಾಕರಿಸಿದ್ದಾರೆ. ಆಕೆಯನ್ನು ಭೇಟಿಯಾಗಿರುವ ನೆನಪೂ ನನಗಿಲ್ಲ. ಆದರೆ, ಈ ಆರೋಪಗಳು ಬ್ರಿಟೀಷ್ ರಾಜಮನೆತನದ ವರ್ಚಸ್ಸಿಗೆ ಧಕ್ಕೆ ತರುವಂತಹದ್ದಾಗಿದೆ ಎಂದಿದ್ದಾರೆ.

ಐದು ಜಿಲ್ಲೆಗಳಲ್ಲಿ ಸೋಂಕು ಪ್ರಕರಣ ಏರಿಕೆ

ನವದೆಹಲಿ: ಕರ್ನಾಟಕ ಐದು ಜಿಲ್ಲೆಗಳು ಸೇರಿದಂತೆ ದೇಶದಲ್ಲಿ ಒಟ್ಟು 37 ಜಿಲ್ಲೆಗಳಲ್ಲಿ ಕೊರೊನಾ ಸೋಂಕು ಪ್ರಕರಣಗಳು ಕಳೆದ ಎರಡು ವಾರಗಳಿMದ ಏರುಗತಿಯಲ್ಲಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ್ ಅಗರವಾಲ್ ಅವರು, 'ಕರ್ನಾಟಕದ ಕೊಡಗು, ಉತ್ತರ ಕನ್ನಡ, ಚಾಮರಾಜನಗರ, ದಕ್ಷಿಣ ಕನ್ನಡ, ಉಡುಪಿಯಲ್ಲಿ ಸೋಂಕು ಪ್ರಕರಣ ಏರುಗತಿಯಲ್ಲಿವೆ' ಎಂದು ತಿಳಿಸಿದ್ದಾರೆ. ಉಳಿದಂತೆ ಪ್ರಕರಣಗಳು ಏರುಗತಿಯಲ್ಲಿರುವ ಜಿಲ್ಲೆಗಳು ಕೇರಳದಲ್ಲಿ 11, ತಮಿಳುನಾಡಿನಲ್ಲಿ 7, ಹಿಮಾಚಲ ಪ್ರದೇಶದಲ್ಲಿ 6 ಇವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕೋವಿಡ್: 4 ಕೋಟಿ ದಾಟಿದ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 1.26 ಲಕ್ಷ ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಇದರೊಂದಿಗೆ ಈವರೆಗೆ ನಡೆಸಲಾದ ಒಟ್ಟು ಪರೀಕ್ಷೆಗಳ ಸಂಖ್ಯೆ 4 ಕೋಟಿ ಗಡಿ (4.01 ಕೋಟಿ) ದಾಟಿದೆ.

ಕಳೆದ ವರ್ಷ 1.41 ಕೋಟಿ ಪರೀಕ್ಷೆಗಳನ್ನು ನಡೆಸಲಾಗಿತ್ತು. ಈ ವರ್ಷ 7 ತಿಂಗಳು 10 ದಿನಗಳಲ್ಲಿ 2.59 ಕೋಟಿ ಪರೀಕ್ಷೆಗಳನ್ನು ಮಾಡಲಾಗಿದೆ. ಇದರಲ್ಲಿ 2.21 ಕೋಟಿ ಪರೀಕ್ಷೆಗಳನ್ನು ಆರ್‌ಟಿ–ಪಿಸಿಆರ್ ವಿಧಾನದ ಮೂಲಕ ನಡೆಸಲಾಗಿದೆ. 37 ಲಕ್ಷ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗಳನ್ನು ಮಾಡಲಾಗಿದೆ. ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ನಡೆಸುವಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಹೀಗಾಗಿ, ಮೂರು ತಿಂಗಳಿನಿಂದ ಪ್ರತಿನಿತ್ಯ ಸರಾಸರಿ 1.50 ಲಕ್ಷ ಪರೀಕ್ಷೆಗಳನ್ನು ಮಾಡಲಾಗುತ್ತಿದೆ.

ರಾಜ್ಯದಲ್ಲಿ ಮಂಗಳವಾರ 1,338 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ. ಶೇ 1.05 ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ.

15 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 11 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ ಹಾಗೂ ಗದಗದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 378, ಮೈಸೂರಿನಲ್ಲಿ 71 ಹಾಗೂ ಕೊಡಗಿನಲ್ಲಿ 50 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 315 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100 ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.21 ಲಕ್ಷ ದಾಟಿದೆ. ಕೋವಿಡ್ ಪೀಡಿತರಲ್ಲಿ 31 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 15 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 8, ಉತ್ತರ ಕನ್ನಡದಲ್ಲಿ 4, ಹಾಸನ ಹಾಗೂ ಬೆಂಗಳೂರಿನಲ್ಲಿ ತಲಾ 3, ಕೋಲಾರ ಹಾಗೂ ಮೈಸೂರಿನಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 2.31 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 36,848ಕ್ಕೆ ಏರಿದೆ. ಸೋಂಕಿತರಲ್ಲಿ 1,947 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಸಂಖ್ಯೆ 28.61 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 22,676ಕ್ಕೆ ಇಳಿಕೆಯಾಗಿದೆ.

ಬಿಜೆಪಿಯ ಆದಾಯ ₹3,623 ಕೋಟಿಗೂ ಅಧಿಕ

ನವದೆಹಲಿ (ಪಿಟಿಐ): 2019–2020ನೇ ಹಣಕಾಸು ವರ್ಷದಲ್ಲಿ ಬಿಜೆಪಿಯ ಆದಾಯ ₹3,623 ಕೋಟಿಗೂ ಅಧಿಕ. ಈ ಪೈಕಿ ₹ 2,555 ಕೋಟಿ ಚುನಾವಣಾ ಬಾಂಡ್ ಮೂಲಕ ಬಂದಿದೆ ಎಂದು ಪಕ್ಷವು ತಿಳಿಸಿದೆ.

ಲೆಕ್ಕಪರಿಶೋಧನೆಗೆ ಒಳಪಟ್ಟಿರುವ 2019–20ನೇ ವರ್ಷದ ಲೆಕ್ಕಪತ್ರದ ವಿವರಗಳನ್ನು ಪಕ್ಷವು ಚುನಾವಣಾ ಅಯೋಗಕ್ಕೆ ಸಲ್ಲಿಸಿದ್ದು, ಆಯೋಗವು ಈ ವಿವರಗಳನ್ನು ತನ್ನ ವೆಬ್ ಸೈಟ್‌ನಲ್ಲಿ ಪ್ರಕಟಿಸಿದೆ.

ಲೆಕ್ಕಪತ್ರದ ವಿವರಗಳ ಪ್ರಕಾರ, ಆ ವರ್ಷದಲ್ಲಿ ಬಿಜೆಪಿಯ ಒಟ್ಟು ಆದಾಯ ₹ 3623 ಕೋಟಿ ಹಾಗೂ ವೆಚ್ಚ ₹1651 ಕೋಟಿ ಎಂದು ಪಕ್ಷವು ದಾಖಲಿಸಿದೆ.

ಚುನಾವಣೆ ಮತ್ತು ಸಾಮಾನ್ಯ ಪ್ರಚಾರ ಉದ್ದೇಶಗಳಿಗಾಗಿ ಆ ಸಾಲಿನಲ್ಲಿ ಮಾಡಿರುವ ಒಟ್ಟು ವೆಚ್ಚ ₹ 1,352.92 ಕೋಟಿ. ಈ ಪೈಕಿ ಜಾಹೀರಾತು ಉದ್ದೇಶಕ್ಕಾಗಿಯೇ ಬಿಜೆಪಿ ₹ 400 ಕೋಟಿಗೂ ಅಧಿಕ ಮೊತ್ತ ವಿನಿಯೋಗಿಸಿದೆ.

ಲೆಕ್ಕಪರಿಶೋಧನೆಗೆ ಒಳಪಟ್ಟ ಆದಾಯ–ವೆಚ್ಚದ ವಿವರಗಳನ್ನು ಬಿಜೆಪಿ ಜುಲೈ 22ರಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದು, ಆಯೋಗವು ಅದನ್ನು ಈಚೆಗೆ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

2019–20ನೇ ಹಣಕಾಸು ವರ್ಷದಲ್ಲಿ ಕಾಂಗ್ರೆಸ್ ಪಕ್ಷವು ₹29.25 ಕೋಟಿ ಅನ್ನು ಚುನಾವಣಾ ಬಾಂಡ್‌ಗಳ ಮೂಲಕ ಪಡೆದುಕೊಂಡಿದೆ.

ಇದೇ ಅವಧಿಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ₹ 100.46 ಕೋಟಿ, ಡಿಎಂಕೆ ಪಕ್ಷಕ್ಕೆ ₹ 45 ಕೋಟಿ, ಶಿವಸೇನೆಗೆ ₹ 41 ಕೋಟಿ ಹಾಗೂ ರಾಷ್ಟ್ರೀಯ ಜನತಾದಳ ಪಕ್ಷಕ್ಕೆ ₹ 2.5 ಕೋಟಿ ಚುನಾವಣಾ ಬಾಂಡ್‌ನ ಸ್ವರೂಪದಲ್ಲಿ ಬಂದಿದೆ ಎಂದು ಆಯೋಗವು ವಿವರಗಳನ್ನು ಪ್ರಕಟಿಸಿದೆ.

ಹಸ್ತಾಂತರ: ನೀರವ್ ಮೋದಿ ಅರ್ಜಿಯ ಪರಿಶೀಲನೆ

ಲಂಡನ್ (ಪಿಟಿಐ): ಕಾನೂನು ಪ್ರಕ್ರಿಯೆ ಜಾರಿಗೊಳಿಸಲು ಭಾರತಕ್ಕೆ ತನ್ನನ್ನು ಹಸ್ತಾಂತರ ಮಾಡುವ ಕುರಿತ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ವಜ್ರದ ವ್ಯಾಪಾರಿ ನೀರವ್ ಮೋದಿಗೆ ಅನುಮತಿ ನೀಡಿರುವ ಲಂಡನ್ ಹೈಕೋರ್ಟ್ ಆದೇಶವನ್ನು ಪರಿಶೀಲಿಸಲಾಗುತ್ತದೆ ಎಂದು ಭಾರತ ಮತ್ತು ಬ್ರಿಟನ್ ಹೇಳಿವೆ.

ಲಂಡನ್‌ನ ಕೋರ್ಟ್‌ನಲ್ಲಿ ಭಾರತ ಪ್ರತಿನಿಧಿಸುವ ಕ್ರೌನ್ ಪ್ರಾಸಿಕ್ಯೂಷನ್ ಸರ್ವೀಸ್ (ಸಿಪಿಎಸ್) ಈ ಮಾಹಿತಿ ನೀಡಿದೆ. 50 ವರ್ಷದ ವ್ಯಾಪಾರಿಯ ಮಾನಸಿಕ ಸ್ಥಿತಿ ಆಧರಿಸಿ ಈ ಮನವಿ ಪರಿಗಣಿಸಬಹುದಾಗಿದೆ ಎಂದಿದೆ.ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಕೋಟ್ಯಂತರ ರೂಪಾಯಿ ವಂಚನೆ ಪ್ರಕರಣದ ಆರೋಪಿಯಾಗಿರುವ ನೀರವ್ ಮೋದಿ, ಸದ್ಯ ಲಂಡನ್‌ನ ವಾಂಡ್ಸ್‌ವರ್ಥ್ ಕಾರಾಗೃಹದಲ್ಲಿ ದ್ದಾರೆ. ಭಾರತಕ್ಕೆ ಇವರ ಹಸ್ತಾಂತರ ಆದೇಶವನ್ನು ಇವರು 2 ಅಂಶಗಳ ಆಧಾರದಲ್ಲಿ ಪ್ರಶ್ನಿಸಬಹುದು. ಈ ಕುರಿತು ಭಾರತ ಸರ್ಕಾರದ ಜೊತೆಗೆ ಸಿಪಿಎಸ್ ಚರ್ಚೆಯಲ್ಲಿದೆ ಎಂದು ಅದರ ವಕ್ತಾರರು ತಿಳಿಸಿದ್ದಾರೆ.

ಪ್ರಜಾವಾಣಿ ಇದ್ದರೆ ಗಮನ... ಗೆಲ್ಲುತ್ತೀರಿ ಬಹುಮಾನ!
ಸ್ಪೆಷಲ್ ಅಂಕಣಗಳ ಸಿಂಪಲ್ ಪ್ರಶ್ನೆ!
ಹಿಂದಿನ ಪ್ರಶ್ನೆಗೆ ಉತ್ತರ: 9606038256
ಪ್ರತಿ ದಿನ ಒಂದು ಸ್ಪೆಷಲ್ ಅಂಕಣದಿಂದ ಆಯ್ದ ಪ್ರಶ್ನೆಗೆ ಉತ್ತರಿಸಿ ಬಹುಮಾನ ಗೆಲ್ಲಿ!
ಪ್ರಶ್ನೆ: ಸಿಇಟಿ ದಿಕ್ಸೂಚಿಯಲ್ಲಿ ಯಾವ ವಿಷಯದ ಬಗ್ಗೆ ಮಾಹಿತಿ ಕೊಡಲಾಗಿದೆ?
www.bit.ly/pvgamana
ಲಿಂಕ್ ಬಳಸಿ ಇಂದು ರಾತ್ರಿ 8ರ ಒಳಗೆ ನಿಮ್ಮ ಉತ್ತರವನ್ನು ಕಳುಹಿಸಿ
ಪ್ರಜಾವಾಣಿ GIFT VOUCHER ₹500/-
ಪ್ರತಿ ದಿನ 8 ಅದೃಷ್ಟಶಾಲಿಗಳಿಗೆ

ಒಲಿಂಪಿಕ್ಸ್‌ನಲ್ಲಿ ಚಿನ್ನ ವಿಜೇತ ಜಾವೆಲಿನ್ ಥ್ರೊ ಪಟು ನೀರಜ್ ಮನದಾಳ

ವಿಶ್ವ ಚಾಂಪಿಯನ್‌ಷಿಪ್ ಪದಕದ ಗುರಿ

ನವದೆಹಲಿ (ಪಿಟಿಐ): 'ಮುಂದಿನ ವರ್ಷ ಅಮೆರಿಕದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಗುರಿ ಹೊಂದಿದ್ದೇನೆ' ಎಂದು ನೀರಜ್ ಚೋಪ್ರಾ ಮಂಗಳವಾರ ತಿಳಿಸಿದರು.

'ಏಷ್ಯನ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಚಿನ್ನ ಜಯಿಸಿದ್ದೇನೆ. ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ಕನಸೂ ಸಾಕಾರಗೊಂಡಿದೆ. ಈಗ ವಿಶ್ವ ಚಾಂಪಿಯನ್‌ಷಿಪ್‌ನತ್ತ ಚಿತ್ತ ಹರಿಸಿದ್ದೇನೆ' ಎಂದರು.

'ವಿಶ್ವ ಚಾಂಪಿಯನ್‌ಷಿಪ್ ಮಹತ್ವದ ಕೂಟ. ಕೆಲವೊಮ್ಮೆ ಅಲ್ಲಿ ಒಲಿಂಪಿಕ್ಸ್‌ಗಿಂತಲೂ ಕಠಿಣವಾದ ಸವಾಲು ಎದುರಾಗಲಿದೆ. ಟೋಕಿಯೊದಲ್ಲಿ ಚಿನ್ನ ಗೆದ್ದಿದ್ದೇನೆ ಎಂದು ಮೈಮರೆಯುವುದಿಲ್ಲ. ಏಷ್ಯನ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಇನ್ನಷ್ಟು ಶ್ರೇಷ್ಠ ಸಾಮರ್ಥ್ಯ ತೋರಿ ಚಿನ್ನದ ಪದಕಗಳನ್ನು ಗೆಲ್ಲಬೇಕು. ಅದರತ್ತಲೂ ಗಮನ ಹರಿಸುತ್ತೇನೆ' ಎಂದು ನುಡಿದರು.

'2015ರಲ್ಲಿ ಪಂಚಕುಲದ ತಾವೂ ದೇವಿಲಾಲ್ ಕ್ರೀಡಾಂಗಣದಲ್ಲಿ ತರಬೇತಿ ಪಡೆಯುತ್ತಿದ್ದೆ. ಅಲ್ಲಿ ಸೌಕರ್ಯಗಳು ಸರಿ ಇರಲಿಲ್ಲ. ಅದೇ ವರ್ಷ ರಾಷ್ಟ್ರೀಯ ಶಿಬಿರಕ್ಕೆ ಆಯ್ಕೆಯಾದೆ. ಅದು ನನ್ನ ಬದುಕಿನ ದಿಕ್ಕು ಬದಲಿಸಿತು. ಅಲ್ಲಿ ಡಯಟ್‌ನಿಂದ ಹಿಡಿದು ಎಲ್ಲಾ ಮೂಲ ಸೌಕರ್ಯಗಳು ಲಭ್ಯವಾದವು. ದೇಶದ ಪ್ರಮುಖ ಜಾವೆಲಿನ್ ಥ್ರೋ ಸ್ಪರ್ಧಿಗಳ ಜೊತೆ ಅಭ್ಯಾಸ ನಡೆಸುವ ಅವಕಾಶವೂ ಸಿಕ್ಕಿತು. ಇದಕ್ಕಾಗಿ ಎಎಫ್‌ಐಗೆ ಆಭಾರಿಯಾಗಿದ್ದೇನೆ' ಎಂದರು.

'ನನ್ನ ಸಾಧನೆಯನ್ನು ಸ್ಮರಣೀಯಗೊಳಿಸುವ ಸಲುವಾಗಿ ಎಎಫ್‌ಐ, ಮುಂದಿನ ವರ್ಷದಿಂದ ಆಗಸ್ಟ್ 7ನ್ನು ರಾಷ್ಟ್ರೀಯ ಜಾವೆಲಿನ್ ದಿನವನ್ನಾಗಿ ಆಚರಿಸಲು ನಿರ್ಧರಿಸಿದೆ. ಇದು ಅತೀವ ಖುಷಿ ನೀಡಿದೆ. ನನ್ನಿಂದ ಪ್ರೇರಣೆಗೊಂಡು ಯುವಕರು ಜಾವೆಲಿನ್ ಥ್ರೋ ಸ್ಪರ್ಧೆಯತ್ತ ಮುಖಮಾಡಿದರೆ ಅದಕ್ಕಿಂತ ದೊಡ್ಡ ಗೌರವ ಮತ್ತೊಂದಿಲ್ಲ' ಎಂದು ತಿಳಿಸಿದರು.

'ಜಾವೆಲಿನ್ ಮತ್ತು ಇತರ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿದರೆ ಮಕ್ಕಳು ಖಂಡಿತವಾಗಿಯೂ ಈ ಕ್ರೀಡೆಯತ್ತ ಆಕರ್ಷಿತರಾಗುತ್ತಾರೆ. ಕೆಲವರಾದರೂ ಮುಂದಿನ ದಿನಗಳಲ್ಲಿ ಒಲಿಂಪಿಕ್ಸ್ ಹಾಗೂ ಇತರ ಅಂತರರಾಷ್ಟ್ರೀಯ ಕೂಟಗಳಲ್ಲಿ ಪದಕ ಗೆದ್ದು ದೇಶದ ಹಿರಿಮೆ ಹೆಚ್ಚಿಸಬಹುದು' ಎಂದಿದ್ದಾರೆ.



ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಸುಬೇದಾರ್ ನೀರಜ್ ಚೋಪ್ರಾ ಅವರು ತಂದೆ ಸತೀಶ್ ಕುಮಾರ್ ಮತ್ತು ತಾಯಿ ಸರೋಜಾದೇವಿ ಅವರೊಂದಿಗೆ –ಎಎಫ್‌ಪಿ ಚಿತ್ರ

450 ಕ್ರೀಡಾಪಟುಗಳಿಗೆ ಸೇನೆಯಲ್ಲಿ ತರಬೇತಿ

ನವದೆಹಲಿ (ಪಿಟಿಐ): ಭಾರತೀಯ ಸೇನೆಯ 'ಮಿಷನ್ ಒಲಿಂಪಿಕ್ಸ್ ವಿಂಗ್' ಯೋಜನೆಯಡಿಯಲ್ಲಿ 450ಕ್ಕೂ ಹೆಚ್ಚು ಅಥ್ಲೀಟ್‌ಗಳಿಗೆ ತರಬೇತಿ ನೀಡಲಾಗುತ್ತಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಈಚೆಗೆ ಪುರುಷರ ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಜಯಿಸಿದ ನೀರಜ್ ಚೋಪ್ರಾ 2016ರ ಮೇ ತಿಂಗಳಲ್ಲಿ ಸೇನೆಗೆ ನೇಮಕವಾಗಿದ್ದರು. ಅವರು ಕೂಡ ಈ ಯೋಜನೆಯಲ್ಲಿ ತರಬೇತಿಗೊಳ್ಳಲು ಆಯ್ಕೆಯಾಗಿದ್ದರು.

ಒಟ್ಟು 11 ಕ್ರೀಡೆಗಳಲ್ಲಿ ಕ್ರೀಡಾಪಟುಗಳನ್ನು ತರಬೇತಿಗೊಳಿಸಲು ಸೇನೆಯು ಈ ಯೋಜನೆ ರೂಪಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಲು ಇಲ್ಲಿ ಸಿದ್ಧಗೊಳಿಸಲಾಗುತ್ತಿದೆ.

ಈ ಯೋಜನೆಯಲ್ಲಿ ಐದು ನಾಡ್ (ವಿಭಾಗಗಳು) ಇವೆ. ರೋಯಿಂಗ್, ಶೂಟಿಂಗ್, ಈಕ್ವೆಸ್ಟ್ರಿಯನ್, ಸೇಲಿಂಗ್ ಮತ್ತು ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್ (ಎಎಸ್‌ಐ) ಇವೆ. ಎಎಸ್‌ಐನಲ್ಲಿ 200ಕ್ಕೂ ಹೆಚ್ಚು ಅಥ್ಲೀಟ್‌ಗಳು ತರಬೇತಿ ಪಡೆಯುತ್ತಿದ್ದಾರೆ. ಅಲ್ಲಿ ಅಥ್ಲೆಟಿಕ್ಸ್, ಆರ್ಚರಿ, ಬಾಕ್ಸಿಂಗ್, ಕುಸ್ತಿ, ವೇಟ್‌ಲಿಫ್ಟಿಂಗ್, ಫೆನ್ಸಿಂಗ್ ಮತ್ತು ಡೈವಿಂಗ್ ಕ್ರೀಡೆಗಳಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಶೂಟಿಂಗ್ (ಮಾರ್ಕ್ಸ್‌ಮನ್ ನಾಡ್) ವಿಭಾಗದಲ್ಲಿ 100, ರೋಯಿಂಗ್, ಸೇಲಿಂಗ್, ಈಕ್ವೆಸ್ಟ್ರಿಯನ್ ಗಳಲ್ಲಿ ಕ್ರಮವಾಗಿ 90, 50, 10 ಅಥ್ಲೀಟ್‌ಗಳು ಇದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ ತಂಡದಲ್ಲಿ ಸೇನೆಯ 16 ಯೋಧರು ಇದ್ದರು. ಅದರಲ್ಲಿ ಸುಬೇದಾರ್ ನೀರಜ್ ಚೋಪ್ರಾ ಕೂಡ ಒಬ್ಬರು.

ಒಲಿಂಪಿಕ್ಸ್ ತಂಡಕ್ಕೆ ರಾಷ್ಟ್ರಪತಿ ಭವನದಲ್ಲಿ ಚಹಾ ಕೂಟ



ರಾಮನಾಥ್ ಕೋವಿಂದ್

ನವದೆಹಲಿ (ಪಿಟಿಐ): ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡು ತವರಿಗೆ ಮರಳಿರುವ ಭಾರತ ತಂಡದ ಸದಸ್ಯರಿಗೆ ಚಹಾಕೂಟ ಏರ್ಪಡಿಸಿದ್ದಾರೆ.

'ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ಇದೇ 14ರಂದು ಚಹಾಕೂಟ ಹಮ್ಮಿಕೊಳ್ಳಲಾಗಿದೆ' ಎಂದು ರಾಷ್ಟ್ರಪತಿ ಭವನದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತದ ಕ್ರೀಡಾಪಟುಗಳು ಈ ಬಾರಿಯ ಕೂಟದಲ್ಲಿ ಏಳು ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದು ಒಲಿಂಪಿಕ್ಸ್‌ನಲ್ಲಿ ಭಾರತದ ಶ್ರೇಷ್ಠ ಸಾಧನೆಯಾಗಿದೆ.

ತಂಡ ತೊರೆಯಲು ಸಜ್ಜಾದ ಹಾನ್

ಯುವೆ ಹಾನ್

ನವದೆಹಲಿ (ಪಿಟಿಐ): ಭಾರತದ ಜಾವೆಲಿನ ಥ್ರೊ ಕೋಚ್ ಯುವೆ ಹಾನ್ ಅವರ ಒಪ್ಪಂದ ವಿಸ್ತರಣೆಯಾಗುವ ಸಾಧ್ಯತೆ ಇಲ್ಲವಾದ್ದರಿಂದ ಅವರು ತಂಡವನ್ನು ತೊರೆಯಲು ಸಜ್ಜಾಗಿದ್ದಾರೆ.

ಜರ್ಮನಿಯ 59 ವರ್ಷದ ಹಾನ್ ಅವರನ್ನು 2017ರಲ್ಲಿ ಕೋಚ್ ಆಗಿ ನೇಮಿಸಲಾಗಿತ್ತು. ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ, ಶಿವಪಾಲ್ ಸಿಂಗ್ ಮತ್ತು ಅನು ರಾಣಿ ಅವರಿಗೆ ಹಾನ್ ತರಬೇತಿ ನೀಡಿದ್ದರು.

'ಭಾರತ ಕ್ರೀಡಾ ಪ್ರಾಧಿಕಾರವು ಹಾನ್ ಅವರ ಒಪ್ಪಂದವನ್ನು ವಿಸ್ತರಿಸುವ ಸಾಧ್ಯತೆಯಿಲ್ಲ' ಎಂದು ಮೂಲಗಳು ತಿಳಿಸಿವೆ.

ಸಕಾರಾತ್ಮಕ ಶಕ್ತಿ ತುಂಬಿದ ಪ್ರಧಾನಿ ಮಾತು: ಮನ್‌ಪ್ರೀತ್

ಮನ್‌ಪ್ರೀತ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನ ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ ಪ್ರೋತ್ಸಾಹದ ಮಾತುಗಳು ತಂಡದಲ್ಲಿ ಸಕಾರಾತ್ಮಕ ಶಕ್ತಿ ತುಂಬಿದವು. 41 ವರ್ಷಗಳ ಬಳಿಕ ಪದಕವೊಂದನ್ನು ಗೆಲ್ಲಲು ಅವರ ನುಡಿಗಳು ಸ್ಫೂರ್ತಿಯಾದವು ಎಂದು ಭಾರತ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಹೇಳಿದ್ದಾರೆ.

ಟೋಕಿಯೊ ಕೂಟದ ಸೆಮಿಫೈನಲ್‌ನಲ್ಲಿ ಮನ್‌ಪ್ರೀತ್ ಬಳಗವು ವಿಶ್ವ ಚಾಂಪಿಯನ್ ಮತ್ತು ಒಲಿಂಪಿಕ್ ಚಿನ್ನದ ಪದಕ ವಿಜೇತ ಬೆಲ್ಜಿಯಂಗೆ 2-5ರಿಂದ ಸೋತಿತ್ತು. ಪಂದ್ಯದ ಬಳಿಕ ಮೋದಿ ಅವರು ಮನ್‌ಪ್ರೀತ್ ಮತ್ತು ಮುಖ್ಯ ತರಬೇತುದಾರ ಗ್ರಹಾಂ ರೀಡ್ ಅವರಿಗೆ ಕರೆ ಮಾಡಿ ಸಂತೈಸಿ, ಕಂಚಿನ ಪದಕದ ಪಂದ್ಯಕ್ಕೆ ಸಜ್ಜುಗೊಳ್ಳುವಂತೆ ಪ್ರೇರೇಪಿಸಿದ್ದರು.

'ಸೆಮಿಫೈನಲ್‌ನಲ್ಲಿ ಸೋತಾಗ ತಂಡದಲ್ಲಿ ನಿರಾಸೆ ಆವರಿಸಿತ್ತು. ಪ್ರಧಾನ ಮಂತ್ರಿ ನಮ್ಮೊಂದಿಗೆ ಮಾತನಾಡಲು ಬಯಸಿರುವುದಾಗಿ ಕೋಚ್ ತಿಳಿಸಿದರು. ಈ ವೇಳೆ ಮಾತನಾಡಿದ ಮೋದಿ ಅವರು, ನೀವೆಲ್ಲ ಚೆನ್ನಾಗಿ ಆಡಿದ್ದೀರಿ, ನಿರಾಶರಾಗಬೇಡಿ ಮುಂದಿರುವ ಪಂದ್ಯದತ್ತ ಗಮನಹರಿಸಿ, ಇಡೀ ದೇಶಕ್ಕೆ ನಿಮ್ಮ ಕುರಿತು ಹೆಮ್ಮೆಯಿದೆ ಎಂದರು. ಇದು ತಂಡದಲ್ಲಿ ಸಕಾರಾತ್ಮಕ ಶಕ್ತಿ ಪ್ರವಹಿಸಲು ಕಾರಣವಾಯಿತು' ಎಂದು ಮಂಗಳವಾರ ನಡೆದ ಸಂವಾದದಲ್ಲಿ ಮನ್‌ಪ್ರೀತ್ ಹೇಳಿದ್ದಾರೆ.

ಕಂಚಿನ ಪದಕದ ಪಂದ್ಯದಲ್ಲಿ ಭಾರತ ತಂಡವು 5-4ರಿಂದ ಜರ್ಮನಿಯನ್ನು ಸೋಲಿಸಿತ್ತು.

ಸೆಮಿಗೆ ಮಹೇಶ್ ರಾಜ್ ಎಫ್‌ಸಿ

ಬೆಂಗಳೂರು: ಸಂಘಟಿತ ಆಟವಾಡಿದ ಮಹೇಶ್ ರಾಜ್ ಎಫ್‌ಸಿ ಮತ್ತು ಬೆಂಗಳೂರು ಪ್ಯಾಂಥರ್ಸ್ ತಂಡಗಳು ಕೆಎಸ್‌ಎಫ್‌ಎ–ಬಿಡಿಎಫ್‌ಎ 'ಸಿ' ಡಿವಿಷನ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಹೇಶ್ ರಾಜ್ ಎಫ್‌ಸಿ ಪೆನಾಲ್ಟಿ ಶೂಟೌಟ್‌ನಲ್ಲಿ ಬೆಂಗಳೂರು ಸ್ಟ್ರೈಕರ್ಸ್ ಎದುರು ಗೆದ್ದಿತು. ಪಂದ್ಯದ ನಿಗದಿತ ಅವಧಿಯಲ್ಲಿ ಎರಡೂ ತಂಡಗಳು ಯಾವುದೇ ಗೋಲು ದಾಖಲಿಸಲಿಲ್ಲ. ಶೂಟೌಟ್‌ನಲ್ಲಿ ಮಹೇಶ್ ರಾಜ್ ತಂಡ 3 ಗೋಲು ಹೊಡೆದರೆ, ಬೆಂಗಳೂರು ಸ್ಟ್ರೈಕರ್ ಎರಡರಲ್ಲಿ ಮಾತ್ರ ಯಶಸ್ವಿಯಾಯಿತು. ಎಂಟರಘಟ್ಟದ ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ಪ್ಯಾಂಥರ್ಸ್ ಎಫ್‌ಸಿ 1–0ಯಿಂದ ರೂಟ್ಸ್ ಫುಟ್‌ಬಾಲ್ ಸ್ಕೂಲ್ಸ್ ತಂಡವನ್ನು ಸೋಲಿಸಿತು. ವಿಜೇತ ತಂಡದ ರಾಜನ್ ನಾರಾಯಣ್ 54ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಅಶಿಸ್ತು: ಕುಸ್ತಿಪಟು ವಿನೇಶಾ ಫೋಗಟ್ ಅಮಾನತು

ವಿನೇಶಾ ಫೋಗಟ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ವೇಳೆ ಅಶಿಸ್ತು ತೋರಿದ್ದ ಕುಸ್ತಿಪಟು ವಿನೇಶಾ ಫೋಗಟ್ ಅವರನ್ನು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ತಾತ್ಕಾಲಿಕವಾಗಿ ಅಮಾನತು ಮಾಡಿದೆ. ಅನುಚಿತ ವರ್ತನೆ ತೋರಿದ ಸೋನಮ್ ಮಲಿಕ್‌ಗೆ ಮಂಗಳವಾರ ನೋಟಿಸ್ ನೀಡಲಾಗಿದೆ.

ಒಲಿಂಪಿಕ್ಸ್‌ಗೂ ಮುನ್ನ ಕೋಚ್ ವೂಲರ್ ಅಕೋಶ್ ಬಳಿ ಹಂಗರಿಯಲ್ಲಿ ತರಬೇತಿ ಪಡೆದಿದ್ದ ವಿನೇಶಾ, ಅಲ್ಲಿಂದ ನೇರವಾಗಿ ಟೋಕಿಯೊಗೆ ಪ್ರಯಾಣಿಸಿದ್ದರು. ಕ್ರೀಡಾ ಗ್ರಾಮದಲ್ಲಿ ಉಳಿದುಕೊಳ್ಳಲು ತಗಾದೆ ತೆಗೆದಿದ್ದ ಅವರು ಭಾರತದ ಇತರ ಕುಸ್ತಿಪಟುಗಳ ಜೊತೆಯಲ್ಲಿ ಅಭ್ಯಾಸ ನಡೆಸಲೂ ನಿರಾಕರಿಸಿದ್ದರು.

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತ ತಂಡಕ್ಕೆ ಶಿವ್ ನರೇಶ್ ಸಂಸ್ಥೆ ಪ್ರಾಯೋಜಕತ್ವ ನೀಡಿತ್ತು. ಕ್ರೀಡಾಪಟುಗಳು ಸ್ಪರ್ಧೆಯ ವೇಳೆ ಶಿವ್ ನರೇಶ್ ಲಾಂಛನವಿರುವ ಪೋಷಾಕು ಧರಿಸುವಂತೆ ಸೂಚಿಸಲಾಗಿತ್ತು. ಇದನ್ನು ಧಿಕ್ಕರಿಸಿದ್ದ ವಿನೇಶಾ, ನೈಕಿ ಸಂಸ್ಥೆಯ ಲಾಂಛನವಿರುವ ಪೋಷಾಕು ತೊಟ್ಟಿದ್ದರು. ಹೀಗಾಗಿ ಅವರಿಗೆ ನೋಟಿಸ್ ನೀಡಲಾಗಿದೆ. ಇದಕ್ಕೆ ಇದೇ 16ರೊಳಗೆ ಉತ್ತರಿಸುವಂತೆಯೂ ಸೂಚಿಸಲಾಗಿದೆ.

ಈ ಬಾರಿ ಪದಕ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿದ್ದ ವಿನೇಶಾ, ಕ್ವಾರ್ಟರ್ ಫೈನಲ್‌ನಲ್ಲೇ ಸೋತಿದ್ದರು.

'ಕ್ರೀಡಾ ಗ್ರಾಮದಲ್ಲಿ ಸೋನಮ್ ಮಲಿಕ್, ಅನ್ಶು ಮಲಿಕ್ ಮತ್ತು ಸೀಮಾ ಬಿಸ್ಲಾ ಉಳಿದುಕೊಂಡಿದ್ದ ಕೊಠಡಿಯ ಸನಿಹದಲ್ಲೇ ವಿನೇಶಾಗೂ ಕೊಠಡಿ ಕಾಯ್ದಿರಿಸಲಾಗಿತ್ತು. ನೀವೆಲ್ಲಾ ಭಾರತದಿಂದ ಬಂದಿದ್ದೀರಿ. ನಿಮ್ಮಿಂದ ನನಗೆ ಕೊರೊನಾ ಸೋಂಕು ತಗುಲಬಹುದು. ನಾನಂತೂ ಇಲ್ಲಿ ಉಳಿದುಕೊಳ್ಳುವುದಿಲ್ಲ ಎಂದು ರಾದ್ಧಾಂತ ಮಾಡಿಬಿಟ್ಟಿದ್ದರು. ಅವರ ವರ್ತನೆ ಕಂಡು ನಮಗೂ ಬೇಸರವಾಗಿತ್ತು' ಎಂದು ಕೂಟದಲ್ಲಿ ಭಾಗವಹಿಸಿದ್ದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು
ಭಾರತದಲ್ಲಿ ಕ್ರೀಡೆಗೆ ಸಿಗುತ್ತಿರುವ ಪ್ರೋತ್ಸಾಹ ತೃಪ್ತಿಕರವಾಗಿದೆಯೇ?
QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

'ಸ್ಟೇ-ಆನ್' ಆಯುರ್ವೇದಿಕ್ ಕ್ಯಾಪ್ಸೂಲ್‌ನಲ್ಲಿ ಜಿನ್ ಸೆಂಗ್, ಉಂಟೀಗನ್, ಗೌರಖ್ ಮುಂಡಿ, ಶಿಲಾಜಿತ, ಲತಾ ಕಸ್ತೂರಿ, ವಿದಾರಾ, ಬೀಜ ಬಂದ್‌ನಂತಹ ಅಮೂಲ್ಯ ಗಿಡಮೂಲಿಕೆಗಳ ಮಿಶ್ರಣವಿದೆ. ಇದು ನಿಮ್ಮ ತನು-ಮನವನ್ನು ನವ ಯೌವ್ವನದಿಂದಿರುವಂತೆ ಮಾಡುತ್ತದೆ, ರೋಗ ಪ್ರತಿರೋಧಕ ಶಕ್ತಿ ಹೆಚ್ಚಲು, ಸ್ಫೂರ್ತಿ, ಉತ್ಸಾಹ, ತಾಕತ್ತು ಮತ್ತು ಜೋಶ್‌ನ ಅನುಭವ ನೀಡುತ್ತದೆ.
ಸ್ಟೇ-ಆನ್® ಪವರ್ ಕ್ಯಾಪ್ಸೂಲ್‌ಗಳು
100% AYURVEDIC
• ಶಕ್ತಿಯನ್ನು ನವೀಕರಿಸಿಕೊಳ್ಳಿ | ಹೆಚ್ಚು ಸಾಮರ್ಥ್ಯವನ್ನು ಪಡೆದುಕೊಳ್ಳಿ
• ಪ್ರತಿದಿನ 1 ಕ್ಯಾಪ್ಸೂಲ್ ತೆಗೆದುಕೊಳ್ಳಿ
Available in CAPSULE, OIL & ORAL LIQUID form at Chemists

ನೀವು 40+ ಪ್ರಾಯದವರೇ?
ಈ ಕೆಳಗಿನ ಲಕ್ಷಣಗಳಿಂದ ಬಳಲುತ್ತಿದ್ದೀರಾ?
ಮೂತ್ರ ಧಾವಂತ
ನಿರಂತರವಾಗಿ ಮೂತ್ರ ತೊಟ್ಟಿಕ್ಕುವುದು
ರಾತ್ರಿ ಪದೇ ಪದೇ ಎದ್ದೇಳುವುದು
ಹಿಂಜರಿಕೆ
ಬೈದ್ಯನಾಥ್
ಅಸಲಿ ಆಯುರ್ವೇದ
ಪ್ರಾಸ್ಟ್ ಏಡ್ ಟ್ಯಾಬ್ಲೆಟ್


ಗ್ರಾಹಕರ ಸೇವೆ : 8448444935
www.baidyanath.co

HUM BANAYE JO
AAPKA DIL CHAHE
TVS
ಅನ್‌ಲಾಕ್ ಮಾಡಿ ಮಹಾ ಉಳಿತಾಯ TVS ನೊಂದಿಗೆ
₹ 5 000* ವರೆಗೆ ಉಳಿತಾಯಗಳು | 5%^ ಕ್ಯಾಶ್‌ಬ್ಯಾಕ್ ಆಫರ್

* T&C apply. ** Ex-showroom price of TVS Scooty Pep+ gloss base variant Karnataka.
# Valid till 31st August 2021. Applicable on TVS Scooty Pep+ and Zest only.
^ Up to ₹ 5 000/- for BOB, SCB Credit Cards & ₹ 3 500/- for Federal Bank Debit cards.
Valid till 30th Sep' 2021. *** Subject to financier's discretion.
RT-Fi^^ ಉತ್ತಮ ರಿಯಲ್ ಥ್ರಾಟಲ್ ಫೀಲ್
ET-Fi^^ 15% ಹೆಚ್ಚು ಮೈಲೇಜ್
ಭಾರತದ ಮೊದಲ ಹಾಗೂ ಏಕೈಕ ಡ್ಯುಯೆಲ್ ಪ್ಲಾಟ್‌ಫಾರ್ಮ್ Fi ತಂತ್ರಜ್ಞಾನ | www.tvsmotor.com
ರೇಂಜ್ ₹ 54 855** ರಿಂದ ಪ್ರಾರಂಭ | 0%# ಬಡ್ಡಿ ಇಎಮ್ಐ | ₹ 0* ಪ್ರೊಸೆಸಿಂಗ್ ಚಾರ್ಜ್ | ಬಡ್ಡಿ ದರ 6.99%*** ರಿಂದ ಪ್ರಾರಂಭ
ಉತ್ತಮ ಸ್ಟಾರ್ಟೆಬಿಲಿಟಿ | ಉತ್ತಮ ರೈಡೆಬಿಲಿಟಿ | ಸುಧಾರಿತ ಬಾಳಿಕೆ | ಸುಲಭ ಮೈಂಟೆನೆನ್ಸ್
TVS NTORQ 125 RACE XP PLAY SMART | Zest 110 | TVS Jupiter ZYADA KA FAYDA | Scooty Pep+
Finance Partners: TVS CREDIT | IDFC FIRST Bank ALWAYS YOU FIRST | L&T Financial Services Two-wheeler Finance | IndusInd Bank | SHRIRAM City MONEY WHEN YOU NEED IT MOST
RTFI^^: As per internal standard testing conditions in comparison with the BS-IV model of the same product variant. ETFI^^: As per internal testing conditions in comparison with the BS-IV model of the same product variant. However actual mileage is subject to change and depends on various factors such as riding conditions, fuel quality, vehicle condition, and other circumstantial riding conditions.
FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com ಅಧಿಕೃತ ಮುಖ್ಯ ವಿತರಕರು: ಬೆಂಗಳೂರು: ಜಯನಗರ: ಭಾರತ್ ಟಿವಿಎಸ್ ದೂ: 8971572817, ರಾಜಾಜಿನಗರ: ಬ್ರಿಡ್ಜ್‌ಸ್ಟೋನ್ ಟಿವಿಎಸ್ ದೂ: 8971624526, ಮಹಾಲಕ್ಷ್ಮಿ ಲೇಔಟ್: ಗ್ಲೋಬಲ್ ಟಿವಿಎಸ್ ದೂ: 7619265566, ದೊಮ್ಮಲೂರು: ಪಿ.ಆರ್.ಎನ್ ಟಿವಿಎಸ್ ದೂ: 6366936909, ಹಲಸೂರು: ಪಿ.ಆರ್.ಎನ್ ಟಿವಿಎಸ್ ದೂ: 6366936931, ಚಾಮರಾಜಪೇಟೆ: ಪಿ.ಆರ್.ಎನ್ ಟಿವಿಎಸ್ ದೂ: 6366936922, ಕೋರಮಂಗಲ: ಎನ್.ಆರ್.ಜಿ.ಸಿ ಟಿವಿಎಸ್ ದೂ: 9900860960, ಹೆಬ್ಬಗೋಡಿ: ಬೆಂಗಳೂರು ಟಿವಿಎಸ್ ದೂ: 8151095959/ 080-41141555, ಹರಲೂರು: ಬೆಂಗಳೂರು ಟಿವಿಎಸ್ ದೂ: 8494959555/ 8970859555, ಕನಕಪುರ ರಸ್ತೆ: ಧನ್‌ಚರಣ್ ಟಿವಿಎಸ್ ದೂ: 9916183232, ಜಾಲಹಳ್ಳಿ ಕ್ರಾಸ್; ಪ್ರಕೃತಿ ಟಿವಿಎಸ್ ದೂ: 917814508304, ಗಂಗಾನಗರ; ಪ್ರಕೃತಿ ಟಿವಿಎಸ್ ದೂ: 7814508304, ಭದ್ರಪ್ಪ ಲೇಔಟ್: ಪ್ರಕೃತಿ ಟಿವಿಎಸ್ ದೂ: 7814508304, ಕಲ್ಯಾಣ ನಗರ: ಪಿ.ಆರ್.ಎನ್ ಟಿವಿಎಸ್ ದೂ: 6366936908, ಬೊಮ್ಮನಹಳ್ಳಿ: ಅರುಣಗಿರಿ ಟಿವಿಎಸ್ ದೂ: 8971593945, ಹೆಚ್.ಎಸ್.ಆರ್ ಲೇಔಟ್: ಕುಬೇರ ಟಿವಿಎಸ್ ದೂ: 8971601956, ಬೆಳ್ಳಂದೂರು: ಇಂಡಿಯನ್ ಟಿವಿಎಸ್ ದೂ: 9900500123, ಬನ್ನೇರುಘಟ್ಟ ರೋಡ್: ನಿಯೋ ಟಿವಿಎಸ್ ದೂ: 8971628452, ಮಾರತಹಳ್ಳಿ: ತ್ರಿಜಲ್ ಟಿವಿಎಸ್ ದೂ: 8971599450, ವೈಟ್‌ಫೀಲ್ಡ್: ತ್ರಿಜಲ್ ಟಿವಿಎಸ್ ದೂ: 8971598119, ಯಲಹಂಕ: ಹೇಮಂತ್ ಟಿವಿಎಸ್ ದೂ: 9740180379, ವಿದ್ಯಾರಣ್ಯಪುರ; ಹೇಮಂತ್ ಟಿವಿಎಸ್ ದೂ; 9740180379, ದೊಡ್ಡಬಳ್ಳಾಪುರ; ಹೇಮಂತ್ ಟಿವಿಎಸ್ ದೂ; 9740180379, ರಾಜರಾಜೇಶ್ವರಿ ನಗರ: ಸೋಲಾರ್ ಟಿವಿಎಸ್ ದೂ: 9066032272, ಕೆಂಗೇರಿ; ಸೋಲಾರ್ ಟಿವಿಎಸ್ ದೂ: 9066032272, ಕೃಷ್ಣರಾಜಪುರಂ: ಸುರ್ಯಪ್ರತಾಪ್ ಟಿವಿಎಸ್ ದೂ: 9870327108, ಥಣಿಸಂದ್ರ: ಸುರ್ಯಪ್ರತಾಪ್ ಟಿವಿಎಸ್ ದೂ: 9986716999/9449847671, ಟಿನ್ ಫ್ಯಾಕ್ಟರಿ: ಡಿಂಪಲ್ ಟಿವಿಎಸ್ ದೂ: 8147117435 / 36, ಅತ್ತಿಬೆಲೆ: ಬಾಲಕೃಷ್ಣ ಟಿವಿಎಸ್ ದೂ: 8971703849, ಜಿಗಣಿ: ಶ್ರೀ ಬಾಲಾಜಿ ಟಿವಿಎಸ್ ದೂ: 9845762549, ಹೊಸಕೋಟೆ: ನಿತಿನ್ ಟಿವಿಎಸ್ ದೂ: 7811021081, ನೆಲಮಂಗಲ: ನವಯುಗ್ ಟಿವಿಎಸ್ ದೂ: 8971630975, ಕನಕಪುರ: ಅಂಜನಾದ್ರಿ ಟಿವಿಎಸ್ ದೂ: 9066064491, ರಾಮನಗರ: ಸಮರ್ಥ ಟಿವಿಎಸ್ ದೂ: 9066064383, ಕೋಲಾರ; ಸರವಣ ಟಿವಿಎಸ್ ದೂ: 8971676986, ಕೆ.ಜಿ.ಎಫ್; ಸರವಣ ಟಿವಿಎಸ್ ದೂ: 9066064490, ಚಿಂತಾಮಣಿ; ಬಾಲಾಜಿ ಟಿವಿಎಸ್ ದೂ: 9066064551, ಚಿಕ್ಕಬಳ್ಳಾಪುರ; ಮಾರುತಿ ಟಿವಿಎಸ್ ದೂ: 9870327133, ತುಮಕೂರು: ಶ್ರೀ ಬಾಲಾಜಿ ಟಿವಿಎಸ್ ದೂ: 8971657342, ತುಮಕೂರು: ಶ್ರೀಗಿರಿ ಟಿವಿಎಸ್ ದೂ: 8971657691, ತಿಪಟೂರು: ನಿಕಿತ ಟಿವಿಎಸ್ ದೂ: 8971675903, ಹಾಸನ; ಶ್ರೀ ಕೃಷ್ಣ ಟಿವಿಎಸ್ 7814925655, (ಬ್ರಾಂಚ್) ಜಯ್‌ನಗರ: ಶ್ರೀ ಕೃಷ್ಣಾ ಟಿವಿಎಸ್, ದೂ: 7829928314. ಅಧಿಕೃತ ವಿತರಕರು: ಬೆಂಗಳೂರು: ಮಾಗಡಿ ಮೈನ್ ರೋಡ್: ಸೋಲಾರ್ ಟಿವಿಎಸ್ ದೂ: 080-23400193, ವಿಜಯನಗರ: ಸೋಲಾರ್ ಟಿವಿಎಸ್ ದೂ: 7829066661, ಮತ್ತಿಕೆರೆ: ಫಾಸ್ಟ್‌ಬೈಕ್ ಟಿವಿಎಸ್ ದೂ: 9986837771, ಬಸವೇಶ್ವರನಗರ: ಸ್ಪೀಡ್ ಟಿವಿಎಸ್ ದೂ: 080-41287182, ಮಲ್ಲೇಶ್ವರಂ: ಕುಬೇರ ಟಿವಿಎಸ್, ದೂ: 7624988146, ಹನುಮಂತ ನಗರ: ಸ್ಕಂದ ಟಿವಿಎಸ್ ದೂ: 9008533899, ಜೆಪಿ ನಗರ 6ನೇ ಸ್ಟೇಜ್: ಶ್ರೀಸುಕ್ರಾ ಟಿವಿಎಸ್ ದೂ: 988696609, ಜೆಪಿ ನಗರ 7ನೇ ಸ್ಟೇಜ್: ಪ್ರೀತಂ ಟಿವಿಎಸ್ ದೂ: 9141400341, ಮರಿಯಪ್ಪನ ಪಾಳ್ಯ: ವಿವಿಕೆ ಟಿವಿಎಸ್ ದೂ: 080 – 23241116, ಶಿವಾಜಿನಗರ: ಅಂಬಿಕಾ ಟಿವಿಎಸ್ ದೂ: 9980510555, ಮಡಿವಾಳ: ಇಂಡಿಯನ್ ಟಿವಿಎಸ್ ದೂ: 9916870260, ವಿಜ್ಞಾನನಗರ; ಸೆಂಚ್ಯೂರಿ ಟಿವಿಎಸ್ ದೂ: 9886823174, ಹೆಣ್ಣೂರು: ನಕ್ಷತ್ರ ಟಿವಿಎಸ್ ದೂ: 9738101956, ತಾವರೆಕೆರೆ: ಕಿರಣ್ ಟಿವಿಎಸ್ ದೂ: 080 28434049, ಸುಂಕದಕಟ್ಟೆ: ನಮನ ಟಿವಿಎಸ್ ದೂ: 9900307123, ಬೈದರಹಳ್ಳಿ: ಸ್ವಸ್ತಿಕ್ ಟಿವಿಎಸ್ ದೂ: 9141151132, ಎಲೆಕ್ಟ್ರಾನಿಕ್ ಸಿಟಿ: ಶ್ರೀ ಟಿವಿಎಸ್ 9845260065, ಬೇಗೂರು ರೋಡ್: ದೇವಾ ಟಿವಿಎಸ್ 9538313497, ಗೊಟ್ಟಿಗೆರೆ: ಎಸ್.ಬಿ. ಟಿವಿಎಸ್ ದೂ: 9845762549, ವರ್ತೂರು: ಹೃತಿಕ್ ಟಿವಿಎಸ್ ದೂ: 9886100299, ಬಿ.ಹೆಚ್.ಇ.ಎಲ್ ಮೈಸೂರು ರೋಡ್: ಅಜಯ್ ಟಿವಿಎಸ್ ದೂ: 9972412655/ 080-26741145, ಬಿಡದಿ: ಅಜಯ್ ಟಿವಿಎಸ್ ದೂ: 9591467002, ಹಾರೋಹಳ್ಳಿ: ಎಸ್.ಎಂ. ಟಿವಿಎಸ್ ದೂ: 9845002176, ಚಂದಾಪುರ: ಮುರಳ ಟಿವಿಎಸ್ ದೂ: 9448081601, ಆನೇಕಲ್: ಶ್ರೀ ವೆಂಕಟೇಶ್ವರ ಟಿವಿಎಸ್ ದೂ: 7411626961, ಚನ್ನಪಟ್ಟಣ: ಕೆಎಂ ಟಿವಿಎಸ್ ದೂ: 9845188443, ದಾಬಸ್ ಪೇಟ್: ನವಯುಗ ಟಿವಿಎಸ್ ದೂ: 080 27734188, ಕಗ್ಗಲಿಪುರ; ಸಾತ್ವಿಕ್ ಟಿವಿಎಸ್ ದೂ: 9845041803, ದೇವನಹಳ್ಳಿ: ಸುಪ್ರತೀಕ್ ಟಿವಿಎಸ್ ದೂ: 9845832523, ವಿಜಿಪುರ; ಶ್ರೀ ದುರ್ಗಾ ಟಿವಿಎಸ್ 8892762610, ಬಾಗಲೂರು; ಮಾದವ ಟಿವಿಎಸ್ ದೂ: 9620000329, ಮಾಗಡಿ: ಶ್ರೀ ನರಸಿಂಹ ಟಿವಿಎಸ್ ದೂ: 9742248691, ಚನ್ನಪಟ್ಟಣ; ಕೆ.ಎಂ ಟಿವಿಎಸ್ ದೂ: 9845188443, ಬಾಗೇಪಲ್ಲಿ; ಶ್ರೀ ಸಾಯಿ ಟಿವಿಎಸ್ ದೂ: 9945513446, ಶಿಡ್ಲಗಟ್ಟ; ಶ್ರೀ ರಾಯಲ್ ಟಿವಿಎಸ್ ದೂ: 9845088868, ಗುಡಿಬಂಡೆ: ಮಂಜು ಟಿವಿಎಸ್ ದೂ: 9379268678. ಗೌರಿಬಿದನೂರು: ಸಾಯಿ ಟಿವಿಎಸ್ ದೂ: 9448310962. ಮಾಲೂರು: ಸರವಣ ಟಿವಿಎಸ್ 9449715731, ಶ್ರೀನಿವಾಸಪುರ: ವಿಘ್ನೇಶ್ ಟಿವಿಎಸ್ 9972885552, ಮುಳಬಾಗಿಲು: ಗರುಡ ಮೋಟಾರ್ಸ್ ದೂ: 789982232, ತುರುವೇಕೆರೆ: ಗದ್ದೆ ಕೆಂಪಮ್ಮ ಟಿವಿಎಸ್ ದೂ: 9986155108. ಗುಬ್ಬಿ: ಮನು ಟಿವಿಎಸ್ ದೂ: 9886989839. ಮಧುಗಿರಿ: ಶ್ರೀ ಸ್ಕಂದ ಟಿವಿಎಸ್ ದೂ: 9242455433. ಪಾವಗಡ: ಶ್ರೀ ನಿವಾಸ ಟಿವಿಎಸ್ ದೂ: 9448038368. ಕುಣಿಗಲ್: ಶ್ರೀ ಮಾರುತಿ ಟಿವಿಎಸ್ ದೂ: 9945938606. ನಿಟ್ಟೂರು; ಎಸ್.ಎಸ್. ಟಿವಿಎಸ್ ದೂ: 9164479810, ಹೊನ್ನುಡುಕ್ಕೆ; ಶ್ರೀ ಎಸ್.ಎಲ್.ವಿ. ಟಿವಿಎಸ್ 9845802853, ಚಿಕ್ಕನಾಯಕನಹಳ್ಳಿ: ವಿಜಯಶ್ರೀ ಟಿವಿಎಸ್ ದೂ: 9742429149. ಸಿರಾ: ಸಪ್ತಗಿರಿ ಟಿವಿಎಸ್ ದೂ: 9844354422, ಹುಲಿಯಾರ; ವಿಜಯಶ್ರೀ ಟಿವಿಎಸ್ ದೂ: 9742429149. ಅರಕಲಗುಡು; ವೈ.ಜಿ. ಟಿವಿಎಸ್ 9448413894, ಬೇಲೂರು; ಶ್ರೀ ಕೃಷ್ಣ ಟಿವಿಎಸ್ 9448330165, ಹೊಳೆನರಸೀಪುರ; ಸಾಗರ ಟಿವಿಎಸ್ 9448721807, ಚೆನ್ನರಾಯಪಟ್ಟಣ; ಮಹಾಲಕ್ಷ್ಮಿ ಟಿವಿಎಸ್ 99945722711, ಸಕ್ಲೇಶ್ ಪುರ; ಸೋನಾ ಬೈಕ್ ಟಿವಿಎಸ್ 9739046149, ಹಳೇಬೀಡು: ರವಿ ಟಿವಿಎಸ್ 8747939399.
dentsuindia/pv blr/20/21